₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಮಂಗಳವಾರ 19.05.2026 ಸಂಪುಟ: 11 ಸಂಚಿಕೆ:123 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಮೋದಿಗೆ ನಾರ್ವೆ ಸರಕಾರದ ಗೌರವ

ಸ್ವೀಡನ್‌ನ ಅತ್ಯುನ್ನತ ನಾಗರಿಕ ಗೌರವಕ್ಕೆ ಪಾತ್ರರಾದ ಪ್ರಧಾನಿ ನರೇಂದ್ರಮೋದಿ ನಾರ್ವೆಯಲ್ಲೂ ಅಲ್ಲಿನ ಸರಕಾರದ 'ರಾಯಲ್ ನಾರ್ವೇಜಿಯನ್ ಆರ್ಡರ್ ಆಫ್ ಮೆರಿಟ್‌ನ ಗ್ರ್ಯಾಂಡ್ ಕ್ರಾಸ್ ಪಡೆದ ಗೌರವಕ್ಕೆ ಭಾಜನರಾಗಿದ್ದಾರೆ. ಇದು ಭಾರತ ಮತ್ತು ನಾರ್ವೆ ನಡುವಿನ ಶಾಶ್ವತ ಸ್ನೇಹಕ್ಕೆ ಸಿಕ್ಕ ಗೌರವ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಕರ್ನಾಟಕ ಸರ್ಕಾರ

ಗ್ಯಾರಂಟಿ ಹಬ್ಬ

4ನೇ ವರ್ಷಕ್ಕೆ ಪಾದಾರ್ಪಣೆ

ಕರ್ನಾಟಕ ಸರ್ಕಾರ ಕಂದಾಯ ಇಲಾಖೆ

ಸಮರ್ಪಣೆ ಸಂಕಲ್ಪ

ಮೂರು ವರ್ಷದ ಸಾಧನೆಯ ಸಮರ್ಪಣೆ, ಮತ್ತಷ್ಟು ಜನಪರ ಸೇವೆಯ ಪ್ರತಿಜ್ಞೆ

ಕುಟುಂಬಗಳಿಗೆ ಹಕ್ಕುಪತ್ರ/ದಾಖಲೆ/ಆದೇಶಪತ್ರ ಸಮರ್ಪಣೆ

ಮೇ 19, ಮಂಗಳವಾರ
ಬೆಳಗ್ಗೆ 11:00 ಗಂಟೆಗೆ

ಸರ್ಕಾರಿ ಪದವಿಪೂರ್ವ
ಕಾಲೇಜು ಮೈದಾನ, ತುಮಕೂರು

ಕಂದಾಯ ಇಲಾಖೆಯ ಮೂರು ವರ್ಷದ ಸಾರ್ಥಕ ಸೇವೆ

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರನ್ನು ಮಾನ್ಯ ಗೃಹ ಸಚಿವರು, ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರುಗಳಾದ ಡಾ. ಜಿ. ಪರಮೇಶ್ವರ್ ಅವರು ಸಮಾವೇಶಕ್ಕೆ ಆಹ್ವಾನಿಸುತ್ತಿರುವುದು

ರಾಜ್ಯದ ಸಾಧನೆಗಳು	ತುಮಕೂರು ಜಿಲ್ಲೆಯ 1,52,492 ಫಲಾನುಭವಿಗಳಿಗೆ
— ಇ-ಪೌತಿ ಅಭಿಯಾನ — 14.39 ಲಕ್ಷ ಪೌತಿಖಾತೆ ಸಾಧನೆ	ಇ-ಪೌತಿ - 1,06,000
— ದರ್ಖಾಸ್ತು ಪೋಡಿ — 2.5 ಲಕ್ಷ ಮಂಜೂರಿದಾರರಿಗೆ ಪೋಡಿ ಪ್ರಗತಿ	ಕಂದಾಯ ಗ್ರಾಮ ಹಕ್ಕುಪತ್ರ - 20,666
	ದರ್ಖಾಸ್ತು ಪೋಡಿ ಮತ್ತು ಪೋಡಿ ಮುಕ್ತ ಅಭಿಯಾನ - 25,826

ಕಂದಾಯ ಸೇವೆಗಳು ಈಗ
ಸರಳ. ಸುಲಭ. ಸುಲಲಿತ.

ಮಾನ್ಯ ಕಂದಾಯ ಸಚಿವರಾದ ಶ್ರೀ ಕೃಷ್ಣಭೈರೇಗೌಡ ಅವರಿಂದ
ಜನ ಸೇವೆಯ ಸಮರ್ಪಣೆ

ಭಾರತದ ಸಾರ್ವಭೌಮತ್ವ, ಅಖಂಡತೆ ಮತ್ತು ಏಕತೆಯನ್ನು ಎತ್ತಿ ಹಿಡಿಯುವುದು ಮತ್ತು ಕಾಪಾಡುವುದು.

www.revenuecommissionerate.karnataka.gov.in

ಸಮಾಚಾರ ಸಣ್ಣದಲ್ಲ

ರಾಷ್ಟ್ರಪತಿ ಪದಕಕ್ಕೆ ಶಿಫಾರಸು: ವಿರೋಧ

ಬೆಂಗಳೂರು: ಐಪಿಎಸ್ ಅಧಿಕಾರಿ ಡಿ.ರೂಪಾ ಮೌದ್ಗಿಲ್ ಅವರ ಹೆಸರನ್ನು 2026 ರಾಷ್ಟ್ರಪತಿ ಪದಕಕ್ಕೆ ಶಿಫಾರಸು ಮಾಡದಂತೆ ವಿವಿಧ ಸಂಘಟನೆಗಳ ಮುಖಂಡರು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ(ಡಿಪಿಎಆರ್) ಕಾರ್ಯದರ್ಶಿಗೆ ಮನವಿ ಸಲ್ಲಿಸಿದ್ದಾರೆ. ಅಖಿಲ ಕರ್ನಾಟಕ ಅಂಬರೀಷ್ ಅಭಿಮಾನಿಗಳ ಸಂಘ, ಕರ್ನಾಟಕ ಚಲನಚಿತ್ರ ಮತ್ತು ಲಲಿತಾಕಲಾ ಸಹಕಾರ ಮಂಡಲ, ರಾಜ್ಯ ಯುವ ಕಾಂಗ್ರೆಸ್, ರೆಡ್ಡಿ ಯುವ ಒಕ್ಕೂಟ, ಒಕ್ಕಲಿಗರ ವೇದಿಕೆ, ಜನತಾ ಪರಿವಾರ ಪತ್ರಿಕೆ ಸೇರಿದಂತೆ ಹಲವು ಪಕ್ಷ ಮತ್ತು ಸಂಘಟನೆಗಳ ಮುಖಂಡರು ಡಿಪಿಎಆರ್ ಕಾರ್ಯದರ್ಶಿ ಜಗದೀಶ್ ಅವರನ್ನು ಭೇಟಿ ಮಾಡಿ ಯಾವುದೇ ಕಾರಣಕ್ಕೂ ಡಿ.ರೂಪಾ ಮೌದ್ಗಿಲ್ ಅವರ ಹೆಸರನ್ನು ರಾಷ್ಟ್ರಪತಿ ಪದಕಕ್ಕೆ ಶಿಫಾರಸು ಮಾಡದಂತೆ ಮನವಿ ಮಾಡಿದ್ದಾರೆ. ಗೃಹ ಇಲಾಖೆಯ ಮಾರ್ಗಸೂಚಿಯ ಪ್ರಕಾರ ನ್ಯಾಯಾಲಯಗಳಲ್ಲಿ ಪ್ರಕರಣ ಬಾಕಿ ಇರುವ ಅಧಿಕಾರಿಗಳನ್ನು ಪ್ರಶಸ್ತಿಗೆ ಶಿಫಾರಸು ಮಾಡುವಂತಿಲ್ಲ. ರೂಪ ಅವರ ಮೇಲೆ ಹಲವಾರು ಪ್ರಕರಣಗಳಿವೆ. ಸರಕಾರಿ ಅಧಿಕಾರಿಯಾಗಿ ಸರಕಾರ ವಿರುದ್ಧವಾಗಿ ನಡೆದುಕೊಂಡಿರುವ ಎಷ್ಟೋ ಪ್ರಕರಣಗಳಿವೆ. ಹಿಂದುಳಿದ ವರ್ಗಗಳ ನಾಯಕರಾದ ಕರಾವಳಿ ಭಾಗದ ರಾಘವೇಂದ್ರ ಶೆಟ್ಟಿ ಅವರೊಂದಿಗೆ ನಡೆಸಿದ ಅವ್ಯವಹಾರ ಧಾರಾವಾಹಿ ರೀತಿಯಲ್ಲಿ ಪ್ರತಿ ದಿನ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿತ್ತು. ಈ ಪ್ರಕರಣ ಸಂಬಂಧ ಶೆಟ್ಟಿ ಅವರು ಅಂದಿನ ಆಡಳಿತಾರೂಢ ಸರಕಾರದ ಬಳಿ ದೂರು ದಾಖಲಿಸಿದ್ದರು. ಇದನ್ನು ಪ್ರಶ್ನಿಸಿದಕ್ಕೆ, ಅವರ ಮೇಲೆಯೇ ರಂಪಾಟ ಮಾಡಿದ್ದರು. ಈ ರೀತಿಯ ಹಲವಾರು ಮಾನನಷ್ಟ ಮೊಕದ್ದಮೆಗಳು ಇವರ ಮೇಲಿವೆ ಎಂದು ದೂರಿದ್ದಾರೆ. ಈ ವೇಳೆ ಪ್ರಗತಿಪರ ಚಿಂತಕ ಬೆ.ಹಳ್ಳಿ ನಾಗರಾಜು, ರಾಜಕೀಯ ಮುಖಂಡ ಸಿ.ಎಂ.ದ್ಯಾವಪ್ಪ, ಅಖಿಲ ಕರ್ನಾಟಕ ಅಂಬರೀಷ್ ಅಭಿಮಾನಿಗಳ ಸಂಘದ ರಾಜ್ಯಾಧ್ಯಕ್ಷ ಬೇಲೂರು ಸೋಮಶೇಖರ್, ರೆಡ್ಡಿ ಯುವ ಒಕ್ಕೂಟದ ಅಧ್ಯಕ್ಷ ಸಿದ್ದು ಪ್ರಕಾಶ್ ರೆಡ್ಡಿ, ಜೆಡಿಯು ಮುಖಂಡರಾದ ತಿಪಟೂರು ಶಶಿ ಭೂಷಣ, ಸಮಾಜ ಸೇವಕ ಜಗದೀಶ್ ರೆಡ್ಡಿ, ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸೀತಲ್ ಮಠಪತಿ ಇತರರು ಹಾಜರಾಗಿ ದೂರು ನೀಡಿದರು.

ಜೂನ್ 2ಕ್ಕೆ ತರಬೇತಿ ಕಾರ್ಯಕ್ರಮ

ಬೆಂಗಳೂರು: ಔಷಧಿ ಮತ್ತು ಸುಗಂಧ ಸಸ್ಯಗಳ ಉತ್ಪನ್ನಗಳ ತರಬೇತಿ ಕಾರ್ಯಕ್ರಮ ಜೂನ್ 2 ರಂದು ಆಯೋಜಿಸಲಾದಿದೆ. ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ವತಿಯಿಂದ ಜನಸಾಮಾನ್ಯರಲ್ಲಿ ಹೆಚ್ಚುತ್ತಿ

ರುವ ಆರೋಗ್ಯದ ಕಾಳಜಿಯಿಂದ ಔಷಧಿ ಮತ್ತು ಸುಗಂಧ ಸಸ್ಯಗಳಿಂದ ತಯಾರಿಸಲಾದ ನೈಸರ್ಗಿಕ ಆರೋಗ್ಯವರ್ಧಕ ಉತ್ಪನ್ನಗಳು ಆರೋಗ್ಯದ ಮೇಲೆ ಪ್ರಮುಖ ಪಾತ್ರ ವಹಿಸುತ್ತವೆ. ಈ ಸಸ್ಯಗಳು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ತೋಟಗಾರಿಕೆ ವಿಭಾಗದಲ್ಲಿ ಲಭ್ಯವಿದ್ದು, ಜನಸಾಮಾನ್ಯರಲ್ಲಿ ಅವುಗಳ ಬಳಕೆಯ ಕುರಿತು ಜಾಗೃತಿ ಮೂಡಿಸುತ್ತಿದೆ. ಆರೋಗ್ಯ ವರ್ಧಕ ಉತ್ಪನ್ನಗಳ ತಯಾರಿಕೆ ಕುರಿತು ಈಗಾಗಲೇ 5 ತರಬೇತಿಗಳನ್ನು ಆಯೋಜಿಸಲಾಗಿದೆ. ಈ ತರಬೇತಿಗೆ ಬಹು ಬೇಡಿಕೆ ಇರುವುದರಿಂದ ಶುಲ್ಕ ಸಹಿತ ತರಬೇತಿಯನ್ನು ಆಸಕ್ತವುಳ್ಳ 30 ಜನರಿಗೆ ಜೂನ್ 2 ರಂದು ಆಯೋಜಿಸಲಾಗುತ್ತಿದೆ. ನೋಂದಾಯಿಸಲು ಕೊನೆಯ ದಿನಾಂಕ ಮೇ.22 ಆಗಿದ್ದು, ಆಸಕ್ತರು ಹೆಚ್ಚಿನ ಮಾಹಿತಿಗಾಗಿ ತೋಟಗಾರಿಕೆ ವಿಭಾಗ, ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು ಹಾಗೂ ದೂರವಾಣಿ ಸಂಖ್ಯೆ 7022501752, 9980326928, 9481735592 ಸಂಪರ್ಕಿಸಬಹುದು ಎಂದು ಕೃಷಿ ವಿ.ವಿ ಪ್ರಕಟಣೆಯಲ್ಲಿ ತಿಳಿಸಿದೆ.

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಜೈಲು ಸೇರಿರುವ ದರ್ಶನ್

ಜೈಲಿನಲ್ಲಿ ದರ್ಶನ್‌ಗೆ ಮಾನಸಿಕ ಖಿನ್ನತೆ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಸೇರಿರುವ ನಟ ದರ್ಶನ್‌ಗೆ ಕಾನೂನು ಹೋರಾಟದಲ್ಲಿ ಒಂದರ ಮೇಲೊಂದರಂತೆ ಹಿನ್ನಡೆ ಯಾಗುತ್ತಿದೆ. ಸುಪ್ರೀಂಕೋರ್ಟ್‌ನಲ್ಲಿ 1 ವರ್ಷದವರೆಗೆ ಬೇಲ್ ಸಿಗದ ಕಾರಣ ದರ್ಶನ್ ಮೌನಕ್ಕೆ ಜಾರಿದ್ದಾರೆ. ಪರಪ್ಪನ ಅಗ್ರಹಾರದ ಕ್ವಾರಂಟೈನ್ ಜೈಲಿನ ಬ್ಯಾರಕ್‌ನಲ್ಲಿರುವ ಯಾರೊಂದಿಗೂ ಮಾತನಾಡದೇ ಸಂಪೂರ್ಣ ಮೌನಕ್ಕೆ ಶರಣಾಗಿದ್ದಾರೆ. ಬ್ಯಾರಕ್‌ನ ಮೂಲೆ ಯೊಂದರಲ್ಲಿ ಏಕಾಂಗಿ ಯಾಗಿ ಕುಳಿತು ಕಾಲ ಕಳೆಯುತ್ತಿದ್ದಾರೆ. ಬ್ಯಾರಕ್ ಮುಂಬಾಗದ ಕಾರಿಡಾರ್‌ನಲ್ಲಿ ಸಿಸಿಟಿವಿ ಅಳವಡಿಸಲಾಗಿದ್ದು, ಕಮಾಂಡ್ ಸೆಂಟರ್‌ನಲ್ಲಿ ಸಿಸಿಟಿವಿಗಳ ನಿರಂತರ ಪರಿಶೀಲನೆ ನಡೆಸಲಾಗುತ್ತಿದೆ. ಈ ಮೂಲಕ ದರ್ಶನ್ ಚಲನವಲನಗಳ ಮೇಲೆ ನಿಗಾ ಇಡಲಾಗಿದೆ.

ಒಟ್ಟು 272 ಸಾಕ್ಷಿ: ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಒಟ್ಟು 272 ಸಾಕ್ಷಿಗಳಿದ್ದು, ಕಳೆದ 8 ತಿಂಗಳಲ್ಲಿ ಕೇವಲ 10 ಸಾಕ್ಷಿಗಳ ವಿಚಾರಣೆ ಮಾತ್ರ ನಡೆದಿದೆ. ನಿಧಾನ ಗತಿಯಲ್ಲಿ ವಿಚಾರಣೆ ಮುಂದು ವರೆದರೆ ಪ್ರಕರಣ ಬೇಗ ಮುಕ್ತಾಯಗೊಳ್ಳುವ ಸಾಧ್ಯತೆ ಕಡಿಮೆ. ಇದೇ ಅಂಶವನ್ನು ದರ್ಶನ್ ಪರ ವಕೀಲರು ಜಾಮೀನುಗಾಗಿ ಪ್ರಮುಖ ಕಾರಣವಾಗಿ ಮುಂದಿಟ್ಟಿದ್ದರು. ಆದರೆ ಸುಪ್ರೀಂ ಕೋರ್ಟ್, ಒಂದು ವರ್ಷ ದೊಳಗೆ ಕನಿಷ್ಠ 60 ಸಾಕ್ಷಿಗಳ ವಿಚಾರಣೆ ಪೂರ್ಣಗೊಳಿಸಬೇಕು. ಬಳಿಕ ವಿಚಾರಣಾ ನ್ಯಾಯಾಲಯದಲ್ಲಿಯೇ ಆರೋಪಿ ಜಾಮೀನಿಗೆ ಅರ್ಜಿ ಸಲ್ಲಿಸಬಹುದು ಎಂದು ಸೂಚನೆ ನೀಡಿದೆ. ನಟ ದರ್ಶನ್ ಜೈಲು ಸೇರಿದ ಬಳಿಕ ಆಗಸ್ಟ್ 2025 ರಿಂದ ರಿಂದ 2026 ಮೇ ವರೆಗೆ ಮೇ ವರೆಗೆ ಸುಮಾರು 70 ಬಾರಿ ಕುಟುಂಬಸ್ಥರು, 28 ಬಾರಿ ವಕೀಲ ರನ್ನ ಭೇಟಿ ಮಾಡಿದ್ದಾರೆ. ಇದರೊಂದಿಗೆ ಜೈಲಿನಿಂದ 73 ಬಾರಿ ಫೋನ್ ಕಾಲ್ ಮಾಡಿದ್ದಾರೆ.

ಪತ್ನಿ, ಮಗನ ಭೇಟಿಗೆ ಅವಕಾಶ ಕೋರಿದ ದರ್ಶನ್

ಸುಪ್ರೀಂಕೋರ್ಟ್‌ನಲ್ಲಿ ಜಾಮೀನು ಅರ್ಜಿ ವಜಾ ಬೆನ್ನಲ್ಲೇ ದರ್ಶನ್ ಕಾರಾಗೃಹ ಅಧಿಕಾರಿಗಳಿಗೆ ಪತ್ರ ಬರೆದಿದ್ದಾರೆ. ತನ್ನ ಪತ್ನಿ ವಿಜಯಲಕ್ಷ್ಮಿ ಮತ್ತು ಮಗನನ್ನು ಜೈಲಿನ ಕೊಠಡಿಯ ಒಳಗೆ ಭೇಟಿ ಮಾಡಲು, ಅವರೊಂದಿಗೆ ಪ್ರತ್ಯೇಕವಾಗಿ ಮಾತನಾಡಲು ಅವಕಾಶ ಕೋರಿ ಕೇಂದ್ರ ಕಾರಾಗೃಹ ಎಸ್‌ಪಿ ಅಂಶುಕುಮಾರ್ ಅವರಿಗೆ ಮನವಿ ಸಲ್ಲಿಸಿದ್ದಾರೆ. ಕೈದಿಗಳನ್ನು ಭೇಟಿ ಮಾಡುವ ಸಂದರ್ಶನ ಕೊಠಡಿ ಬದಲು ಪ್ರತ್ಯೇಕವಾಗಿ ಸೆಲ್ ಒಳಗೆ ಭೇಟಿ ಅವಕಾಶಬೇಕೆಂದು ಕೋರಿದ್ದಾರೆ. ದರ್ಶನ್ ಪತ್ನಿ ವಿಜಯಲಕ್ಷ್ಮಿ ಮೇ.16ರಂದು ಡಿಜಿಪಿ ಅಲೋಕ್ ಕುಮಾರ್ ಅವರನ್ನು ಭೇಟಿ ಮಾಡಿದ್ದಾರೆ. ಈ ವೇಳೆ ದರ್ಶನ್ ಅವರನ್ನು ಜೈಲಿನ ಕೊಠಡಿಯ ಒಳಗೆ ಭೇಟಿ ಮಾಡಲು ಅನುಮತಿ ನೀಡುವಂತೆ ಮನವಿ ಮಾಡಿದ್ದಾರೆ. ಮೇ. 19 ರಂದು ದರ್ಶನ್, ವಿಜಯಲಕ್ಷ್ಮಿ 23ನೇ ವಿವಾಹ ವಾರ್ಷಿಕೋತ್ಸವದ ಸಂದರ್ಭದಲ್ಲಿ ದರ್ಶನ್ ಭೇಟಿಗೆ ಅವರ ಪತ್ನಿ, ಮಗನಿಗೆ ಅವಕಾಶ ಕೊಡಿ ಎಂದು ಮನವಿ ಮಾಡಲಾಗಿದೆ.

ಲೀಸ್-ಬಾಡಿಗೆ ಪಾವತಿಸುವ ಹೆಸರಲ್ಲಿ 200 ಕೋಟಿ ವಂಚನೆ

ಬೆಂಗಳೂರು: ಮನೆಗಳನ್ನು ಲೀಸ್‌ಗೆ ಪಡೆಯಲು ಬಯಸುವವರನ್ನೇ ಗುರಿಯಾಗಿಸಿಕೊಂಡು ಸುಮಾರು 200 ಕೋಟಿ ರು.ಗೂ ಅಧಿಕ ಹಣ ವಂಚಿಸಿರುವ ಪ್ರಕರಣವೊಂದು ಬೆಂಗಳೂರಿನಲ್ಲಿ ಬೆಳಕಿಗೆ ಬಂದಿದೆ.

ಜಾನ್ಸ್ ಅಸೆಟ್ ಹೆಸರಿನ ಮಧ್ಯವರ್ತಿ ಕಂಪನಿಯ ವಿರುದ್ಧ 300ಕ್ಕೂ ಹೆಚ್ಚು ಜನರಿಗೆ ವಂಚಿಸಿರುವ ಆರೋಪ ಕೇಳಿಬಂದಿದ್ದು, ಅದರ ಮಾಲೀಕ ಸ್ಟೀಫನ್ ಜಾನ್ ಪರಾರಿಯಾಗಿದ್ದಾರೆ. ಇಂದಿರಾನಗರ ಠಾಣೆ ಪೊಲೀಸರು, ಆರೋಪಿಗಾಗಿ ಹುಡುಕಾಟ ಆರಂಭಿಸಿದ್ದಾರೆ.

ವಂಚಿಸಿದ್ದು ಹೇಗೆ?: ಬೆಂಗಳೂರಿನಲ್ಲಿ ವಾಸಿಸಲು ಭೋಗ್ಯಕ್ಕೆ ಮನೆಗಳ ಕೊರತೆ ಇರುವುದನ್ನೇ ಬಂಡವಾಳ ಮಾಡಿಕೊಂಡ ಕಂಪನಿ, ಲೀಸ್ ಹಣವನ್ನು ತಮ್ಮಲ್ಲಿ ಹೂಡಿಕೆ ಮಾಡಿದರೆ ನಾವು ನಿಮಗಾಗಿ ಮನೆ ಹುಡುಕಿ ಅದರ ಮಾಸಿಕ ಬಾಡಿಗೆ ತಾವೇ ಪಾವತಿ ಮಾಡುವುದಾಗಿ ನಂಬಿಸುತ್ತಿತ್ತು. ಸಾಕಷ್ಟು ಜನ ಭೋಗ್ಯಕ್ಕೆ ನೀಡುವ ಹಣ ಕಂಪನಿಯಲ್ಲಿ ಹೂಡಿಕೆ ಮಾಡಿದಂತಾಗುತ್ತದೆ ಎಂದು ನಂಬಿದ್ದರು. ಒಬ್ಬೊಬ್ಬರಿಂದ ತಲಾ 10 ರಿಂದ 75 ಲಕ್ಷ ರು.ಗೂ ಈ ಕಂಪನಿ ಹಣ ಪಡೆದಿತ್ತು. ಆರಂಭದಲ್ಲಿ ಕೆಲವು ತಿಂಗಳುಗಳ ಕಾಲ ಬಾಡಿಗೆ ಪಾವತಿಸುತ್ತಿದ್ದ ಕಂಪನಿ ನಂತರ ಬಾಡಿಗೆ ಪಾವತಿಸದೆ ಕಳ್ಳಾಟವಾಡುತ್ತಿತ್ತು. 'ಕಂಪನಿಗೆ 37 ಲಕ್ಷ ರು. ನೀಡಿದ್ದೇವೆ. ಆದರೆ ತಮ್ಮ ಮನೆ ಬಾಡಿಗೆ ಹಣ ಪಾವತಿಸಿ ರಲಿಲ್ಲ. ಮಾಲೀಕರು ಮನೆ ಖಾಲಿ ಮಾಡಲು ಹೇಳಿದಾಗ ತಮ್ಮ ಹಣ ವಾಪಸ್ ಕೇಳಲು ಕಂಪನಿಯ ಬಳಿ ಹೋಗಿದ್ದೆವು. ಈ ವೇಳೆ ಹಣ ನೀಡಲು ನಿರಾಕರಿಸಿದ್ದ ಕಂಪನಿಯವರು ಅದೇ ಮೊತ್ತಕ್ಕೆ ತಿಂಗಳಿಗೆ ಶೇ.4ರಷ್ಟು ಬಡ್ಡಿ ನೀಡುವು ದಾಗಿ ನಂಬಿಸಿತ್ತು. ಅದನ್ನು ನಂಬಿ ಹಣ ಹೂಡಿಕೆ ಮಾಡಿದ್ದೆವು. ಬಳಿಕ ಕೇವಲ 2 ತಿಂಗಳು ಹಣ ನೀಡಿದ್ದ ಕಂಪನಿ ನಂತರ ವಂಚಿ ಸಿದೆ' ಎಂದು ಗಾಯತ್ರಿ ಎಂಬುವವರು ಆರೋಪಿಸಿದ್ದಾರೆ.

ಕಸ್ಟಡಿಯಲ್ಲಿದ್ದಾಗ ದೌರ್ಜನ್ಯಕ್ಕೆ ಕಡಿವಾಣ: ಕಠಿಣ ನಿಯಮ ಜಾರಿ

ಬೆಂಗಳೂರು: ಪೊಲೀಸ್ ಕಸ್ಟಡಿಯಲ್ಲಿರುವಾಗ

ಆರೋಪಿಗಳ ಮೇಲೆ ನಡೆಯುವ ದೌರ್ಜನ್ಯ, ಕಸ್ಟೋಡಿಯಲ್ ಡೆತ್ ಪ್ರಕರಣ ಗಳಿಗೆ ಕಡಿವಾಣ ಹಾಕಲು ಕರ್ನಾಟಕ ಪೊಲೀಸ್ ಇಲಾಖೆಯಲ್ಲಿ ಕಠಿಣ ನಿಯಮಗಳನ್ನು ಜಾರಿಗೊಳಿಸಲಾಗಿದೆ. ಪ್ರಕರಣದ ತನಿಖಾ ಅವಧಿ ಯಲ್ಲಿ ಸ್ಥಳೀಯ ಪೊಲೀಸ ರಿಂದ ನಡೆಯಬಹುದಾದ ತನಿಖಾ ವೈಫಲ್ಯ ಹಾಗೂ ಸಾಕ್ಷ್ಯನಾಶದ ಯತ್ನ ಗಳನ್ನು ತಡೆಯುವ ಸಲುವಾಗಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ.ಸಲೀಂ ಮಾರ್ಗಸೂಚಿಗಳನ್ನು ಹೊರಡಿಸಿದ್ದಾರೆ. ಬಿಎನ್‌ಎಸ್ ಅಡಿಯಲ್ಲಿ ಕಟ್ಟುನಿಟ್ಟಾದ ಮಾರ್ಗ ಸೂಚಿಗಳನ್ನು ಸಿದ್ಧಪಡಿಸಲಾಗಿದ್ದು, ನಿಯಮಗಳನ್ನು ಉಲ್ಲಂಘಿಸುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮದ ಎಚ್ಚರಿಕೆ ನೀಡಲಾಗಿದೆ.

ಹಿಂಸಾಚಾರ ಹಾಗೂ ಕಸ್ಟೋಡಿಯಲ್ ಡೆತ್ ಪ್ರಕರಣಗಳ ತನಿಖೆಯ ವೇಳೆ ಸ್ಥಳೀಯ ಪೊಲೀಸರು ಯಾವುದೇ ರೀತಿಯ ಪ್ರಭಾವ ಬೀರದಂತೆ ಮತ್ತು ಸಾಕ್ಷ್ಯಗಳನ್ನು ನಾಶಪಡಿಸದಂತೆ ತಡೆಯಲಾಗುತ್ತದೆ. ಇಲಾಖೆ ಘನತೆಗೆ ಚ್ಯುತಿ ಉಂಟು ಮಾಡುವ ಈ ರೀತಿ ಪ್ರಕರಣಗಳ ತನಿಖಾ ಅವಧಿಯಲ್ಲಿ ಯಾವುದೇ ಹಂತದಲ್ಲಿಯೂ ನಿಯಮ ಉಲ್ಲಂಘನೆಯಾದರೆ, ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳನ್ನೇ ನೇರ ಹೊಣೆಗಾರರರು ಎಂದು ಡಾ.ಎಂ.ಎ.ಸಲೀಂ ತಿಳಿಸಿದ್ದಾರೆ.

ಮಾರ್ಗಸೂಚಿಗಳು

- ಪೊಲೀಸ್ ಕಸ್ಟಡಿಯಲ್ಲಿರುವಾಗ ದೌರ್ಜನ್ಯ ನಡೆದ ಕೂಡಲೇ ಸ್ಥಳೀಯ ಠಾಣಾಧಿಕಾರಿ ಎಫ್‌ಐಆರ್ ದಾಖಲಿಸಬೇಕು.
- ಹಿರಿಯ ಅಧಿಕಾರಿಗಳಿಗೆ ತಕ್ಷಣ ವರದಿ ಸಲ್ಲಿಸಬೇಕು. ದೌರ್ಜನ್ಯ, ಕಸ್ಟೋಡಿಯಲ್ ಡೆತ್ ನಡೆದರೆ ಠಾಣೆಯ ಸಿಸಿಟಿವಿ ದೃಶ್ಯಾವಳಿ ವಶಪಡಿಸಿಕೊಳ್ಳಬೇಕು.
- ಸಂತ್ರಸ್ತರ ಹೇಳಿಕೆಗಳು ಮತ್ತು ಶವಪರೀಕ್ಷೆಯ ಪ್ರಕ್ರಿಯೆಯನ್ನು ಕಡ್ಡಾಯವಾಗಿ ಆಡಿಯೋ-ವಿಡಿಯೋ ರೆಕಾರ್ಡ್ ಪ್ರಕ್ರಿಯೆಯೊಂದಿಗೆ ಮಾಡಬೇಕು.
- ಪ್ರಕರಣ ಸಿಐಡಿ ತನಿಖೆಗೆ ವರ್ಗಾವಣೆಯಾದ ಬಳಿಕ ತನಿಖಾಧಿಕಾರಿಗಳು ಹಳೆಯ ಡೈರಿಗಳನ್ನು ಪರಿಶೀಲಿಸುವುದು ಮಾತ್ರವಲ್ಲದೆ, ಘಟನಾ ಸ್ಥಳಕ್ಕೆ ಭೇಟಿ ನೀಡಿ ಮಹಜರು ಪ್ರಕ್ರಿಯೆ ಸರಿಯಾಗಿದೆಯೇ ಎಂದು ಮರುಪರಿಶೀಲಿಸಬೇಕು.
- ಆರೋಪಿತ ಅಧಿಕಾರಿಗಳ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸುವ ಮುನ್ನ ಪ್ರಾಧಿಕಾರದಿಂದ ಪ್ರಾಸಿಕ್ಯೂಷನ್ ಅನುಮತಿ ಪಡೆಯಬೇಕು.

ಭ್ರಷ್ಟಾಚಾರ ಪ್ರಕರಣದಲ್ಲಿ ಮಧ್ಯವರ್ತಿಗಳ ವಿರುದ್ಧದ ಪ್ರಕರಣ ರದ್ದುಪಡಿಸಲಾಗದು

ಬೆಂಗಳೂರು: ಸರಕಾರಿ ಇಲಾಖೆಗಳಲ್ಲಿ ನಡೆಯುವ

ಭ್ರಷ್ಟಾಚಾರಗಳಲ್ಲಿ ಆರೋಪಿತರು ಸರಕಾರಿ ಸೇವಕನಲ್ಲ, ಖಾಸಗಿ ವ್ಯಕ್ತಿಯಾಗಿದ್ದು, ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದಿಲ್ಲ, ಲಂಚದ ಹಣ ವಶಕ್ಕೆ ಪಡೆದುಕೊಂಡಿಲ್ಲ ಎಂಬ ಕಾರಣ ಮುಂದಿಟ್ಟು ಕೊಂಡು ತನಿಖೆ ರದ್ದುಪಡಿಸಲು ಆಗುವುದಿಲ್ಲ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಅಧಿಕಾರಿಗಳಿಗೆ ಲಂಚ ಸಂಗ್ರಹ ಪ್ರಕ್ರಿಯೆಯಲ್ಲಿ ಭಾಗಿಯಾದ ಮಧ್ಯವರ್ತಿಯ ವಿರುದ್ಧದ ಪ್ರಕರಣ ರದ್ದುಪಡಿಸಲು ನಿರಾಕರಿಸಿದೆ.

ಅಧಿಕಾರಿಗಳಿಗೆ ನೀಡಲು ಲಂಚ ಪಡೆದು, ಮತ್ತೊಂದೆಡೆ ತಲುಪಿಸಲು ವ್ಯಕ್ತಿಯೊಬ್ಬರಿಗೆ ನಿರ್ದೇಶನ ನೀಡಿದ್ದ ಆರೋಪದಲ್ಲಿ ದಾಖಲಾಗಿದ್ದ ಪ್ರಕರಣ ರದ್ದು ಕೋರಿ ಬೆಂಗಳೂರಿನ ಬಸವೇಶ್ವರ ನಗರದ ಕೆ.ಎಸ್.ಗಂಗಾಧರಯ್ಯ ಎಂಬವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ, ಈ ಆದೇಶ ನೀಡಿದೆ.

ಅಲ್ಲದೇ, ಭ್ರಷ್ಟಾಚಾರ ನಿಯಂತ್ರಣ ಕಾಯಿದೆ ಸೆಕ್ಷನ್ 8ರ ಪ್ರಕಾರ, ಸರಕಾರಿ ಅಧಿಕಾರಿಗೆ ಲಂಚ ನೀಡುವ ವ್ಯಕ್ತಿ, ಸೆಕ್ಷನ್ 9ರ ಪ್ರಕಾರ ವಾಣಿಜ್ಯ ಸಂಸ್ಥೆ, ಸೆಕ್ಷನ್ 10ರ ಪ್ರಕಾರ ಅಂತಹ ವಾಣಿಜ್ಯ ಸಂಸ್ಥೆಯ ಉಸ್ತುವಾರಿ ವ್ಯಕ್ತಿ ಯನ್ನು ಶಿಕ್ಷೆಗೆ ಒಳಪಡಿಸುವುದಕ್ಕೆ ಅವಕಾಶ ಇರಲಿದೆ.

ಈ ಪ್ರಕರಣದಲ್ಲಿ ಅರ್ಜಿದಾರರು ದಿ ಟ್ರಾನ್ಸ್‌ಪೋರ್ಟ್ ಎಂಬ ಕಂಪನಿ ನಡೆಸುತ್ತಿದ್ದು, ಅಪಾದಿತ ವ್ಯಕ್ತಿ ಲಂಚದ ಮೊತ್ತದ ಅಕ್ರಮ ವಹಿವಾಟು ನಡೆಸಿರುವುದು ಗೊತ್ತಾಗಲಿದೆ. ಪ್ರಕರಣ ಸಂಬಂಧ ದಾಖಲಾಗಿರುವ ದೂರು, ಲೋಕಾಯುಕ್ತ ಪೊಲೀಸರ ದಾಳಿಯ ಪಂಚನಾಮೆ ಗಮನಿಸಿದರೆ ಅರ್ಜಿದಾರರು ಕೃತ್ಯಕ್ಕೆ ಕಾರಣವಾಗಿರುವ ಅಂಶ ಬಹಿರಂಗವಾಗಲಿದೆ.

ಈ ಅಂಶವು ಅರ್ಜಿದಾರರು ಸರ್ಕಾರಿ ನೌಕರನಿಗೆ ಹಣ ತಲುಪಿಸಲು ಮತ್ತೊಬ್ಬ ವ್ಯಕ್ತಿಗೆ ವಹಿಸಿ ಕೊಡುವ ಭ್ರಷ್ಟಾಚಾರದ ಜಾಲವಾಗಿ ಕಾರ್ಯನಿರ್ವಹಿಸಿದ್ದಾರೆ ಎಂದು ಪೀಠ ಹೇಳಿದೆ. ಜತೆಗೆ, ಲೋಕಾಯುಕ್ತ ಪೊಲೀಸರ ದಾಳಿಯಲ್ಲಿ ಸಿಕ್ಕಿಹಾಕಿಕೊಂಡಿರುವ ಮನೋಜ್ (ಹಣ ಸಂಗ್ರಹಿಸಲು ಅರ್ಜಿದಾರರ ಸೂಚಿಸಿದ್ದ ವ್ಯಕ್ತಿ) ಎಂಬವರು ನೀಡಿದ ವಿವರಣೆಯಲ್ಲಿ, ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಭ್ರಷ್ಟಾಚಾರದ ಜಾಲ ಆಳವಾಗಿ ಬೇರೂರಿದ್ದು, ಹಣವನ್ನು ಒಂದೆಡೆಯಿಂದ ಮತ್ತೊಂದೆಡೆಗೆ ರವಾನೆ ಮಾಡುವುದರ ಕುರಿತು ವಿವರಿಸಿದ್ದಾರೆ. ಅಲ್ಲದೇ, ಅರ್ಜಿದಾರರೇ ಉಸ್ಮಾನ್ ಎಂಬವರಿಂದ ಹಣ ಸಂಗ್ರಹಿಸಲು ಸೂಚನೆ ನೀಡಿದ್ದಾರೆ ಎಂಬ ಅಂಶ ಗೊತ್ತಾಗಲಿದ್ದು, ಈ ಜಾಲದಲ್ಲಿ ಭಾಗಿಯಾಗಿರುವ ವ್ಯಕ್ತಿಗಳ ಕಚೇರಿಗಳಲ್ಲಿ ಶೋಧನೆ ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಸರಕಾರಿ ಸೇವಕನಲ್ಲ ಮತ್ತು ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದಿಲ್ಲ, ಲಂಚದ ಹಣ ವಶಕ್ಕೆ ಪಡೆದುಕೊಂಡಿಲ್ಲ ಎಂಬ ಕಾರಣ ನೀಡಿ ಪ್ರಕರಣ ರದ್ದುಗೊಳಿಸಲಾಗದು ಎಂದು ಪೀಠ ತಿಳಿಸಿದೆ.

ಪ್ರಕರಣದ ಹಿನ್ನೆಲೆ

ದೆಹಲಿಯಿಂದ ಬೆಂಗಳೂರಿಗೆ ಪಾನ್ ಮಸಾಲಾ, ಕಬ್ಬಿಣ, ಉಕ್ಕು ಮತ್ತು ಸ್ಕ್ರಾಪ್ ವಸ್ತುಗಳನ್ನು ರವಾನಿಸುವ ಜಾಲದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳು ಭಾಗಿಯಾಗಿದ್ದು, ಖಜಾನೆಗೆ ಭಾರಿ ನಷ್ಟವನ್ನುಂಟು ಮಾಡುತ್ತಿದ್ದಾರೆ ಎಂಬ ಖಚಿತ ಮಾಹಿತಿಯ ಮೇರೆಗೆ ಲೋಕಾಯುಕ್ತ ಪೊಲೀಸರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದರು. ಪ್ರಕರಣದ ಪ್ರಾಥಮಿಕ ವಿಚಾರಣೆಯಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಮೊದಲ ಆರೋಪಿ ಎಂ.ಆರ್.ನಿಜಾನಂದಮೂರ್ತಿ ಅವರು ತಮ್ಮ ಅಧೀನದ ಇತರ ಅಧಿಕಾರಿಗಳು ಸೇರಿ ದಿ ಟ್ರಾನ್ಸ್‌ಪೋರ್ಟ್ ಎಂಬ ಕಂಪನಿಯ ಮಾಲೀಕರಾದ ಅರ್ಜಿದಾರ ಗಂಗಾಧರಯ್ಯ ಅವರ ಮೂಲಕ ಹಣ ಸಂಗ್ರಹಿಸುತ್ತಿರುವ ಕುರಿತು ಮಾಹಿತಿ ಲಭ್ಯವಾಗಿತ್ತು. ದಾಳಿ ನಡೆಸಿದ್ದ ಲೋಕಾಯುಕ್ತ ಪೊಲೀಸರು, ಹಣ ಪಡೆಯುವ ಅಧಿಕಾರಿ ನಿಜಾನಂದಮೂರ್ತಿ ಮತ್ತು ಮನೋಜ್ ಎಂಬವರನ್ನು ಬಂಧಿಸಿದ್ದರು.

ಸಿಇಟಿ: ಮೇ 21ರ ವರೆಗೆ ದಾಖಲೆಗಳ ಪರಿಶೀಲನೆ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಸಿ, ಇನ್ನೂ ದಾಖಲೆ ಪರಿಶೀಲನೆ ಮಾಡಿಕೊಳ್ಳದ ಅಭ್ಯರ್ಥಿಗಳು ಅಗತ್ಯ ಮೂಲ ದಾಖಲೆಗಳ ಸಮೇತ ಹತ್ತಿರದ ಸರಕಾರಿ ಪಿಯು ಕಾಲೇಜುಗಳಿಗೆ ಮೇ 21ರೊಳಗೆ ಹೋಗಿ ಪರಿಶೀಲನೆ ಮಾಡಿಸಿಕೊಳ್ಳಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸೂಚಿಸಿದೆ. ಅಭ್ಯರ್ಥಿಗಳ ಕ್ಲೇಮ್ಸ್ ಸರ್ಟಿಫಿಕೇಟ್‌ನಲ್ಲಿ ಕ್ಲೇಮ್ಸ್ ನಾಟ್ ವೆರಿಫೈಯ್ಡ್ ಎಂದು ಮುದ್ರಿತವಾಗಿದ್ದಲ್ಲಿ ಅಂತಹವರು ಮಾತ್ರ ಸರಕಾರಿ ಪಿಯು ಕಾಲೇಜಿಗೆ ಹೋಗಬೇಕು ಎಂದು ತಿಳಿಸಿದೆ. ಈ ಹಿಂದೆ ಅವಕಾಶ ನೀಡಿದ್ದಾಗಲೂ ಕೆಲವು ಅಭ್ಯರ್ಥಿಗಳು ತಮ್ಮ ಕಾಲೇಜುಗಳಲ್ಲಿ ದಾಖಲೆ ಪರಿಶೀಲನೆ ಮಾಡಿಕೊಂಡಿರುವುದಿಲ್ಲ. ಹೀಗಾಗಿ ಮತ್ತೊಮ್ಮೆ ಅವಕಾಶ ನೀಡಲಾಗಿದೆ. ಕ್ಲೇಮ್ಡ್ ಮತ್ತು ವೆರಿಫೈಯ್ಡ್ ಎಂದು ಅರ್ಜಿಯಲ್ಲಿ ಮುದ್ರಿತವಾಗಿರುವವರು ದಾಖಲೆ ಪರಿಶೀಲನೆಗೆ ಹೋಗುವ ಅಗತ್ಯ ಇರುವುದಿಲ್ಲ. ಕನ್ನಡ ಮಾಧ್ಯಮ ವ್ಯಾಸಂಗ, ಗ್ರಾಮೀಣ ವ್ಯಾಸಂಗ, ಭಾಷಾ ಅಲ್ಪಸಂಖ್ಯಾತ, ಧಾರ್ಮಿಕ ಅಲ್ಪಸಂಖ್ಯಾತ ಮೀಸಲಾತಿ ಕ್ಲೇಮ್ ಮಾಡಿ, ಕ್ಲೇಮ್ಸ್ ಸರ್ಟಿಫಿಕೇಟ್ ನಲ್ಲಿ ನಾಟ್ ವೆರಿಫೈಯ್ಡ್ ಎಂದು ಮುದ್ರಿತವಾಗಿರುವವರು ಮಾತ್ರ ಕಾಲೇಜುಗಳಿಗೆ ಹೋಗಿ ಪರಿಶೀಲನೆ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ.

ಕಿರುಕುಳ: ಬಂಧಿತ ಉದ್ಯಮಿ ವಿರುದ್ಧ ಮತ್ತೊಂದು ದೂರು

ಬೆಂಗಳೂರು: ಮಹಿಳಾ ಕಸ್ಟಮ್ಸ್ ಅಧಿಕಾರಿಗೆ ಕಿರುಕುಳ, ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಉದ್ಯಮಿ ಎಂ.ಕೃಪಲಾನಿ ವಿರುದ್ಧ ಹಲಸೂರು ಪೊಲೀಸ್ ಠಾಣೆಯಲ್ಲಿ ಮತ್ತೊಂದು ಎಫ್‌ಐಆರ್ ದಾಖಲಾಗಿದೆ.

ಕಸ್ಟಮ್ಸ್ ಅಧಿಕಾರಿ ಆಂತೋನಿ ಎಂಬುವವರು ಹಲಸೂರು ಪೊಲೀಸ್ ಠಾಣೆಗೆ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಾಗಿದೆ. ದೂರುದಾರರಾದ ಡಿ. ಆಂತೋನಿ ಮಂಗಳೂರಿನಲ್ಲಿ ಕಸ್ಟಮ್ಸ್ ಸೂಪರಿಡೆಂಟ್ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾರೆ. ಕಸ್ಟಮ್ಸ್ ಚಾರ್ಜ್ ಅನ್ನು ತಪ್ಪಿಸಲು ಸ್ಮಗ್ಲಿಂಗ್ ಹಾದಿ ಹಿಡಿದಿದ್ದ ಕೃಪಲಾನಿಗೆ ಪ್ರಕರಣವೊಂದರಲ್ಲಿ ಆಂತೋನಿ 8.50 ಲಕ್ಷ ರು. ದಂಡ ವಿಧಿಸಿದ್ದರು. ಇದೇ ಕಾರಣಕ್ಕೆ ಸೇಡು ತೀರಿಸಿಕೊಳ್ಳಲು ಮುಂದಾಗಿದ್ದ ಕೃಪಲಾನಿ, ಆಂತೋನಿ ಸಹೋದ್ಯೋಗಿಯೊಬ್ಬರಿಗೆ ಕರೆ ಮಾಡಿ ಧಮ್ಕಿ ಹಾಕಿದ್ದ. ಈ ಪ್ರಕರಣ ಸಂಬಂಧ ಕ್ರಮ ಕೈಗೊಳ್ಳುವಂತೆ ಪಲಾನಿ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಆಂತೋನಿ ಹಲಸೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಅತ್ಯಾಚಾರ ಆರೋಪ: ಈಗಾಗಲೇ ಕಸ್ಟಮ್ಸ್ ಮಹಿಳಾ ಅಧಿಕಾರಿಗೆ ಕಿರುಕುಳ, ಲೈಂಗಿಕ ದೌರ್ಜನ್ಯ ಮಾಡಿದ ಪ್ರಕರಣದಲ್ಲಿ ಕೃಪಲಾನಿ ಬಂಧಿತನಾಗಿದ್ದಾನೆ. ಮಹಿಳಾ ಅಧಿಕಾರಿಗೆ ಬ್ಲ್ಯಾಕ್‌ಮೇಲ್ ಮಾಡಿ ಲೈಂಗಿಕ ದೌರ್ಜನ್ಯ ಎಸಗಿದ್ದಲ್ಲದೆ ಹೇಳಿದಂತೆ ಕೇಳದಿದ್ದರೆ ಖಾಸಗಿ ಫೋಟೋ, ವೀಡಿಯೋ ವೈರಲ್ ಮಾಡುವು ದಾಗಿ ಆರೋಪಿ ಬೆದರಿಕೆ ಹಾಕಿದ್ದ. ಕೃಪಲಾನಿ ಕಿರುಕುಳಕ್ಕೆ ಬೇಸತ್ತು ಮಹಿಳಾ ಅಧಿಕಾರಿ ಕೊನೆಗೂ ಪೊಲೀಸರಿಗೆ ದೂರು ನೀಡಿದ್ದಾರೆ.

ಬೈಕ್ ಅಡ್ಡಗಟ್ಟಿ ಸುಲಿಗೆ: ಐವರ ಸೆರೆ

ಬೆಂಗಳೂರು: ರಾತ್ರಿ ವೇಳೆ ಒಂಟಿಯಾಗಿ ತೆರಳುವ ದ್ವಿಚಕ್ರವಾಹನ ಚಾಲಕರನ್ನು ಗುರಿಯಾಗಿಸಿ ಹಲ್ಲೆ ಮಾಡಿ, ಸುಲಿಗೆ ಮಾಡಿದ ಆರೋಪದಡಿ ಇಬ್ಬರು ಅಪ್ರಾಪ್ತರು ಸೇರಿ ಐವರನ್ನು ರಾಮಮೂರ್ತಿನಗರ ಹಾಗೂ ಬಾಣಸವಾಡಿ ಠಾಣೆಗಳ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.

ಪ್ರತ್ಯೇಕ ಎರಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಬಾಣಸವಾಡಿ ಉಪ ವಿಭಾಗದ ಪೊಲೀಸರು ಆರೋಪಿಗಳಾದ ಮಿಥುನ್, ಸಾಹಸ್ ಹಾಗೂ ಸ್ಟೀಫನ್ ರಾಜ್‌ನನ್ನು ಬಂಧಿಸಿದ್ದಾರೆ. ಇನ್ನಿಬ್ಬರು ಅಪ್ರಾಪ್ತರನ್ನು ವಶಕ್ಕೆ ಪಡೆದು ಬಾಲಮಂದಿರಕ್ಕೆ ಒಪ್ಪಿಸಲಾಗಿದೆ. ಆರೋಪಿತರು ಮೇ 17ರ ರಾತ್ರಿ ಕೆಲವೇ ಗಂಟೆ ಅಂತರದಲ್ಲಿ ಇಬ್ಬರು ದ್ವಿಚಕ್ರವಾಹನ ಸವಾರರ ಮೇಲೆ ಹಲ್ಲೆ ಮಾಡಿ ಸುಲಿಗೆ ಮಾಡಿದ್ದರು.

ವಾಹನ ಸವಾರನ ಮೇಲೆ ಹಲ್ಲೆ: ಮೇ 17ರಂದು 12.15ರ ಸುಮಾರಿಗೆ ಬರ್ಖಾತ್ ಎಂಬಾತ ಔಷಧ ತರಲು ಮೆಡಿಕಲ್ ಶಾಪ್‌ಗೆ ಬೈಕ್‌ನಲ್ಲಿ ಹೋಗುವಾಗ ಅಡ್ಡಗಟ್ಟಿದ ಆರೋಪಿಗಳು ಏಕಾಏಕಿ ಕೈಯಿಂದ ಹಲ್ಲೆ ಮಾಡಿದ್ದಾರೆ. ಪ್ರತಿರೋಧ ವ್ಯಕ್ತಪಡಿಸಿದರೂ ಹಲ್ಲೆ ಮುಂದುವರೆಸಿದ್ದರು. ಈ ವೇಳೆ ಬರ್ಖಾತ್ ಬಳಿಯಿದ್ದ 600 ರೂಪಾಯಿ ಕಸಿದು ಪರಾರಿಯಾಗಿದ್ದರು. ಈ ಸಂಬಂಧ ಬಾಣಸವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಇದಾದ ಕೆಲವೇ ಗಂಟೆಗಳಲ್ಲಿ ಅಂದರೆ ಬೆಳಗಿನ ಜಾವ 3.30ರ ಸುಮಾರಿಗೆ ರಾಮಮೂರ್ತಿನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದ್ವಿಚಕ್ರವಾಹನ ಸವಾರನ ಮೇಲೆ ಹಲ್ಲೆ ಮಾಡಿದ್ದರು.

ಹಿಂಬಾಲಿಸಿ ಬಂದು ಚಾಕುವಿನಿಂದ ಹಲ್ಲೆ: ಬಂಜಾರ ಲೇಔಟ್ ನಿವಾಸಿ ಧೀರಜ್ ಹೊಸಕೋಟೆ ಬಿರಿಯಾನಿ ತಿನ್ನಲು ರಾಮಮೂರ್ತಿನಗರದಲ್ಲಿ ಬೈಕ್‌ನಲ್ಲಿ ಹೋಗುತ್ತಿದ್ದ. ಮಾರ್ಗಮಧ್ಯೆ ಆರೋಪಿಗಳು ಅಡ್ಡಗಟ್ಟಿ ಡ್ರಾಪ್ ನೀಡುವಂತೆ ಕೇಳಿದ್ದಾರೆ. ಆಗ ಧೀರಜ್ ಇದಕ್ಕೆ ನಿರಾಕರಿಸಿ ಮುಂದೆ ಬಂದಿದ್ದಾರೆ.

ಸ್ನೇಹಿತರಿಗಾಗಿ ಕಾಯುತ್ತಿದ್ದಾಗ ವಾಹನ ಹಿಂಬಾಲಿಸಿ ಬಂದಿದ್ದ ಆರೋಪಿಗಳು ಏಕಾಏಕಿ ಧೀರಜ್‌ಗೆ ಚಾಕುವಿನಿಂದ ಹಲ್ಲೆ ಮಾಡಿ, ಆತನ ಸ್ಕೂಟರ್ ಸಮೇತ ಕಾಲ್ಕಿತ್ತಿದ್ದರು. ಸ್ನೇಹಿತನ ನೆರವಿನಿಂದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಧೀರಜ್ ನೀಡಿದ ದೂರಿನ ಮೇರೆಗೆ ಆರೋಪಿಗಳನ್ನು ಬಂಧಿಸಲಾಗಿದೆ.

ತೇಜಸ್ ನೆಟ್‌ವರ್ಕ್ಸ್ ಲಿಮಿಟೆಡ್

TEJAS NETWORKS

ನೋಂದಾಯಿತ ಕಚೇರಿ: ಜೆ.ಪಿ. ಸಾಫ್ಟ್‌ವೇರ್ ಪಾರ್ಕ್, ಪ್ಲಾಟ್ ನಂ. 25, ಸರ್ವೇ ನಂ. 13, 14, 17, 18, ಕೋನಪ್ಪನ ಅಗ್ರಹಾರ ವಿಲೇಜ್, ಬೇಗೂರು ಹೋಬಳಿ, ಬೆಂಗಳೂರು-560 100, ಕರ್ನಾಟಕ, ಭಾರತ.
ಕಾರ್ಪೋರೇಟ್ ಐಡೆಂಟಿಟಿ ನಂಬರ್: L72900KA2000PLC026980
ದೂರವಾಣಿ: +91 80 4179 4600 ಫ್ಯಾಕ್ಸ್: +91 80 2852 0201
ಇ-ಮೇಲ್: corporate@tejasnetworks.com | ವೆಬ್‌ಸೈಟ್: www.tejasnetworks.com

ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ (ಐಇಪಿಎಫ್) ಪ್ರಾಧಿಕಾರಕ್ಕೆ ಷೇರುಗಳು ಮತ್ತು ಲಾಭಾಂಶದ ವರ್ಗಾವಣೆ

ಈ ಸೂಚನೆಯ ಮೂಲಕ ತಿಳಿಸುವುದೇನಂದರೆ, ಕಂಪೆನಿಗಳ ಕಾಯ್ದೆ, 2013 ('ಕಾಯ್ದೆ')ರ ಸೆಕ್ಷನ್ 124 ಮತ್ತು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿ ಪ್ರಾಧಿಕಾರ (ಲೆಕ್ಕಪತ್ರ, ಲೆಕ್ಕಪರಿಶೋಧನೆ, ವರ್ಗಾವಣೆ ಮತ್ತು ಮರುಪಾವತಿ) ನಿಯಮಗಳು, 2016 ('ನಿಯಮಗಳು') ರ ನಿಬಂಧನೆಗಳ ಪ್ರಕಾರ (i) ಪಾವತಿಸದ / ಹಕ್ಕು ಸಾಧಿಸದ ಲಾಭಾಂಶವನ್ನು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ ('ಐಇಪಿಎಫ್') ವರ್ಗಾಯಿಸಬೇಕಾಗುತ್ತದೆ, ಇದು ಭಾರತ ಸರ್ಕಾರವು ಕಾಯ್ದೆಯ ಸೆಕ್ಷನ್ 125ರ ಅಡಿಯಲ್ಲಿ ಸ್ಥಾಪಿಸಿದ ನಿಧಿಯಾಗಿದೆ ಮತ್ತು (ii) 2018-19ರ ಹಣಕಾಸು ವರ್ಷಕ್ಕೆ ಘೋಷಿಸಲಾದ ಲಾಭಾಂಶವನ್ನು ಷೇರುದಾರರು ಸತತ ಏಳು ವರ್ಷ ಅಥವಾ ಅದಕ್ಕಿಂತ ಹೆಚ್ಚು ಕಾಲ ಪಾವತಿಸದ ಅಥವಾ ಹಕ್ಕು ಸಾಧಿಸದೆ ಇದ್ದಲ್ಲಿ, ಅಂತಹವರ ಎಲ್ಲಾ ಷೇರುಗಳು, ಐಇಪಿಎಫ್ ಪ್ರಾಧಿಕಾರದ ಡಿಮ್ಯಾಟ್ ಖಾತೆಗೆ ಕಂಪೆನಿಯು ವರ್ಗಾವಣೆ ಮಾಡಬೇಕಾಗಿರುತ್ತದೆ.

ಕಂಪೆನಿಯು ಸಂಬಂಧಪಟ್ಟ ಷೇರುದಾರರಿಗೆ ಅವರ ಕ್ಲೈಮ್ ಮಾಡದ ಲಾಭಾಂಶ / ಷೇರುಗಳನ್ನು ನಿಗದಿತ ಸಮಯದೊಳಗೆ ಐಇಪಿಎಫ್‌ಗೆ ವರ್ಗಾಯಿಸಲಾಗುವ ಕುರಿತು ಹಾಗೂ ನಿಗದಿತ ದಿನಾಂಕದೊಳಗೆ ಕ್ಲೈಮ್ ಮಾಡದ ಲಾಭಾಂಶವನ್ನು ಪಡೆಯಲು ಅಗತ್ಯ ಕ್ರಮ ಕೈಗೊಳ್ಳುವಂತೆ ವಿನಂತಿಸಿ ಸಂಬಂಧಪಟ್ಟ ಷೇರುದಾರರ ನೋಂದಾಯಿತ ವಿಳಾಸಕ್ಕೆ ವೈಯಕ್ತಿಕ ಸಂವಹನವನ್ನು ಕಳುಹಿಸಿದೆ. ಕಂಪೆನಿಯು ಅಂತಹ ಷೇರುದಾರರು ಮತ್ತು ಐಇಪಿಎಫ್ ಖಾತೆಗೆ ವರ್ಗಾಯಿಸಬೇಕಾದ ಎಲ್ಲಾ ಷೇರುಗಳಿಗೆ ಸಂಬಂಧಿತ ವಿವರಗಳನ್ನು ಮತ್ತು ಅಂತಹ ಷೇರುಗಳ ಮೇಲಿನ ಪಾವತಿಸದ ಅಥವಾ ಕ್ಲೈಮ್ ಮಾಡದ ಲಾಭಾಂಶದ ವಿವರಗಳನ್ನು ಒಳಗೊಂಡಂತೆ https://www.tejasnetworks.com/investor-relations/ ವೆಬ್‌ಸೈಟ್‌ನಲ್ಲಿ ಮಾಹಿತಿಗಾಗಿ ಮತ್ತು ಷೇರುದಾರರು ಅಗತ್ಯ ಕ್ರಮ ಕೈಗೊಳ್ಳಲು ಅಪ್‌ಲೋಡ್ ಮಾಡಿದೆ.

ಸಂಬಂಧಪಟ್ಟ ಷೇರುದಾರರಿಂದ ಕಂಪೆನಿಯು ಆಗಸ್ಟ್ 10, 2026ರಂದು ಅಥವಾ ಅದಕ್ಕೂ ಮುಂಚಿತವಾಗಿ ಯಾವುದೇ ಕ್ಲೈಮ್ ಅನ್ನು ಸ್ವೀಕರಿಸದಿದ್ದರೆ, ಕಂಪೆನಿಯು ನಿಯಮಗಳನ್ನು ಪಾಲಿಸಲು, ಪಾವತಿಸದ ಅಥವಾ ಕ್ಲೈಮ್ ಮಾಡದ ಲಾಭಾಂಶವನ್ನು ನಿಗದಿತ ದಿನಾಂಕದಂದು ಐಇಪಿಎಫ್ ಪ್ರಾಧಿಕಾರಕ್ಕೆ ವರ್ಗಾಯಿಸುತ್ತದೆ. ಇದಲ್ಲದೆ, ಸತತ ಏಳು ವರ್ಷಗಳ ಕಾಲ ಲಾಭಾಂಶವನ್ನು ಪಾವತಿಸದ ಅಥವಾ ಕ್ಲೈಮ್ ಮಾಡದ ಷೇರುದಾರರ ಷೇರುಗಳನ್ನು ಸಹ ಯಾವುದೇ ಸೂಚನೆ ಇಲ್ಲದೆ ಐಇಪಿಎಫ್ ಖಾತೆಗೆ ವರ್ಗಾಯಿಸಲಾಗುತ್ತದೆ.

ಸಂಬಂಧಪಟ್ಟ ಷೇರುದಾರರು, ಅಂತಹ ಹಕ್ಕು ಸಾಧಿಸದ ಲಾಭಾಂಶ / ಷೇರುಗಳನ್ನು ಐಇಪಿಎಫ್ ಪ್ರಾಧಿಕಾರಕ್ಕೆ ವರ್ಗಾಯಿಸಿದ ನಂತರ, www.iepf.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಫಾರ್ಮ್ IEPF-5 ರಲ್ಲಿ ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಮೂಲಕ ಮತ್ತು ಸಹಿ ಮಾಡಿದ ಭೌತಿಕ ಪ್ರತಿಯನ್ನು ಫಾರ್ಮ್ IEPF-5 ರಲ್ಲಿ ನಮೂದಿಸಲಾದ ಅಗತ್ಯ ದಾಖಲೆಗಳೊಂದಿಗೆ ಕಂಪೆನಿಯ ನೋಂದಾಯಿತ ಕಚೇರಿಗೆ ಕಳುಹಿಸುವ ಮೂಲಕ ಐಇಪಿಎಫ್ ಪ್ರಾಧಿಕಾರದಿಂದ ಅಂತಹ ಷೇರುಗಳ ಮೇಲೆ ಬರುವ ಎಲ್ಲಾ ಲಾಭಗಳನ್ನು ಒಳಗೊಂಡಂತೆ ಎರಡನ್ನೂ ಪಡೆಯಲು ಅರ್ಹರಾಗಿರುತ್ತಾರೆ ಎಂಬುದನ್ನು ಗಮನಿಸತಕ್ಕದ್ದು.

ಸದರಿ ನಿಯಮಗಳ ಅನುಸಾರವಾಗಿ ಐಇಪಿಎಫ್ ಪ್ರಾಧಿಕಾರಕ್ಕೆ ವರ್ಗಾಯಿಸಲಾದ ಕ್ಲೈಮ್ ಮಾಡದ ಲಾಭಾಂಶದ ಮೊತ್ತ ಮತ್ತು ಈಕ್ವಿಟಿ ಷೇರುಗಳಿಗೆ ಸಂಬಂಧಿಸಿದಂತೆ ಷೇರುದಾರರು ಕಂಪೆನಿಯಿಂದ ಯಾವುದೇ ಕ್ಲೈಮ್ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸಬೇಕು.

ಮೇಲಿನ ವಿಷಯದ ಕುರಿತು ಯಾವುದೇ ಪ್ರಶ್ನೆಗಳಿದ್ದಲ್ಲಿ, ಷೇರುದಾರರು ಕಂಪೆನಿಯ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ) ಅವರನ್ನು ಸಂಪರ್ಕಿಸಲು ವಿನಂತಿಸಲಾಗಿದೆ: ಎಂಯುಎಫ್‌ಜಿ ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಸಿ-101, 247 ಪಾರ್ಕ್, ಎಲ್.ಬಿ.ಎಸ್ ಮಾರ್ಗ್, ವಿಖ್ರೋಲಿ (ಪಶ್ಚಿಮ), ಮುಂಬೈ-400 083. ದೂರವಾಣಿ: +91 8108116767, ಟೋಲ್-ಫ್ರೀ ಸಂಖ್ಯೆ: 1800 1020 878, ಇ-ಮೇಲ್: Iepf.shares@in.mpms.mufg.com.

ತೇಜಸ್ ನೆಟ್‌ವರ್ಕ್ಸ್ ಲಿಮಿಟೆಡ್ ಪರವಾಗಿ
ಸಹಿ/-
ಅನಂತ ಮೂರ್ತಿ ಎನ್.
ಕಂಪೆನಿ ಕಾರ್ಯದರ್ಶಿ ಮತ್ತು ಕಂಪ್ಲೆಯನ್ಸ್ ಅಧಿಕಾರಿ,
ನೋಡಲ್ ಅಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ : ಮೇ 18, 2026

ಪುಟ್ಪಾತ್ ಅತಿಕ್ರಮಿಸಿದರೆ ದಂಡ

ಬೆಂಗಳೂರು: ರಸ್ತೆಗಳಲ್ಲಿ ಪಾದಚಾರಿಗಳು ಮತ್ತು ಸೈಕಲ್ ಸವಾರರ ಸುರಕ್ಷತೆ ಖಚಿತಪಡಿಸಲು ರಾಜ್ಯ ಸರಕಾರವು ಕಠಿಣ ನಿಯಮ ಜಾರಿಗೊಳಿಸಿದೆ.

ಕರ್ನಾಟಕ ಮೋಟಾರು ವಾಹನ (ತಿದ್ದುಪಡಿ) ನಿಯಮಗಳು, 2026 ಅನ್ನು ರಾಜ್ಯ ಸರಕಾರ ಅಧಿಸೂಚನೆ ಹೊರಡಿಸಿದ್ದು, ರಸ್ತೆ ವಿನ್ಯಾಸದ ಮಾನದಂಡಗಳು, ಕಡ್ಡಾಯ ಸುರಕ್ಷತಾ ಆಡಿಟ್ ಮತ್ತು ಉಲ್ಲಂಘನೆ ಮಾಡುವವರಿಗೆ ಭಾರಿ ದಂಡ ವಿಧಿಸಲು ಹೊಸ ನಿಯಮಾವಳಿ ರೂಪಿಸಿದೆ. ಇನ್ನು ಮುಂದೆ ರಸ್ತೆಗಳ ಯೋಜನೆ, ನಿರ್ಮಾಣ ಮತ್ತು ನಿರ್ವಹಣೆಯ ಪ್ರತಿ ಹಂತದಲ್ಲೂ ರಸ್ತೆ ಸುರಕ್ಷತಾ ಆಡಿಟ್ ಮಾಡುವುದು ಕಡ್ಡಾಯ. ನಗರ ಪ್ರದೇಶಗಳಲ್ಲಿ ವಿಶೇಷವಾಗಿ ಬೆಂಗಳೂರಿನಲ್ಲಿ ವಾಹನಗಳಿಗಿಂತ ಪಾದಚಾರಿಗಳು ಮತ್ತು ಸೈಕಲ್ ಸವಾರರಿಗೆ ಆದ್ಯತೆ ನೀಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಪ್ರತಿಯೊಂದು ರಸ್ತೆಯ ಪಾದಚಾರಿ ಮಾರ್ಗವು ಕನಿಷ್ಠ 1.5 ಮೀಟರ್ ಅಗಲವಿರಬೇಕು. ಇದು ಅಡೆತಡೆಯಿಲ್ಲದ ಪ್ರವೇಶ, ಸಮರ್ಪಕ ಬೆಳಕು ಮತ್ತು ವಿಕಲಚೇತನ ಸ್ನೇಹಿ ವೈಶಿಷ್ಟ್ಯಗಳನ್ನು ಹೊಂದಿರಬೇಕು. ಸೈಕಲ್ ಸವಾರರಿಗಾಗಿ ಪ್ರತ್ಯೇಕ ಪಥಗಳನ್ನು ವೈಜ್ಞಾನಿಕವಾಗಿ ವಿನ್ಯಾಸಗೊಳಿಸಬೇಕು. ರಸ್ತೆ ವಿಸ್ತರಣೆ ಮಾಡುವ ನೆಪದಲ್ಲಿ ಪಾದಚಾರಿ ಮಾರ್ಗದ ಜಾಗವನ್ನು ಕಡಿಮೆ ಮಾಡುವುದನ್ನು ಕೊನೆಯ ಆಯ್ಕೆಯಾಗಿ ಮಾತ್ರ ಪರಿಗಣಿಸಬೇಕು. ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಶಾಲಾ ವಲಯಗಳಲ್ಲಿ ವಾಹನಗಳ ವೇಗವನ್ನು ಗಂಟೆಗೆ 25 ಕಿ.ಮೀ.ಗೆ ಸೀಮಿತಗೊಳಿಸಲಾಗಿದೆ. ವಾಹನ ಸವಾರರು ಜೀಬ್ರಾ ಕ್ರಾಸಿಂಗ್‌ಗಳಲ್ಲಿ ಕಡ್ಡಾಯವಾಗಿ ವಾಹನ ನಿಲ್ಲಿಸಿ ಪಾದಚಾರಿಗಳಿಗೆ ದಾರಿ ಮಾಡಿಕೊಡ ಬೇಕು. ಸೈಕಲ್ ಸವಾರರನ್ನು ಓವರ್ಟೇಕ್ ಮಾಡುವಾಗ ಕನಿಷ್ಠ 1.5 ಮೀಟರ್ ಅಂತರ ಕಾಯ್ದುಕೊಳ್ಳುವುದು ಕಡ್ಡಾಯವಾಗಿದೆ.

ನಿಯಮ ಮೀರಿದರೆ ಜೇಬಿಗೆ ಕತ್ತರಿ!

ಪಾದಚಾರಿ ಮಾರ್ಗ ಮತ್ತು ಸೈಕಲ್ ಪಥಗಳ ಮೇಲೆ ವಾಹನ ಚಾಲನೆ ಮಾಡುವುದು ಅಥವಾ ಪಾರ್ಕಿಂಗ್ ಮಾಡುವುದು ಈಗ ದುಬಾರಿ ಎನಿಸಲಿದೆ. ಮೊದಲ ಬಾರಿ ನಿಯಮ ಉಲ್ಲಂಘನೆಗೆ 1 ಸಾವಿರ ರು. ದಂಡ ವಿಧಿಸಲಾಗುತ್ತದೆ. ಮರುಕಳಿಸಿದರೆ 5 ಸಾವಿರ ರು. ದಂಡ, ನಿರಂತರವಾಗಿ ನಿಯಮ ಉಲ್ಲಂಘನೆ ಮಾಡಿದರೆ ಪ್ರತಿದಿನಕ್ಕೆ 1 ಸಾವಿರ ರು. ಹೆಚ್ಚುವರಿ ದಂಡ ವಿಧಿಸಲಾಗುತ್ತದೆ.

ಮಾನ್ಯ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 858/2025

ಅರ್ಜಿದಾರರು: ಶ್ರೀಮತಿ ಧೋಳಿ ಬಾಯಿ ಕೋಂ ಲೇಟ್ ಶ್ರೀ ವೆಂಕಟಚಲ ನಾಯ್ಕ ವಯಸ್ಸು 70 ವರ್ಷ. ವಾಸ: ದೊಡ್ಡತಾಂಡ್ಯ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ-562 117 ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಮಾನ್ಯ ತಹಶೀಲ್ದಾರರು, ಕನಕಪುರ ತಾಲ್ಲೂಕು, ಕನಕಪುರ ಬೆಂಗಳೂರು ದಕ್ಷಿಣ ಜಿಲ್ಲೆ-562 117, 2. ಗ್ರಾಮ ಲೆಕ್ಕಾಧಿಕಾರಿಗಳು, ಶಿವನಹಳ್ಳಿ ಗ್ರಾಮ ಪಂಚಾಯ್ತಿ, ಶಿವನಹಳ್ಳಿ ವೃತ್ತ, ಕಸಬಾ ಹೋಬಳಿ, ಕನಕಮರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ -562 117,

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಗಂಡ ಮತ್ತು 2 ಮತ್ತು 3 ನೇ ಅರ್ಜಿದಾರರ ತಂದೆಯವರಾದ ಶ್ರೀ ವೆಂಕಟಚಲ ನಾಯ್ಕ ಬಿನ್ ಲೇಟ್ ಶ್ರೀ ಬಾಲ್ಯ ನಾಯ್ಕರವರು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ದೊಡ್ಡತಾಂಡ್ಯ ಗ್ರಾಮದಲ್ಲಿ ದಿನಾಂಕ: 06-01-2007 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 02/07/2026 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2026ರ ಮೇ 15ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು,
ಮಾನ್ಯ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಎಸ್.ಮಂಜುನಾಥ್ ವಕೀಲರು, ಕನಕಪುರ
ಸ್ಥಳ : ಕನಕಪುರ, ದಿನಾಂಕ: 15.05.2026

ಮಾನ್ಯ ಗೌರವಾನ್ವಿತ 1ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ
ಸಿ.ಮಿಸ್ ನಂ:.939/2025

ಅರ್ಜಿದಾರರು: ಶ್ರೀ ಶಿವಶಂಕರಯ್ಯ ಕೆ.ಬಿ ಬಿನ್ ಲೇಟ್ ಬಸವರಾಹಪ್ಪ ಕೆ.ವಿ. ವಯಸ್ಸು 68 ವರ್ಷ ವಾಸ: ವೆಂಕಟೇಶ್ವರ ಬಡಾವಣೆ ಕನಕಪುರ ಮುಖ್ಯ ರಸ್ತೆ ಕೋಡಿಹಳ್ಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇತರರು

ವಿರುದ್ಧ

ಪ್ರತಿಅರ್ಜಿದಾರರು: 1. ಜನನ ಮತ್ತು ಮರಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. 2. ಗ್ರಾಮ ಲೆಕ್ಕಾಧಿಕಾರಿಗಳು, ಕೋಡಿಹಳ್ಳಿ ವೃತ್ತ ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಹೆಂಡತಿ, 2 & 3ನೇ ಅರ್ಜಿದಾರರ ತಾಯಿಯವರಾದ ಕೆ.ಆರ್.ರಾಜೇಶ್ವರಿ ಕೋಂ ಶಿವಶಂಕರಯ್ಯ.ಕೆ.ಬಿ ರವರು ದಿನಾಂಕ: 28.05.2008 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಗ್ರಾಮದಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 30.07.2026 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
ದಿನಾಂಕ: 18ನೇ ಮೇ 2026 ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಚೇತನ್ ಕುಮಾರ್ ಎಸ್.ಎಂ. ಮತ್ತು ಪ್ರವೀಣ್ ಕುಮಾರ್, ವಕೀಲರು, ಕನಕಪುರ,
ಸ್ಥಳ: ಕನಕಪುರ,
ದಿನಾಂಕ: 18/05/2026

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್ ನಂ:.698/2025

ಅರ್ಜಿದಾರರು: ಮಂಜುನಾಥ ಪಿ, ಬಿನ್ ಲೇಟ್ ಪುಟ್ಟಮಾದಯ್ಯ, ಎಂ. ವಯಸ್ಸು 50 ವರ್ಷ ವಾಸ: ದೊಡ್ಡಗುಳ್ಳಿ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇತರರು

ವಿರುದ್ಧ

ಪ್ರತಿಅರ್ಜಿದಾರರು: 1. ಜನನ ಮತ್ತು ಮರಣ ನೋಂದಣಾಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ, 2. ಗ್ರಾಮ ಲೆಕ್ಕಾಧಿಕಾರಿಗಳು, ಹಂಚಗುಳಿ ವೃತ್ತ ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 2ನೇ ಅರ್ಜಿದಾರರ ಅಜ್ಜಿ , 3ನೇ ಅರ್ಜಿದಾರರ ಮಾವನ ಅಣ್ಣನ ಹೆಂಡತಿಯವರಾದ ಮುದ್ದಮ್ಮ ಕೋಂ ಲೇಟ್ ಕಾಳೇಗೌಡ ರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ, ಹೋಬಳಿ, ದೊಡ್ಡಗುಳಿ ಗ್ರಾಮದಲ್ಲಿ ದಿನಾಂಕ: 09.06.1984 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 06/07/2026ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2026 ರ ಮೇ 16ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಚೇತನ್ ಕುಮಾರ್ ಎಸ್.ಎಂ ಮತ್ತು ಪ್ರವೀಣ್ ಕುಮಾರ್, ವಕೀಲರು, ಕನಕಪುರ,

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್ ನಂ:.694/2025

ಅರ್ಜಿದಾರರು: ಮಂಜುನಾಥ ಪಿ, ಬಿನ್ ಲೇಟ್ ಪುಟ್ಟಮಾದಯ್ಯ, ಎಂ. ವಯಸ್ಸು 50 ವರ್ಷ ವಾಸ: ದೊಡ್ಡಗುಳ್ಳಿ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇತರರು

ವಿರುದ್ಧ

ಪ್ರತಿಅರ್ಜಿದಾರರು: 1. ಜನನ ಮತ್ತು ಮರಣ ನೋಂದಣಾಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ, 2. ಗ್ರಾಮ ಲೆಕ್ಕಾಧಿಕಾರಿಗಳು, ಹಂಚಗುಳಿ ವೃತ್ತ ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 2ನೇ ಅರ್ಜಿದಾರರ ಮುತ್ತಜ್ಜಿ , 3ನೇ ಅರ್ಜಿದಾರರ ಮಾವನ ತಾಯಿಯವರಾದ ಮಾರಮ್ಮ ಕೋಂ ಲೇಟ್ ಕಾಳೇಗೌಡ @ ಬೋಡೇಗೌಡ ರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ, ಹೋಬಳಿ, ದೊಡ್ಡಗುಳಿ ಗ್ರಾಮದಲ್ಲಿ ದಿನಾಂಕ: 05.06.1990 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 06/07/2026ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2026 ರ ಮೇ 16ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಚೇತನ್ ಕುಮಾರ್ ಎಸ್.ಎಂ ಮತ್ತು ಪ್ರವೀಣ್ ಕುಮಾರ್, ವಕೀಲರು, ಕನಕಪುರ,

ಸಿಜೆಐಗೆ ಸಿಎಂ ಪತ್ರ

ಬೆಂಗಳೂರು: ಕರಾವಳಿ ಭಾಗದ ಜನರಿಗೆ ತ್ವರಿತ ನ್ಯಾಯದಾನ ಕಲ್ಪಿಸಲು ಹಾಗೂ ಸರ್ವರಿಗೂ ನ್ಯಾಯದ ಲಭ್ಯತೆ ಖಚಿತಪಡಿಸಲು ರಾಜ್ಯ ಸರಕಾರ ಬದ್ಧವಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಸಂಚಾರಿ ಹೈಕೋರ್ಟ್ ಪೀಠ ಸ್ಥಾಪನೆ ಮಾಡಬೇಕು ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ. ಈ ಬಗ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಮುಖ್ಯಮಂತ್ರಿ, ಮಂಗಳೂರಿನಲ್ಲಿ ಸಂಚಾರಿ ಹೈಕೋರ್ಟ್ ಪೀಠ ಸ್ಥಾಪನೆಯಿಂದ ನ್ಯಾಯದಾನದ ವಿಕೇಂದ್ರೀಕರಣ, ಸಕಾಲಿಕ ಹಾಗೂ ಕೈಗೆಟುಕುವ ನ್ಯಾಯದ ಸಾಂವಿಧಾನಿಕ ಭರವಸೆಯನ್ನು ಬಲಪಡಿಸಿದಂತಾಗಲಿದೆ. ಜತೆಗೆ, ಪ್ರಧಾನ ಪೀಠದ ಮೇಲಿನ ಬಾಕಿ ಪ್ರಕರಣಗಳ ಒತ್ತಡವು ಗಣನೀಯವಾಗಿ ತಗ್ಗಲಿದೆ. ಮಂಗಳೂರಿನ ಹಳೆಯ ಜಿಲ್ಲಾಧಿಕಾರಿ ಕಚೇರಿಯ ಸುಮಾರು 50 ಸಾವಿರ ಚದರ ಅಡಿ ವಿಸ್ತೀರ್ಣದ ಭೂಮಿ ಲಭ್ಯವಿದೆ. ಪೀಠವು ಸುಗಮವಾಗಿ ಕಾರ್ಯನಿರ್ವಹಿಸಲು ಸೌಕರ್ಯ ಒದಗಿಸಲು ಸರಕಾರ ಸಿದ್ಧವಿದೆ ಎಂದು ತಿಳಿಸಿದ್ದಾರೆ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬುಲೆಟ್ ರೈಲಿನ ಚಿತ್ರ ಅನಾವರಣ

ದೇಶದ ಮೊದಲ ಪ್ರಸ್ತಾವಿತ ಬುಲೆಟ್ ರೈಲಿನ ಚಿತ್ರವನ್ನು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಸೋಮವಾರ ಅನಾವರಣಗೊಳಿಸಿದ್ದಾರೆ. ದೆಹಲಿಯ ರೈಲ್ವೆ ಸಚಿವಾಲಯದ ಕಚೇರಿಯಲ್ಲಿ ಬುಲೆಟ್ ರೈಲಿನ ಮಾದರಿ ಚಿತ್ರವನ್ನು ಪ್ರದರ್ಶಿಸಲಾಗಿದೆ. ಬುಲೆಟ್ ರೈಲು 2027ರ ಸ್ವಾತಂತ್ರ್ಯ ದಿನಾಚರಣೆ ದಿನದಂದು ಮುಂಬೈ-ಅಹಮದಾಬಾದ್ ಮಾರ್ಗದಲ್ಲಿ ಕಾರ್ಯಾಚರಣೆಯನ್ನು ಪ್ರಾರಂಭಿಸಲಿದೆ ಎಂದು ಸಚಿವರು ತಿಳಿಸಿದ್ದಾರೆ.

ಕಲ್ಪತರು ನಾಡಿನಲ್ಲಿ ಇಂದು ಬೃಹತ್ ಸಮಾವೇಶ
1.52 ಲಕ್ಷ ಫಲಾನುಭವಿಗಳಿಗೆ ಸವಲತ್ತು ವಿತರಣೆ

ಗ್ಯಾರಂಟಿ ಸರಕಾರಕ್ಕೆ ಮೂರರ ಸಂಭ್ರಮ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪಂಚಗ್ಯಾರಂಟಿ ಭರವಸೆಯ ಜತೆಜತೆಗೆ ಕರ್ನಾಟಕದ ಅಭಿವೃದ್ಧಿಯ ಜಪದೊಂದಿಗೆ ಅಧಿಕಾರದ ಗದ್ದುಗೆ ಏರಿದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರಕಾರ ಮೂರು ವಸಂತ ಪೂರ್ಣಗೊಳಿಸುವ ಹೊಸ್ತಿಲಿನಲ್ಲಿದ್ದು, ಈ ಸಂಭ್ರಮದಲ್ಲಿ ಮಿಂದೇಳಲು ಕಲ್ಪತರು ನಾಡು ತುಮಕೂರು ಸಜ್ಜಾಗಿದೆ.

2023ರ ಮೇ.20ರಂದು ಸಿಎಂ ಸಿದ್ದರಾಮಯ್ಯ ಅವರು ಅಧಿಕಾರ ಸ್ವೀಕರಿಸಿದರು. ಮಂಗಳವಾರಕ್ಕೆ ಭರ್ತಿ ಮೂರು ವರ್ಷವಾಗುತ್ತಿದ್ದು, ಅದಕ್ಕೂ ಮುನ್ನ ದಿನ ತುಮಕೂರಿನಲ್ಲಿ ಸರಕಾರದ ಮೂರನೇ ಸಾಧನಾ ಸೇವೆಯ ಸಮರ್ಪಣಾ ಕಾರ್ಯಕ್ರಮ ಹಾಗೂ ಸುಮಾರು 682 ಕೋಟಿ ರು. ಮೌಲ್ಯದ ತುಮಕೂರು ಜಿಲ್ಲೆಯ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ.

ಇತ್ತೀಚೆಗಷ್ಟೇ ನಡೆದ ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಉಪಚುನಾವಣೆಯಲ್ಲಿ ಗೆಲುವು ಸಾಧಿಸಿ ಜನಾಭಿಪ್ರಾಯ ಸರಕಾರದ ಪರವಾಗಿದೆ ಎನ್ನುವ ಸಂದೇಶ ರವಾನೆ ಮಾಡಿರುವ ಈ ಸಮಯದಲ್ಲಿಯೇ, ಸಾಧನಾ ಸಮಾವೇಶದ ಮೂಲಕ ಶಕ್ತಿ ಪ್ರದರ್ಶನವನ್ನು ತೋರಲು ಕಾಂಗ್ರೆಸ್ ಸಜ್ಜಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಚಿವ ಸಂಪುಟ ಸದಸ್ಯರು ಸೇರಿದಂತೆ ಶಾಸಕರು, ವಿಧಾನಪರಿಷತ್ ಸದಸ್ಯರು ಭಾಗವಹಿಸಲಿದ್ದಾರೆ.

ದಾಖಲೆಯ ಹಕ್ಕುಪತ್ರ ವಿತರಣೆ: ತುಮಕೂರಿನಲ್ಲಿ ನಡೆಯುತ್ತಿರುವ ಬೃಹತ್ ಸಮಾವೇಶಕ್ಕೆ ಎರಡು ಲಕ್ಷಕ್ಕೂ ಹೆಚ್ಚು ಫಲಾನುಭವಿಗಳು ಆಗಮಿಸುವ ನಿರೀಕ್ಷೆಯಿದ್ದು, ಕಾರ್ಯಕ್ರಮದಲ್ಲಿ ಜಿಲ್ಲೆಯ 1,52,492 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆಯಾಗಲಿದೆ.

→ 4

ತುಮಕೂರಿನ ಸಮಾವೇಶ ಸ್ಥಳದಲ್ಲಿ ನಾಯಕರ ಬೃಹತ್ ಕಟೌಟ್

ರಾಜ್ಯದಲ್ಲಿ ನಮ್ಮ ಸರಕಾರ ಬಂದು ಮೂರು ವರ್ಷಗಳಾಯಿತು. ಸರಕಾರ ಬಂದಾಗ ಅನೇಕ ಭರವಸೆಗಳನ್ನು ಕೊಟ್ಟಿದ್ದೆವು. ಈ ಮೂರು ವರ್ಷದಲ್ಲಿ ಏನೇನು ಈಡೇರಿಸಿದ್ದೇವೆಂದು ಈ ಸಮಾವೇಶದಲ್ಲಿ ತಿಳಿಸುತ್ತೇವೆ. ಇಲ್ಲಿ ಯಾರ ಶಕ್ತಿ ಪ್ರದರ್ಶನವೂ ಇಲ್ಲ. ಇದು ಸರಕಾರದ ಕಾರ್ಯಕ್ರಮಗಳ ಜಾರಿ ಬಗ್ಗೆ ಮಾತ್ರ ಸಮಾವೇಶ. ಈ ಸಮಾವೇಶವನ್ನು ಶಕ್ತಿ ಪ್ರದರ್ಶನವೆಂದು ನೋಡೋದಿಲ್ಲ. ನುಡಿದಂತೆ ನಡೆದಿದ್ದೇವೆ ಎಂದು ಹೇಳಲು ಹೊರಟಿದ್ದೇವೆ ಅಷ್ಟೇ. ಸರಕಾರಿ ಕಾರ್ಯಕ್ರಮವಾಗಿರುವುದರಿಂದ ಪಕ್ಷದ ನಾಯಕರನ್ನು ಆಹ್ವಾನಿಸಿಲ್ಲ.

-ಡಾ.ಜಿ. ಪರಮೇಶ್ವರ, ಗೃಹ ಸಚಿವ

ಸಮಾವೇಶದ ವೈಶಿಷ್ಟ್ಯ

- ಸುಮಾರು ಮೂರು ಲಕ್ಷಕ್ಕೂ ಹೆಚ್ಚು ಜನ ಭಾಗಿಯಾಗುವ ಸಾಧ್ಯತೆ
- ಸಾಧನಾ ಸಮಾವೇಶದ ಮೂಲಕ ಸಿದ್ದರಾಮಯ್ಯ ಶಕ್ತಿ ಪ್ರದರ್ಶನ
- ಕಾರ್ಯಕ್ರಮದಲ್ಲಿ 1.52 ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ
- ಜಿಲ್ಲೆಯ ವಿವಿಧ ಭಾಗದಿಂದ ಜನರನ್ನು ಕರೆತರಲು ಮೂರು ಸಾವಿರ ಬಸ್

3 ವರ್ಷದ ಯೋಜನೆಗಳು

- ಪಂಚಗ್ಯಾರಂಟಿ ಯೋಜನೆಗಳಿಗೆ ಈವರೆಗೆ ಸುಮಾರು 1.34 ಲಕ್ಷ ಕೋಟಿ ವ್ಯಯ
- ಗ್ಯಾರಂಟಿ ಹೊರತಾಗಿ ಹತ್ತಾರು ಅಭಿವೃದ್ಧಿಪರ ಯೋಜನೆಗಳ ಅನುಷ್ಠಾನ, ಅನುದಾನ
- ದಶಕಗಳಿಂದ ಬಗೆಹರಿಯದ ಕಂದಾಯ ವ್ಯಾಜ್ಯಗಳಿಗೆ ಮುಕ್ತಿ
- ಕೃಷ್ಣಾ ಮೇಲ್ದಂಡೆ ಪರಿಹಾರ ಮೊತ್ತ ನಿಗದಿ ಮಾಡುವ ಮೂಲಕ ಸಂತ್ರಸ್ತರ ಸಮಸ್ಯೆಗೆ ಪರಿಹಾರ

ವಿ.ಡಿ.ಸತೀಶನ್ ಕೇರಳ ಸಿಎಂ ಆಗಿ ಪದಗ್ರಹಣ

ಹೈ ನಾಯಕರ ಜತೆ ಸಿಎಂ ಸಿದ್ದು, ಡಿಸಿಎಂ ಡಿಕೆಶಿ ಭಾಗಿ

ತಿರುವನಂತಪುರಂ: ಕೇರಳಂ ನೂತನ ಮುಖ್ಯಮಂತ್ರಿಯಾಗಿ ವಿ.ಡಿ ಸತೀಶನ್ ಅವರು ಸೋಮವಾರ ಪ್ರಮಾಣವಚನ ಸ್ವೀಕರಿಸಿದ್ದು, ಇವರ ಜೊತೆಗೆ ಹಿರಿಯ ನಾಯಕ ರಮೇಶ ಚೆನ್ನಿತ್ತಲ, ಕೆಪಿಸಿಸಿ ಅಧ್ಯಕ್ಷ ಸನ್ನಿ ಜೋಸೆಫ್ ಸೇರಿದಂತೆ 20 ಮಂದಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ತಿರುವನಂತಪುರಂನ ಸೆಂಟ್ರಲ್ ಸ್ಟೇಡಿಯಂನಲ್ಲಿ ನಡೆದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ವಿ.ಡಿ ಸತೀಶನ್ ಹಾಗೂ 20 ಮಂದಿ ಸಚಿವರಿಗೆ ರಾಜ್ಯಪಾಲ ಆರ್.ವಿ. ರಾಜೇಂದ್ರ ವಿಶ್ವನಾಥ್ ಅಲೇರ್ಕರ್ ಅವರು ಪ್ರಮಾಣ ವಚನ ಬೋಧಿಸಿದರು.

ಸಮಾರಂಭದಲ್ಲಿ ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕಾ ಗಾಂಧಿ, ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ, ತೆಲಂಗಾಣ ಸಿಎಂ ರೇವಂತ್ ರೆಡ್ಡಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆಸಿ.ವೇಣುಗೋಪಾಲ್, ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಕರ್ನಾಟಕ ಡಿಸಿಎಂ ಡಿ.ಕೆ ಶಿವಕುಮಾರ್, ಬಿಜೆಪಿ ನಾಯಕ ರಾಜೀವ್ ಚಂದ್ರಶೇಖರ್ ಸೇರಿದಂತೆ ಹಲವು ನಾಯಕರು ಭಾಗವಹಿಸಿದ್ದರು.

ಸತೀಶನ್ ಜೊತೆಗೆ 20 ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಕಾಂಗ್ರೆಸ್‌ನಿಂದ ರಮೇಶ್ ಚೆನ್ನಿತ್ತಲ, ಸನ್ನಿ ಜೋಸೆಫ್, ಕೆ ಮುರಳೀಧರನ್, ಎ ಪಿ ಅನಿಲ್ ಕುಮಾರ್, ಪಿ.ಸಿ ವಿಷ್ಣುನಾಥ್, ಬಿಂದುಕೃಷ್ಣ ಎಂ ಲಿಜ್ಜು, ಟಿ ಸಿದ್ದಿಕ್, ರೋಜಿ ಎಂ. ಜಾನ್, ಕೆ.ಎ ತುಳಸಿ ಮತ್ತು ಒ.ಜೆ ಜನೀಶ್ ಕಾಂಗ್ರೆಸ್ ಸಚಿವರಾಗಿದ್ದಾರೆ. ಉಳಿದಂತೆ ಮುಸ್ಲಿಂಲೀಗ್‌ನಿಂದ ಪಿ.ಕೆ ಕುನ್ಹಾಲಿಕುಟ್ಟಿ, ಕೆ.ಎಂ ಶಾಜಿ, ಎನ್ ಶಂಸುದ್ದೀನ್, ಪಿ.ಕೆ ಬಶೀರ್ ಮತ್ತು ವಿ.ಇ ಅಬ್ದುಲ್ ಗಫೂರ್ ಸೇರಿ ಐವರು, ಮಾನ್ಸ್ ಜೋಸೆಫ್ (ಕೇರಳ ಕಾಂಗ್ರೆಸ್-ಜೋಸೆಫ್), ಶಿಬು ಬೇಬಿ ಜಾನ್ (ಕ್ರಾಂತಿಕಾರಿ ಸಮಾಜವಾದಿ ಪಕ್ಷ), ಅನೂಪ್ ಜಾಕೋಬ್ (ಕೇರಳ ಕಾಂಗ್ರೆಸ್-ಜಾಕೋಬ್), ಮತ್ತು ಸಿಪಿ ಜಾನ್ (ಕಮ್ಯುನಿಸ್ಟ್ ಮಾರ್ಕ್ಸ್‌ವಾದಿ ಪಕ್ಷ) ಪ್ರಮಾಣವಚನ ಸ್ವೀಕರಿಸಿದರು.

ಕೇರಳದಲ್ಲೂ ಶಕ್ತಿ ಯೋಜನೆ ಜಾರಿ

ಸತೀಶನ್ ನೇತೃತ್ವದ ನೂತನ ಯುಡಿಎಫ್ ಸರ್ಕಾರವು ತನ್ನ ಮೊದಲ ಸಂಪುಟ ಸಭೆಯಲ್ಲಿಯೇ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಮತ್ತು ಹಿರಿಯ ನಾಗರಿಕರಿಗೆ ವಿಶೇಷ ಇಲಾಖೆ ಸ್ಥಾಪಿಸುವ ಗ್ಯಾರಂಟಿಗಳನ್ನು ಘೋಷಿಸಿದೆ. ಇದರ ಜತೆ ಆಶಾ ಕಾರ್ಯಕರ್ತೆಯರ ವೇತನವನ್ನು 3 ಸಾವಿರ ರು.ಗಳಷ್ಟು ಏರಿಕೆ ಮಾಡಲಾಗಿದೆ. ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು, ಸರಕಾರಿ ಶಾಲೆಗಳ ಉಚಿತ ಬಿಸಿಯೂಟ ಯೋಜನೆ ಮತ್ತು ಕಚೇರಿಗಳ ಅಡುಗೆ ಕಾರ್ಮಿಕರ ವೇತನವನ್ನೂ ಸಹ 1,000 ರೂಪಾಯಿ ಏರಿಕೆ ಮಾಡಲಾಗಿದೆ. ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ ಆಯಾಗಳ ವೇತನದಲ್ಲಿಯೂ 1,000 ರೂಪಾಯಿ ಹೆಚ್ಚಳ ಮಾಡಲಾಗಿದೆ. ಜೂನ್15 ರಿಂದ ರಾಜ್ಯಾದ್ಯಂತ ಮಹಿಳೆಯರಿಗೆ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೌಕರ್ಯ ಸಿಗಲಿದೆ. ಹಿರಿಯ ನಾಗರಿಕರ ಕಲ್ಯಾಣಕ್ಕಾಗಿ ಪ್ರತ್ಯೇಕ ಇಲಾಖೆಯನ್ನು ರಚಿಸಲಾಗುತ್ತಿದ್ದು, ಇದು ಭಾರತದಲ್ಲೇ ಮೊದಲ ಪ್ರಯತ್ನವಾಗಿದೆ ಎಂದು ಸತೀಶನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸೊಂಪಾದ ಪುಟಗಳು

ಕೋವಿಡ್‌ನಿಂದ ಬದಲಾಗದ ನಾವು ಪರದೇಶದ ಯುದ್ಧದಿಂದ ಬದಲಾದೇವೇ?

ಪದಸಾಗರ
ನವೀನ್ ಸಾಗರ್ 6

ಹೆರುವುದು ದೈಹಿಕ ಸುಖದ ಕೊನೆ ಫಲಿತಾಂಶವಲ್ಲ!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ



ನಿನ್ನೆಯ ಕಹಿ ನೆನಪುಗಳ ಬಗ್ಗೆ ಚಿಂತಿಸಬೇಡಿ ಮತ್ತು ನಾಳೆಯ ಬಗ್ಗೆ ಆತಂಕಪಡಬೇಡಿ; ಇಂದು ನೀವು ಮಾಡುವ ಕಠಿಣ ಪರಿಶ್ರಮವೇ ನಿಮ್ಮ ನಾಳಿನ ಯಶಸ್ಸಿನ ಬುನಾದಿ.

ವಕ್ರತುಂಡೋಕ್ತಿ

ಜೀವನದಲ್ಲಿ ಸೋಲು ಅನುಭವಿಸಿದಾಗ ಕುಗ್ಗಬಾರದು, ಏಕೆಂದರೆ ಅರ್ಧ ಲೀಟರ್ ಹಾಲು ಕೆಟ್ಟರೆ ಅದರಿಂದ ಪನ್ನೀರ್ ಮಾಡಬಹುದೇ ಹೊರತು ಪಾಯಸ ಮಾಡಲು ಸಾಧ್ಯವಿಲ್ಲ.

ಅಫ್ಘಾನಿಸ್ತಾನದಲ್ಲಿ ಬಾಲ್ಯವಿವಾಹ ಕಾನೂನುಬದ್ಧ

ಕಾಬೂಲ್: ಅಫ್ಘಾನಿಸ್ತಾನದಲ್ಲಿರುವ ತಾಲಿಬಾನ್‌ಆಡಳಿತವು ಮದುವೆ, ವಿಚ್ಛೇದನ ಮತ್ತು ಬಾಲ್ಯವಿವಾಹದಂತಹ ವಿಷಯಗಳಿಗೆ ಸಂಬಂಧಿಸಿದಂತೆ ವಿವಾದಾತ್ಮಕ ಹೊಸ ಕೌಟುಂಬಿಕ ಕಾನೂನನ್ನು ಜಾರಿಗೆ ತಂದಿದೆ. ಅದರಲ್ಲಿ ಬಾಲ್ಯವಿವಾಹವನ್ನು ಕಾನೂನುಬದ್ಧಗೊಳಿಸಿದೆ. ಜತೆಗೆ ಬಾಲ್ಯದಲ್ಲಿ ವಿವಾಹವಾದ ವ್ಯಕ್ತಿಗಳು ಪ್ರಾಯಕ್ಕೆ ಬಂದ ನಂತರ ಆ ಮದುವೆಯನ್ನು ರದ್ದುಗೊಳಿಸಲು ಅವಕಾಶ ನೀಡಿದೆ. ಜತೆಗೆ ಪ್ರಾಯಕ್ಕೆ ಬಂದ ಹುಡುಗಿ ಮದುವೆಯ ವಿಷಯದಲ್ಲಿ ಮೌನವಾಗಿದ್ದರೆ, ಅದನ್ನು ಅವಳ ಸಮ್ಮತಿ ಎಂದು ಪರಿಗಣಿಸಬಹುದು. ಆದರೆ, ಒಬ್ಬ ಹುಡುಗ ಅಥವಾ ವಿವಾಹಿತ ಮಹಿಳೆಯ ಮೌನವನ್ನು ವಿವಾಹಕ್ಕೆ ಒಪ್ಪಿಗೆ ಎಂದು ಪರಿಗಣಿಸಲಾಗುವುದಿಲ್ಲ ಎಂದೂ ಹೇಳಿದೆ. ವ್ಯಭಿಚಾರದ ಆರೋಪಗಳು, ಮತಾಂತರ ಮತ್ತು ಪತಿಗಳ ನಾಪತ್ತೆ ಪ್ರಕರಣಗಳಲ್ಲಿ ಮಧ್ಯಪ್ರವೇಶಿಸಲು ನ್ಯಾಯಾಧೀಶರಿಗೆ ಅಧಿಕಾರ ನೀಡಿದೆ.

ನೀಲಣ್ಣನವರ್ 10 ದಿನ ಸಿಐಡಿ ಕಸ್ಟಡಿಗೆ

ಬೆಳಗಾವಿ: ಆರ್‌ಬಿಐ ನಿಯಮ ಗಾಳಿಗೆ ತೂರಿ ಕೋಟ್ಯಂತರ ರು. ಠೇವಣಿ ಮಾಡಿಕೊಂಡ ಆರೋಪದ ಮೇಲೆ ಬಂಧನಕ್ಕೊಳಗಾದ ಶಿವಂ ಅಸೋಸಿಯೇಟ್ಸ್ ಮಾಲೀಕ ಶಿವಾನಂದ ನೀಲಣ್ಣನವರ್‌ನ್ನು 10 ದಿನಗಳ ಕಾಲ ಸಿಐಡಿ ವಶಕ್ಕೆ ನೀಡಿ ಎರಡನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ ಆದೇಶ ಹೊರಡಿಸಿದೆ. 35 ಸಾವಿರ ಜನರಿಂದ ಸಾವಿರಾರು ಕೋಟಿ ರು. ಹಣ ಹೂಡಿಕೆ ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿಚಾರಣೆ ನಡೆಸಲು ಆರೋಪಿಯನ್ನು ಕಸ್ಟಡಿಗೆ ನೀಡುವಂತೆ ಸಿಐಡಿ ಸೋಮವಾರ ನ್ಯಾಯಾಲಯದಲ್ಲಿ ಮನವಿ ಮಾಡಿತ್ತು.

ಇರಾನ್ ಮೇಲೆ ಎರಗಲು ಅಮೆರಿಕ, ಇಸ್ರೇಲ್ ಸಜ್ಜು

ಯುಎಇ ಅಣುಸ್ಥಾವರದ ಮೇಲೆ ಇರಾನ್ ದಾಳಿ

ಟೆಲ್ ಅವಿವ್: ಜರ್ಮನಿಯ ನೆಲೆಗಳಿಂದ ಶಸ್ತ್ರಾಸ್ತ್ರ, ಮದ್ದುಗುಂಡುಗಳನ್ನು ಹೊತ್ತ ಡಜನ್ ಗಟ್ಟಲೆ ಅಮೆರಿಕ ವಿಮಾನಗಳು ಸೋಮವಾರ ಇಸ್ರೇಲ್‌ನ ಟೆಲ್‌ಅವಿವ್‌ನಲ್ಲಿ ಬಂದಿಳಿದಿದ್ದು, ಇರಾನ್ ಮೇಲೆ ಮತ್ತೊಮ್ಮೆ ಮಾರಕ ದಾಳಿಗೆ ಉಭಯ ದೇಶಗಳು ಸಜ್ಜಾಗಿವೆ.

ಇದೇ ವೇಳೆ ಯುಎಇನ ಅಣುವಿದ್ಯುತ್ ಸ್ಥಾವರದ ಮೇಲೆ ಇರಾನ್ ದಾಳಿ ನಡೆಸಿದ್ದು, ಭಾರತ ಸೇರಿದಂತೆ ಹಲವು ರಾಷ್ಟ್ರಗಳು ಈ ಘಟನೆಯನ್ನು ಖಂಡಿಸಿವೆ. ಈ ದಾಳಿಯ ಬೆನ್ನಿಗೇ ಇರಾನ್ ಮೇಲೆ ಮತ್ತೊಮ್ಮೆ ಮುಗಿಬೀಳಲು ಅಮೆರಿಕ ಮತ್ತು ಇಸ್ರೇಲ್ ಸಜ್ಜಾಗಿವೆ.

'ಗಡಿಯಾರ ಟಿಕ್ ಟಿಕ್ ಮಾಡುತ್ತಿದೆ, ಇರಾನ್‌ಗೆ ಹೆಚ್ಚಿನ ಸಮಯ ಉಳಿದಿಲ್ಲ. ಸಮಯ ಮೀರುತ್ತಿದೆ. ಬೇಗ ನಿರ್ಧರಿಸಿ. ಇಲ್ಲವಾದರೆ ಏನು ನಿಮ್ಮ ಬಳಿ ಉಳಿಯುವುದಿಲ್ಲ' ಎಂದು ಡೊನಾಲ್ಡ್ ಟ್ರಂಪ್ ಭಾನುವಾರ ತಮ್ಮ ಟ್ರುತ್ ಸೋಶಿಯಲ್ ಪೋಸ್ಟ್‌ನಲ್ಲಿ ಇರಾನ್‌ಗೆ ಎಚ್ಚರಿಕೆ ನೀಡಿದ್ದರು.

ಸೌದಿಗೆ ಪಾಕಿಸ್ತಾನ ನೆರವು

ಅಮೆರಿಕ ಮತ್ತು ಇರಾನ್ ನಡುವೆ ಕದನ ವಿರಾಮವನ್ನು ಸ್ಥಾಪಿಸುವಲ್ಲಿ ಮಧ್ಯಸ್ಥಿಕೆ ಪಾತ್ರ ವಹಿಸುತ್ತಿರುವ ನಡುವೆಯೇ ಪಾಕಿಸ್ತಾನವು, ಸೌದಿ ಅರೇಬಿಯಾದ ನೆರವಿಗೆ ಧಾವಿಸಿದೆ. ಸೌದಿ ಜತೆಗಿನ ರಕ್ಷಣಾ ಒಪ್ಪಂದದಡಿ ಸುಮಾರು 8,000 ಸೈನಿಕರು, ಒಂದು ಪೂರ್ಣ ಯುದ್ಧ ವಿಮಾನ ಸ್ಕ್ವಾಡ್ರನ್ ಮತ್ತು ಸುಧಾರಿತ ವಾಯು ರಕ್ಷಣಾ ವ್ಯವಸ್ಥೆಯನ್ನು ನಿಯೋಜಿಸಿದೆ. ಈ ಸೈನಿಕರು ಇರಾನ್ ವಿರುದ್ಧ ಹೋರಾಡಲಿದ್ದಾರೆಯೇ ಎನ್ನುವುದು ಖಚಿತವಾಗಿಲ್ಲ. 2025ರಲ್ಲಿ ಸಹಿ ಹಾಕಲಾದ ಪಾಕ್-ಸೌದಿ ನಡುವಣ ರಕ್ಷಣಾ ಒಪ್ಪಂದದಡಿ ಎರಡೂ ದೇಶಗಳು ದಾಳಿಯ ಸಂದರ್ಭದಲ್ಲಿ ಪರಸ್ಪರ ರಕ್ಷಿಸಿಕೊಳ್ಳಲು ಬದ್ಧವಾಗಿವೆ ಎಂದು ಸ್ಪಷ್ಟಪಡಿಸಿವೆ. ಪಾಕ್ ರಕ್ಷಣಾ ಸಚಿವ ಖವಾಜಾ ಆಸಿಫ್ ಸೌದಿ ಪಾಕ್‌ನ ಪರಮಾಣು ಅಸ್ತ್ರದ ರಕ್ಷಣೆಯಲ್ಲಿದೆ ಎಂದಿದ್ದಾರೆ.

38 ಸಾವಿರ ಮೆಟ್ರಿಕ್ ಟನ್ ಗೊಬ್ಬರ ಕೊರತೆ

ಬೆಂಗಳೂರು: ರಾಜ್ಯದಲ್ಲಿ 38 ಸಾವಿರ ಮೆಟ್ರಿಕ್ ಟನ್ ರಸಗೊಬ್ಬರ ಹಾಗೂ 14 ಸಾವಿರ ಟನ್ ಯೂರಿಯಾ ಕೊರತೆ ಇದೆ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ತಿಳಿಸಿದರು.

ಮಧ್ಯಪ್ರಾಚ್ಯದಲ್ಲಿನ ಯುದ್ಧದಿಂದಾಗಿ ಗೊಬ್ಬರ ತಡವಾಗಿ ಬರುತ್ತಿದೆ. ರಸಗೊಬ್ಬರ ಕೊರತೆ ಬಗ್ಗೆ ಕೇಂದ್ರದ ಜೊತೆ ಮಾತುಕತೆ ನಡೆಯುತ್ತಿದೆ. ರಸಗೊಬ್ಬರ ಬಳಕೆ ಕಡಿಮೆ ಬಳಕೆ ಹಾಗೂ ಪರ್ಯಾಯ ಗೊಬ್ಬರ ಮೂಲಗಳ ಬಳಕೆಗೆ ಕರೆ ನೀಡಲಾಗುತ್ತಿದೆ. ಜೂನ್‌ನಲ್ಲಿ ಮುಂಗಾರು ಆರಂಭವಾಗಲಿದೆ. ರಸಗೊಬ್ಬರ ಪೂರೈಕೆ ಸಮಸ್ಯೆ ಬಗ್ಗೆ ಪರಿಣಾಮಕಾರಿ ವಿಜಿಲೆನ್ಸ್ ಮಾಡಲು ಸೂಚಿಸಲಾಗಿದೆ. ಫ್ರೂಟ್ ಐಡಿ ಮೂಲಕ ರೈತರಿಗೆ ಮಾತ್ರ ಗೊಬ್ಬರ ವಿತರಿಸಲು ಕ್ರಮ ವಹಿಸಲಾಗಿದೆ ಎಂದು ಹೇಳಿದರು.

ಪ್ರಸಕ್ತ ಮುಂಗಾರು ಹಂಗಾಮಿಗೆ ಕೇಂದ್ರ ಸರ್ಕಾರದಿಂದ ಒಟ್ಟು 30.05 ಲಕ್ಷ ಮೆಟ್ರಿಕ್ ಟನ್ ವಿವಿಧ ಗ್ರೇಡ್‌ನ ರಸಗೊಬ್ಬರಗಳನ್ನು ಹಂಚಿಕೆ ಮಾಡಲಾಗಿದೆ. ಕಳೆದ ಸಾಲುಗಳಿಗೆ ಹೋಲಿಸಿದಲ್ಲಿ ಯೂರಿಯಾ ರಸಗೊಬ್ಬರದ ಆರಂಭಿಕ ಶಿಲ್ಕು ತುಂಬಾ ಕಡಿಮೆ ಇದೆ. ಪ್ರಸಕ್ತ ಸಾಲಿನಲ್ಲಿ 2.80 ಲಕ್ಷ ಮೆ.ಟನ್ ಮಾತ್ರವಿದೆ. ಜತೆಗೆ ಕೇಂದ್ರ ಸರಕಾರದಿಂದ ಬೇಡಿಕೆಗೆ ಅನುಗುಣವಾಗಿ ಯೂರಿಯಾ ಮತ್ತು ಡಿಎಪಿ ರಸಗೊಬ್ಬರಗಳು ಸರಬರಾಜು ಆಗಿರುವು ದಿಲ್ಲ. ಇದರಿಂದಾಗಿ ಮುಂಗಾರು ಹಂಗಾಮಿನಲ್ಲಿ ರಸಗೊಬ್ಬರಗಳ ಕೊರತೆಯಾಗುವ ಸಾಧ್ಯತೆ ಇದೆ ಎಂದು ವಿವರಿಸಿದರು.

ಸಂಧಾನ ಮಾತುಕತೆ ವಿಫಲ: ನಾಳೆ ಕೆಎಸ್ಸಾರ್ಟಿಸಿ ಸಂಚಾರ ಸ್ಥಗಿತ ಸಂಭವ

ಎಸ್ಮಾ ಜಾರಿ ನಡುವೆ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ

ಬೆಂಗಳೂರು: ವೇತನ ಪರಿಷ್ಕರಣೆ ವಿಷಯದಲ್ಲಿ ಸರಕಾರ ಹಾಗೂ ಸಾರಿಗೆ ನೌಕರರ ನಡುವೆ ಒಮ್ಮತ ಮೂಡದೇ ಸಂಧಾನ ವಿಫಲವಾಗಿದ್ದು, ಇದರ ಬೆನ್ನಲ್ಲೇ ಬುಧವಾರದಿಂದ ರಸ್ತೆಗೆ ಸಾರಿಗೆ ನಿಗಮದ ಬಸ್‌ಗಳನ್ನು ರಸ್ತೆಗಿಳಿಸದೇ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ನೌಕರರು ಮುಂದಾಗಿದ್ದಾರೆ.

ವೇತನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮೇ 20ರಿಂದ ಕರೆ ನೀಡಿರುವ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಸಂಬಂಧಿಸಿದಂತೆ ಸೋಮವಾರ ನಡೆದ ಸಂಧಾನ ಸಭೆಯು ವಿಫಲವಾಗಿದೆ. ಇದರಿಂದಾಗಿ ಬುಧವಾರದಿಂದ ರಾಜ್ಯಾದ್ಯಂತ ಬಸ್ ಸಂಚಾರದಲ್ಲಿ ವ್ಯತ್ಯಯ ಉಂಟಾಗುವ ಭೀತಿ ಎದುರಾಗಿದೆ. ಕಾರ್ಮಿಕ ಇಲಾಖೆ ಆಯುಕ್ತ ದಿನೇಶ್ ಕುಮಾರ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಸಾರಿಗೆ ನಿಗಮದ ಅಧಿಕಾರಿಗಳು ಹಾಗೂ ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿಯ ಮುಖಂಡರು ಭಾಗವಹಿಸಿದ್ದರು. ಅಧಿಕಾರಿಗಳು ಮೇ 25ರಂದು ಮತ್ತೊಮ್ಮೆ ಸಭೆ ಸೇರೋಣ, ಅಲ್ಲಿಯವರೆಗೆ ಮುಷ್ಕರ ಕೈಬಿಡಿ ಎಂದು ಮನವಿ ಮಾಡಿದರು. ಇದಕ್ಕೆ ಒಪ್ಪದ ನೌಕರರ ಸಂಘಟನೆಗಳು, ಮಂಗಳವಾರ ಮಧ್ಯಾಹ್ನ ದೊಳಗೆ ಮುಖ್ಯಮಂತ್ರಿಗಳ ಮಟ್ಟದಲ್ಲಿ ಸಭೆ ನಡೆಸಿ ತೀರ್ಮಾನ ಪ್ರಕಟಿಸಬೇಕು, ಇಲ್ಲವಾ ದರೆ ಮುಷ್ಕರ ನಿಶ್ಚಿತ ಎಂದಿದ್ದಾರೆ.

ನೋ ವರ್ಕ್, ನೋ ಪೇ; ಆದೇಶ: ಮುಷ್ಕರಕ್ಕೆ ಕರೆ ನೀಡಿದ ಬೆನ್ನಲ್ಲೇ, ಬುಧವಾರದ ಮುಷ್ಕ ರದಲ್ಲಿ ಸಿಬ್ಬಂದಿಗಳು ಭಾಗಿಯಾಗುವಂತಿಲ್ಲ.

→ 4

ಸರಕಾರ ಮುಷ್ಕರ ಮುರಿಯಲು ಏನೇ ಪ್ರಯತ್ನ ಮಾಡಿದರೂ ನಾವು ಹೋರಾಟ ಮುಂದುವರಿಸುತ್ತೇವೆ. ಮುಷ್ಕರ ಆರಂಭವಾದ ಬಳಿಕದ ಬೆಳವಣಿಗೆಗಳನ್ನು ನೋಡುತ್ತೇವೆ. ಎಸ್ಮಾ ಈಗಾಗಲೇ ಜಾರಿಯಲ್ಲಿದೆ. ನಮ್ಮನ್ನೆಲ್ಲ ಬಂಧಿಸಿದರೆ ಬಸ್‌ಗಳನ್ನು ಯಾರು ಓಡಿಸುತ್ತಾರೆ ? ಎಲ್ಲ ನೌಕರರನ್ನೂ ಬಂಧಿಸಿ ಸಂಸ್ಥೆ ನಡೆಸಲು ಸಾಧ್ಯವಿಲ್ಲ.

-ವಿಜಯ ಭಾಸ್ಕರ್, ಸಾರಿಗೆ ನೌಕರರ ಮುಖಂಡ

ಹೈಗೆ ಪಿಐಎಲ್ ಸಲ್ಲಿಕೆ

ಸಾರಿಗೆ ಮುಷ್ಕರವನ್ನು ಪ್ರಶ್ನಿಸಿ ವೇದಾವತಿ ಮತ್ತು ಶ್ರೀಧರ್ ಎಂಬುವವರು ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿ ದ್ದಾರೆ. ಜೂನ್ 30ರವರೆಗೆ ರಾಜ್ಯದಲ್ಲಿ ಎಸ್ಮಾ ಜಾರಿಯಲ್ಲಿದ್ದು, ಮುಷ್ಕರ ಮಾಡು ವುದು ಕಾನೂನುಬಾಹಿರ ಎಂದು ಅರ್ಜಿ ಯಲ್ಲಿ ಉಲ್ಲೇಖಿಸಲಾಗಿದೆ. ಅಲ್ಲದೆ, ಇದೇ ಅವಧಿಯಲ್ಲಿ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗಳು ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮುಷ್ಕರ ನಿರ್ಬಂಧಿಸುವಂತೆ ಕೋರಿದ್ದಾರೆ.

ನಾಳೆ ರಾಜ್ಯದ ಮೆಡಿಕಲ್ ಅಂಗಡಿ ಬಾಗಿಲು ಬಂದ್

ಆನ್‌ಲೈನ್ ಔಷಧಿ ಮಾರಾಟಕ್ಕೆ ವರ್ತಕರ ವಿರೋಧ

ಬೆಂಗಳೂರು: ಔಷಧಿಗಳನ್ನು ಡೆಲಿವರಿ ಆ್ಯಪ್‌ಗಳ ಮೂಲಕ ಆನ್‌ಲೈನ್‌ನಲ್ಲಿ ಮಾರಾಟ ಹೆಚ್ಚುತ್ತಿರುವುದನ್ನು ವಿರೋಧಿಸಿ ರಾಜ್ಯಾದ್ಯಂತ ಮೆಡಿಕಲ್ ಅಂಗಡಿಗಳ ಮಾಲೀಕರು ಮೇ 20 ರಂದು ಬಂದ್‌ಗೆ ಕರೆ ನೀಡಿದ್ದಾರೆ.

ರಾಜ್ಯಾದ್ಯಂತ ಸುಮಾರು 26 ಸಾವಿರಕ್ಕೂ ಹೆಚ್ಚು ಫಾರ್ಮಸಿಗಳು ಸಂಪೂರ್ಣವಾಗಿ ಮುಚ್ಚಲಿದ್ದು, ಬೆಂಗಳೂರಿನಲ್ಲೇ ಸುಮಾರು 6,500ಕ್ಕೂ ಹೆಚ್ಚು ಮೆಡಿಕಲ್ ಶಾಪ್‌ಗಳು ಕಾರ್ಯ ನಿರ್ವಹಣೆ ಸ್ಥಗಿತಗೊಳಿಸಲಿವೆ. ಆನ್‌ಲೈನ್ ಔಷಧಿ ಮಾರಾಟದಿಂದ ಸಣ್ಣ ಮತ್ತು ಮಧ್ಯಮ ಮಟ್ಟದ ಮೆಡಿಕಲ್ ಅಂಗಡಿಗಳಿಗೆ ಆರ್ಥಿಕ ಹೊಡೆತ ಬೀಳುತ್ತಿದೆ ಎಂದು ವ್ಯಾಪಾರಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೋವಿಡ್ ಸಮಯದಲ್ಲಿ ಜನರ ಓಡಾಟಕ್ಕೆ ನಿರ್ಬಂಧ ಹೇರಲಾಗಿದ್ದ ಹಿನ್ನೆಲೆ ಕೇಂದ್ರ ಸರಕಾರ ತಾತ್ಕಾಲಿಕವಾಗಿ ಆನ್‌ಲೈನ್ ಔಷಧಿ ಮಾರಾಟಕ್ಕೆ ಅವಕಾಶ ನೀಡಿತ್ತು. ಆದರೆ ಕೋವಿಡ್ ಪರಿಸ್ಥಿತಿ ಬಳಿಕ ಈ ವ್ಯವಸ್ಥೆ ಮುಂದುವರಿದಿದ್ದು, ಈಗ ದೊಡ್ಡ ಆಪ್ ಕಂಪನಿಗಳು ಭಾರಿ ರಿಯಾಯಿತಿ, ಕ್ಯಾಶ್‌ಬ್ಯಾಕ್ ಹಾಗೂ 10 ನಿಮಿಷ ಡೆಲಿವರಿ ಸೇವೆಗಳ ಮೂಲಕ ಸ್ಥಳೀಯ ಫಾರ್ಮಸಿಗಳಿಗೆ ತೀವ್ರ ಪೈಪೋಟಿ ನೀಡುತ್ತಿವೆ ಎನ್ನಲಾಗಿದೆ.

ಆನ್‌ಲೈನ್ ಕಂಪನಿಗಳ ಅನಿಯಂತ್ರಿತ ವ್ಯವಹಾರದಿಂದ ಸ್ಥಳೀಯ ಮೆಡಿಕಲ್ ಅಂಗಡಿಗಳು ಸಂಕಷ್ಟದಲ್ಲಿವೆ. ಹೀಗಾಗಿ ಬಂದ್ ನಡೆಸಲು ಉದ್ದೇಶಿಸಲಾಗಿದೆ. ರೋಗಿಗಳಿಗೆ ತೊಂದರೆ ಆಗಬಾರದು ಎಂಬ ಕಾರಣಕ್ಕೆ ಆಸ್ಪತ್ರೆಗಳ ಬಳಿಯ ಕೆಲವು ಮೆಡಿಕಲ್ ಶಾಪ್‌ಗಳಿಗೆ ಮಾತ್ರ ವಿನಾಯಿತಿ ನೀಡಲಾಗುತ್ತದೆ. ಉಳಿದ ಅಂಗಡಿಗಳು ದಿನಪೂರ್ತಿ ಬಂದ್ ಆಗಲಿವೆ. ಕರ್ನಾಟಕ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಅಂಬೆಕಲ್ಲು ಜೀವನ್ ಕುಶಾಲಪ್ಪ ಸ್ಪಷ್ಟಪಡಿಸಿದರು. ಫಾರ್ಮಸಿ ಮಾಲೀಕರ ಪ್ರಕಾರ, ಭಾರತದಲ್ಲಿ ಇರುವ ಇ-ಫಾರ್ಮಸಿ ನಿಯಮಾವಳಿಗಳ ಪ್ರಕಾರ ಲೈಸೆನ್ಸ್ ಹೊಂದಿದ ಭೌತಿಕ ಅಂಗಡಿಗಳ ಮೂಲಕವೇ ಔಷಧಿ ಮಾರಾಟ ನಡೆಯಬೇಕು. ಆದರೆ ಅನೇಕ ಆನ್‌ಲೈನ್ ಆ್ಯಪ್‌ಗಳು ನಿಯಮಗಳನ್ನು ಉಲ್ಲಂಘಿಸಿ ಔಷಧಿಗಳನ್ನು ಮನೆಬಾಗಿಲಿಗೆ ತಲುಪಿಸುತ್ತಿವೆ ಎಂಬ ಆರೋಪವಿದೆ.

ಮೋದಿ, ಸಿಎಂ ಸೇರಿ ಗಣ್ಯರ ಶುಭಾಶಯ | ಹೋರಾಟಕ್ಕೆ ಸಿದ್ಧ ಎಂದ ಎಚ್‌ಡಿಡಿ

ದೇವೇಗೌಡರಿಗೆ 94, ರಾಜ್ಯಸಭೆಗೆ ರೀ ಎಂಟ್ರಿ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜಕೀಯದಲ್ಲಿ 68 ವರ್ಷ ಕಳೆದಿರುವ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಸೋಮವಾರ 94ನೇ ವಸಂತಕ್ಕೆ ಪಾದಾರ್ಪಣೆ ಮಾಡಿದ್ದಾರೆ. ಇದೇ ವೇಳೆ ಎಚ್‌ಡಿಡಿ ಮತ್ತೊಮ್ಮೆ ರಾಜ್ಯಸಭೆಗೆ ಪ್ರವೇಶಿಸಲು ಸಿದ್ಧತೆ ನಡೆಸಿದ್ದಾರೆ ಎನ್ನಲಾಗಿದೆ.

ಬೆಂಗಳೂರಿನ ಜೆ.ಪಿ. ನಗರದಲ್ಲಿರುವ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪತ್ನಿ ಚೆನ್ನಮ್ಮ ಅವರೊಂದಿಗೆ ವಿಶೇಷ ಪೂಜೆ ಸಲ್ಲಿಸುವುದರೊಂದಿಗೆ ಎಚ್‌ಡಿಡಿ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದಾರೆ. ಈ ವೇಳೆ ಕುಟುಂಬದ ಸದಸ್ಯರು, ಜೆಡಿಎಸ್ ಪಕ್ಷದ ಮುಖಂಡರು ಮತ್ತು ಹಿತೈಷಿಗಳು ಉಪಸ್ಥಿತರಿದ್ದರು. ಹುಟ್ಟುಹಬ್ಬದ ಸಂದರ್ಭದಲ್ಲಿ ದೇವೇಗೌಡರಿಗೆ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಅಮಿತ್ ಶಾ, ಮಾಜಿ ಸಿಎಂ ಯಡಿಯೂರಪ್ಪ ಸೇರಿದಂತೆ ಹಲವು ಗಣ್ಯರು ಹುಟ್ಟುಹಬ್ಬದ ಶುಭಾಶಯ ಕೋರಿದ್ದಾರೆ.

ದೇವೇಗೌಡರ ದೀರ್ಘಾವಧಿಯ ರಾಷ್ಟ್ರ ಸೇವೆ, ನೀತಿ ನಿರ್ಣಯಗಳ ಬಗೆಗಿನ ಆಳವಾದ ತಿಳಿವಳಿಕೆ ಹಾಗೂ ಜನಪರ ಕಾಳಜಿಯನ್ನು ಶ್ಲಾಘಿಸಿ ಪ್ರಧಾನಿ ನರೇಂದ್ರ ಮೋದಿ ಶುಭ ಕೋರಿದ್ದಾರೆ. ಹಿರಿಯ ರಾಜಕಾರಣಿಯಾಗಿರುವ ದೇವೇಗೌಡರಿಗೆ ಆಯುರಾರೋಗ್ಯ ಮತ್ತು ಮತ್ತಷ್ಟು ಕಾಲ ನಾಡಿನ ಜನರ ಸೇವೆ ಮಾಡುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಭ ಕೋರಿದ್ದಾರೆ. ಲೋಕಸಭಾಧ್ಯಕ್ಷ ಓಂ ಬಿರ್ಲಾ, ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನಬಿನ್, ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಸೇರಿದಂತೆ ಕೇಂದ್ರ ಸಚಿವರಾದ ಧರ್ಮೇಂದ್ರ ಪ್ರಧಾನ್, ಭೂಪೇಂದ್ರ ಯಾದವ್, ಡಾ. ಮೋಹನ್ ಯಾದವ್ ಸೇರಿದಂತೆ ರಾಷ್ಟ್ರ ಹಾಗೂ ರಾಜ್ಯ ಮಟ್ಟದ ಹಲವು ಗಣ್ಯರು ದೇವೇಗೌಡರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದ್ದಾರೆ.

ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ದೇವೇಗೌಡ, 'ವಯೋಸಹಜ ಆರೋಗ್ಯ ಸಮಸ್ಯೆಗಳಿದ್ದರೂ, ವ್ಹೀಲ್ ಚೇರ್‌ನಲ್ಲೇ ಕುಳಿತು ಸಾರ್ವಜನಿಕರ ಹಿತಕ್ಕಾಗಿ ಹೋರಾಡುವುದನ್ನು ಮುಂದುವರಿಸು ವುದಾಗಿ ದೃಢ ಸಂಕಲ್ಪ ವ್ಯಕ್ತಪಡಿಸಿದರು.

→ 4

ನನಗೆ 93 ವರ್ಷ ಪೂರ್ಣವಾದರೂ ಮನೆಯಲ್ಲೇ ಕುಳಿತುಕೊಳ್ಳುವುದಿಲ್ಲ. ಜನರು ಸಮಸ್ಯೆಯಲ್ಲಿದ್ದಾರೆ. ಅವರ ಪರ ನಾನು ಕೆಲಸ ಮಾಡುತ್ತೇನೆ. ಈ ಹೋರಾಟದಲ್ಲಿ ಯಾವುದೇ ಸವಾಲು ಎದುರಾದರೂ ಎದುರಿಸುತ್ತೇನೆ.

ಎಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ

ರಾಜ್ಯಸಭೆಗೆ ದೇವೇಗೌಡರನ್ನು ಮರು ಆಯ್ಕೆ ಮಾಡೋದು ಬಿಜೆಪಿ ಹೈಕಮಾಂಡ್‌ಗೆ ಬಿಟ್ಟ ವಿಚಾರ. ರಾಜ್ಯಸಭೆ ಅವಧಿ ಮುಕ್ತಾಯ ಆಗಿದೆ. ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಜೊತೆಗೆ ಮೈತ್ರಿ ಆದಾಗ ನಾವು ಯಾವುದೇ ಷರತ್ತು ಹಾಕಿಲ್ಲ. ಪ್ರಧಾನಿ ಮೋದಿಯವರು ದೇವೇಗೌಡರಿಗೆ ವಿಶೇಷ ಗೌರವ ಕೊಡುತ್ತಾರೆ. ಹೀಗಾಗಿ ಇದು ಬಿಜೆಪಿ ಹೈಕಮಾಂಡ್‌ಗೆ ಬಿಟ್ಟ ವಿಚಾರ. ಈ ಬಗ್ಗೆ ನಮ್ಮ ಒತ್ತಾಯ ಏನು ಇಲ್ಲ.

ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ಅಧ್ಯಕ್ಷ

ದೋಸ್ತಿ ಮಾತುಕತೆ

ಲೋಕಸಭಾ ಚುನಾವಣೆಯಲ್ಲಿ ತುಮಕೂರಿನಲ್ಲಿ ಸ್ಪರ್ಧಿಸಿ ಸೋತಿದ್ದ ದೇವೇಗೌಡ ಕಾಂಗ್ರೆಸ್ ಬೆಂಬಲದೊಂದಿಗೆ ಕಳೆದ ಬಾರಿ ರಾಜ್ಯಸಭೆಗೆ ಆಯ್ಕೆಯಾಗಿದ್ದರು. ಸದ್ಯದ ಪರಿಸ್ಥಿತಿಯಲ್ಲಿ ಕೇಂದ್ರದ ಮೈತ್ರಿ ಸರಕಾರದೊಂದಿಗೆ ಜೆಡಿಎಸ್ ಪಾಲುದಾರನಾಗಿದೆ. ಅಲ್ಲದೆ ಪುತ್ರ ಎಚ್.ಡಿ.ಕುಮಾರಸ್ವಾಮಿ ಕೂಡ ಕೇಂದ್ರ ಸಚಿವರಾಗಿದ್ದಾರೆ. ಕೇಂದ್ರದಲ್ಲಿ ಪ್ರಧಾನಿ ಮೋದಿಯವರೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವ ದೇವೇಗೌಡ ಅವರ ರಾಜ್ಯಸಭಾ ಅವಧಿ ಮುಕ್ತಾಯವಾಗಿದ್ದು, ಇಳಿ ವಯಸ್ಸಿನಲ್ಲಿ ಸದಾ ಚಟುವಟಿಕೆ ಯಿಂದಲೇ ಇರುವ ದೇವೇಗೌಡರನ್ನು ಬಿಜೆಪಿ ಬೆಂಬಲಿಸಿದರೆ ಮತ್ತೊಮ್ಮೆ ರಾಜ್ಯಸಭಾ ಸದಸ್ಯರಾಗಬಹುದು. ಈ ನಿಟ್ಟಿನಲ್ಲಿ ಎರಡೂ ಪಕ್ಷಗಳ ಉನ್ನತ ನಾಯಕರ ಜತೆ ಮಾತುಕತೆ ನಡೆದಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಆನೇಕಲ್‌ನಲ್ಲಿ ನಿರ್ಮಾಣವಾಗಲಿದೆ ಭಾರತದ 2ನೇ ಅತಿದೊಡ್ಡ ಕ್ರಿಕೆಟ್ ಸ್ಟೇಡಿಯಂ. ಸುದ್ದಿ

ಯಾವ ಸಾಧನೆಗಾಗಿ ಸಮಾವೇಶ?: ಬಿವೈವಿ

ಬೆಂಗಳೂರು: ಯಾವ ಮಹಾನ್ ಸಾಧನೆಗಾಗಿ ಮೂರು ವರ್ಷದ ಸಾಧನಾ ಸಮಾವೇಶವನ್ನು ಕಾಂಗ್ರೆಸ್ ಸರಕಾರ ಸಂಘಟಿಸುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದ್ದಾರೆ.

ಈ ಸಂಬಂಧ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ರೈತರ ಸಮಾಧಿ ಮೇಲೆ ಸಮಾವೇಶ ನಡೆಸುತ್ತಿರುವ ಕಾಂಗ್ರೆಸ್‌ಗೆ ನೈತಿಕತೆ ಇಲ್ಲ ಎಂದು ಟೀಕಿಸಿದ್ದಾರೆ. ಮೂರು ವರ್ಷದ ಆಡಳಿತ ಅವಧಿಯಲ್ಲಿ ಲಕ್ಷಾಂತರ ಉದ್ಯೋಗಾಕಾಂಕ್ಷಿಗಳಿಗೆ ನಿರುದ್ಯೋಗ ಭಾಗ್ಯ ಕಲ್ಪಿಸಿದ್ದೇ ನಿಮ್ಮ ಸಾಧನೆಯೇ? ಉತ್ಪನ್ನ ಕ್ಷೇತ್ರವನ್ನು ಉತ್ತೇಜಿಸದೇ ಅಭಿವೃದ್ಧಿ ಶುನ್ಯಗೊಳಿಸಿದ್ದು ನಿಮ್ಮ ಸಾಧನೆಯೇ? ಎಂದು ಪ್ರಶ್ನಿಸಿದ್ದಾರೆ.

ರೈತ ಕಲ್ಯಾಣಕ್ಕಾಗಿ ಯಾವುದೇ ಯೋಜನೆಯನ್ನು ರೂಪಿಸದೇ ನಿರಂತರವಾಗಿ ರೈತ ಹೋರಾಟಗಳನ್ನು ಹತ್ತಿಕ್ಕಿದ್ದು ನಿಮ ಸಾಧನೆಯೇ? ಮಹಿಳಾ ಕಲ್ಯಾಣಕ್ಕಾಗಿ ಯಾವುದೇ ಕಾರ್ಯಕ್ರಮ ಕೊಡಲಿಲ್ಲ, ಗೃಹಲಕ್ಷ್ಮೀ ಯೋಜನೆ ಸಕಾಲದಲ್ಲಿ ತಲುಪಿಸುತ್ತಿಲ್ಲ, ಮಹಿಳೆಯರ ಮೇಲಿನ ದೌರ್ಜನ್ಯ, ನಿರಂತರ ಅತ್ಯಾಚಾರಗಳು ನಿಮ್ಮ ಸರಕಾರದಲ್ಲಿ ಸ್ತ್ರೀ ಕುಲವನ್ನು ಕಾಡಿದ ದೌರ್ಭಾಗ್ಯ. ಇದಕ್ಕಾಗಿ ನಿಮ ಸಾಧನಾ ಸಮಾವೇಶವೇ? ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ಸೂರುರಹಿತ ಜನರಿಗಾಗಿ ನಿವೇಶನ ಹಂಚಲಿಲ್ಲ, ಮನೆಗಳನ್ನು ವಿತರಿಸಲಿಲ್ಲ, ಮೈಸೂರು ಮುಡಾದಲ್ಲಿ ಸಾವಿರಾರು ನಿವೇಶನಗಳ ಲೂಟಿಕೋರತನದ ಸೂತ್ರ ವಹಿಸಿದ್ದು ನಿಮ ಸಾಧನೆಯೇ? ಮಹರ್ಷಿ ವಾಲ್ಮೀಕಿ ನಿಗಮದ ಪರಿಶಿಷ್ಟ ಪಂಗಡದ ಕಲ್ಯಾಣ ಕಾರ್ಯಕ್ಕೆ ಮೀಸಲಾಗಿದ್ದ ಹಣ ಬ್ಯಾಂಕ್ ಖಾತೆಗೆ ಕನ್ನ ಹಾಕಿ, ಲೂಟಿ ಹೊಡೆದದ್ದು, ಪರಿಶಿಷ್ಟ ಜಾತಿ ಪಂಗಡಗಳ ಕಲ್ಯಾಣ ಕಾರ್ಯದ ಹಣವನ್ನು ದುರ್ಬಳಕೆ ಮಾಡಿಕೊಂಡು, ಆ ವರ್ಗವನ್ನು ವಂಚಿಸಿದ್ದು ಈ ಸರಕಾರದ ಸಾಧನೆಯೇ? ಎಂದು ಟೀಕಿಸಿದ್ದಾರೆ.

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೀದರ.
ಜಿಲ್ಲಾ ಪಂಚಾಯತ ಕಾರ್ಯಾಲಯ, ಗವಾನಚೌಕ್-ಕಿಲಾ ರಸ್ತೆ, ಬೀದರ-585 401. ದೂರವಾಣಿ 08482-231688, Email-eerdwsd.bdr1@gmail.com
ಸಂಖ್ಯೆ: ಕಾನಿಅ/ಗ್ರಾಕುನೀನೈ/ವಿ/ಬೀದರ/ಟೆಂಡರ/ತಾಶಾ-5/2026-27/136 ದಿನಾಂಕ:18-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್ಮೆಂಟ್ ಮೂಲಕ)

ಕರ್ನಾಟಕ ರಾಜ್ಯದ ಮಾನ್ಯ ರಾಜ್ಯಪಾಲರ ಪರವಾಗಿ ಜಿಲ್ಲಾ ಪಂಚಾಯತ, ಬೀದರ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೀದರ ರವರು KG-2 (Standard Bid Document) ನಿಬಂಧನೆಗಳೊಪಟ್ಟಂತೆ H/A EAP, SDP & EAP Non SDP 2026-27 ಯೋಜನೆ ಯಡಿಯಲ್ಲಿನ **ರೂ.45.00 ರಿಂದ 93.00 ಲಕ್ಷಗಳ** ಒಟ್ಟು 02 ಕಾಮಗಾರಿಗೆ ಅರ್ಹ ನೊಂದಾಯಿತ ಗುತ್ತಿಗೆದಾರರು ಭಾಗವಹಿಸಬಹುದಾದ ಕಾಮಗಾರಿಗಳಿಗೆ ಐಟಂವಾರು ಇ-ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳ ಹೆಚ್ಚಿನ ವಿವರ, ಷರತ್ತು ಹಾಗೂ ನಿಬಂಧನೆಗಳಿಗಾಗಿ ಈ ಕೆಳಗೆ ಸಹಿ ಮಾಡಿರುವ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ಸೈಟ್ https://kppp.karnataka.gov.in ಸಂಪರ್ಕಿಸಬಹುದಾಗಿದೆ.

1) ಟೆಂಡರ ದಸ್ತಾವೇಜುಗಳನ್ನು ವೆಬ್ ಸೈಟಿನಿಂದ ಡೌನಲೋಡ ಮಾಡಿಕೊಳ್ಳಲ್ಲು ಪ್ರಾರಂಭವಾಗುವ **ದಿನಾಂಕ:18.05.2026 ರಿಂದ 27.05.2026 ವರೆಗೆ,** 2) ಭರ್ತಿ ಮಾಡಿದ ಟೆಂಡರ ಸಲ್ಲಿಸಲು ಕೊನೆಯ **ದಿನಾಂಕ:27.05.2026 ರಿಂದ 17:00 ಗಂಟೆಯವರೆಗೆ,** 3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 29.05.2026 ರಿಂದ 11.30 ಗಂಟೆಯ ನಂತರ,** 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು.ನೀ & ನೈ ವಿಭಾಗ-ಬೀದರ
ವಾ.ಸಾ.ಸಂ.ಇ/ಬೀದರ/35/ಕೆ.ಎಸ್.ಎಂ.ಸಿ.&ಎ/2026-27

ಕರ್ನಾಟಕ ಸರ್ಕಾರ
ಶಿವಕೋಟೆ ಗ್ರಾಮ ಪಂಚಾಯತ್ ಕಾರ್ಯಾಲಯ
ಯಲಹಂಕ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.
ಸಂಖ್ಯೆ: ಶಿ.ಗ್ರಾ.ಪಂ/22/2026-27 ದಿನಾಂಕ:18.05.2026

ಇ-ಟೆಂಡರ್ ಪ್ರಕಟಣೆ

ಆಡಳಿತ ಅಧಿಕಾರಿ ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಶಿವಕೋಟೆ ಗ್ರಾಮ ಪಂಚಾಯತಿಯಲ್ಲಿ 2026-27 ನೇ ಸಾಲಿನ ವರ್ಗ-1/15ನೇ ಹಣಕಾಸಯ ಯೋಜನೆ/ವಿವಿಧ ಯೋಜನೆಯಾಡಿ ವಿವಿಧ ಸಾಮಾಗ್ರಿ ಖರೀದಿ/ಸೇವೆ ಪಡೆಯಲು ಇ-ಟೆಂಡರ್ ಆಹ್ವಾನಿಸಲಾಗಿದೆ ವಿವರ ಕೆಳಗಿನಂತಿದೆ.

ಕ್ರ.ಸಂ	ವಿವರ	ಟೆಂಡರ್ ಸಂಖ್ಯೆ
1.	Procurement of Electrical Items	RDPR/2026-27/IND13999
2.	Procurement of PVC, CPVC, HDPE Pipes and Electrofusion Fittings for Water Supply Works	RDPR/2026-27/IND13996
3.	Procurement of Cleaning Materials	RDPR/2026-27/IND13998
4.	Procurement of Pump Motors and Allied Accessories	RDPR/2026-27/IND13997
5	Annual RO Plant Maintainance,Supply and Service	RDPR/2026-27/SE3717
6.	Repair and Maintanance of Street Light and Highmast Lighting System	RDPR/2026-27/SE3719
7.	Annual Pump and Motor Maintainance Work	RDPR/2026-27/SE3716
8.	Providing Tractor and JCB Services on Hire Basis for Various Works (Hourly Rate)	RDPR/2026-27/SE3718
9.	Procurement and Supply of Office Stationery Items for Official Use	RDPR/2026-27/IND14000
10.	Procurementof3KWOngridSolarRooftop	RDPR/2026-27/IND14199

(1) ಟೆಂಡರ್ ದಾಖಲಾತಿಗಳನ್ನು ಇ-ಪ್ರಕ್ಯೂರ್‌ಮೆಂಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು **ದಿನಾಂಕ: 16.05.2026 ರಿಂದ 30.05.2026 ಸಂಜೆ 16.00 ಗಂಟೆಯವರೆಗೆ** ಸಲ್ಲಿಸಬಹುದು. ಕೆಲಸದ ಹೆಸರು/ಪೂರೈಕೆದಾರರ ಅರ್ಹತೆ/ ಟೆಂಡರ್ ನಿಯಮಗಳು/ಟೆಂಡರ್ ಪ್ರೋಸೆಸ್ಸಿಂಗ್/EMD ಫೀ ಇತ್ಯಾದಿ ವಿವರಗಳಿಗೆ **www.KPPP.karnataka.gov.in** ಮೂಲಕ ಪಡೆಯಬಹುದು.

ಸಹಿ/-ಪಂಚಾಯತ್ ಅಭಿವೃದ್ಧಿ ಅಧಿಕಾರಿ
ಶಿವಕೋಟೆ ಗ್ರಾಮ ಪಂಚಾಯತ್
ವಾಸಾಸಂಇ/ವಾಪ್ರ/721/ಶಿರಡಿ ಸಾಯಿ/2026-27
ಸಹಿ/ ಆಡಳಿತ ಅಧಿಕಾರಿ
ಶಿವಕೋಟೆ ಗ್ರಾಮ ಪಂಚಾಯತ್

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಕಾನಿಇಂ/ಸ.ಕಾ.ಇಂ(ಕ)/ಯೋ.ವಿ.ಕೋ/ಎಫ್-25/26-27/237-38 ದಿನಾಂಕ: 13.05.2026

ಪ್ರಕಟಣೆ

ಕವಿಪ್ರನಿನಿಯು ವಿದ್ಯುತ್ ಸರಬರಾಜು ಕಾಯ್ದೆ 2003ರ ಸೆಕ್ಷನ್ 67ರ ಅಡಿಯಲ್ಲಿ ಯೋಜನೆಗಳನ್ನು ರೂಪಿಸಿದೆ ಮತ್ತು ಇದೇ ಕಾಯ್ದೆ ಸೆಕ್ಷನ್ 67(2)(ಸಿ) ರನ್ವಯ ಸಾರ್ವಜನಿಕರಿಗೆ ಯೋಜನೆಗಳ ಮಾಹಿತಿ ನೀಡುವ ದೃಷ್ಟಿಯಿಂದ ಈ ಪ್ರಕಟಣೆಯನ್ನು ಪ್ರಕಟಿಸಲಾಗಿದೆ. **(1) ಮೈಲಾಪುರ: ಯೋಜನೆಯ ಹೆಸರು:** ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು **ಮೈಲಾಪುರ** ಬಳಿ ಹೊಸ 2X20 ಎಂವಿಎ, 66/11ಕೆ.ವಿ ವಿದ್ಯುತ್ ಉಪಕೇಂದ್ರದ ನಿರ್ಮಾಣ ಮತ್ತು ಹಾಲಿ ಇರುವ 66ಕೆ.ವಿ ಚಿಂತಾಮಣಿ-ತಲಗವಾರ ಡಿಸಿ ಮಾರ್ಗದಿಂದ ಪ್ರಸ್ತಾಪಿತ 66/11ಕೆ.ವಿ ಮೈಲಾಪುರ ಉಪ-ಕೇಂದ್ರಕ್ಕೆ **4.422 ಕಿ.ಮೀ** ಉದ್ದದ ಡ್ರೇಕ್ ಕಂಡಕ್ಟರ್‌ನೊಂದಿಗೆ ಡಿ.ಸಿ 110ಕೆ.ವಿ ಟವರ್‌ಗಳ ಮೇಲೆ 66ಕೆ.ವಿ ಲಿಲೋ ಮಾರ್ಗದ ನಿರ್ಮಾಣ. **ಮೊತ್ತ ರೂ.2746.15 ಲಕ್ಷಗಳು. ಹೊಸ ಮಾರ್ಗ ಹಾದು ಹೋಗುವ ಹಳ್ಳಿಗಳ ಸರ್ವೆ ನಂಬರ್‌ಗಳು ಮತ್ತು ಗೋಪುರ ಸಂಖ್ಯೆ/ವಿವರಗಳು** [ಜಿಲ್ಲೆ: **ಚಿಕ್ಕಬಳ್ಳಾಪುರ,** ತಾಲ್ಲೂಕು: **ಚಿಂತಾಮಣಿ**] ಹೋಬಳಿ: **ಕಸಬಾ, ಆಲಂಬಗಿರಿ: ಗೋಪುರ ಸಂಖ್ಯೆ (ಗೋ.ಸಂ.):** ಲಿಲೋ **ಸರ್ವೆ ನಂಬರ್ (ಸರ್ವೆ ನಂ.):** 266, ಗೋ.ಸಂ. ಲಿಲೋ-ಎಪಿ-1, ಸರ್ವೆ ನಂ. 266, ಗೋ.ಸಂ. ಎಪಿ-1 ರಿಂದ ಎಪಿ-2, ಸರ್ವೆ ನಂ. 266, ಹೋಬಳಿ: **ಕೈವಾರ, ಕೆಂದನಹಳ್ಳಿ:** ಗೋ.ಸಂ. ಎಪಿ-1 ರಿಂದ ಎಪಿ-2, ಸರ್ವೆ ನಂ. 112, ಗೋ.ಸಂ. ಎಪಿ-2 ರಿಂದ ಎಪಿ-3, ಸರ್ವೆ ನಂ. 112, ಗೋ.ಸಂ. ಎಪಿ-3 ರಿಂದ ಎಪಿ-4, ಸರ್ವೆ ನಂ. 112, **ಚಿನ್ನಸಂದ್ರ:** ಗೋ.ಸಂ. ಎಪಿ-3 ರಿಂದ ಎಪಿ-4, ಸರ್ವೆ ನಂ. 99, **ಚಿನ್ನಸಂದ್ರ:** ಗೋ.ಸಂ. ಎಪಿ-4 ರಿಂದ ಎಪಿ-5, ಸರ್ವೆ ನಂ. 99, 101, 102/4, ಗೋ.ಸಂ. ಎಪಿ-5 ರಿಂದ ಎಪಿ-6, ಸರ್ವೆ ನಂ. 102/4, 104, 105/1, 106/1, 106/2, 119, ಗೋ.ಸಂ. ಎಪಿ-6 ರಿಂದ ಎಪಿ-7, ಸರ್ವೆ ನಂ. 119, 115, 117, 114/2, 113, 51, 50, ಗೋ.ಸಂ. ಎಪಿ-7 ರಿಂದ ಎಪಿ-8, ಸರ್ವೆ ನಂ. 50, 23/3, 23/5, 23/7, 23/4, 22/2, ಗೋ.ಸಂ. ಎಪಿ-8 ರಿಂದ ಎಪಿ-9, ಸರ್ವೆ ನಂ. 22/2, 22/1, 209/2, 20, 19, **ದೊಡ್ಡಿಹಳ್ಳಿ:** ಗೋ.ಸಂ. ಎಪಿ-8 ರಿಂದ ಎಪಿ-9, ಸರ್ವೆ ನಂ. 29/2, ಗೋ.ಸಂ. ಎಪಿ-9 ರಿಂದ ಎಪಿ-10, ಸರ್ವೆ ನಂ. 29/2, 33, **ಚಿನ್ನಸಂದ್ರ:** ಗೋ.ಸಂ. ಎಪಿ-9 ರಿಂದ ಎಪಿ-10, ಸರ್ವೆ ನಂ. 20, **ನಾಗದೇನಹಳ್ಳಿ:** ಗೋ.ಸಂ. ಎಪಿ-9 ರಿಂದ ಎಪಿ-10, ಸರ್ವೆ ನಂ. 108, 97, ಗೋ.ಸಂ. ಎಪಿ-10 ರಿಂದ ಎಪಿ-11, ಸರ್ವೆ ನಂ. 97, 94/10, 94/6, 94/5, 94/4, 94/7, 94/3, 94, 94/8, 94/2, 94/1, 60/2, 90. ಗೋ.ಸಂ. ಎಪಿ-11 ರಿಂದ ಎಪಿ-12, ಸರ್ವೆ ನಂ. 90, 91/1, 90, ಗೋ.ಸಂ. ಎಪಿ-12 ರಿಂದ ಎಪಿ-13, ಸರ್ವೆ ನಂ. 72, ಗೋ.ಸಂ. ಎಪಿ-13 ರಿಂದ ಎಪಿ-14, ಸರ್ವೆ ನಂ. 72, ಗೋ.ಸಂ. ಎಪಿ-14 ರಿಂದ ಎಪಿ-15, ಸರ್ವೆ ನಂ. 72, **ಮೈಲಾಪುರ:** ಗೋ.ಸಂ. ಎಪಿ-15 ರಿಂದ ಎಪಿ-16, ಸರ್ವೆ ನಂ. 110, ಗೋ.ಸಂ. ಎಪಿ-16 ರಿಂದ ಎಪಿ-17, ಸರ್ವೆ ನಂ. 110, 117, ಗೋ.ಸಂ. ಎಪಿ-17 ರಿಂದ ಬೇ ವರೆಗೆ, ಸರ್ವೆ ನಂ. 113, **(2) ಕುರುಬರಹಳ್ಳಿ: ಯೋಜನೆಯ ಹೆಸರು:** ಕೋಲಾರ ತಾಲ್ಲೂಕು ಮತ್ತು ಜಿಲ್ಲೆ **ಕುರುಬರಹಳ್ಳಿ** ಬಳಿ ಹೊಸ 2X20 ಎಂವಿಎ, 66/11ಕೆ.ವಿ ವಿದ್ಯುತ್ ಉಪಕೇಂದ್ರದ ನಿರ್ಮಾಣ ಮತ್ತು ಹಾಲಿ ಇರುವ 66ಕೆ.ವಿ ಕೋಲಾರ-ಆವಣಿ ಎಸ್.ಸಿ ಮಾರ್ಗದಿಂದ ಪ್ರಸ್ತಾಪಿತ 66/11ಕೆ.ವಿ ಕುರುಬರಹಳ್ಳಿ ಉಪಕೇಂದ್ರಕ್ಕೆ **3.957 ಕಿ.ಮೀ** ಉದ್ದದ 66 ಕೆ.ವಿ ಲಿಲೋ ವಿದ್ಯುತ್ ಮಾರ್ಗ ನಿರ್ಮಾಣ. **ಮೊತ್ತ ರೂ.2621.81 ಲಕ್ಷಗಳು**. ಹೊಸ ಮಾರ್ಗ ಹಾದು ಹೋಗುವ ಹಳ್ಳಿಗಳ ಸರ್ವೆ ನಂಬರ್‌ಗಳು ಗೋಪುರ ಸಂಖ್ಯೆ/ವಿವರಗಳು [ಜಿಲ್ಲೆ: **ಕೋಲಾರ,** ತಾಲ್ಲೂಕು: **ಕೋಲಾರ**] ಹೋಬಳಿ: **ಕಸಬಾ, ಭಟ್ರಹಳ್ಳಿ:** ಗೋ.ಸಂ. ಡಿಡಿ+0, 110ಕೆ.ವಿ NBT, ಸರ್ವೆ ನಂ. 87/3, ಗೋ.ಸಂ. ಡಿಡಿ+3, 110ಕೆ.ವಿ NBT, ಸರ್ವೆ ನಂ. 39, ಗೋ.ಸಂ. ಎಪಿ-1, ಸರ್ವೆ ನಂ. 46, ಗೋ.ಸಂ. ಎ.ಪಿ -1 ರಿಂದ ಎ.ಪಿ-2, ಸರ್ವೆ ನಂ. 46, 58/2, 58/3, 58/4, ಗೋ.ಸಂ. ಎ.ಪಿ -2 ರಿಂದ ಎ.ಪಿ-3, ಸರ್ವೆ ನಂ. 60, 140, **ಶಿಳ್ಳಂಗೆರೆ:** ಗೋ.ಸಂ. ಎ.ಪಿ -2 ರಿಂದ ಎ.ಪಿ-3, ಸರ್ವೆ ನಂ. 28, 31/8, 31/7, 31/6, 31/4, 32, 52, 51/3, 54, 51/4, 55/1, 55/2, 55/3, 51/2, 56, 62/1, 57, 58, 62/2, 59, 62/5, 59, 61, 64/1, 64/2, 64/5, 69, 68, ಗೋ.ಸಂ. ಎ.ಪಿ -3 ರಿಂದ ಎ.ಪಿ-4, ಸರ್ವೆ ನಂ. 68, 72/1, 67, 73, 74/3, 74/4, 74/5, 79/1, 79/2, 78, 78/2, 78/9, 78/8, 78/16, 87, 89/6, 89/3, 89/9, 90/6, 90/2, 90/8, 91/4, 91/5, 91/1, 94. ಗೋ.ಸಂ. ಎಪಿ-4 ರಿಂದ ಎಪಿ-5, ಸರ್ವೆ ನಂ. 94, ಗೋ.ಸಂ. ಎಪಿ-5 ರಿಂದ ಎಪಿ-6, ಸರ್ವೆ ನಂ. 94, 129, ಗೋ.ಸಂ. ಎಪಿ-6 ರಿಂದ ಎಪಿ-7, ಸರ್ವೆ ನಂ. 129, **ಕುರುಬರಹಳ್ಳಿ** ಗೋ.ಸಂ. ಎಪಿ-6 ರಿಂದ ಎಪಿ-7, ಸರ್ವೆ ನಂ. 11, ಗೋ.ಸಂ. ಎಪಿ-7 ರಿಂದ ಎಪಿ-8, ಸರ್ವೆ ನಂ. 11, 81, 80, 11, ಗೋ.ಸಂ. ಎಪಿ-8 ರಿಂದ ಎಪಿ-9, ಸರ್ವೆ ನಂ. 11, ಗೋ.ಸಂ. ಎಪಿ-9 ರಿಂದ ಎಪಿ-10, ಸರ್ವೆ ನಂ. 11, ಗೋ.ಸಂ. ಎಪಿ-10 ರಿಂದ ಎಪಿ-11, ಸರ್ವೆ ನಂ. 11, ಗೋ.ಸಂ. ಎಪಿ-11 ರಿಂದ ಬೇ ವರೆಗೆ, ಸರ್ವೆ ನಂ. 11.

ಕವಿಪ್ರನಿನಿಯು ಮೇಲೆ ತಿಳಿಸಿದ ಯೋಜನೆಯನ್ನು ಕಾರ್ಯಗತಗೊಳಿಸಲು 1885 ರ ಭಾರತೀಯ ಟೆಲಿಗ್ರಾಫ್-III (ಕೇಂದ್ರಿಯ ಕಾಯ್ದೆ 1885 ರ 13 ರ ಅನ್ವಯ) ಅಧಿನಿಯಮ, ಟೆಲಿಗ್ರಾಫ್ ಹೊಂದಿರುವ ಎಲ್ಲಾ ಅಧಿಕಾರಿಗಳನ್ನು ಹೊಂದಿರುತ್ತದೆ ಹಾಗೂ ಚಲಾಯಿಸುತ್ತದೆ. ಸದರಿ ಯೋಜನೆಗೆ ಅಕ್ಷೇಪಣೆಗಳೇನಾದರೂ ಇದ್ದಲ್ಲಿ, ನಿಗಮದ ಪರಿಗಣೆಗಾಗಿ ಅಕ್ಷೇಪಣೆಗಳನ್ನು ಈ ಪ್ರಕಟಣೆ ಪ್ರಕಟವಾದ **15 ದಿನಗಳ ಒಳಗಾಗಿ** ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಯೋಜನೆಗಳು ವಿಭಾಗ, ಕ.ವಿ.ಪ್ರ.ನಿ.ನಿ., ಕೋಲಾರ ಇವರಿಗೆ ಲಿಖಿತ ರೂಪದಲ್ಲಿ ಸಲ್ಲಿಸಬೇಕಾಗಿ ವಿನಂತಿ ಹಾಗೂ ತದನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಯೋಜನೆಗಳ ವಿಭಾಗ, ಕ.ವಿ.ಪ್ರ.ನಿ.ನಿ, ಕೋಲಾರ

ರಾಜ್ಯಾಧ್ಯಕ್ಷ ಮಂಜುನಾಥ್ ಗೌಡ ವಿರುದ್ಧ ಆಕ್ರೋಶ | 15ಕ್ಕೂ ಹೆಚ್ಚು ಪದಾಧಿಕಾರಿಗಳ ಅಮಾನತುಗೊಳಿಸಿದಕ್ಕೆ ಆಕ್ಷೇಪ | ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಗದ್ದಲ-ಗಲಾಟೆ

ಯುವ ಕಾಂಗ್ರೆಸ್‌ನಲ್ಲಿ ಕಿತ್ತಾಟ

ಬೆಂಗಳೂರು: ಯುವ ಕಾಂಗ್ರೆಸ್ ರಾಜ್ಯ ಘಟಕದಲ್ಲಿನ ಜಗಳ ಬೀದಿಗೆ ಬಂದಿದ್ದು, ಪದಾಧಿಕಾರಿಗಳನ್ನು ಅಮಾನತುಗೊಳಿಸಿದಕ್ಕೆ ಪಕ್ಷದ ಕಚೇರಿಯಲ್ಲಿಯೇ ತಳ್ಳಾಟ-ನೂಕಾಟ ನಡೆದಿದೆ.

ಸೋಮವಾರ ಬೆಳಗ್ಗೆ ಕೆಪಿಸಿಸಿ ಕಚೇರಿಯಲ್ಲಿ ಆಯೋಜಿಸಿದ್ದ ನೀಟ್ ಪರೀಕ್ಷೆ ಅಕ್ರಮ ಖಂಡಿಸಿ ಮೇ 21ರಂದು ಹಮ್ಮಿಕೊಳ್ಳಲಾಗಿರುವ ಬೃಹತ್ ಪ್ರತಿಭಟನೆಯ ಪೂರ್ವಭಾವಿ ಸಭೆಯಲ್ಲಿ ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಮಂಜುನಾಥ್ ಗೌಡ ಹಾಗೂ ಅಮಾನತುಗೊಂಡಿರುವ ದೀಪಿಕಾ ರೆಡ್ಡಿ, ಬಿಂದು ಗೌಡ ಬೆಂಬಲಿಗರ ನಡುವೆ ಗಲಾಟೆ ಶುರುವಾಗಿ, ಕೈಕೈ ಮಿಲಾಯಿಸುವ ಹಂತಕ್ಕೆ ತಲುಪಿತ್ತು. ಈ ವೇಳೆ ಮಂಜುನಾಥ್ ಗೌಡ ಸರ್ವಾಧಿಕಾರಿ ಧೋರಣೆ ವಿರುದ್ಧ ತೀವ್ರ ಆಕ್ರೋಶವನ್ನು ಬಿಂದು ಗೌಡ ಬೆಂಬಲಿಗರು ಹೊರಹಾಕಿದ್ದಾರೆ. ಸಭೆಯು ರಣರಂಗವಾಗಿ ಮಾರ್ಪಟ್ಟಿತ್ತು.

ರಾಷ್ಟ್ರೀಯ ಯುವ ಕಾಂಗ್ರೆಸ್ ಆದೇಶದ ಮೇರೆಗೆ ಯುವ ಕಾಂಗ್ರೆಸ್ ಉಪಾಧ್ಯಕ್ಷೆ ದೀಪಿಕಾ ರೆಡ್ಡಿ ಅವರನ್ನು ಇತ್ತೀಚೆಗಷ್ಟೇ ಅವರ ಸ್ಥಾನದಿಂದ ಕೈಬಿಡಲಾಗಿತ್ತು. ಈ ಕ್ರಮದ ವಿರುದ್ಧ ದೀಪಿಕಾ ರೆಡ್ಡಿ ಬೆಂಬಲಿಗರಲ್ಲಿ ತೀವ್ರ ಅಸಮಾಧಾನವಿತ್ತು. ಕೆಪಿಸಿಸಿ ಕಚೇರಿಯಲ್ಲಿ ಮೇ 21ರ ಪ್ರತಿಭಟನೆಯ ಸಿದ್ಧತೆಗಾಗಿ ಅಧಿಕೃತ ಸಭೆ ಕರೆಯದಿದ್ದಾಗಲೇ ಸಭೆಯಲ್ಲಿ ಆಕ್ರೋಶ ಸ್ಫೋಟಗೊಂಡಿದೆ.

ಸಭೆ ಆರಂಭವಾಗುತ್ತಿದ್ದಂತೆ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ ಗೌಡ ಹಾಗೂ ಮಾಜಿ ಉಪಾಧ್ಯಕ್ಷೆ ದೀಪಿಕಾ ರೆಡ್ಡಿ ಅವರ ಬೆಂಬಲಿಗರ ನಡುವೆ ತೀವ್ರ ವಾಕ್ಸಮರ ಆರಂಭವಾಗಿದೆ. ದೀಪಿಕಾ ರೆಡ್ಡಿ ಅವರನ್ನು ಸ್ಥಾನದಿಂದ ಕೈಬಿಟ್ಟ ಕ್ರಮವನ್ನು ವಿರೋಧಿಸಿ ಸಭೆಯಲ್ಲಿ ಘೋಷಣೆಗಳನ್ನು ಕೂಗಲಾರಂಭಿಸಿದರು. ಈ ವೇಳೆ ಮಂಜುನಾಥ ಗೌಡ ಬೆಂಬಲಿಗರಿಂದ ಪ್ರತಿರೋಧ ವ್ಯಕ್ತವಾಗಿದೆ.

ಸಭೆಗೆ ಅಡ್ಡಿಪಡಿಸದಂತೆ ಎಚ್ಚರಿಕೆ ನೀಡಿದಾಗ ಪರಿಸ್ಥಿತಿ ಕೈಮೀರಿದೆ. ಮಾತಿಗೆ ಮಾತು ಬೆಳೆದು ಎರಡೂ ಬಣಗಳ ಕಾರ್ಯಕರ್ತರು ಪರಸ್ಪರ ತಳ್ಳಾಟ, ನೂಕಾಟ ನಡೆಸಿದ್ದಾರೆ. ಸಭೆಯಲ್ಲಿ ಹುದ್ದೆಯಿಂದ ಬಿಡುಗಡೆಗೊಳಿಸಲಾಗಿದ್ದ ಪದಾಧಿಕಾರಿಗಳು ಆಕ್ರೋಶ ವ್ಯಕ್ತಪಡಿಸಿ ಕ್ರಮವನ್ನು ಖಂಡಿಸಿದರು. ನೋಟಿಸ್ ನೀಡದೇ ಕೆಲ ಪದಾಧಿಕಾರಿಗಳನ್ನು ಹುದ್ದೆಯಿಂದ ಬಿಡುಗಡೆ ಮಾಡಿದ್ದು ಏಕೆ? ಒದು ಪ್ರಶ್ನಿಸಿದರು. ಅಲ್ಲದೆ, ಮಂಜುನಾಥ ಗೌಡ ಹಾಗೂ ನಿಗಂ ಭಂಡಾರಿ ಅವರಿಗೆ ಕಾರ್ಯಕರ್ತರು ಘೇರಾವ್ ಹಾಕಿದರು.

ಈ ರೀತಿಯ ಸಣ್ಣಪುಟ್ಟ ಗೊಂದಲಗಳಿರುತ್ತವೆ. ಆದರೆ ಯಾವುದೇ ಗಲಾಟೆಯಾಗಿಲ್ಲ. ರಾಜ್ಯ ಕಾರ್ಯಕಾರಿ ಸಭೆಯಲ್ಲಿ ನೀಟ್ ಹೋರಾಟದ ಬಗ್ಗೆ ಚರ್ಚಿಸಲಾಗಿದೆ. ಯಾರೇನು ಮಾಡುತ್ತಾರೆ ಎಂದು ವರದಿ ಕೊಡುತ್ತೇವೆ. ಹೈಕಮಾಂಡ್ ಕ್ರಮವಹಿಸುತ್ತದೆ. ಯಾವುದೇ ವೈಯಕ್ತಿಕ ದ್ವೇಷ ರಾಜಕಾರಣ ಏನೂ ಇಲ್ಲ.
- ಎಚ್.ಎಸ್. ಮಂಜುನಾಥ್ ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ

ಸಮಾಧಾನಪಡಿಸಲು ಹಿರಿಯ ನಾಯಕರು ಯತ್ನಿಸಿದರೂ, ಪರಿಸ್ಥಿತಿ ನಿಯಂತ್ರಣಕ್ಕೆ ಬಾರದೆ ಕಾರ್ಯಕರ್ತರು ಕೆಪಿಸಿಸಿ ಕಚೇರಿಯ ಆವರಣದಲ್ಲೇ ಹೊಡೆದಾಟಕ್ಕೆ ಇಳಿದಿದ್ದಾರೆ. ಕೊನೆಗೆ ಅಲ್ಲಿದ್ದ ಹಿರಿಯ ನಾಯಕರು ಕಾರ್ಯಕರ್ತರಯ ಎರಡೂ ಬಣದವರನ್ನು ಸಮಾಧಾನಪಡಿಸಿದ್ದಾರೆ. ಈ ಘಟನೆ ಸಂಬಂಧ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ದೂರು ನೀಡಲಾಗಿದೆ ಎಂದು ತಿಳಿದು ಬಂದಿದೆ.

ವಿವಾದ ಏನು?: ಕರ್ನಾಟಕ ಯುವ ಕಾಂಗ್ರೆಸ್‌ನ 15 ಪದಾಧಿಕಾರಿಗಳನ್ನು ಜವಾಬ್ದಾರಿಯಿಂದ ತಾತ್ಕಾಲಿಕವಾಗಿ ಮುಕ್ತಗೊಳಿಸಲಾಗಿತ್ತು. ಇದಕ್ಕೆ ಪಕ್ಷದ ಚಟುವಟಿಕೆಯಲ್ಲಿ ನಿಷ್ಕ್ರಿಯತೆಯ ಕಾರಣಗಳನ್ನು ನೀಡಲಾಗಿತ್ತು. ರಾಜ್ಯ ಉಪಾಧ್ಯಕ್ಷೆ ದೀಪಿಕಾ ರೆಡ್ಡಿ ಹಾಗೂ ಎಂಟು ಪ್ರಧಾನ ಕಾರ್ಯದರ್ಶಿಗಳು ಇದರಲ್ಲಿ ಒಳಗೊಂಡಿದ್ದಾರೆ. ಸಂಘಟನಾ ಚಟುವಟಿಕೆಗಳಲ್ಲಿ ಭಾಗವಹಿಸದ ಮತ್ತು ಕರ್ತವ್ಯ ಲೋಪವೆಸಗಿದ ಹಿನ್ನೆಲೆಯಲ್ಲಿ ಯೂತ್ ಕಾಂಗ್ರೆಸ್ ರಾಷ್ಟ್ರೀಯ ನಾಯಕತ್ವ ಶಿಸ್ತುಕ್ರಮ ಕೈಗೊಂಡಿದೆ. ಇದು ಆಕ್ರೋಶಕ್ಕೆ ಕಾರಣವಾಗಿದೆ.

ವೈಯಕ್ತಿಕ ಸೇಡು ಎಂದು ಆರೋಪಿಸಿದ ದೀಪಿಕಾ

ಈ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಿರುವ ದೀಪಿಕಾ ರೆಡ್ಡಿ, ಅಮಾನತುಗೊಳಿಸಿರುವುದು ಶಿಸ್ತಿನ ಕ್ರಮವಲ್ಲ, ವೈಯಕ್ತಿಕ ಸೇಡು. ಸ್ತ್ರೀ ದ್ವೇಷದ ಪಿತೂರಿ. ಇಂತಹ ಸೇಡಿನ ರಾಜಕೀಯಕ್ಕೆ ನಾನು ಮೌನವಾಗುವುದಿಲ್ಲ. ಯುವ ಕಾಂಗ್ರೆಸ್ ಚುನಾವಣೆಯಲ್ಲಿ 2.95 ಲಕ್ಷ ಮತಗಳನ್ನು ಪಡೆದಿದ್ದೇನೆ. ಪುರುಷ ಪ್ರಾಬಲ್ಯದ ರಾಜಕೀಯದಲ್ಲಿ ಅವರ ವಿರುದ್ಧ ಹೋರಾಟ ನಡೆಸಿದ್ದೇನೆ. ಚುನಾವಣೆಯ ಬಳಿಕವೂ ಪಕ್ಷ ಸಂಘಟನೆಗಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದ್ದೇನೆ. ಆದರೆ ಎಚ್.ಎಸ್.ಮಂಜುನಾಥ್‌ಗೆ ಅಭದ್ರತೆ ಮತ್ತು ಅಸೂಯೆಯಿಂದ ನಡೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಮಂಜುನಾಥ್ ಗೌಡ ಅವರು ನೇತೃತ್ವದ ಯುವ ಕಾಂಗ್ರೆಸ್ ಮಹಿಳೆಯರಿಗೆ ಅಸುರಕ್ಷಿತ ವಾತಾವರಣ ನಿರ್ಮಿಸಲಾಗಿದೆ. ಚುನಾವಣೆಯ ಬಳಿಕ ರಾಜಕೀಯ ಪಿತೂರಿ ಮತ್ತು ಮಾನಸಿಕ ಕಿರುಕುಳ ನಡೆದಿದೆ. ಮಂಜುನಾಥ್ ಒಡೆದಾಳುವ ನೀತಿ ಅನುಸರಿಸುತ್ತಿದ್ದಾರೆ. ಹೆಣ್ಣು ಮಕ್ಕಳೊಂದಿಗೆ ಒರಟಾಗಿ ಮಾತನಾಡಿದ್ದಾರೆ. ಈ ಎಲ್ಲ ವಿಷಯವನ್ನು ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರ ಗಮನಕ್ಕೆ ತರುತ್ತೇನೆ. ಯಾವುದೇ ಹೆಣ್ಣುಮಗುವಿಗೆ ಈ ರೀತಿಯಾಗಬಾರದು. ಈ ವಿಚಾರವನ್ನು ರಾಷ್ಟ್ರೀಯ ನಾಯಕರ ಮುಂದೆ ತೆಗೆದುಕೊಂಡು ಹೋಗುತ್ತೇನೆ ಎಂದಿದ್ದಾರೆ.

ನೆಫ್ರೋ-ಯುರಾಲಜಿ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ ನೋಂದಣಿ ಸಂ-1052/03-04)
ವಿಕ್ಟೋರಿಯ ಆಸ್ಪತ್ರೆ ಆವರಣ, ಬೆಂಗಳೂರು-560 002.
ಇ-ಮೇಲ್: nephrourology.institute@gmail.com ವೆಬ್‌ಸೈಟ್: www.nephrourology.karnataka.gov.in
ಸಂಖ್ಯೆ: INU/TND/ADMN/PROC/123/2026 ದಿನಾಂಕ:18.05.2026

ಟೆಂಡರ್ ಪ್ರಕಟಣೆ

ನೆಫ್ರೋ-ಯುರಾಲಜಿ ಸಂಸ್ಥೆ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು-02. ಇಲ್ಲಿಗೆ ಈ ಕೆಳಗೆ ನಮೂದಿಸಿರುವ ವಿಷಯಗಳಿಗೆ ಅರ್ಹ ಟೆಂಡರ್‌ದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ.

1. Providing Group C Services for the Year 2026-27.
Last Date For Online Submission of Tender is 17.06.2026 at 5.30 P.M
1. Disposal of Garbage for the Year 2026-27.
2. Disposal of Biomedical Waste for KSRD & Herohalli Dialysis Unit.
3. Disposal of Biomedical Waste for INU (CALL-2).
4. Procurement of Medical Equipments for Annex Building (CALL-2).
5. Procurement of Endoscope Camera (High End) (CALL-2).
6. Procurement of Laproscopic Set (CALL-2).
Last Date For Online Submission of Tender is 02.06.2026 at 5.30 P.M

ಟೆಂಡರ್‌ಗೆ ಸಂಬಂಧಪಟ್ಟಂತೆ, ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ **https://kppp.karnataka.gov.in/** ದಲ್ಲಿ ಪಡೆದುಕೊಳ್ಳಬಹುದು.

ಸೂಚನೆ:- ಈ ಟೆಂಡರ್‌ಗೆ ಸಂಬಂಧಪಟ್ಟಂತೆ, ಮುಂದಿನ ಪ್ರಕ್ರಿಯೆಗಳ ಬಗ್ಗೆ (further information and announcements) ತಿಳಿದುಕೊಳ್ಳಲು ನಮ್ಮ ಸಂಸ್ಥೆಯ ಅಂತರ್ಜಾಲ **https://nephrourology.karnataka.gov.in/** ದಲ್ಲಿ ವೀಕ್ಷಿಸಬಹುದು.

ಸಹಿ/-ನಿರ್ದೇಶಕರು, ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಇಂಜನೀಯರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
ದೂರವಾಣಿ ಸಂ. (0831) 2463850/ಫ್ಯಾಕ್ಸ್ ನಂ. (0831) 2423008
No.EE /MI&GWDDD/BGM/TND/AE/2026-27/351 Date:18-05-2026

ಅಲ್ಪಾವಧಿ ಟೆಂಡರ ಪ್ರಕಟಣೆ (ಕೆ.ಡಬ್ಲ್ಯೂ-1&4)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ-2000ರ ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ಗುತ್ತಿಗೆಯನ್ನು "ಕೆಪಿಪಿಪಿ" ಮುಖಾಂತರ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಬೆಳಗಾವಿ ಇವರಿಂದ ಆವ್ಹಾನಿಸಲಾಗಿದೆ. ಬೆಳಗಾವಿ/ಗೋಕಾಕ/ಅಥಣಿ ಉಪ ವಿಭಾಗಗಳಡಿಯ ಒಟ್ಟು 05 ಕಾಮಗಾರಿಗಳ ಅಂದಾಜು ಮೊತ್ತ ಗರಿಷ್ಠ ರೂ.161.50 ಲಕ್ಷಗಳು ಹಾಗೂ ಕನಿಷ್ಠ ರೂ.2.80 ಲಕ್ಷಗಳು. 1.ಕೆ.ಡಬ್ಲ್ಯೂ-4 ಕಾಮಗಾರಿಗಾಗಿ ಪೂರ್ವ ಟೆಂಡರ ಸಭೆಯು ದಿನಾಂಕ:25-05-2026 ಮುಂ 11.00 ಘಂಟೆಗೆ, 2.ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ:26-05-2026 ಸಾಯಂಕಾಲ 4.00 ಗಂಟೆಯವರೆಗೆ, 3.ಟೆಂಡರ ತೆರೆಯುವ ದಿನಾಂಕ: 27-05-2026 ಸಂಜೆ 4.30 ಘಂಟೆಗೆ ಮುಂದುವರೆದು (ಸಾಧ್ಯವಾದಲ್ಲಿ), 4.ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ & www.kppp.gov.in

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು,
ಸ.ನೀ ಮತ್ತು ಅಂ.ಅ.ಇ ವಿಭಾಗ, ಬೆಳಗಾವಿ.
DIPR/BGM/RO-NO-269/KSMCA/2026-27

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್
ದಿ ಫೇರ್ವೇ ಬಿಸಿನೆಸ್ ಪಾರ್ಕ್, ಮೊದಲ ಮಹಡಿ, #10/1, 11/2 & 12/2B ಆಫ್ ದೊಮ್ಮಲೂರು, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ಪಕ್ಕದಲ್ಲಿ, ಚಲ್ಲಘಟ್ಟ, ಬೆಂಗಳೂರು - 560071

ಅಸಾಧಾರಣ ಸಾಮಾನ್ಯ ಸಭೆಯು ಗುರುವಾರ, 11 ಜೂನ್ 2026 ರಂದು ವೀಡಿಯೊ ಕಾನ್ಫರೆನ್ಸ್ ಮೂಲಕ ನಡೆಯಲಿದೆ

1. ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ("ಬ್ಯಾಂಕ್") ನ ಅಸಾಧಾರಣ ಸಾಮಾನ್ಯ ಸಭೆ ("EGM") ಯನ್ನು, ಸಭೆಯ ನೋಟಿಸ್ನಲ್ಲಿ ನಿರ್ದಿಷ್ಟಪಡಿಸಲಾದ ವ್ಯವಹಾರಗಳನ್ನು ನಡೆಸುವ ಉದ್ದೇಶಕ್ಕಾಗಿ, ಭಾರತೀಯ ಷೇರುಪೇಟೆ ಮತ್ತು ವಿನಿಮಯ ಮಂಡಳಿ ("SEBI"), ಕಂಪನಿಗಳ ನೋಂದಣಾಧಿಕಾರಿ/ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹಾಗೂ ಇತರೆ ಅನ್ವಯವಾಗುವ ಕಾನೂನುಗಳು, ವೃತ್ತಪತ್ರಿಕೆಗಳು ಮತ್ತು ಕಾನೂನುಬದ್ಧ / ನಿಯಂತ್ರಣ ಪ್ರಾಧಿಕಾರಗಳು ಹೊರಡಿಸಿರುವ ಅಧಿಸೂಚನೆಗಳ ಅನುಸಾರವಾಗಿ, ವೀಡಿಯೊ ಕಾನ್ಫರೆನ್ಸ್ ಮೂಲಕ ನಡೆಸಲಾಗುವುದು ಎಂಬುದನ್ನು ಷೇರುದಾರರು ಗಮನಿಸಬಹುದು.
2. EGM ನ ದಿನಾಂಕ ಮತ್ತು ಸಮಯ: ಗುರುವಾರ, 11 ನೇ ಜೂನ್ 2026 ರಂದು ಬೆಳಿಗ್ಗೆ 11 ಗಂಟೆಗೆ (IST).
3. ಕಂಪನಿಗಳ ಕಾಯ್ದೆ, 2013 ರ ಕಲಂ 101 ಹಾಗೂ ಮೇಲ್ಕಂಡ ಸುತ್ತೋಲೆಗಳ ಅನ್ವಯ, EGM ಸೂಚನೆಯ ಎಲೆಕ್ಟ್ರಾನಿಕ್ ಪ್ರತಿಗಳನ್ನು ಬ್ಯಾಂಕ್/ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್/ಠೇವಣಿ ಭಾಗವಹಿಸುವವರ ಬಳಿ ನೋಂದಾಯಿಸಲಾದ ಇಮೇಲ್ ವಿಳಾಸಗಳನ್ನು ಹೊಂದಿರುವ ಎಲ್ಲಾ ಷೇರುದಾರರಿಗೆ ಕಳುಹಿಸಲಾಗುತ್ತದೆ. ಇದಲ್ಲದೆ, ಈ ಸೂಚನೆಯನ್ನು ಬ್ಯಾಂಕಿನ ವೆಬ್ಸೈಟ್ www.jana.bank.in ಮತ್ತು ಸ್ಟಾಕ್ ಎಕ್ಸ್ಚೇಂಜ್ಗಳ ವೆಬ್ಸೈಟ್ಗಳಾದ www.bseindia.com ಮತ್ತು www.nseindia.com ನಲ್ಲಿಯೂ ಲಭ್ಯವಾಗುವಂತೆ ಮಾಡಲಾಗುತ್ತದೆ.
4. ಷೇರುದಾರರು ತಮ್ಮ ಇಮೇಲ್ ಐಡಿ, ಮೊಬೈಲ್ ಸಂಖ್ಯೆ ಮತ್ತು ಬ್ಯಾಂಕ್ ಖಾತೆ ವಿವರಗಳನ್ನು ಈ ಕೆಳಗಿನ ರೀತಿಯಲ್ಲಿ ನವೀಕರಿಸಲು/ನೋಂದಣಿ ಮಾಡಲು ವಿನಂತಿಸಲಾಗಿದೆ:
   a. ಭೌತಿಕ ರೂಪದಲ್ಲಿ ಹೊಂದಿರುವ ಷೇರುಗಳಿಗೆ: ಅನ್ವಯಿಸುವುದಿಲ್ಲ, ಏಕೆಂದರೆ ಬ್ಯಾಂಕಿನಲ್ಲಿರುವ ಷೇರುದಾರರ 100% ಷೇರುಗಳು ಡಿಮ್ಯಾಟರೀಕೃತ ರೂಪದಲ್ಲಿವೆ.
   b. ಡಿಮೆಟೀರಿಯಲೈಸ್ಡ್ ರೂಪದಲ್ಲಿ ಹೊಂದಿರುವ ಷೇರುಗಳಿಗೆ: ಸಂಬಂಧಪಟ್ಟ ಠೇವಣಿ ಪಾಲ್ಗೊಳ್ಳುವವರೊಂದಿಗೆ ವಿವರಗಳನ್ನು ನವೀಕರಿಸುವ ಮೂಲಕ.
5. ಕಂಪನಿಗಳ ಕಾಯ್ದೆ 2013 ರ ಸೆಕ್ಷನ್ 107 ಮತ್ತು 108 ರ ನಿಬಂಧನೆಗಳ ಪ್ರಕಾರ, ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು 2014 ರ ನಿಯಮ 20 (ತಿದ್ದುಪಡಿದಂತೆ) ಮತ್ತು ಸೆಬಿ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು 2015 ರ ನಿಯಮ 44 (ತಿದ್ದುಪಡಿಯಂತೆ) ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿದ ಸುತ್ತೋಲೆಗಳ ಪ್ರಕಾರ, ಬ್ಯಾಂಕ್ ತನ್ನ ಷೇರುದಾರರಿಗೆ EGM ಸಮಯದಲ್ಲಿ ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ಮತ ಚಲಾಯಿಸುವ ಸೌಲಭ್ಯವನ್ನು ನೀಡಲು ಸಂತೋಷಪಡುತ್ತದೆ. EGM ಪೂರ್ವವಾಗಿ ರಿಮೋಟ್ ಇ-ಮತದಾನದ ಮೂಲಕವೂ ವ್ಯವಹಾರವನ್ನು ನಡೆಸಬಹುದು ಮತ್ತು ರಿಮೋಟ್ ಇ-ಮತದಾನದ ವೇಳಾಪಟ್ಟಿ ಈ ಕೆಳಗಿನಂತಿರುತ್ತದೆ:

ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ರಿಮೋಟ್ ಇ- ಮತದಾನ ಪ್ರಾರಂಭದ ದಿನಾಂಕ ಮತ್ತು ಸಮಯ	ಸೋಮವಾರ, 08ನೇ ಜೂನ್ 2026 ಬೆಳಿಗ್ಗೆ 09:00 ಗಂಟೆಗೆ
ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ರಿಮೋಟ್ ಇ- ಮತದಾನ ಮುಕ್ತಾಯದ ದಿನಾಂಕ ಮತ್ತು ಸಮಯ	ಬುಧವಾರ, 10ನೇ ಜೂನ್ 2026 ಸಂಜೆ 05:00 ಗಂಟೆಗೆ

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಪರವಾಗಿ
ಲಕ್ಷ್ಮಿ ಆರ್ ಎನ್
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣೆ ಅಧಿಕಾರಿ
ದಿನಾಂಕ: 18ನೇ ಮೇ 2026
ಸ್ಥಳ: ಬೆಂಗಳೂರು

ಕುರ್ಚಿ ಉಳಿಸಿಕೊಳ್ಳಲು ಸಮಾವೇಶ

ಬೆಂಗಳೂರು: ರಾಜ್ಯದ ಸಾಲ ಹೆಚ್ಚಳ ಮಾಡಿರುವುದೇ ಕಾಂಗ್ರೆಸ್ ಸರಕಾರದ ಸಾಧನೆಯಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದಲ್ಲಿ ಅತಿ ಹೆಚ್ಚು ಸಾಲ ಮಾಡಿರುವ ದಾಖಲೆ ಬರೆದಿದ್ದು, ಸಾಧನೆಯ ಸಮಾವೇಶದ ಬದಲು ಸಾಲದ ದಾಖಲೆ ಸಮಾವೇಶ ಮಾಡಿದರೆ ಹೆಚ್ಚು ಅರ್ಥಪೂರ್ಣ ವಾಗಿರುತ್ತದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟಿದ್ದಾರೆ.



ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಗ್ಯಾರಂಟಿ ಹೆಸರಿನಲ್ಲಿ ಆರಂಭದಿಂದಲೇ ವಿದ್ಯುತ್ ದರ, ಸ್ಟಾಂಪ್ ಡ್ಯೂಟಿ, ಪೆಟ್ರೋಲ್ ಡಿಸೇಲ್ ದರ, ನೀರಿನ ದರ ಹೆಚ್ಚಳ ಮಾಡಿಯೂ ರಾಜ್ಯದ ಸಾಲ ಹೆಚ್ಚಳ ಮಾಡಿರುವುದೇ ಸಾಧನೆಯಾಗಿದೆ.

ಸಿಎಂ ಸಿದ್ದರಾಮಯ್ಯ ಅವರು ರಾಜ್ಯದಲ್ಲಿ ಅತಿ ಹೆಚ್ಚು ಸಾಲ ಮಾಡಿರುವ ದಾಖಲೆ ಬರೆದಿದ್ದಾರೆ. ಮೂರು ವರ್ಷದಲ್ಲಿ ರಾಜ್ಯದಲ್ಲಿ ಬಡವರಿಗೆ ಒಂದೇ ಒಂದು ಹೊಸ ಮನೆ ನೀಡಿಲ್ಲ, ಹೊಸ ರಸ್ತೆ ನಿರ್ಮಾಣ ಮಾಡಿಲ್ಲ, ಆಸ್ಪತ್ರೆಗಳಲ್ಲಿ ವೈದ್ಯರಿಲ್ಲ, ಸರಕಾರಿ ಆಸ್ಪತ್ರೆಗಳಲ್ಲಿ ಔಷಧಿ ಸಿಗುತ್ತಿಲ್ಲ, ಹೊಸ ಶಾಲಾ ಕಟ್ಟಡ ನಿರ್ಮಾಣ ಮಾಡಿಲ್ಲ, ಶಾಲೆಗಳಲ್ಲಿ ಶಿಕ್ಷಕರಿಲ್ಲದೇ ವಿದ್ಯಾರ್ಥಿಗಳಿಗೆ ಸರಿಯಾದ ಶಿಕ್ಷಣ ದೊರೆಯುತ್ತಿಲ್ಲ. ರಾಜ್ಯದ ಖಜಾನೆ ಖಾಲಿ ಮಾಡಿರುವುದೇ ಈ ಸರಕಾರದ ಸಾಧನೆಯಾಗಿದೆ. ಎಂದಿದ್ದಾರೆ.

..ನಾಳೆ ಕೆಎಸ್‌ಆರ್‌ಟಿಸಿ ಸಂಚಾರ ಸ್ಥಗಿತ ಸಂಭವ

← ಮೊದಲಪುಟದಿಂದ

ಮುಷ್ಕರಕ್ಕೆ ಬೆಂಬಲವನ್ನೂ ಸೂಚಿಸುವಂತಿಲ್ಲ. ಬುಧವಾರ ಕೆಲಸಕ್ಕೆ ಹಾಜರಾಗದಿದ್ದರೆ ನೋ ವರ್ಕ್, ನೋ ಪೇ ಎಂದು ಸಿಬ್ಬಂದಿಗೆ ತಿಳಿಸಲಾಗಿದ್ದು, ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಆದೇಶಿಸ ಲಾಗಿದೆ. ಸಾರಿಗೆ ಸಂಸ್ಥೆಗಳು ಜನಸಾ ಮಾನ್ಯರಿಗೆ ಸಮರ್ಪಕವಾದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯಾಗಿದೆ. ಜವಾಬ್ದಾರಿಗೆ ಅನುಗುಣವಾಗಿ ಸರಕಾರ ಕರ್ನಾಟಕ ಅಗತ್ಯ ಸೇವಾ ನಿರ್ವಹಣೆ ಕಾಯಿದೆ -2013 (ಎಸ್ಮಾ) ಜಾರಿಗೊಳಿಸಿದೆ. ಹೀಗಾಗಿ ಸಾರಿಗೆ ನಿಗಮಗಳ ನೌಕರರು ಯಾವುದೇ ಮುಷ್ಕರ ಹೂಡುವಂತಿಲ್ಲ ಎಂದು ಆದೇಶ ಹೊರಡಿಸಿದೆ. ಇನ್ನು ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿ ಯಾವುದೇ ರೀತಿಯ ರಜೆ ಮಂಜೂರು ಮಾಡಬಾರದು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ.

..ದೇವೇಗೌಡರು ಮತ್ತೊಮ್ಮೆ ರಾಜ್ಯಸಭೆಗೆ?

← ಮೊದಲಪುಟದಿಂದ

ಸಾಧ್ಯವಾದಷ್ಟು ದಿನ ತಮ್ಮ ವ್ಹೀಲ್‌ಚೇರ್‌ನಲ್ಲೇ ಕುಳಿತು ಜನರ ಹಿತಾಸಕ್ತಿಗಾಗಿ ಹೋರಾಡಲು ಬಯಸುತ್ತೇನೆ ಎಂದು ಹೇಳಿದರು. 2028 ರ ಕರ್ನಾಟಕ ವಿಧಾನಸಭಾ ಚುನಾವಣೆಯ ಬಗ್ಗೆ ಕೇಳಿದಾಗ, ಪ್ರಾದೇಶಿಕ ಪಕ್ಷವಾಗಿ ಜೆಡಿಎಸ್ ಎನ್‌ಡಿಎನಲ್ಲಿ ಸಣ್ಣ ಮೈತ್ರಿ ಪಕ್ಷವಾಗಿದೆ. ಬಿಜೆಪಿ ಜೊತೆಗಿನ ಮೈತ್ರಿಯಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು.

ದಕ್ಷಿಣ ಭಾರತ ದಲ್ಲಿ ಈಗ ಕೇರಳ, ಕರ್ನಾಟಕ ಮತ್ತು ತೆಲಂಗಾಣದಲ್ಲಿ ಕಾಂಗ್ರೆಸ್ ತನ್ನದೇ ಆದ ಸರ್ಕಾರಗಳನ್ನು ಹೊಂದಿದೆ. ಭವಿಷ್ಯದಲ್ಲಿ ಏನಾಗುತ್ತದೆ ಎಂದು ನೋಡೋಣ, ನಾನು ಈಗ ಅದರ ಬಗ್ಗೆ ಮಾತ ನಾಡಲು ಬಯಸುವುದಿಲ್ಲ. ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ಶಿಸ್ತಿನ ಸಿಪಾಯಿಗಳಂತೆ ಪ್ರಾಮಾಣಿಕತೆಯಿಂದ ಪಕ್ಷವನ್ನು ಬಲಪಡಿಸುವತ್ತ ಕೆಲಸ ಮಾಡಬೇಕು ಎಂದು ಅವರು ಕರೆ ನೀಡಿದರು.

ಕೆಕೆಆರ್‌ಡಿಬಿ: 5000 ಕೋಟಿ ರು. ಕ್ರಿಯಾ ಯೋಜನೆಗೆ ಒಪ್ಪಿಗೆ

ಕಲಬುರಗಿ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ (ಕೆಕೆಆರ್‌ಡಿಬಿ) 2026-27ನೇ ಆರ್ಥಿಕ ಸಾಲಿಗೆ ರಾಜ್ಯ ಸರಕಾರದಿಂದ ಹಂಚಿಕೆಯಾದ 5,000 ಕೋಟಿ ರು. ಮೊತ್ತದ ಅನುದಾನಕ್ಕೆ ಕ್ರಿಯಾ ಯೋಜನೆ ರೂಪಿಸಲು ಸೋಮವಾರ ಜರುಗಿದ ಮಂಡಳಿ ಸಭೆಯಲ್ಲಿ ಸರ್ವಾನುಮತದ ನಿರ್ಣಯ ಕೈಗೊಳ್ಳಲಾಗಿದೆ.

ಮಂಡಳಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ವಲಯವಾರು ಅನುದಾನ ಹಂಚಿಕೆ ಹಾಗೂ ಪ್ರಮುಖ ಮೂಲ ಸೌಕರ್ಯ ಯೋಜನೆಗಳಿಗೆ ಅನುಮೋದನೆ ನೀಡಲಾಯಿತು.

ಒಟ್ಟು ನಿಧಿಯಲ್ಲಿ ಮೈಕ್ರೋ ಮತ್ತು ಮ್ಯಾಕ್ರೋ ಯೋಜನೆಗಳಿಗೆ 2,900 ಕೋಟಿ ಕಾಯ್ದಿರಿಸಲಾಗಿದ್ದು, ಇದರಲ್ಲಿ ಮೈಕ್ರೋಗೆ ಶೇ.70 ಮತ್ತು ಮ್ಯಾಕ್ರೋಗೆ ಶೇ.30ರಷ್ಟು ಬಳಸಲು ನಿರ್ಧರಿಸಲಾಗಿದೆ.

ಮೈಕ್ರೋ ಯೋಜನೆಯಡಿ ಸಾಂಸ್ಥಿಕ ವಲಯದ ಅಕ್ಷರ ಆವಿಷ್ಕಾರಕ್ಕೆ ಶೇ.25, ಇತರ ಸಾಂಸ್ಥಿಕ ವಲಯಕ್ಕೆ ಶೇ.15 ಹಾಗೂ ಮೂಲಭೂತ ಸೌಲಭ್ಯಗಳಿಗೆ ಶೇ.60 ಅನುದಾನ ನಿಗದಿಪಡಿಸಲಾಗಿದೆ.

ಇದೇ ಮೊದಲ ಬಾರಿಗೆ ಮ್ಯಾಕ್ರೋ ಯೋಜನೆಯಡಿ ಶೇ.40ರಷ್ಟು ಅನುದಾನವನ್ನು ಆರೋಗ್ಯ, ಶಿಕ್ಷಣ ಹಾಗೂ ಅಪೌಷ್ಟಿಕತೆ ನಿವಾರಣೆಗೆ ಮೀಸಲಿಡಲಾಗಿದೆ.

ಇನ್ನುಳಿದಂತೆ ಬಜೆಟ್ ಯೋಜನೆಗಳಿಗೆ 1,500 ಕೋಟಿ, ಉನ್ನತ ಶಿಕ್ಷಣಕ್ಕೆ 100 ಕೋಟಿ, ಮುಖ್ಯಮಂತ್ರಿ ಹಾಗೂ ಅಧ್ಯಕ್ಷರ ವಿವೇಚನಾ ನಿಧಿಗೆ 450 ಕೋಟಿ ಮತ್ತು ಆಡಳಿತಾತ್ಮಕ ವೆಚ್ಚಕ್ಕೆ 50 ಕೋಟಿ ನಿಗದಿ ಮಾಡಲಾಗಿದೆ.

ಗ್ಯಾರಂಟಿ ಸರಕಾರಕ್ಕೆ ಮೂರರ ಸಂಭ್ರಮ

← ಮೊದಲಪುಟದಿಂದ

ಕಂದಾಯ ಇಲಾಖೆಯಲ್ಲಿ ಆಗಿರುವ ಪೌತಿ ಖಾತೆ ಮತ್ತು ಪೋಡಿ ದುರಸ್ತಿಯಂತಹ ಅಭಿವೃದ್ಧಿಯನ್ನು ಈ ಸಮಾವೇಶದಲ್ಲಿ ಅನಾವರಣಗೊಳಿಸಿ, ಫಲಾನುಭವಿಗಳಿಗೆ ಹಕ್ಕುಪತ್ರ ಸವಲತ್ತುಗಳನ್ನು ನೀಡುವ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಈ ಸಾಧನೆಯಲ್ಲಿ ತುಮಕೂರು ಜಿಲ್ಲೆ ರಾಜ್ಯದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. ಇಲಾಖೆಯ ಈ ಸಾಧನೆ ಗಿನ್ನಿಸ್ ವರ್ಲ್ಡ್ ಬುಕ್ ಆಫ್ ರೆಕಾರ್ಡ್ ದಾಖಲೆ ಸೇರಿದ್ದು, ಇದೇ ಕಾರ್ಯಕ್ರಮದಲ್ಲಿ ಸಾಧನೆಯ ಪ್ರಶಸ್ತಿಯನ್ನು ಗಿನ್ನಿಸ್ ಸಂಸ್ಥೆಯವರು ಪ್ರದಾನ ಮಾಡಲಿದ್ದಾರೆ ಎಂದು ಹೇಳಲಾಗುತ್ತಿದೆ. ತುಮಕೂರು ನಗರಕ್ಕೆ ಇತರ ತಾಲೂಕುಗಳಿಂದ ಫಲಾನುಭವಿಗಳನ್ನು ಕರೆತರಲು ಸರಕಾರಿ, ಖಾಸಗಿ ಸೇರಿ ಸುಮಾರು 3,000 ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ.

ನುಡಿದಂತೆ ನಡೆದ ಸರಕಾರ: 2023ರ ಮೇ 10ರಂದು ನಡೆದ ಚುನಾವಣೆಯಲ್ಲಿ ಭರ್ಜರಿ ಬಹುಮತದೊಂದಿಗೆ ಸರಕಾರದ ಗದ್ದುಯನ್ನು ಕಾಂಗ್ರೆಸ್ ಹಿಡಿದಿತ್ತು. ಮೇ 20ರಂದು ಸಿಎಂ ಆಗಿ ಸಿದ್ದರಾಮಯ್ಯ, ಡಿಸಿಎಂ ಆಗಿ ಡಿ.ಕೆ. ಶಿವಕುಮಾರ್ ಅಧಿಕಾರ ಸ್ವೀಕರಿಸಿದರು. ಅಧಿಕಾರಕ್ಕೆ ಬರುತ್ತಿದ್ದಂತೆ ಬಹುತೇಕರು ಅಸಾಧ್ಯವೆಂದೇ ಪರಿಗಣಿಸಿದ್ದ ಪಂಚಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದರು. ಹಲವು ಗೊಂದಲದ ಹೊರತಾಗಿಯೂ ಇತರೆ ರಾಜ್ಯಗಳಿಗೂ ಮಾದರಿ ಎನಿಸಿದ ಪಂಚಗ್ಯಾರಂಟಿ ಯೋಜನೆಗಳು ಕೇವಲ ಜನಪ್ರಿಯ ಯೋಜನೆಯಾಗಿ ಉಳಿಯದೇ, ಬಡವರಿಗೆ ಆರ್ಥಿಕ ಸುಭದ್ರತೆ ನೀಡುವಲ್ಲಿ ಪ್ರಮುಖ ಪಾತ್ರವಹಿಸಿತ್ತು. ಗ್ಯಾರಂಟಿ ಯೋಜನೆಗಳು ಗ್ರಾಮೀಣ ಮತ್ತು ನಗರ ಪ್ರದೇಶಗಳ ಆರ್ಥಿಕ ಚಟುವಟಿಕೆಗಳಿಗೆ ಹೊಸ ಚೈತನ್ಯವನ್ನು ತುಂಬಿವೆ ಎನ್ನುವುದು ಸಾರ್ವಜನಿಕರ ಮಾತಾಗಿದೆ.

ಗ್ಯಾರಂಟಿ ಯೋಜನೆಗಳ ಹೊರತಾಗಿ ಹತ್ತು ಹಲವು ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ನುಡಿದಂತೆ ನಡೆದ ಸರಕಾರ ಎನಿಸಿಕೊಂಡಿದೆ. ಚುನಾವಣಾ ಪೂರ್ವದಲ್ಲಿ ನೀಡಿದ್ದ ಭ ರವಸೆಗಳನ್ನು ಜಾರಿಗೊಳಿಸುವ ಜತೆಗೆ ಹಲವು ಹೊಸ ಯೋಜನೆಗಳನ್ನು ಜಾರಿಗೊಳಿಸಿದೆ. ಪ್ರಮುಖವಾಗಿ, ಸಾಮಾಜಿಕ ನ್ಯಾಯದ ಭಾಗವಾಗಿ ಪರಿಶಿಷ್ಟ ಜಾತಿಗಳ ಒಳ ಮೀಸಲು ಮರ್ಯಾದಾ ಹತ್ಯೆಗೆ ತಡೆಹಾಕುವ ಪ್ರಯತ್ನ, ಅಂತರ್ಜಲ ನಿಯಂತ್ರಣ ಕಾಯಿದೆಗೆ ತಿದ್ದುಪಡಿ ತಂದು, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಗೆ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೊಳಿಸಿದೆ.

ಸಮಾಚಾರ ಸಣ್ಣದಲ್ಲ

ಕಲಬುರಗಿ: ಸಿಡಿಲಿಗೆ ರೈತ, 25 ಮೇಕೆ ಬಲಿ

ಕಲಬುರಗಿ: ಸೇಡಂ ತಾಲೂಕಿನ ವಿವಿಧೆಡೆ ಭಾನುವಾರ ರಾತ್ರಿ ಮಳೆಯಾಗಿದ್ದು ಸಿಡಿಲಿಗೆ 25 ಮೇಕೆ ಮತ್ತು ಒಬ್ಬ ರೈತ ಮೃತಪಟ್ಟ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ತಾಲೂಕಿನ ಕೋನಾಪು ಗ್ರಾಮದ ನರಸಪ್ಪ ಪೂಜಾರಿ(40) ಮೃತರು. ಹೊಲದಲ್ಲಿದ್ದ ಶೇಂಗಾ ಬೆಳೆಯಲ್ಲಿ ಕೆಲಸ ಮಾಡಲು ತೆರಳಿದ್ದರು. ಆಗ ಮಳೆ ಸುರಿಯಲಾರಂಭಿಸಿದಾಗ ಆಶ್ರಯಕ್ಕೆಂದು ಗಿಡದ ಕೆಳಗೆ ಆಶ್ರಯ ಪಡೆದಿದ್ದಾರೆ. ಅದೇ ಸಂದರ್ಭದಲ್ಲಿ ಸಿಡಿಲು ಬಡಿದು, ಮೃತಪಟ್ಟಿದ್ದಾರೆ. ಅಲ್ಲದೆ ತಾಲೂಕಿನ ಪಿಲ್ಲಿಗುಂಟಾ ತಾಂಡಾದಲ್ಲಿ ಮಳೆಯಲ್ಲಿನ ಸಿಡಿಲಿಗೆ 25 ಆಡುಗಳು ಮೃತಪಟ್ಟಿವೆ. ಪಿಲ್ಲಿಗುಂಟಾ ತಾಂಡಾದ ಹೀರಾ ನಾಯಕ ಅವರಿಗೆ ಸೇರಿದ 14, ದೇವ್ಲಾನಾಯಕ ಅವರಿಗೆ ಸೇರಿದ 8 ಹಾಗೂ ಬಿಕ್ಯಾನಾಯಕ ಅವರಿಗೆ ಸೇರಿದ 3 ಆಡು ಸೇರಿದಂತೆ ಒಟ್ಟು 25 ಮೇಕೆಗಳು ಮೃತಪಟ್ಟಿವೆ.

ಸೈಕಲ್ ತುಳಿಯಲು ಕಾರಣ ಯಾರು?

ಕಲಬುರಗಿ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸೇರಿ ಬಿಜೆಪಿ ಸಚಿವರು, ನಾಯಕರು ಮೆಟ್ರೊ ರೈಲು, ಸೈಕಲ್ ಹಾಗೂ ಸಾರ್ವಜನಿಕ ಸಾರಿಗೆ ಬಳಸುತ್ತಿದ್ದಾರೆ. ಈ ಪರಿಸ್ಥಿತಿಗೆ ಯಾರು ಕಾರಣ? ಎಂದು ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಸುದ್ದಿಗಾರ ರೊಂದಿಗೆ ಮಾತನಾಡಿ, ಬಿಜೆಪಿ ನಾಯಕರು ಸಾರ್ವಜನಿಕ ಸಾರಿಗೆ ಗಳನ್ನು ಬಳಸಿ, ಅದರ ರೀಲ್ಸ್ ಮಾಡಿದಾಕ್ಷಣ ಪೆಟ್ರೋಲ್, ಡೀಸೆಲ್ ದರ ಏರಿಕೆಯಿಂದ ಜನಸಾಮಾನ್ಯರಿಗೆ ಆಗುತ್ತಿರುವ ತೊಂದರೆ ನೀಗುತ್ತದೆಯೇ? ಪ್ರಧಾನಿ ಮೋದಿ ಅವರ ಈತನಕ ವಿದೇಶಿ ಯಾತ್ರೆಗೆ 850 ಕೋಟಿ ವೆಚ್ಚವಾಗಿದೆ. ಸ್ವಯಂ ಘೋಷಿತ ವಿಶ್ವಗುರುವಿನಪಟ್ಟದ ಹೊರತು ಭಾರತ ಜನತೆಗೆ ಸಿಕ್ಕಿದ್ದೇನು? ಆತ್ಮನಿರ್ಭರ ಭಾರತ ಘೋಷಣೆ ಏನಾಯಿತು? ಭಾರತ ಇಂಧನದಲ್ಲಿ ಸ್ವಾವಲಂಬಿತನ ಸಾಧಿಸಿತೇ? ದೇಶ ಕಷ್ಟದ ಸ್ಥಿತಿಯಲ್ಲಿದ್ದಾಗ ಮೋದಿ ವಿದೇಶಕ್ಕೆ ಹೋಗುತ್ತಾರೆ. ಆರ್ಥಿಕ ಸ್ಥಿತಿಗತಿ, ಪೆಟ್ರೊಲಿಯಂ ಉತ್ಪನ್ನಗಳ ಬೆಲೆ ಏರಿಕೆಗೆ ಕಾರಣಗಳನ್ನು ಸಂಸತ್ತಿನಲ್ಲೇ ಹೇಳಬೇಕಿತ್ತು. ಅದಕ್ಕಾಗಿ ನೆದರ್‌ಲ್ಯಾಂಡ್ಸ್‌ಗೆ ಯಾಕೆ ಹೋಗಬೇಕಿತ್ತು? ಎಂದು ಪ್ರಶ್ನಿಸಿದರು.

ಸಿಎಂ, ಸಂಪುಟ ರಚನೆ ಬಗ್ಗೆ ಮಾತನಾಡಲ್ಲ

ಕೊಪ್ಪಳ: ಪಕ್ಷದ ಶಿಸ್ತಿನ ಸಿಪಾಯಿ ನಾನು. ನೀಡಿದ ಜವಾಬ್ದಾರಿಯನ್ನು ನಿರ್ವಹಿಸುವುದು ನನ್ನ ಕರ್ತವ್ಯ. ಸಿಎಂ ಬದಲಾವಣೆ, ಸಂಪುಟ ಪುನರ್ ರಚನೆ ಬಗ್ಗೆ ಮಾತನಾಡಲಾರೆ. ಸಿಎಂ ವಿಚಾರ ಪಕ್ಷದ ಹಿರಿಯರಾದ ರಾಯರಡ್ಡಿಗೆ ಹೇಳಿಕೆ ನೀಡುವ ಶಕ್ತಿ, ಸಾಮರ್ಥ್ಯ ಇದೆ ಎಂದು ಸಚಿವ ಶಿವರಾಜ ತಂಗಡಗಿ ಹೇಳಿದರು.

ಸುದ್ದಿಗಾರ ರೊಂದಿಗೆ ಮಾತನಾಡಿ, ಪುನಾರಚನೆ ಬಳಿಕ ಸಚಿವ ಸ್ಥಾನ ಹೋದರೂ ಪಕ್ಷದ ಶಿಸ್ತಿನ ಸಿಪಾಯಿಯಾಗಿರುವೆ. ಸೈಕಲ್ ಮೇಲೆ ಓಡಾಡುವುದು ದೇಶಭಕ್ತಿಯಲ್ಲ. ಇದು ದೇಶದ ಆರ್ಥಿಕ ಸ್ಥಿತಿ ಹಳ್ಳ ಹಿಡಿದಿದೆ ಎಂಬುದಕ್ಕೆ ಕೈಗನ್ನಡಿಯಾಗಿದೆ. ಸಂಸದ ಸುಬ್ರಹ್ಮಣ್ಯಸ್ವಾಮಿ ದೇಶದಲ್ಲಿಯ ಇಂದಿನ ಸಮಸ್ಯೆ ಯುದ್ಧದಿಂದಾಗಿಲ್ಲ, ಒಬ್ಬ ಪೆದ್ದನಿಂದಾಗಿದೆ ಎಂದೇ ಹೇಳಿದ್ದಾರೆ. ಯುದ್ಧ ಪ್ರಾರಂಭವಾಗಿ 4 ತಿಂಗಳು ಕಳೆದಿದೆ. ಆದರೆ, ಈ ದೇಶದ ಆರ್ಥಿಕ ಪರಿಸ್ಥಿತಿ ಏನಾಗಿದೆ ಎನ್ನುವುದನ್ನು ತಿಳಿದುಕೊಳ್ಳಿರಿ. ಪ್ರಧಾನಿ ಮೋದಿ ಕರೆ ನೀಡುತ್ತ, ಬಂಗಾರದ ದರ ಹೆಚ್ಚಾಗಿದೆ. ಬಂಗಾರ ಖರೀದಿಸಬೇಡಿ. ಪೆಟ್ರೋಲ್, ಡೀಸೆಲ್ ದರ ಏರುತ್ತದೆ. ಸೈಕಲ್ ಮೇಲೆ ಓಡಾಡಿ ಎಂದಿರುವ ಅವರು ಗ್ಯಾಸ್ ದರ ಹೆಚ್ಚಾಗುತ್ತದೆ. ಸೌದೆ ಒಲೆ ಹಚ್ಚಿ ಎಂದು ಹೇಳುವುದು ಮರೆತಂತಿದೆ. ಇದನ್ನೇ ಬಿಜೆಪಿ ನಾಯಕರು ಸಮರ್ಥಿಸುವುದು ನಾಚಿಕೆ ಗೇಡಿನ ಸಂಗತಿ. ಅಧೋಗತಿಗೆ ಇಳಿದಿರುವ ದೇಶದ ಪರಿಸ್ಥಿತಿಯನ್ನು ಸುಧಾರಿಸಲು ಕಾರ್ಯತಂತ್ರ ರೂಪಿಸಲು ಪ್ರಧಾನಿ ಮುಂದಾಗಬೇಕು. ಇಲ್ಲವೇ ಹುದ್ದೆ ತ್ಯಜಿಸಿ, ಸಮರ್ಥರಿಗೆ ಅವಕಾಶ ನೀಡಬೇಕು ಎಂದು ಹೇಳಿದರು.

ವಿಶ್ವವಾಣಿ ಕ್ಲಬ್ ಹೌಸ್
19.05.2026
ಸಂಜೆ: 06.55 ರಿಂದ 08.05 ರವರೆಗೆ

ಮಂಗಳವಾರದ ಅತಿಥಿ
ಶ್ರೀಮತಿ ಚಂದ್ರಕಲಾ
ವಿಷಯ
ಎಷ್ಟಿದೆ ಮಕ್ಕಳ ಗಮನ?
vishwavani.news

{ ಈಶ್ವರ ಖಂಡ್ರೆ } ಅರಣ್ಯ ಸಚಿವ

ತನ್ನ ವೈಫಲ್ಯ ಮುಚ್ಚಿಕೊಳ್ಳಲು ಮೋದಿ ಸರಕಾರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ಮಾಡಿದೆ. ಚಿನ್ನ ಖರೀದಿ ಮಾಡಬೇಡಿ ಎಂದು ಮೋದಿ ಜನರಿಗೆ ಕರೆ ಕೊಡುತ್ತಾರೆ. ನೀಟ್ ಅಕ್ರಮ ಬಗ್ಗೆ ಮೋದಿ ಯಾಕೆ ಮಾತನಾಡುವುದಿಲ್ಲ? 22 ಲಕ್ಷ ವಿದ್ಯಾರ್ಥಿಗಳ ಭವಿಷ್ಯ ಹಾಳಾಗಿದೆ. ಇದಕ್ಕೆ ಯಾರು ಕಾರಣ? ಸಚಿವ ಧರ್ಮೆಂದ್ರ ಪ್ರಧಾನ್ ಅವರನ್ನು ಇನ್ನೂ ಸಚಿವರಾಗಿ ಮುಂದುವರಿಸಿದ್ದಾರೆ ಯಾಕೆ?

ತುಮಕೂರಿನಲ್ಲಿ ಇಂದು ಸಾಧನಾ ಸಮಾವೇಶ

ಸರಕಾರಕ್ಕೆ 3 ವರ್ಷ ತುಂಬಿದ ಹಿನ್ನೆಲೆಯಲ್ಲಿ ಬೃಹತ್ ಕಾರ್ಯಕ್ರಮ | 1,52,492 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮತ್ತು ಕಂದಾಯ ಸಚಿವ ಕೃಷ್ಣಭೈರೇಗೌಡ ಅವರು ಕಾರ್ಯಕ್ರಮದ ಸ್ಥಳ ವೀಕ್ಷಣೆ ಮಾಡಿದರು. ಸಾಧನಾ ಸಮಾವೇಶ ನಡೆಯುವ ಸ್ಥಳದ ಭದ್ರತೆಯನ್ನು ಪೊಲೀಸರು ಪರಿಶೀಲಿಸಿದರು. ಫಲಾನುಭವಿಗಳಿಗಾಗಿ ಸಿದ್ಧಗೊಂಡಿರುವ ಕುರ್ಚಿಗಳು.

ತುಮಕೂರು: ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದು ಮೂರು ವರ್ಷ ಪೂರ್ಣಗೊಳ್ಳುತ್ತಿರುವ ನೆನಪಿಗಾಗಿ ಮೇ 19ರಂದು ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಹಮ್ಮಿಕೊಂಡಿರುವ ಸೇವೆಗಳ ಸಮರ್ಪಣೆ ಕಾರ್ಯಕ್ರಮಕ್ಕೆ ಸಕಲ ಸಿದ್ಧತೆ ಮಾಡಲಾಗಿದೆ.

ಸಮಾವೇಶಕ್ಕೆ ಸುಮಾರು 2 ಲಕ್ಷಕ್ಕೂ ಹೆಚ್ಚು ಫಲಾನುಭವಿಗಳು ಆಗಮಿಸುವ ನಿರೀಕ್ಷೆಯಿದ್ದು, ಫಲಾನುಭವಿಗಳನ್ನು ಕಾರ್ಯಕ್ರಮಕ್ಕೆ ಕರೆತರಲು ಸಂಬಂಧಿಸಿದ ತಾಲೂಕು ಆಡಳಿತ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸೂಚಿಸಿದ್ದಾರೆ. ಆಯಾ ತಾಲೂಕುಗಳಿಂದ ಫಲಾನುಭವಿಗಳು ಹೊರಡುವ ಜಾಗದಲ್ಲಿಯೇ ಬೆಳಗಿನ ಉಪಾಹಾರ ವ್ಯವಸ್ಥೆ ಮಾಡಬೇಕು. ಈ ಸಂಬಂಧ ಫಲಾನುಭವಿಗಳ ಸುರಕ್ಷತೆ ಹಾಗೂ ಉಪಚಾರದಲ್ಲಿ ಯಾವುದೇ ಕೊರತೆ ಆಗಬಾರದು. ಮೇ 19ರಂದು ಹಮ್ಮಿಕೊಂಡಿರುವ ಸಮಾವೇಶದಲ್ಲಿ ಭಾಗವಹಿಸುವ ಎಲ್ಲ ಫಲಾನುಭವಿಗಳಿಗೂ ಸವಲತ್ತುಗಳನ್ನು ಅಂದೇ ಕಡ್ಡಾಯವಾಗಿ ವಿತರಿಸಬೇಕು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಜಿಲ್ಲಾಡಳಿತಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

3,000 ಬಸ್ ವ್ಯವಸ್ಥೆ: ತುಮಕೂರು ನಗರಕ್ಕೆ ಜಿಲ್ಲೆಯ ಇತರ ತಾಲೂಕುಗಳಿಂದ ಫಲಾನುಭವಿಗಳನ್ನು ಕರೆತರಲು ಸರಕಾರಿ, ಖಾಸಗಿ ಸೇರಿ ಸುಮಾರು 3,000 ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ.

ಗಿನ್ನಿಸ್ ದಾಖಲೆ

ಸಾರ್ಥಕ ಸೇವೆಯ ಸಮರ್ಪಣೆ ಕಾರ್ಯಕ್ರಮದಲ್ಲಿ ಜಿಲ್ಲೆಯ 1,52,492 ಫಲಾನುಭವಿಗಳಿಗೆ ಅನುಕೂಲವಾಗಲಿದೆ. ಕಂದಾಯ ಇಲಾಖೆಯಲ್ಲಿ ಆಗಿರುವ ಪೌತಿ ಖಾತೆ ಮತ್ತು ಪೋಡಿ ದುರಸ್ತಿಯಂತಹ ಕಂದಾಯ ಇಲಾಖೆಯಲ್ಲಾಗಿರುವ ಅಭಿವೃದ್ಧಿಯನ್ನು ಈ ಸಮಾವೇಶದಲ್ಲಿ ಫಲಾನುಭವಿಗಳಿಗೆ ಹಕ್ಕುಪತ್ರ ಸವಲತ್ತುಗಳನ್ನು ನೀಡುವ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಈ ಸಾಧನೆಯಲ್ಲಿ ತುಮಕೂರು ಜಿಲ್ಲೆ ರಾಜ್ಯದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. ಈ ಸಾಧನೆಗಾಗಿ ಗಿನ್ನಿಸ್ ವರ್ಲ್ಡ್ ಬುಕ್ ಆಫ್ ರೆಕಾರ್ಡ್ ದಾಖಲೆ ಸೇರಿದ್ದು, ಇದೇ ಕಾರ್ಯಕ್ರಮದಲ್ಲಿ ಸಾಧನೆಯ ಪ್ರಶಸ್ತಿಯನ್ನು ಗಿನ್ನಿಸ್ ಸಂಸ್ಥೆಯವರು ಪ್ರದಾನ ಮಾಡಲಿದ್ದಾರೆ.

ಫಲಾನುಭವಿಗಳು ದೂರದಿಂದ ಕಾರ್ಯಕ್ರಮ ನಡೆಯುವ ಜಾಗಕ್ಕೆ ನಡೆದುಕೊಂಡು ಬರಲು ಅವಕಾಶ ನೀಡದೆ ಕಾರ್ಯಕ್ರಮದ ಜಾಗದಲ್ಲಿಯೇ ಬಸ್‌ಗಳನ್ನು ನಿಲ್ಲಿಸುವ ವ್ಯವಸ್ಥೆ ಮಾಡಲಾಗಿದೆ. ಕಾರ್ಯಕ್ರಮ ಮುಗಿದ ಬಳಿಕ ಫಲಾನುಭವಿಗಳನ್ನು ಕರೆದೊಯ್ಯಲು ವ್ಯವಸ್ಥೆ ಮಾಡಲಾಗಿದೆ.

- 2 ಲಕ್ಷಕ್ಕೂ ಹೆಚ್ಚು ಫಲಾನುಭವಿಗಳು ಆಗಮಿಸುವ ನಿರೀಕ್ಷೆ
- ಫಲಾನುಭವಿಗಳಿಗೆ ಉಪಾಹಾರ, ಸಾರಿಗೆ ವ್ಯವಸ್ಥೆ
- ಸಂಚಾರ ದಟ್ಟಣೆಯಾಗದಂತೆ ಸೂಕ್ತ ವ್ಯವಸ್ಥೆ
- ಫಲಾನುಭವಿಗಳಿಗೆ ನೀರು, ಮಜ್ಜಿಗೆ ಪೂರೈಕೆ ವ್ಯವಸ್ಥೆ

ರಾಜ್ಯ ಸರಕಾರದ ಮೂರು ವರ್ಷಗಳ ಸಾಧನಾ ಸಮಾವೇಶ ತುಮಕೂರಿನಲ್ಲಿ ಮಂಗಳವಾರ ನಡೆಯಲಿದೆ. ಈ ಸಮಾವೇಶದಲ್ಲಿ 1.52 ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ ಕೊಡುತ್ತಿದ್ದೇವೆ. ರಾಜ್ಯದಲ್ಲಿ ನಮ್ಮ ಸರಕಾರ ಬಂದು ಮೂರು ವರ್ಷಗಳಾಯಿತು. ಸರಕಾರ ಬಂದಾಗ ಅನೇಕ ಭರವಸೆಗಳನ್ನು ಕೊಟ್ಟಿದ್ದೆವು. ಈ ಮೂರು ವರ್ಷದಲ್ಲಿ ಏನೇನು ಈಡೇರಿಸಿದ್ದೇವೆಂದು ಈ ಸಮಾವೇಶದಲ್ಲಿ ತಿಳಿಸುತ್ತೇವೆ.

-ಡಾ.ಜಿ.ಪರಮೇಶ್ವರ್ ಗೃಹ ಸಚಿವ

ತುಮಕೂರು ನಗರದಲ್ಲಿ ವಾಹನ ಸಂಚಾರ ಅಥವಾ ವಾಹನಗಳ ನಿಲುಗಡೆಗೆ ಸ್ಥಳಾವಕಾಶದ ಕೊರತೆ ನೀಗಿಸುವ ನಿಟ್ಟಿನಲ್ಲಿ ಜಿಲ್ಲಾ ಪೊಲೀಸ್ ಇಲಾಖೆಯಿಂದ ಸೂಕ್ತ ನಿಲುಗಡೆ ಪ್ರದೇಶ ಗುರುತಿಸಿ ನಿರ್ದಿಷ್ಟ ತಾಲೂಕುಗಳ ವಾಹನಗಳು ನಿರ್ದಿಷ್ಟ ನಿಲುಗಡೆಯಲ್ಲಿಯೇ ನಿಲ್ಲುವಂತೆ ವ್ಯವಸ್ಥೆ ಮಾಡಲಾಗಿದೆ.

ತುಮುಲ್ ವತಿಯಿಂದ ಮಜ್ಜಿಗೆ ವಿತರಣೆ: ಕಾರ್ಯಕ್ರಮದಲ್ಲಿ ಭಾಗವಹಿಸುವ ಫಲಾನುಭವಿಗಳಿಗೆ ತುಮುಲ್ ವತಿಯಿಂದ ಮಜ್ಜಿಗೆ, ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ. ಅಲ್ಲದೆ, ಫಲಾನುಭವಿಗಳು ಸುಲಭವಾಗಿ ತಮ್ಮ ಜಾಗಕ್ಕೆ ಹೋಗಿ ಕುಳಿತುಕೊಳ್ಳಲು ಅಥವಾ ನೀರು ಕುಡಿಯಲು ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿದೆ. ತುಮಕೂರು ಮಹಾನಗರ ಪಾಲಿಕೆ ವತಿಯಿಂದ ನಗರದ ಸ್ವಚ್ಛತೆ ಹಾಗೂ ಸುಂದರವಾಗಿ ಕಾಣಿಸಲು ವ್ಯವಸ್ಥೆ ಕೈಗೊಳ್ಳಲಾಗಿದೆ. ಕಾರ್ಯಕ್ರಮಕ್ಕೆ ಲಕ್ಷಾಂತರ ಮಂದಿ ಫಲಾನುಭವಿಗಳು ಆಗಮಿಸುವುದರಿಂದ ಅವರಿಗೆ ಸೂಕ್ತ ರೀತಿಯ ಸಂಚಾರಿ ಶೌಚಾಲಯ ವ್ಯವಸ್ಥೆಯನ್ನು ಜಿಲ್ಲಾಡಳಿತ ಕಲ್ಪಿಸಿದೆ.

ಸಚಿವ ಸಂಪುಟಕ್ಕೆ ವಿಶೇಷ ಆತಿಥ್ಯ: ಕಾರ್ಯಕ್ರಮಕ್ಕಾಗಿ ಸಚಿವ ಸಂಪುಟದ ಎಲ್ಲ ಸಚಿವರು, ಹಿರಿಯ ಅಧಿಕಾರಿಗಳು ಆಗಮಿಸುವುದರಿಂದ ಯಾವುದೇ ಕೊರತೆಯಾಗದಂತೆ ಅವರಿಗೆ ಆತಿಥ್ಯದ ವ್ಯವಸ್ಥೆ ಮಾಡಲಾಗಿದೆ. ಯಾವುದೇ ಕೊರತೆಯಿಲ್ಲದಂತೆ ಅತ್ಯಂತ ಶಿಸ್ತುಬದ್ಧವಾಗಿ ಗೊಂದಲಗಳಿಗೆ ಆಸ್ಪದ ನೀಡದಂತೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಎಲ್ಲ ಅಧಿಕಾರಿಗಳು ಶ್ರಮಿಸಬೇಕು ಎಂದು ಸಚಿವ ಪರಮೇಶ್ವರ್ ನಿರ್ದೇಶನ ನೀಡಿದ್ದಾರೆ.

ಶಿವಾನಂದ ನೀಲಣ್ಣನವರ ಹತ್ತು ದಿನ ಸಿಐಡಿ ಕಸ್ಟಡಿಗೆ

ಬೆಳಗಾವಿ: ಆರ್‌ಬಿಐ ನಿಯಮ ಗಾಳಿಗೆ ತೂರಿ ಕೋಟ್ಯಂತರ ರು. ಠೇವಣಿ ಮಾಡಿಕೊಂಡ ಆರೋಪದ ಮೇಲೆ ಬಂಧನಕ್ಕೊಳಗಾದ ಶಿವಂ ಅಸೋಸಿಯೇಟ್ಸ್ ಮಾಲೀಕ ಶಿವಾನಂದ ನೀಲಣ್ಣನವರನ್ನು 10 ದಿನಗಳ ಕಾಲ ಸಿಐಡಿ ವಶಕ್ಕೆ ನೀಡಿ ಎರಡನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ ಆದೇಶ ಹೊರಡಿಸಿದೆ.

35 ಸಾವಿರ ಜನರಿಂದ ಸಾವಿರಾರು ಕೋಟಿ ರು. ಹಣ ಹೂಡಿಕೆ ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿಚಾರಣೆ ನಡೆಸಲು ಆರೋಪಿಯನ್ನು ಕಸ್ಟಡಿಗೆ ನೀಡುವಂತೆ ಸಿಐಡಿ ಸೋಮವಾರ ನ್ಯಾಯಾಲಯದಲ್ಲಿ ಮನವಿ ಮಾಡಿತ್ತು. ಸಿಐಡಿ ಪರ ವಕೀಲರ ವಾದ ಆಲಿಸಿದ ಎರಡನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ಜಡ್ಜ್ ಗಂಗಾಧರ ಅವರು ಆರೋಪಿ ಶಿವಾನಂದ ನೀಲಣ್ಣನವರನನ್ನು 10 ದಿನಗಳ ವರೆಗೆ ಸಿಐಡಿ ವಶಕ್ಕೆ ನೀಡಿದೆ.

ಇದೊಂದು ಅಂತಾರಾಜ್ಯದಲ್ಲಿ ನಡೆದ ಹಣಕಾಸಿನ ಅವ್ಯವಹಾರವಾಗಿದ್ದು, ಸಮಗ್ರ ತನಿಖೆ ನಡೆಸಬೇಕಾಗುತ್ತದೆ. ಆರೋಪಿಯನ್ನು ಬೆಂಗಳೂರಿಗೆ ಕರೆದೊಯ್ಯುವ ಅವಶ್ಯಕತೆ ಇದೆ. ಜತೆಗೆ 35 ಸಾವಿರಕ್ಕೂ ಅಧಿಕ ಜನರಿಂದ ಕೋಟ್ಯಂತರ ಹಣವನ್ನು ಆರೋಪಿ ಪಡೆದಿದ್ದು, ವಿಚಾರಣೆಗಾಗಿ ಹತ್ತು ದಿನ ಕಸ್ಟಡಿಗೆ ನೀಡುವಂತೆ ಸಿಐಡಿ ಪರ ವಕೀಲರು ಕೋರ್ಟ್‌ನಲ್ಲಿ ವಾದ ಮಂಡಿಸಿದ್ದರು.

ಈ ಸಂದರ್ಭದಲ್ಲಿ ತನಗೆ ಬಿಪಿ ಇದೆ ಎಂದು ಶಿವಾನಂದ ನೀಲಣ್ಣನವರ ನ್ಯಾಯಾಧೀಶರ ಮುಂದೆ ಹೇಳಿಕೊಂಡರು. ಈ ವೇಳೆ ನ್ಯಾಯಾಧೀಶರು ನೀಲಣ್ಣನವರಗೆ ವೈದ್ಯಕೀಯ ಸೌಲಭ್ಯ ಹಾಗೂ ಅವರಿಗೆ ಭದ್ರತೆ ನೀಡುವಂತೆ ಸಿಐಡಿ ಅಧಿಕಾರಿಗಳಿಗೆ ತಿಳಿಸಿದ್ದಾರೆ. 10 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿ ಆದೇಶ ನೀಡಿದ ನಂತರ ನ್ಯಾಯಾಲಯದಿಂದ ಹೊರಬಂದ ಶಿವಾನಂದ ನೀಲಣ್ಣನವರ ಸಹೋದರರನ್ನು ನೋಡಿ ಕಣ್ಣೀರು ಹಾಕಿದರು.

ಶಿವಾನಂದ ನೀಲಣ್ಣನವರ ಪರ ವಕೀಲರು ವಾದವೇನು?

ಶಿವಾನಂದ ನೀಲಣ್ಣನವರ ಪರ ವಾದ ಮಂಡಿಸಿದ ವಕೀಲ ಮಂಜುನಾಥ ಜಿ.ಎಲ್, ಮೇಲ್ನೋಟಕ್ಕೆ ಪ್ರಕರಣ ಸ್ವಯಂಪ್ರೇರಿತ ದೂರಿನ ಅನ್ವಯ ವಿಚಾರಣೆ ನಡೆಯುತ್ತಿದೆ. ಅವರು ಒಂದು ಸಾವಿರ ಕೋಟಿ ರು. ವ್ಯವಹಾರ ಎಂದು ಹೇಳುತ್ತಾರೆ, ಜತೆಗೆ 36 ಪ್ರತಿಶತ ಬಡ್ಡಿ ವ್ಯವಹಾರ ಕುರಿತು ಎಲ್ಲಿಯೂ ಉಲ್ಲೇಖಗಳಿಲ್ಲ. ಸತ್ಯಕ್ಕೆ ಖಂಡಿತ ಜಯವಾಗುತ್ತದೆ, ತನಿಖೆ ಮುಗಿದ ನಂತರದಲ್ಲಿ ಜಾಮೀನಿಗೆ ಕೋರಿ ನ್ಯಾಯಾಲಯಕ್ಕೆ ಮನವಿ ಮಾಡುತ್ತೇವೆ ಎಂದರು.

ಜನರಿಗೆ ಹಣ ಬೇಕಾಗಿಲ್ಲ ನಾನು ಬೇಕು

35 ಸಾವಿರ ಜನರಿಂದ ಕೋಟ್ಯಂತರ ಹಣ ಪಡೆದ ಆರೋಪದ ಕುರಿತು ಸಿಐಡಿ ಪರ ವಕೀಲರು ಮಾಹಿತಿ ನೀಡುತ್ತಿದ್ದಂತೆ ಮಧ್ಯಪ್ರವೇಶಿಸಿದ ಶಿವಾನಂದ ನೀಲಣ್ಣನವರ, 35 ಸಾವಿರ ಜನರಿಗೆ ಹಣ ಬೇಕಾಗಿಲ್ಲ ನಾನು ಬೇಕಾಗಿದ್ದೇನೆ ಎಂದರು. ಇದಕ್ಕೆ ನ್ಯಾಯಾಧೀಶರು ಅಮಾಯಕರಿಗೆ ಅನ್ಯಾಯ ಆಗಬಾರದು. ಸರಕಾರ ಜನರ ತಂದೆ, ತಾಯಿ ಇದ್ದಂತೆ. ಅವರ ರಕ್ಷಣೆ ಮಾಡಬೇಕು ಎಂದರು.

ಆನೆಗಳ ಕಾಳಗ ವೇಳೆ ಮಹಿಳೆ ಸಾವು

ಮಡಿಕೇರಿ: ಎರಡು ಆನೆಗಳ ಕಾಳಗ ವೇಳೆ ಆನೆಯೊಂದು ಮಹಿಳೆಯ ಮೇಲೆ ಬಿದ್ದಿದ್ದು, ಮಹಿಳೆ ಮೃತಪಟ್ಟಿದ್ದಾರೆ. ಚೆನ್ನೈ ಮೂಲದ ಪಲ್ಲಾವರಂನ ನಿವಾಸಿ ಜುನೆಸ್ಸಿ (33) ಮೃತ ದುರ್ದೈವಿ. ಘಟನೆಯಲ್ಲಿ ಪತಿ ಜೋಯಲ್‌ಗೂ ಗಾಯಗಳಾಗಿವೆ.

ಕೊಡಗಿನ ಹೆಸರುವಾಸಿ ಪ್ರವಾಸಿತಾಣ ದುಬಾರೆಯಲ್ಲಿ ಸಾಕಾನೆ ಮಕ್ನಾ ಆನೆ ಮಾರ್ತಾಂಡನನ್ನು ದುಬಾರೆ ಸಾಕಾನೆ ಶಿಬಿರ ವ್ಯಾಪ್ತಿಯ ನದಿಯಲ್ಲಿ ಸ್ನಾನ ಮಾಡಿಸುತ್ತಿದ್ದ ದೃಶ್ಯವನ್ನು ಪ್ರವಾಸಿಗರು ವೀಕ್ಷಿಸುತ್ತಿದ್ದರು. ಈ ಸಂದರ್ಭ ಮದವೇರಿದ ಮತ್ತೊಂದು ಸಾಕಾನೆ ಕಂಜನ್ ಏಕಾಏಕಿ ಮಕ್ನಾ ಆನೆ ಮೇಲೆ ದಾಳಿ ಮಾಡಿದೆ. ಮಕ್ನಾ ಆನೆ ಬಿದ್ದಿದ್ದು, ಇದರ ಪಕ್ಕದಲ್ಲಿದ್ದ ಜುನೆಸ್ಸಿ ಅವರು ಕೆಳ ಭಾಗದಲ್ಲಿ ಸಿಲುಕಿಕೊಂಡು ತೀವ್ರವಾಗಿ ಗಾಯಗೊಂಡರು. ಗಾಯಾಳು ಜುನೆಸ್ಸಿ ಅವರನ್ನು ಕುಶಾಲನಗರದ ಆಸ್ಪತ್ರೆಗೆ ದಾಖಲಿಸಲಾಯಿತ್ತಾದರೂ ಅಷ್ಟೊತ್ತಿಗಾಗಲೇ ಅವರು ಮೃತಪಟ್ಟಿದ್ದರು. ಗಾಯಗೊಂಡ ಪತಿ ಜೋಯಲ್ ಗೆ ಚಿಕಿತ್ಸೆ ನೀಡಲಾಗಿದೆ. ಪತಿಯ ಕೈಯಲ್ಲಿದ್ದ ಪುತ್ರಿ ಅಪಾಯದಿಂದ ಪಾರಾಗಿದ್ದಾಳೆ. ನದಿಯಲ್ಲಿ ಸಾಕಾನೆ ಕಂಜನ್ ಮಕ್ನಾ ಆನೆ ಮೇಲೆ ದಾಳಿ ಮುಂದುವರಿಸುತ್ತಲೇ ಇದ್ದಾಗ ಆತಂಕಗೊಂಡ ಪ್ರವಾಸಿಗರು ಸ್ಥಳದಿಂದ ಚದುರಿದರು. ಘಟನೆ ಸಂದರ್ಭ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಸ್ಥಳದಲ್ಲಿದ್ದರಾದರೂ ಅದೃಷ್ಟವಶಾತ್ ಭಾರೀ ಅನಾಹುತ ತಪ್ಪಿದೆ. ಅನಿರೀಕ್ಷಿತವಾಗಿ ನಡೆದ ಈ ಘಟನೆಯಿಂದ ಪ್ರವಾಸಿಗರು ಆಘಾತಗೊಂಡಿದ್ದಾರೆ.

ಕಣ್ಣು ದಾನ, ಸರಕಾರದಿಂದ 20 ಲಕ್ಷ ರು. ಪರಿಹಾರ

ಪತ್ನಿಯನ್ನು ಕಳೆದುಕೊಂಡ ನೋವಿನಲ್ಲೂ ಪತಿ ಜೋಯೆಲ್ ಅವರು ಪತ್ನಿಯ ಕಣ್ಣುಗಳನ್ನು ದಾನ ಮಾಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ. ದುರಂತದ ಬಗ್ಗೆ ಮಾತನಾಡುತ್ತಾ ಕಣ್ಣೀರು ಹಾಕಿದ ಪತಿ ಜೋಯೆಲ್, 'ನನ್ನ ಪತ್ನಿಯನ್ನು ಉಳಿಸಿಕೊಳ್ಳಲು ನನಗೆ ಸಾಧ್ಯವಾಗಲಿಲ್ಲ. ಆನೆಯ ತುಳಿತಕ್ಕೆ ಆಕೆಯ ದೇಹ ನಜ್ಜುಗುಜ್ಜಾಗಿದೆ. ಹೀಗಾಗಿ ಎಲ್ಲ ಅಂಗಾಂಗಗಳನ್ನು ದಾನ ಮಾಡಲು ಸಾಧ್ಯವಿಲ್ಲ ಎಂದು ವೈದ್ಯರು ತಿಳಿಸಿದ್ದಾರೆ. ಆದ್ದರಿಂದ ಕನಿಷ್ಠ ಆಕೆಯ ಕಣ್ಣುಗಳನ್ನಾದರೂ ದಾನ ಮಾಡುತ್ತೇನೆ. ಆಕೆ ಬೇರೆಯವರ ಕಣ್ಣಿನ ಮೂಲಕ ಈ ಪ್ರಪಂಚವನ್ನು ನೋಡುತ್ತಾ ಬದುಕಿರಲಿ' ಎಂದು ಬಿಕ್ಕಿ ಬಿಕ್ಕಿ ಅತ್ತಿದ್ದಾರೆ. ಮೃತ ಮಹಿಳೆಯ ಕುಟುಂಬಕ್ಕೆ ಸರಕಾರದಿಂದ 20 ಲಕ್ಷ ರು. ಪರಿಹಾರ ಘೋಷಿಸಲಾಗಿದೆ.

ಸಾಕಾನೆ ಶಿಬಿರದಲ್ಲಿ ಪ್ರವಾಸಿಗರ ಸುರಕ್ಷತೆಗೆ ಎಸ್‌ಒಪಿ: ಸಚಿವ ಖಂಡ್ರೆ

ಬೀದರ್: ರಾಜ್ಯದಲ್ಲಿರುವ ಎಲ್ಲ ಸಾಕಾನೆ ಶಿಬಿರಗಳಲ್ಲಿ ಪ್ರವಾಸಿಗರ ಸುರಕ್ಷತೆಗೆ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ರೂಪಿಸಬೇಕು. 100 ಅಡಿ ದೂರದಲ್ಲಿ ನಿಂತು ಆನೆಗಳ ಸ್ನಾನ ವೀಕ್ಷಿಸಲು ಅವಕಾಶ ನೀಡಬೇಕು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಆದೇಶಿಸಿದ್ದಾರೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಈ ಸಂಬಂಧ ಸೂಚನೆ ನೀಡಿರುವ ಅವರು, ದುಬಾರೆ ಸಾಕಾನೆ ಶಿಬಿರದಲ್ಲಿ ಎರಡು ಆನೆಗಳ ನಡುವೆ ನಡೆದ ಕಾದಾಟದ ವೇಳೆ ಮಹಿಳೆ ಮೃತಪಟ್ಟಿರುವ ಹಿನ್ನೆಲೆಯಲ್ಲಿ ಪ್ರವಾಸಿಗರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡುವ ಅಗತ್ಯವಿದೆ ಎಂದು ಪ್ರತಿಪಾದಿಸಿದ್ದಾರೆ.

ಪರಿಸರ ಪ್ರವಾಸೋದ್ಯಮದ ಚಾರಣಪಥಗಳಲ್ಲಿ ಚಾರಣಿಗರ/ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ರೂಪಿಸಲಾಗಿದೆ. ಈ ಎಸ್‌ಒಪಿ ಜಾರಿ ಖಚಿತಪಡಿಸಿಕೊಳ್ಳುವವರೆಗೆ ಚಾರಣ ಪಥಗಳ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ಈಗಾಗಲೇ ಸೂಚಿಸಲಾಗಿದೆ. ಅದೇ ಪ್ರಕಾರವಾಗಿ ಸಾಕಾನೆ ಶಿಬಿರಗಳಿಗೆ ಬರುವ ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಎಸ್‌ಒಪಿ ರೂಪಿಸಬೇಕೆಂದು ನಿರ್ದೇಶನ ನೀಡಿದ್ದಾರೆ. ರಾಜ್ಯದಲ್ಲಿರುವ ಎಲ್ಲ ಸಾಕಾನೆ ಶಿಬಿರಗಳಲ್ಲಿ ಮೇ 19ರಿಂದಲೇ ಪ್ರವಾಸಿಗರು ಆನೆ ಬಳಿ ಹೋಗದಂತೆ, ಕನಿಷ್ಠ 100 ಅಡಿ ದೂರದಲ್ಲಿ ನಿಂತು ಆನೆ ಮೈತೊಳೆಯುವುದನ್ನು ವೀಕ್ಷಿಸು ವಂತೆ ಮತ್ತು ಯಾವುದೇ ಕಾರಣಕ್ಕೂ ಆನೆಗಳ ಬಳಿ ಹೋಗಿ ಸೆಲ್ಫಿ, ಫೋಟೋ ತೆಗೆಸಿಕೊಳ್ಳಲು, ಮೈತೊಳೆಯಲು ಅವಕಾಶ ನೀಡದಂತೆ ಮತ್ತು ಬಾಳೆಹಣ್ಣು, ಬೆಲ್ಲ, ಕಬ್ಬು ಇತ್ಯಾದಿ ಯಾವುದೇ ಆಹಾರವನ್ನು ಪ್ರವಾಸಿಗರ ಕೈಯಿಂದ ತಿನ್ನಿಸದಂತೆ ಆದೇಶ ಹೊರಡಿಸಲೂ ಸೂಚಿಸಿದ್ದಾರೆ.

ಕಲಬುರಗಿ ಮೃಗಾಲಯ ಲೋಕಾರ್ಪಣೆ

ಕಲ್ಯಾಣ ಕರ್ನಾಟಕದಲ್ಲಿ ಹಸಿರು ಹೊದಿಕೆ ಹೆಚ್ಚಿಸಲು ಕ್ರಮ: ಸಚಿವ ಈಶ್ವರ ಖಂಡ್ರೆ

ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದಲ್ಲಿ ಪರಿಸರ ಸಮತೋಲನ ಕಾಪಾಡಲು ಮತ್ತು ಹಸಿರು ಹೊದಿಕೆಯನ್ನು ವಿಸ್ತರಿಸಲು ಕೆಕೆಆರ್‌ಡಿಬಿ ಸಭೆಯಲ್ಲಿ ಚರ್ಚಿಸಿ ಅಗತ್ಯ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಕಲಬುರಗಿ ಜಿಲ್ಲೆಯ ಕಾಳಗಿ ತಾಲೂಕಿನ ಮಾಡಬೂಳ ಗ್ರಾಮದ ಬಳಿ 35 ಕೋಟಿ ರು. ವೆಚ್ಚದಲ್ಲಿ ನಿರ್ಮಾಣವಾಗಿರುವ ನೂತನ ಮೃಗಾಲಯವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಈ ಭಾಗದಲ್ಲಿ ಕೇವಲ ಶೇ.1 ರಿಂದ 2 ರಷ್ಟು ಮಾತ್ರ ಹಸಿರು ಹೊದಿಕೆ ಇದ್ದು, ಹವಾಮಾನ ವೈಪರಿತ್ಯ ತಡೆಯಲು ಮುಂಬರುವ ದಿನಗಳಲ್ಲಿ ವ್ಯಾಪಕವಾಗಿ ಸಸಿಗಳನ್ನು ನೆಡಲಾಗುವುದು. ಕಳೆದ ಮೂರು ವರ್ಷಗಳಲ್ಲಿ ರಾಜ್ಯಾದ್ಯಂತ 11 ಲಕ್ಷ ಸಸಿಗಳನ್ನು ನೆಡಲಾಗಿದ್ದು, ಅವುಗಳಲ್ಲಿ ಶೇ.90ರಷ್ಟು ಬದುಕುಳಿದಿವೆ ಎಂದರು.

ಸಚಿವ ಪ್ರಿಯಾಂಕ್ ಖರ್ಗೆ ಅವರ ವಿಶೇಷ ಆಸಕ್ತಿಯಿಂದ 42.33 ಎಕರೆ ಪ್ರದೇಶದಲ್ಲಿ 44 ಕೋಟಿ ರು. ವೆಚ್ಚದಲ್ಲಿ ಈ ನೂತನ ಮೃಗಾಲಯ ನಿರ್ಮಾಣವಾಗಿದ್ದು, ಇದು ಈ ಭಾಗದ ಎರಡನೇ ಅತಿ ದೊಡ್ಡ ಮೃಗಾಲಯವಾಗಿದೆ. ಇಲ್ಲಿ ಬನ್ನೇರುಘಟ್ಟದಿಂದ ತರಲಾದ ಎರಡು ಹುಲಿಗಳು ಸೇರಿದಂತೆ 56 ವಿವಿಧ ಪ್ರಭೇದದ ಪ್ರಾಣಿ-ಪಕ್ಷಿಗಳನ್ನು ಮುಂದಿನ ಮೂರು ತಿಂಗಳಲ್ಲಿ ತರಲಾಗುವುದು. ಅರಣ್ಯ ಭೂಮಿ ಒತ್ತುವರಿ ತೆರವಿಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದ್ದು, ಈಗಾಗಲೇ 10,000 ಎಕರೆ ಭೂಮಿಯನ್ನು ಮುಕ್ತಗೊಳಿಸಲಾಗಿದೆ ಎಂದು ವಿವರಿಸಿದರು.

ಕಾಳಗಿ ತಾಲೂಕಿನ ಮಾಡಬೂಳ ಗ್ರಾಮದ ಬಳಿ ನಿರ್ಮಾಣವಾಗಿರುವ ನೂತನ ಮೃಗಾಲಯವನ್ನು ಅರಣ್ಯ ಸಚಿವ ಈಶ್ವರ ಖಂಡ್ರೆ ಉದ್ಘಾಟಿಸಿದರು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ, ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಸೇರಿ ಅನೇಕರು ಇದ್ದರು.

ಸಂಜೆ 5.30ರವರೆಗೆ ವೀಕ್ಷಣೆಗೆ ಲಭ್ಯ

ಮೃಗಾಲಯವು ಬೆಳಗ್ಗೆ 9.30 ರಿಂದ ಸಂಜೆ 5.30 ವರೆಗೆ ತೆರೆಯಲಿದ್ದು, ಪ್ರಾಣಿ-ಪಕ್ಷಿಗಳ ವೀಕ್ಷಣೆಗೆ ಲಭ್ಯವಾಗಿರಲಿದೆ. ಪ್ರತಿ ಮಂಗಳವಾರ ರಜೆ ಇರಲಿದೆ. 12 ವರ್ಷ ಮೇಲ್ಪಟ್ಟವರಿಗೆ ರು. 75, 12 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ರು. 40 ಹಾಗೂ ಸರಕಾರಿ ಶಾಲಾ ವಿದ್ಯಾರ್ಥಿಗಳಿಗೆ ರು. 25 ಟಿಕೆಟ್ ದರ ನಿಗದಿ ಮಾಡಲಾಗಿದೆ. ಮೃಗಾಲಯದ ಟಿಕೆಟ್ ಕೌಂಟರ್‌ನಲ್ಲಿಯೇ ಟಿಕೆಟ್ ಪಡೆದು ವೀಕ್ಷಣೆ ಮಾಡಬಹುದಾಗಿದೆ.

ಯಾವ್ಯಾವ ಪ್ರಾಣಿ, ಪಕ್ಷಿಗಳಿವೆ?

ಮೃಗಾಲಯದಲ್ಲಿ ಆಮೆ, ಮೊಸಳೆ, ಎಮು ಪಕ್ಷಿ, ಸಿಲ್ವರ್ ಫೀಸಂಟ್, ಗಿಳಿ, ನವಿಲು, ಜಾಕಲ್, ಕಪ್ಪು ಗಿಡ, ಲಂಗೂರ್, ಕಪ್ಪು ಜಿಂಕೆಗಳು, ಹೆಬ್ಬಾವುಗಳಿವೆ. ಬೆಂಗಳೂರಿನ ಬನ್ನೇರುಘಟ್ಟದ ಜೈವಿಕ ಉದ್ಯಾನದಿಂದ ಒಂದೂವರೆ ವರ್ಷ ಪ್ರಾಯದ ಎರಡು ಸಿಂಹಗಳು ಈಗಾಗಲೇ ಕಲಬುರಗಿ ಮೃಗಾಲಯಕ್ಕೆ ಬಂದಿವೆ. ಇನ್ನೊಂದು ತಿಂಗಳಲ್ಲಿ ಸಾಂಬರ್, ರೆಡ್ ಜಂಗಲ್ ಫೌಲ್ ಬರಲಿವೆ. ಮುಂದಿನ 3 ತಿಂಗಳಲ್ಲಿ ಹುಲಿ, ಬಬೂನ್, ಸ್ಲೋತ್ ಕರಡಿ, ಕಾಳಿಂಗ ಸರ್ಪ ನೋಡಲು ಸಿಗಲಿವೆ. ಮುಂದಿನ ತಿಂಗಳಲ್ಲಿ ಜಿಬ್ರಾ, ಘರಿಯಾಲ್ ಹಾಗೂ ಇತರ ಪಕ್ಷಿ ಮತ್ತು ಸರೀಸೃಪ ಜಾತಿಗಳ ವನ್ಯ ಜೀವಿಗಳು ಕಲಬುರಗಿ ಮೃಗಾಲಯ ಸೇರಲಿವೆ.

ಸಿದ್ದರಾಮಯ್ಯ ನಂತರ ಪರಮೇಶ್ವರ್ ಮುಖ್ಯಮಂತ್ರಿ ಆಗಲಿ

ತುಮಕೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಬದಲಾವಣೆ ಆಗುವುದಾದರೆ ಅವರ ಸ್ಥಾನಕ್ಕೆ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಸೂಕ್ತ ವ್ಯಕ್ತಿ. ಅವರೇ ಸಿಎಂ ಆಗಲಿ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಅಭಿಪ್ರಾಯಪಟ್ಟಿದ್ದಾರೆ.

ಸಾಧನಾ ಸಮಾವೇಶ ಕಾರ್ಯಕ್ರಮದ ಸಿದ್ಧತೆ ಪರಿಶೀಲನೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, '2013ರಲ್ಲಿ ಪರಮೇಶ್ವರ್ ಗೆದ್ದಿದ್ದರೆ ಸಿದ್ದರಾಮಯ್ಯ ಸಿಎಂ ಸ್ಥಾನವನ್ನು ಪರಮೇಶ್ವರ್ ಅವರಿಗೆ ಬಿಟ್ಟು ಕೊಡುತ್ತಿದ್ದರಾ' ಎಂಬ ಪ್ರಶ್ನೆಗೆ ಉತ್ತರಿಸಿದ ರಾಜಣ್ಣ, ಬಿಟ್ಟುಕೊಡದೆ ಇರಲು ಸಿಎಂ ಸ್ಥಾನ ಸಿದ್ದರಾಮಯ್ಯ ಸೇರಿ ಯಾವುದೇ ರಾಜಕಾರಣಿಯ ಮನೆ ಆಸ್ತಿ ಅಲ್ಲ, ಅದು ಜನರು ಕೊಡುವ ಭಿಕ್ಷೆ ಎಂದರು. 'ಪರಮೇಶ್ವರ್ ಅವರು ಸಿಎಂ ಆಗಲು ಸಾಧನಾ ಸಮಾವೇಶ ಮಾಡುತ್ತಿದ್ದಾರಾ ಎಂಬ ಪ್ರಶ್ನೆಗೆ, ಹೌದು, ನಾವು ಅದನ್ನೇ ಬಯಸುತ್ತೀವಿ ಎನ್ನುವ ಮೂಲಕ ಹೊಸ ಚರ್ಚೆಗೆ ನಾಂದಿ ಹಾಡಿದರು. ಇದೇ ವೇಳೆ ನಾಯಕತ್ವ ಬದಲಾವಣೆ ಕುರಿತು ಮಾತನಾಡಿದ ರಾಜಣ್ಣ, ಇವತ್ತು ಕೇರಳದಲ್ಲಿ ಕರ್ನಾಟಕದ ನಾಯಕತ್ವ ಬದಲಾವಣೆ ಬಗ್ಗೆ ನಿರ್ಣಯವಾಗಬಹುದು. ಹೈಕಮಾಂಡ್ ಜತೆ ತುಂಬಾ ಹೊತ್ತು ಸಿಎಂ ಸಮಯ ಕಳೆಯುವುದರಿಂದ ಈ ವೇಳೆ ನಾಯಕತ್ವದ ಬಗ್ಗೆ ತೀರ್ಮಾನ ಆಗಬಹುದು, ಸಿದ್ದರಾಮಯ್ಯನವರೇ ಮುಂದುವರಿಯಲಿ ಎನ್ನುವುದು ನನ್ನ ಅಭಿಪ್ರಾಯವಾಗಿದ್ದು, ಒಂದು ವೇಳೆ ಬದಲಾವಣೆಯಾದರೆ ಪರಮೇಶ್ವರ್ ಆ ಸ್ಥಾನಕ್ಕೆ ಸೂಕ್ತ ಎಂದರು.

ಸಂಪಾದಕೀಯ

ಹಣಕಾಸು ವಂಚನೆಗೆ ಶಿಕ್ಷೆಯಾಗಲಿ

ಬೆಳಗಾವಿಯಲ್ಲಿ ನಾಡೇ ಬೆಚ್ಚಿ ಬೀಳುವಂಥ ಹಣಕಾಸು ವಂಚನೆಯ ಹಗರಣವೊಂದು ಹೊರಬಿದ್ದಿದೆ. ಇದು ಸುಮಾರು 4500 ಕೋಟಿ ರೂ.ಗಳಷ್ಟು ಬಹು ಮೊತ್ತದ ಮೋಸದ ಹಗರಣ. ಶಿವಂ ಅಸೋಸಿಯೇಟ್ಸ್ ಎಂಬ ಸಂಸ್ಥೆಯನ್ನು ಹುಟ್ಟುಹಾಕಿ, ಕಾನೂನು ಉಲ್ಲಂಘಿಸಿ ಸಾರ್ವಜನಿಕರಿಂದ ಸಾವಿರಾರು ಕೋಟಿ ರೂ. ಹೂಡಿಕೆ ಮಾಡಿಸಿಕೊಂಡಿದ್ದಾನೆ ಶಿವಾನಂದ ನೀಲಣ್ಣನವರ ಎಂಬಾತ. ಈ ಪ್ರಕರಣದ ತನಿಖೆಯನ್ನು ಸರಕಾರ ಸಿಐಡಿಗೆ ವಹಿಸಿದೆ. ಈತ ಇಷ್ಟೊಂದು ಪ್ರಮಾಣದ ಹಣವನ್ನು ಸಾಲದ ರೂಪದಲ್ಲಿ ಸಂಗ್ರಹಿಸಿದ್ದು, ಅದರ ಬಡ್ಡಿಯೇ ತಿಂಗಳಿಗೆ 7 ಕೋಟಿ ರೂ.ಗಳಷ್ಟು ಆತನಿಗೆ ಬರುತ್ತಿತ್ತು. ಇನ್ನೊಂದು ವಿಲಕ್ಷಣ ಸಂಗತಿ ಎಂದರೆ, ಈತ ಜೈಲಿಗೆ ಹೋದರೆ ತಮ್ಮ ಹಣ ಹಿಂದಿರುಗಿ ಬರಲಾರದು ಎಂಬ ಆತಂಕದಲ್ಲಿ ಮೋಸಕ್ಕೊಳಗಾದವರು ಯಾರೂ ದೂರು ನೀಡಿಲ್ಲ. ಯಾರೂ ದೂರು ನೀಡಿಲ್ಲದಿರುವುದರಿಂದ ತನಿಖೆ ಮುಂದುವರಿಕೆಯೂ ಕಷ್ಟವಾಗಿದೆಯಂತೆ. ಇಂಥ ಮನೋಭಾವವೇ ಆರ್ಥಿಕ ವಂಚನೆಗಳ ಸಂಖ್ಯೆ ಯದ್ವಾತದ್ವಾ ಹೆಚ್ಚುತ್ತಿರಲು ಕಾರಣ. ಬೀದಿ ಬೀದಿಗಳಲ್ಲಿ ನಡೆಯುವ ಸಣ್ಣ ಪ್ರಮಾಣದ ಚೀಟಿ ವ್ಯವಹಾರಗಳಿಂದ ಹಿಡಿದು, ಬಹುಕೋಟಿ ಸಂಸ್ಥೆಗಳ ವರೆಗೆ ಪ್ರಜೆಗಳು ತಾವು ಕಷ್ಟಪಟ್ಟು ದುಡಿದು ತಂದು ನೀಡಿದ ಹಣವನ್ನು ಕಳೆದುಕೊಳ್ಳುತ್ತಿರುವುದು ವಿಷಾದನೀಯ. ಈತ ಸಾರ್ವಜನಿಕರಿಗೆ 30– 35 ಶೇಕಡದಷ್ಟು ಬಡ್ಡಿ ಹಣ ನೀಡುವ ಆಮಿಷ ಒಡ್ಡಿದ್ದ ಎನ್ನಲಾಗುತ್ತಿದೆ. ಈ ಪ್ರಪಂಚದಲ್ಲಿ ಯಾರೂ ಈ ಪ್ರಮಾಣದ ಬಡ್ಡಿ ನೀಡಲು ಸಾಧ್ಯವಿಲ್ಲ. ಆಮಿಷಗಳು ಸುಂದರವಾಗಿದ್ದಷ್ಟೂ ಮೋಸದ ಪ್ರಮಾಣ ಹೆಚ್ಚು ಎಂಬುದನ್ನು ಜನತೆ ಮನಗಾಣಬೇಕು. ದೇಶದಲ್ಲಿ ಫೈನಾನ್ಸ್ ವಹಿವಾಟುಗಳನ್ನು ನಿಯಂತ್ರಿಸಲು ಆರ್‌ಬಿಐ, ಸೆಬಿ ಮುಂತಾದ ಸಂಸ್ಥೆಗಳಿವೆ. ಫೈನಾನ್ಸ್ ವ್ಯವಹಾರಗಳು ಇಂಥ ಸಂಸ್ಥೆಗಳಡಿ ನೋಂದಾಯಿಸಿಕೊಂಡು ಪಾರದರ್ಶಕವಾಗಿದ್ದರೆ ಮಾತ್ರ ನಂಬುವುದನ್ನು ಜನತೆ ರೂಢಿಸಿಕೊಳ್ಳಬೇಕು. ಈ ಹಿಂದೆ ಬಹುಕೋಟಿ ಹಣದ ವಂಚನೆ ಎಸಗಿದ ವಿನಿವಿಂಕ್, ಶಾರದಾ ಚಿಟ್‌ಫಂಡ್, ಸತ್ಯಂ ಮುಂತಾದ ಹಗರಣಗಳನ್ನು ನೆನಪಿಸಿಕೊಳ್ಳಬಹುದು. ಎಲ್ಲದರಲ್ಲೂ ಸಾಮಾನ್ಯವಾಗಿರುವ ಅಂಶವೆಂದರೆ ಮೋಸ ಹೋದವರಲ್ಲಿ ಇದ್ದ ಆಸೆ. ಒಂದಕ್ಕೆ ಎರಡು, ಮೂರು ಪಟ್ಟು ಹಣ ದೊರೆಯುತ್ತದೆ ಎಂಬ ದುರಾಸೆ ಮೂಡಿದಾಗ ಮೋಸ ಶತಸ್ಸಿದ್ಧ. ವಂಚನೆಗೆ ಒಳಗಾಗುವವರು ಇರುವವರೆಗೂ ವಂಚನೆ ಎಸಗುವವರೂ ಇರುತ್ತಾರೆ. ಹಣಕಾಸು ಸಾಕ್ಷರತೆ, ಹೊಸ ಸ್ಕೀಮ್‌ಗಳ ಬಗ್ಗೆ ಎಚ್ಚರ, ಋಜುತ್ವ ವ್ಯವಹಾರದ ಬಗ್ಗೆ ನಂಬಿಕೆ ಎಲ್ಲರಿಗೂ ಅಗತ್ಯ.

ಸೊಂಪಾದಕೀಯ

ಮೊಬೈಲ್ ಕೈಲಿದ್ದರೆ ಮಕ್ಕಳಿಲ್ಲ!

ಸ್ಮಾರ್ಟ್‌ಫೋನ್‌ನಿಂದ ಅಷ್ಟೇನೂ 'ಸ್ಮಾರ್ಟ್' ಅಲ್ಲದ ಸಮಸ್ಯೆಯೊಂದು ಎದುರಾಗಿದೆ. ದಂಪತಿಗಳು ಸದಾ ಮೊಬೈಲ್‌ನಲ್ಲಿ ಮುಳುಗಿರುವುದರಿಂದ ಮಕ್ಕಳು ಹುಟ್ಟುತ್ತಿಲ್ಲವಂತೆ. ದಂಪತಿಗಳು ಸಾಮಾಜಿಕ ಜಾಲತಾಣಗಳಲ್ಲೂ ರೀಲ್‌ಗಳಲ್ಲೂ ಮುಳುಗಿಹೋಗಿ, 'ನೈಜ ಮುಖಾಮುಖಿ'ಯನ್ನು ದೂರ ಮಾಡಿರುವುದರಿಂದ ಈ 'ಮರ್ಮಭೇದಕ' ಸಮಸ್ಯೆ ತಲೆದೋರಿದೆ. ಹೀಗೆಂದು ಸಂಶೋಧನೆಗಳು ತಿಳಿಸಿವೆ ಎಂದು ಫೈನಾನ್ಷಿಯಲ್ ಟೈಮ್ಸ್ ವರದಿ ಮಾಡಿದೆ. ಅನೇಕ ದೇಶಗಳಲ್ಲಿ ಹಳೆಯ ತಲೆಮಾರಿನವರು ನಿರ್ಗಮಿಸುವ ವೇಗಕ್ಕೆ ಹೋಲಿಸಿದರೆ ಹೊಸದಾಗಿ ಹುಟ್ಟುತ್ತಿರುವ ಮಕ್ಕಳ ಸಂಖ್ಯೆ ತೀರಾ ಕಡಿಮೆಯಾಗಿದೆ. ದಕ್ಷಿಣ ಕೊರಿಯಾ, ಜಪಾನ್, ಚೀನಾ, ಯುರೋಪ್ ಮತ್ತು ಅಮೆರಿಕದಲ್ಲಿ ಈ ಸಮಸ್ಯೆ ಇದೆ. ಉಳಿದ ಕಡೆಯೂ ಹೆಚ್ಚುತ್ತಿದೆ. ಕಳೆದ 10–15 ವರ್ಷಗಳ ಜನನ ಪ್ರಮಾಣದ ಹಠಾತ್ ಕುಸಿತಕ್ಕೆ ಸ್ಮಾರ್ಟ್‌ಫೋನ್‌ಗಳು, ಸಾಮಾಜಿಕ ಮಾಧ್ಯಮಗಳ ಬಳಕೆಯೂ ಕಾರಣ ಎಂದು ಸಂಶೋಧಕರು ನಂಬಿದ್ದಾರೆ. ಗಂಡ ಹೆಂಡತಿ ತಮ್ಮದೇ ಸ್ಮಾರ್ಟ್‌ಫೋನ್ ಲೋಕದಲ್ಲಿ ಇರುವುದರಿಂದ ಒಟ್ಟಾಗಿ ಕುಳಿತು ಊಟ ಮಾಡಲು, ಮಾತನಾಡಲು ಕೂಡ ಸಮಯ ಇಲ್ಲದಾಗಿದೆ. ಇನ್ನು ಒಟ್ಟಾಗಿ ಮಂಚ ಸೇರುವ ಮಾತೆಲ್ಲಿ! ಮಜಾ ಅಂದರೆ, ಇಂಟರ್ನೆಟ್ ಹೆಚ್ಚು ವೇಗ ಇರುವಲ್ಲಿ, ಜನನ ಪ್ರಮಾಣವೂ ನಿಧಾನವಾಗಿರುತ್ತದೆಯಂತೆ. ಅಮೆರಿಕ ಮತ್ತು ಯುಕೆಯ ದತ್ತಾಂಶ ನೋಡಿದರೆ 4ಜಿ, 5ಜಿ ಇರುವಲ್ಲಿ ಜನನ ಪ್ರಮಾಣ ಹೆಚ್ಚಾಗಿ ಕುಸಿತ ಕಂಡಿದೆ. ಅಂತರ್ಜಾಲ ವೇಗವಾದಷ್ಟೂ 'ಅಂತರ್ಜಲ' ಬತ್ತುತ್ತದೆ ಎಂದಾಯಿತು. ತಜ್ಞರು ಹೇಳುವಂತೆ ಡೇಟಿಂಗ್, ಸ್ನೇಹ ಮತ್ತು ಸಂಬಂಧಗಳ ಬಹುಪಾಲು ಭಾಗ ಈಗ ಸಾಮಾಜಿಕ ಜಾಲತಾಣಗಳಿಗೆ ಸೀಮಿತವಾಗಿದೆ. ಇತರರ ಪರಿಪೂರ್ಣ ಜೀವನವನ್ನು ನೋಡುತ್ತಾರೆ. ಆ ಜೀವನ ತಮ್ಮದಾಗಲಿಲ್ಲ ಎಂದು ಕರುಬುತ್ತಾರೆ ಹೊರತು ತಮ್ಮದಾಗಿಸಲು ಯತ್ನಿಸುವುದಿಲ್ಲ. ಕೆಲವರು ದೀರ್ಘಕಾಲೀನ ಸಂಬಂಧಗಳನ್ನು ತಪ್ಪಿಸುತ್ತಾರೆ. ಯಾಕೆಂದರೆ ಮೊಬೈಲ್‌ನಿಂದ ದೂರವಾಗುವ ಭಯ. ಮೊಬೈಲ್‌ನಲ್ಲಿ ಮಕ್ಕಳ ಅಳು ಕೇಳಿಸುವ ಆಪ್ ಡೌನ್‌ಲೋಡ ಮಾಡಿಕೊಂಡು ಕೇಳಬಹುದು, ಯಾಕೆ ಚಿಂತೆ ಬಿಡಿ!

ಸಂಪಾದಕರ ಸದ್ಯಶೋಧನೆ

ಕತ್ತೆ – ತೋಳ : ಏನಾಗುವುದು ಲೇಸು?

'ಎಲ್ಲರೂ ಸವಾರಿ ಮಾಡುವ ಕತ್ತೆಯಾಗುವುದಕ್ಕಿಂತ ಎಲ್ಲರೂ ದ್ವೇಷಿಸುವ ತೋಳ ಆಗುವುದು ಲೇಸು' ಎಂಬ ಮಾತಿದೆ. ಈ ಮಾತಿನ ತಾತ್ಪರ್ಯವೇನು? ಜೀವನ ಎಂಬುದು ಒಂದು ನಿರಂತರವಾದ ಹೋರಾಟ. ಈ ಜಗತ್ತಿನಲ್ಲಿ ನಾವು ಹೇಗೆ ಬದುಕುತ್ತೇವೆ ಮತ್ತು ನಮ್ಮನ್ನು ನಾವು ಹೇಗೆ ಗುರುತಿಸಿಕೊಳ್ಳುತ್ತೇವೆ ಎಂಬುದು ಬಹಳ ಮುಖ್ಯ. ಮನುಷ್ಯನ ಆತ್ಮಗೌರವ, ಸ್ವಾತಂತ್ರ್ಯ ಮತ್ತು ನೈತಿಕ ಸ್ಥಿರತೆಯ ಬಗ್ಗೆ ಒಂದು ಕಟುವಾದ ಸತ್ಯವನ್ನು ಎತ್ತಿ ತೋರಿಸುತ್ತದೆ. ಇದು ಕೇವಲ ಪ್ರಾಣಿಗಳ ಹೋಲಿಕೆಯಲ್ಲ, ಬದಲಾಗಿ ಮನುಷ್ಯನ ವ್ಯಕ್ತಿತ್ವದ ಎರಡು ವಿಭಿನ್ನ ಆಯಾಮಗಳ ಪ್ರತಿಬಿಂಬವಾಗಿದೆ. ತೋಳ ಮತ್ತು ಕತ್ತೆಯ ನಡುವಿನ ವ್ಯತ್ಯಾಸವು ಕೇವಲ ಅವುಗಳ ದೈಹಿಕ ವ್ಯತ್ಯಾಸವಲ್ಲ, ಬದಲಾಗಿ ಅವುಗಳ ಸ್ವಭಾವದ ವ್ಯತ್ಯಾಸವಾಗಿದೆ. ಕತ್ತೆಯು ಕಠಿಣ ಪರಿಶ್ರಮಕ್ಕೆ ಹೆಸರುವಾಸಿಯಾಗಿದ್ದರೂ, ಅದು ದಾಸ್ಯದ ಸಂಕೇತವೂ ಹೌದು. ಅದು ಯಜಮಾನ ಹೇಳಿದಂತೆ ಕೇಳುತ್ತದೆ, ಭಾರವನ್ನು ಹೊರುತ್ತದೆ ಮತ್ತು ಯಾರೇ ಬೆನ್ನಿನ ಮೇಲೆ ಕುಳಿತರೂ ಪ್ರತಿಭಟಿಸದೇ ಸಾಗುತ್ತದೆ. ಸಮಾಜದಲ್ಲಿ ಕೆಲವರು ಹೀಗೆಯೇ ಇರುತ್ತಾರೆ. ಇತರರನ್ನು ಮೆಚ್ಚಿಸಲು ತಮ್ಮ ಸ್ವಂತಿಕೆಯನ್ನು ಬಿಟ್ಟುಕೊಡುತ್ತಾರೆ. ಎಲ್ಲರಿಗೂ 'ಹೌದು' ಎನ್ನುವ ಈ ಜನರನ್ನು ಲೋಕವು ಬಳಸಿಕೊಳ್ಳುತ್ತದೆ. ಅವರಿಗೆ ಎಲ್ಲರೂ ಪ್ರೀತಿ ತೋರಿಸಬಹುದು, ಆದರೆ ಆ ಪ್ರೀತಿಯ ಹಿಂದೆ ಗೌರವವಿರುವುದಿಲ್ಲ, ಕೇವಲ ಸ್ವಾರ್ಥವಿರುತ್ತದೆ. ತೋಳವು ಕಾಡಿನ ಒಂಟಿ ನಾಯಕ. ಅದು ಯಾರಿಗೂ ತಲೆಬಾಗುವುದಿಲ್ಲ, ತನ್ನದೇ ಆದ ದಾರಿಯಲ್ಲಿ ಸಾಗುತ್ತದೆ. ಅದರ ಹಠ ಮತ್ತು ಸ್ವಾತಂತ್ರ್ಯದ ಕಾರಣಕ್ಕೆ ಲೋಕ ಅದನ್ನು ದ್ವೇಷಿಸಬಹುದು. ಆದರೆ, ಯಾರೂ ಅದನ್ನು ತನ್ನ ಲಾಭಕ್ಕೆ ಬಳಸಿಕೊಳ್ಳಲು ಸಾಧ್ಯವಿಲ್ಲ. ಅದು ದ್ವೇಷಕ್ಕೆ ಒಳಗಾಗಿದ್ದರೂ, ಅದಕ್ಕೊಂದು ಗೌರವ ಮತ್ತು ಭಯದ ವಲಯವಿರುತ್ತದೆ. ಸಮಗ್ರತೆ ಎಂದರೆ ನಾವು ಯಾರೂ ನೋಡದಿದ್ದಾಗಲೂ ಸರಿಯಾದ ದಾರಿಯಲ್ಲಿ ನಡೆಯುವುದು. ನಮ್ಮ ಮೌಲ್ಯಗಳಿಗೆ ನಾವು ನಿಷ್ಠರಾಗಿರುವುದು. ಒಬ್ಬ ವ್ಯಕ್ತಿ ಸಮಗ್ರತೆಯನ್ನು ಹೊಂದಿದ್ದಾನೆ ಎಂದರೆ ಅವನು ಸಂದರ್ಭಕ್ಕೆ ತಕ್ಕಂತೆ ಬಣ್ಣ ಬದಲಾಯಿಸುವುದಿಲ್ಲ ಎಂದರ್ಥ. ಸಮಾಜದಲ್ಲಿ 'ಒಳ್ಳೆಯವನು' ಎಂದು ಕರೆಸಿಕೊಳ್ಳಲು ನಾವು ಸುಳ್ಳು ಹೇಳಬಹುದು, ಅನ್ಯಾಯವನ್ನು ಸಹಿಸಿಕೊಳ್ಳಬಹುದು ಅಥವಾ ಶರಣಾಗಬಹುದು. ಆದರೆ, ಹೀಗೆ ಮಾಡುವುದರಿಂದ ನಾವು ಸಮಾಜದ ಕಣ್ಣಿನಲ್ಲಿ ಒಳ್ಳೆಯವರಾದರೂ, ನಮ್ಮ ಸ್ವಂತ ಆತ್ಮಸಾಕ್ಷಿಯ ಮುಂದೆ ಸೋಲುತ್ತೇವೆ. ಸಮಗ್ರತೆ ಇರುವ ವ್ಯಕ್ತಿ ಸಮಾಜದ ಟೀಕೆಗಳಿಗೆ ಹೆದರುವುದಿಲ್ಲ. ಅವನಿಗೆ ತಿಳಿದಿದೆ – ಲೋಕವು ಸತ್ಯವಂತನನ್ನು ದ್ವೇಷಿಸಬಹುದು, ಆದರೆ ಅವನನ್ನು ಎಂದಿಗೂ ಕಡೆಗಣಿಸಲು ಸಾಧ್ಯವಿಲ್ಲ. ನಮಗೆ ಎಲ್ಲರೂ ನಮ್ಮನ್ನು ಪ್ರೀತಿಸಬೇಕು ಎಂಬ ಬಯಕೆ ಇರುತ್ತದೆ. ಆದರೆ, ಆ ಪ್ರೀತಿಯು ನಮ್ಮ 'ವಿಧೇಯತೆ' ಅಥವಾ 'ಗುಲಾಮಗಿರಿ'ಯಿಂದ ಬಂದಿದ್ದರೆ ಅದಕ್ಕೆ ಬೆಲೆ ಇದೆಯೇ? ಖಂಡಿತ ಇಲ್ಲ. ನೀವು ಸತ್ಯವನ್ನು ಮಾತನಾಡಿದಾಗ ಅಥವಾ ನಿಮ್ಮ ತತ್ವಗಳಿಗೆ ಅಂಟಿಕೊಂಡಾಗ, ಜನರು ನಿಮ್ಮನ್ನು ದ್ವೇಷಿಸಲು ಪ್ರಾರಂಭಿಸುತ್ತಾರೆ. ಯಾಕೆಂದರೆ ನಿಮ್ಮ ವ್ಯಕ್ತಿತ್ವವು ಅವರ ಸುಳ್ಳು ಮುಖವಾಡಗಳನ್ನು ಕಳಚುತ್ತದೆ. ಈ ದ್ವೇಷವು ನೀವು ಸರಿಯಾದ ಹಾದಿಯಲ್ಲಿದ್ದೀರಿ ಎಂಬುದಕ್ಕೆ ಸಾಕ್ಷಿ. ನೀವು ಎಲ್ಲರಿಗೂ ಬಾಗಿ ನಡೆದರೆ, ಜನರು ನಿಮ್ಮನ್ನು ತುಂಬಾ 'ಒಳ್ಳೆಯವರು' ಎಂದು ಹೊಗಳುತ್ತಾರೆ. ಆದರೆ, ಅದೇ ಜನರು ನಿಮ್ಮ ಮಿತಿಗಳನ್ನು ಮೀರಿ ನಿಮ್ಮ ಮೇಲೆ ಸವಾರಿ ಮಾಡುತ್ತಾರೆ. ನೀವು ಅವರ ಅಗತ್ಯಗಳನ್ನು ಪೂರೈಸುವುದನ್ನು ನಿಲ್ಲಿಸಿದ ತಕ್ಷಣ, ಆ ಹೊಗಳಿಕೆ ಮಾಯವಾಗುತ್ತದೆ. ಇತಿಹಾಸವನ್ನು ಗಮನಿಸಿದರೆ, ಮಹಾನ್ ನಾಯಕರು ಆರಂಭದಲ್ಲಿ 'ತೋಳ'ಗಳಂತೆ ದ್ವೇಷಕ್ಕೊಳಗಾದವರೇ. ಅವರು ಸಮಾಜದ ತಪ್ಪು ನಿಯಮಗಳನ್ನು ವಿರೋಧಿಸಿದಾಗ ಜನ ಅವರನ್ನು ನಿಂದಿಸಿದರು. ಆದರೆ, ಅವರು ತಮ್ಮ ಸಮಗ್ರತೆಯನ್ನು ಬಿಟ್ಟುಕೊಡಲಿಲ್ಲ. ಸಾಕ್ರಟೀಸ್, ಬಸವಣ್ಣ ಅಥವಾ ಅಂಬೇಡ್ಕರ್ ಅವರಂಥವರು ಅಂದಿನ ಕಾಲದ ಕಟ್ಟುಪಾಡುಗಳಿಗೆ ಸವಾರಿ ಮಾಡಲು ಅವಕಾಶ ಕೊಡಲಿಲ್ಲ. ಅವರು ತಮ್ಮ ಸಿದ್ಧಾಂತಕ್ಕೆ ಬದ್ಧರಾಗಿದ್ದರು. ಅವರ ಸತ್ಯದ ದಾರಿ ಅನೇಕರಿಗೆ ದ್ವೇಷ ತರಿಸಿತ್ತು, ಆದರೆ ಇಂದು ಅದೇ ಲೋಕ ಅವರ ಪಾದಗಳಿಗೆ ನಮಸ್ಕರಿಸುತ್ತದೆ. ಬದುಕುವುದು ನೂರು ದಿನಗಳಲ್ಲ, ಒಂದು ದಿನವಾದರೂ ಸ್ವಾಭಿಮಾನದಿಂದ ಬದುಕಬೇಕು. ಇತರರ ಸವಾರಿಗೆ ಗುರಿಯಾಗುವ ಕತ್ತೆಯಾಗಿ ದಶಕಗಳ ಕಾಲ ಬದುಕುವುದಕ್ಕಿಂತ, ತನ್ನ ಸ್ವಂತಿಕೆ ಮತ್ತು ಸಮಗ್ರತೆಯನ್ನು ಕಾಪಾಡಿಕೊಂಡು, ಯಾರ ಹಂಗೂ ಇಲ್ಲದೆ ಬದುಕುವ ತೋಳದ ಜೀವನವೇ ಶ್ರೇಷ್ಠ.

ಅಂಬೇಡ್ಕರ್ ಅವರ ಅರ್ಥನೀತಿಯ ದಾರಿ

ವಿತ್ತ ವಿದ್ವತ್ತು

ಅಜಿತ್ ಶೆಟ್ಟಿ ಹೆರಂಜೆ
vveditoped@gmail.com

ಭಾರತದ ಇತಿಹಾಸದಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ಅವರನ್ನು ಕೇವಲ ಸಾಮಾಜಿಕ ಕ್ರಾಂತಿಕಾರಿ ಅಥವಾ ಸಂವಿಧಾನ ಶಿಲ್ಪಿ ಎಂದು ಕರೆಯುವುದು ಅವರ ಬಹುಮುಖಿ ಪ್ರತಿಭೆಗೆ ನೀಡುವ ಅಲ್ಪ ಗೌರವ. ಅವರು ಮೂಲತಃ ಒಬ್ಬ ಶ್ರೇಷ್ಠ ಅರ್ಥಶಾಸ್ತ್ರಜ್ಞ. ಅಂಬೇಡ್ಕರ್ ಅವರ ಆರ್ಥಿಕ ಚಿಂತನೆಗಳು ಕೇವಲ ಸಿದ್ಧಾಂತಗಳಾಗಿರಲಿಲ್ಲ; ಅವು ಬ್ರಿಟಿಷರು ಭಾರತದ ಸಂಪತ್ತನ್ನು ವ್ಯವಸ್ಥಿತವಾಗಿ ಲೂಟಿ ಮಾಡುವುದನ್ನು ತಡೆಯಲು ಹೂಡಿದ ಬೌದ್ಧಿಕ ಯುದ್ಧತಂತ್ರಗಳಾಗಿದ್ದವು. 1920 ಮತ್ತು 1930ರ ದಶಕದಲ್ಲಿ ಅವರು ಮಂಡಿಸಿದ ಪ್ರಬಂಧಗಳು ಮತ್ತು ನೀಡಿದ ಸಾಕ್ಷ್ಯಗಳು ಭಾರತದ ಸಾವಿರಾರು ಕೋಟಿ ರೂಪಾಯಿಗಳ ಸಂಪತ್ತನ್ನು ಬ್ರಿಟಿಷರ ಪಾಲಾಗುವುದರಿಂದ ರಕ್ಷಿಸಿದ್ದವು.

1918ರಲ್ಲಿ ಮೊದಲ ಮಹಾಯುದ್ಧ ಅಂತ್ಯಗೊಂಡಾಗ ಬ್ರಿಟನ್ ವಿಜಯೋತ್ಸವ ಆಚರಿಸುತ್ತಿದ್ದರೂ, ಒಳಗಿನಿಂದ ಅದು ಆರ್ಥಿಕವಾಗಿ ಹೈರಾಣಾಗಿತ್ತು. ಯುದ್ಧಕ್ಕಾಗಿ ಅಮೆರಿಕದಂತಹ ದೇಶಗಳಿಂದ ಪಡೆದಿದ್ದ ಬೃಹತ್ ಸಾಲವನ್ನು ತೀರಿಸಲು ಬ್ರಿಟನ್ ತನ್ನ ವಸಾಹತುಗಳ ಮೇಲೆ ಕಣ್ಣಿಟ್ಟಿತು. ಅದರಲ್ಲಿ ಪ್ರಮುಖವಾದುದು ಭಾರತ. ಭಾರತದ ಸಂಪತ್ತನ್ನು ಲಂಡನ್ನಿಗೆ ಹರಿಸಲು ಬ್ರಿಟಿಷರು ಬಳಸುತ್ತಿದ್ದ ಪ್ರಮುಖ ಅಸ್ತ್ರವೆಂದರೆ 'ಹಣಕಾಸು ನೀತಿ'. ಅಂದು ರೂಪಾಯಿ ಮತ್ತು ಪೌಂಡ್ ನಡುವಿನ ವಿನಿಮಯ ದರವನ್ನು ಬ್ರಿಟಿಷ್ ಅಧಿಕಾರಿಗಳೇ ನಿರ್ಧರಿಸುತ್ತಿದ್ದರು, ಮತ್ತು ಅದಕ್ಕೆ ನಿರ್ದಿಷ್ಟವಾದ ಮಾನದಂಡಗಳನ್ನು ಬಳಸುತ್ತಿರಲಿಲ್ಲ. ಒಂದು ರೂಪಾಯಿಗೆ ಎಷ್ಟು ಪೌಂಡ್ ಅಥವಾ ಎಷ್ಟು ಚಿನ್ನ ನೀಡಬೇಕು ಎಂಬುದು ಬ್ರಿಟಿಷ್ ವ್ಯಾಪಾರಿಗಳ ಲಾಭಕ್ಕೆ ಅನುಗುಣವಾಗಿ ಬದಲಾಗುತ್ತಿತ್ತು. ಈ ವಿನಿಮಯ ದರದ ಆಟದಲ್ಲಿ ಭಾರತದ ರೈತರು ಬೆಳೆದ ಬೆಳೆ ಅಗ್ಗವಾಗಿ ವಿದೇಶಕ್ಕೆ ಹೋಗುತ್ತಿತ್ತು. ಆದರೆ ಭಾರತವು ವಿದೇಶದಿಂದ ಆಮದು ಮಾಡಿಕೊಳ್ಳುವ ಸರಕುಗಳು ಅತಿಯಾದ ಬೆಲೆಗೆ ಮಾರಾಟವಾಗುತ್ತಿದ್ದವು. ಈ ಮೂಲಕ ಭಾರತದ ಶ್ರಮಿಕರ ಸಂಪತ್ತು 'ಅದೃಶ್ಯ'ವಾಗಿ ಬ್ರಿಟನ್ ತಲುಪುತ್ತಿತ್ತು.

ಬ್ರಿಟಿಷ್ ಆರ್ಥಿಕ ಲೂಟಿಯ ಬಯಲು

1923ರಲ್ಲಿ ಅಂಬೇಡ್ಕರ್ ಅವರು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸಿನಲ್ಲಿ ಮಂಡಿಸಿದ 'The Problem of the Rupee: Its Origin and Its Solution' ಎಂಬ ಪ್ರಬಂಧವು ಬ್ರಿಟಿಷ್ ಸರ್ಕಾರದ ನಿದ್ದೆಗೆಡಿಸಿತು. ಅಂದು ಜಗತ್ತಿನ ಖ್ಯಾತ ಅರ್ಥಶಾಸ್ತ್ರಜ್ಞ ಜಾನ್ ಮೇನಾರ್ಡ್ ಕೇನ್ಸ್ ಅವರು ಭಾರತಕ್ಕೆ 'ಗೋಲ್ಡ್ ಎಕ್ಸ್‌ಚೇಂಜ್ ಸ್ಟ್ಯಾಂಡರ್ಡ್' ಎಂಬ ವ್ಯವಸ್ಥೆಯನ್ನು ಶಿಫಾರಸು ಮಾಡಿದ್ದರು. ಇದರ ಪ್ರಕಾರ, ಭಾರತದ ರೂಪಾಯಿ ಮೌಲ್ಯವನ್ನು ಬ್ರಿಟಿಷ್ ಪೌಂಡಿಗೆ ಜೋಡಿಸಿ, ಅದರ ಹೆಸರಿನಲ್ಲಿರುವ ಚಿನ್ನದ ಮೀಸಲನ್ನು ಲಂಡನ್ನಿನಲ್ಲಿ ಇಡಲಾಗುತ್ತಿತ್ತು. ಅಂಬೇಡ್ಕರ್ ಅವರು ಈ ವ್ಯವಸ್ಥೆಯನ್ನು ಅತ್ಯಂತ ಕಟುವಾಗಿ ಟೀಕಿಸಿದರು. ಅವರು ಹೇಳಿದಂತೆ, ಈ ವ್ಯವಸ್ಥೆಯು ಭಾರತದ ಚಿನ್ನವನ್ನು ಲಂಡನ್ನಿನ ಬ್ಯಾಂಕುಗಳಲ್ಲಿ ಒತ್ತೆಯಾಳನ್ನಾಗಿ ಮಾಡಿದೆ. ರೂಪಾಯಿ ಮೌಲ್ಯ ಸ್ಥಿರವಾಗಿರಬೇಕಾದರೆ ಕೇವಲ ವಿನಿಮಯ ದರ ಮುಖ್ಯವಲ್ಲ, ದೇಶದ ಒಳಗೆ ವಸ್ತುಗಳ ಬೆಲೆ ಸ್ಥಿರವಾಗಿರಬೇಕು (Internal Price Stability) ಎಂದು ಅವರು ವಾದಿಸಿದರು. ಬ್ರಿಟಿಷರು ವಿನಿಮಯ ದರವನ್ನು ಹೆಚ್ಚಿಸಿ (High Exchange Rate), ಭಾರತದ ರಫ್ತುದಾರರಿಗೆ (ರೈತರಿಗೆ) ಸಿಗಬೇಕಾದ ಹಣವನ್ನು ಕಸಿದುಕೊಳ್ಳುತ್ತಿದ್ದಾರೆ ಎಂದು ಅವರು ಅಂಕಿ ಅಂಶಗಳ ಸಮೇತ ಸಾಬೀತುಪಡಿಸಿದರು.

ಆರ್‌ಬಿಐ ಎಂಬ ತಡೆಗೋಡೆ

1926ರಲ್ಲಿ ಭಾರತೀಯ ಹಣಕಾಸು ಮತ್ತು ಕರೆನ್ಸಿಯ ಮೇಲಿನ 'ರಾಯಲ್ ಕಮಿಷನ್' (ಹಿಲ್ಟನ್ ಯಂಗ್ ಆಯೋಗ) ಭಾರತಕ್ಕೆ ಭೇಟಿ ನೀಡಿತು. ಅಂಬೇಡ್ಕರ್ ಅವರು ಈ ಆಯೋಗದ ಮುಂದೆ ನೀಡಿದ ಸಾಕ್ಷ್ಯವು ಆಧುನಿಕ ಭಾರತದ ಆರ್ಥಿಕತೆಗೆ ಅಡಿಪಾಯ ಹಾಕಿತು. ಅಂಬೇಡ್ಕರ್ ಅವರು ವಾದಿಸಿದ ಪ್ರಮುಖ ಅಂಶವೆಂದರೆ: ಭಾರತಕ್ಕೆ ಒಂದು 'ಸ್ವಾಯತ್ತ ಕೇಂದ್ರೀಯ ಬ್ಯಾಂಕ್' ಬೇಕು. ಅದು ಬ್ರಿಟಿಷ್ ಸರ್ಕಾರದ ಅಧೀನದಲ್ಲಿರಬಾರದು ಮತ್ತು ಖಾಸಗಿ ಬ್ಯಾಂಕರ್‌ಗಳ ಹಿತಾಸಕ್ತಿಯನ್ನು ಕಾಪಾಡಬಾರದು. ಬದಲಿಗೆ, ಅದು ಭಾರತದ ಸಾರ್ವಜನಿಕರ ಹಿತಕ್ಕಾಗಿ ಕೆಲಸ ಮಾಡಬೇಕು ಎಂದು ತಮ್ಮ ವಾದವನ್ನು ತರ್ಕಬದ್ಧವಾಗಿ ಮುಂದಿಟ್ಟರು. ಅವರ ಈ ದೃಢವಾದ ನಿಲುವುಗಳಿಂದಾಗಿಯೇ 1934ರಲ್ಲಿ ಆರ್‌ಬಿಐ ಕಾಯ್ದೆ ಅಂಗೀಕಾರವಾಗಿ, 1935ರ ಏಪ್ರಿಲ್ 1ರಂದು ಭಾರತೀಯ ರಿಸರ್ವ್ ಬ್ಯಾಂಕ್ ಜನ್ಮತಾಳಿತು. ಆರ್‌ಬಿಐ ಸ್ಥಾಪನೆಯಾದ ನಂತರ, ಭಾರತದ ಹಣದ ಮುದ್ರಣ ಮತ್ತು ಚಿನ್ನದ ಮೀಸಲನ್ನು ನಿರ್ವಹಿಸುವ ಹಕ್ಕು ಬ್ರಿಟಿಷ್ ಅಧಿಕಾರಶಾಹಿಯಿಂದ ತಪ್ಪಿ ಒಂದು ಸಾಂಸ್ಥಿಕ ವ್ಯವಸ್ಥೆಯಾಗಿ ಭಾರತದ ಒಳಗೇ ಉಳಿಯಿತು. ಇದು ಭಾರತದ ಒಂದು ಹಂತಕ್ಕೆ ತಡೆಯಬಲ್ಲ ದೊಡ್ಡ 'ಚೆಕ್ ಡ್ಯಾಮ್' ಆಯಿತು.

ಪಟ್ಟುಬಿಡದ ತಾರ್ಕಿಕ ವ್ಯಕ್ತಿ

ಅಂಬೇಡ್ಕರ್ ಅವರ ತರ್ಕ ಎಷ್ಟು ಪ್ರಬಲವಾಗಿತ್ತೆಂದರೆ ಸ್ವತಃ ಬ್ರಿಟಿಷ್ ಅಧಿಕಾರಿಗಳೇ ಮಾರುಹೋದರು. ಅವರ ಗುರು ಎಡ್ವಿನ್ ಕ್ಯಾನನ್ ಅಂಬೇಡ್ಕರ್ ಅವರ ಬಹುತೇಕ ವಾದಗಳನ್ನು ಒಪ್ಪದಿದ್ದರೂ 'ಅವರ ವಿಚಾರಗಳಲ್ಲಿ ಪ್ರಚೋದನಕಾರಿ ತಾಜಾತನ

ಇದೆ' ಎಂದು ಹೊಗಳಿದರು. ಬ್ರಿಟಿಷ್ ಹಣಕಾಸು ಸದಸ್ಯ ಸರ್ ಬೇಸಿಲ್ ಬ್ಲ್ಯಾಕೆಟ್‌ಗೆ ಅಂಬೇಡ್ಕರ್ ತರ್ಕ ದೊಡ್ಡ ತಲೆನೋವಾಯಿತು. ಅರ್ಥಶಾಸ್ತ್ರಜ್ಞ ನರೇಂದ್ರ ಜಾಧವ್ ದಾಖಲಿಸಿದಂತೆ ಬ್ರಿಟಿಷ್ ಆಂತರಿಕ ದಾಖಲೆಗಳಲ್ಲಿ ಅಂಬೇಡ್ಕರ್ ಅವರನ್ನು 'ಅತ್ಯಂತ ಕಠಿಣ ತಾರ್ಕಿಕ ವ್ಯಕ್ತಿ' ಎಂದು ಉಲ್ಲೇಖಿಸಲಾಗಿದೆ. ವೈಸ್‌ರಾಯ್ ವೇವಲ್ ಡೈರಿಯಲ್ಲಿ ಅಂಬೇಡ್ಕರ್ ಅವರ ಆರ್ಥಿಕ ಚತುರತೆ ಬ್ರಿಟಿಷ್ ಖಜಾನೆಗೆ ಹೇಗೆ ಸಂಕಷ್ಟ ತರುತ್ತದೆ ಎಂದು ಆತಂಕದಿಂದ ದಾಖಲಿಸಿದ್ದಾರೆ. ಬ್ರಿಟಿಷ್ ಸಾಮ್ರಾಜ್ಯಶಾಹಿ ಭಾರತವನ್ನು ಆರ್ಥಿಕ ಗುಲಾಮಗಿರಿಯಲ್ಲಿ ಇರಿಸಲು ಹೆಣೆದ ಕರೆನ್ಸಿ ನೀತಿಗೆ ತರ್ಕಬದ್ಧ ಅಂಕಿ ಅಂಶಗಳ ಮೂಲಕ ಮೊದಲ ಬೌದ್ಧಿಕ ಕೊಡಲಿ ಪೆಟ್ಟು ನೀಡಿದ ಅರ್ಥಶಾಸ್ತ್ರಜ್ಞ ಅಂಬೇಡ್ಕರ್ ಎಂಬ ಮಾತು ಅಕ್ಷರಶಃ ಸತ್ಯ.

ಅಂಬೇಡ್ಕರ್ ನೀತಿ

ಅಂಬೇಡ್ಕರ್ ಅವರ ಪ್ರಯತ್ನಗಳು ಕೊಳ್ಳೆಯನ್ನು ಸಂಪೂರ್ಣವಾಗಿ ತಡೆಯಲಿಲ್ಲ, ಆದರೆ ಭಾರತವನ್ನು ಗುಡಿಸಿ ಗುಂಡಾಂತರ ಮಾಡುವ ಬ್ರಿಟಿಷರ ಯೋಜನೆ ಫಲಕಾರಿಯಾಗಲಿಲ್ಲ. ಭಾರತದ ಹಣದ ಹೊಳೆಗೆ ಅವರ ನೀತಿ 'ಚೆಕ್ ಡ್ಯಾಮ್' ಹಾಕಿತು. ವಿದ್ವಾಂಸರ ಸಂಶೋಧನೆಯ ಪ್ರಕಾರ ಬ್ರಿಟಿಷರು ಇಂದಿನ ಲೆಕ್ಕಾಚಾರದಲ್ಲಿ ಸುಮಾರು 44.6 ಟ್ರಿಲಿಯನ್ ಸಂಪತ್ತನ್ನು ಕೊಳ್ಳೆ ಹೊಡೆದರು. ಆದರೆ ಆರ್‌ಬಿಐ ಸ್ಥಾಪನೆಯಿಂದ ಬ್ರಿಟಿಷರ ಪ್ರತಿ ವ್ಯವಹಾರವು ಸಾಂಸ್ಥಿಕ ಚೌಕಟ್ಟಿನೊಳಗೆ ಬಂದು ಲೆಕ್ಕಪತ್ರದಲ್ಲಿ ದಾಖಲಾಯಿತು. ಅಲ್ಲಿಯವರೆಗೆ ಅವರು ಮಾಡುತ್ತಿದ್ದ ನಗ್ನ ಲೂಟಿಗೆ ತಡೆ ಬಿತ್ತು; ಯುದ್ಧದ ಹೆಸರಿನಲ್ಲಿ ಭಾರತದ ಸಂಪತ್ತನ್ನು ಬಳಸಿಕೊಂಡರೆ ಅದನ್ನು 'ಬಾಕಿ ಸಾಲ' ಎಂದು ಕಾಗದದ ಮೇಲಾದರೂ ಒಪ್ಪಿಕೊಳ್ಳಲೇಬೇಕಾದ ಅನಿವಾರ್ಯತೆ ಬ್ರಿಟನ್ನಿಗೆ ಎದುರಾಯಿತು. ಅಷ್ಟೇ ಅಲ್ಲ, ಕರೆನ್ಸಿ ಮುದ್ರಣಕ್ಕೆ ಆರ್‌ಬಿಐ ಅಳವಡಿಸಿದ ಕಟ್ಟುನಿಟ್ಟಾದ ಮೀಸಲು ವ್ಯವಸ್ಥೆಯು (Reserve Framework) ಬ್ರಿಟಿಷರ ಮನಬಂದಂತೆ ಹಣ ಮುದ್ರಿಸುವ ದಾರಿಯನ್ನು ಮುಚ್ಚಿತು. ಇದರ ಪರಿಣಾಮವಾಗಿಯೇ, ಭಾರತ ಬಿಟ್ಟು ಹೋಗುವಾಗ ಬ್ರಿಟಿಷರು ಭಾರತದ ಅಧಿಕೃತ ಸಾಲಗಾರರಾಗಿ ನಿಲ್ಲಬೇಕಾಯಿತು. ವಸಾಹತುಶಾಹಿ ಇತಿಹಾಸದಲ್ಲಿ ಬೇರೆ ಯಾವ ದೇಶದಲ್ಲಿಯೂ ಆಗದ ಇಂತಹ ಮುಜುಗರ ಬ್ರಿಟನ್ನಿಗೆ ಎದುರಾಗಲು ಅಂಬೇಡ್ಕರ್ ರೂಪಿಸಿದ ಆರ್ಥಿಕ ತಡೆಗೋಡೆಯೇ ಕಾರಣ. ಭಾರತದ ರೂಪಾಯಿ ಮೌಲ್ಯವು ಸ್ಥಿರತೆ ಕಾಪಾಡಿಕೊಂಡಿತು. ಒಟ್ಟಾರೆ ಬ್ರಿಟನ್ 1.7 ಬಿಲಿಯನ್ ಪೌಂಡ್ ಮರುಪಾವತಿ ಮಾಡಬೇಕಾಯಿತು. ಅಂಬೇಡ್ಕರ್ ನೀತಿಯ ಭದ್ರ ಬುನಾದಿ ಮತ್ತು ದಿಕ್ಸೂಚಿ ಬಲದಿಂದ ಭಾರತ ಐಎಂಎಫ್ ಮತ್ತು ವಿಶ್ವ ಬ್ಯಾಂಕಿನ ಸ್ಥಾಪಕ ಸದಸ್ಯರಾಯಿತು.

ಸ್ವತಂತ್ರ ಭಾರತಕ್ಕೆ ಆರ್ಥಿಕ ಪ್ರಾಣವಾಯು

ಪಟ್ನಾಯಕ್ ಅವರ ಸಂಶೋಧನೆಯಿಂದ 44.6 ಟ್ರಿಲಿಯನ್ ಡಾಲರ್ ಕಲೋನಿಯಲ್ ಲೂಟಿ ಎಂದು ಪ್ರಮಾಣೀಕರಿಸಿದೆ. ಇದರ ನಡುವೆಯೂ ಆರ್‌ಬಿಐನಲ್ಲಿ, ₹1,700 ಕೋಟಿಯಷ್ಟು ಸಂಪತ್ತು, 225 ಟನ್ ಚಿನ್ನ, ವಿದೇಶಿ ಭದ್ರತಾ ಠೇವಣಿ ರೂಪದಲ್ಲಿ ಉಳಿಯಿತು. ಇಂದಿನ ಮೌಲ್ಯದಲ್ಲಿ ಸುಮಾರು ₹22 ಲಕ್ಷ ಕೋಟಿ ಅಥವಾ 260–280 ಬಿಲಿಯನ್ ಡಾಲರ್ ಎಂದು ಅಂದಾಜಿಸಬಹುದು. ಆಗಿನ ಚಿನ್ನದ ದರ ಪ್ರತಿ 10 ಗ್ರಾಮಿಗೆ ₹88 ಇತ್ತು. ಆದರೆ ಈ ಕುರಿತು ಇನ್ನಷ್ಟು ಸಂಶೋಧನೆಗಳಾದರೆ ಮಾತ್ರ ನಿಖರ ಮೊತ್ತ ತಿಳಿಯಲು ಸಾಧ್ಯ. 1947–48ರ ಮೊದಲ ಬಜೆಟ್ ಕೇವಲ ₹197 ಕೋಟಿ. ಅಂದರೆ ಅಂಬೇಡ್ಕರ್ ಉಳಿಸಿದ ₹1,700 ಕೋಟಿ ಅಂದಿನ ಬಜೆಟಿಗಿಂತ 8.6 ಪಟ್ಟು ಹೆಚ್ಚು. ಇದೇ ಹಣದಿಂದ ಸ್ವತಂತ್ರ ಭಾರತ ಸೈನ್ಯ ಕಟ್ಟಿತು, ಸರ್ಕಾರಿ ನೌಕರರ ಸಂಬಳ ಕೊಟ್ಟಿತು, ಪಂಚವಾರ್ಷಿಕ ಯೋಜನೆಗಳಿಗೆ ಬಂಡವಾಳ ಹಾಕಿತು ಮತ್ತು ಪಾಕಿಸ್ತಾನ ವಿಭಜನೆಯ ಸಂದರ್ಭದಲ್ಲಿ ಬ್ರಿಟನ್‌ನಿಂದ 1.7 ಬಿಲಿಯನ್ ಪೌಂಡ್ ವಾಪಸ್ ಪಡೆಯಿತು. ಅಂಬೇಡ್ಕರ್ ಈ ಮೂಲಕ ಸ್ವತಂತ್ರ ಭಾರತಕ್ಕೆ ಆರ್ಥಿಕ ಪ್ರಾಣವಾಯು ನೀಡಿದರು. ಅವರ ರಕ್ಷಣೆ ಇಲ್ಲದಿದ್ದರೆ ಸ್ವಾತಂತ್ರ್ಯ ಸಿಕ್ಕಿ ಎರಡೇ ವರ್ಷದಲ್ಲಿ ಭಾರತ ನೇಪಾಳ, ಕ್ಯೂಬಾ, ಶ್ರೀಲಂಕಾದಲ್ಲಿ ಆದಂತೆ ಖಾಲಿ ಖಜಾನೆ, ಅಸ್ಥಿರ ರೂಪಾಯಿ ಮತ್ತು ವಿದೇಶಿ ಸಾಲದ ಸಂಕೋಲೆಯಲ್ಲಿ ಸಿಲುಕುತ್ತಿತ್ತು.

ಮೊದಲ ಬಾರಿ ಸಂದ ಗೌರವ

ಅಂಬೇಡ್ಕರ್ ಅವರ ಈ ಮಹತ್ವದ ಕಾರ್ಯ ಸ್ವತಂತ್ರ ಭಾರತದ ಇತಿಹಾಸದಲ್ಲಿ ಬಹಳ ಕಡಿಮೆ ಚರ್ಚೆಗೆ ಒಳಗಾಯಿತು. ಅವರ ವಿಚಾರದ ಲೇಖನ, ಪ್ರಬಂಧ, ಸಂಶೋಧನೆಗಳು ಬಹುಪಾಲು ಸಾಮಾಜಿಕ ನ್ಯಾಯ ಮತ್ತು ಸಂವಿಧಾನದ ವಿಷಯಗಳಿಗೆ ಮಾತ್ರ ಸೀಮಿತವಾಯಿತು. ಇದು ಭಾರತದ ಬೌದ್ಧಿಕ ಚರಿತ್ರೆಯ ದೊಡ್ಡ ನಷ್ಟ. ಅಂಬೇಡ್ಕರ್ ಅವರ ಆರ್ಥಿಕ ಚಿಂತನೆಯ ಕುರಿತು 2015ರಲ್ಲಿ ಮಾತನಾಡಿದ ಪ್ರಧಾನ ಮಂತ್ರಿ ಮೋದಿ, ಅಂಬೇಡ್ಕರ್ ಅವರ ಆರ್ಥಿಕ ಚಿಂತನೆ ಮತ್ತು ದೃಷ್ಟಿಕೋನ ಇನ್ನೂ ಸಂಪೂರ್ಣವಾಗಿ ಅರ್ಥವಾಗಿಲ್ಲ ಎಂದು ಹೇಳಿದರು. ಬಹುಶಃ ಇದನ್ನು ಅರಿತೇ 2016ರ ಡಿಸೆಂಬರ್ 31ರಂದು ಭೀಮ್ ಆ್ಯಪ್ ಲಾಂಚ್ ಮಾಡುವಾಗ ಅದಕ್ಕೆ ಬಾಬಾಸಾಹೇಬ್ ಅವರ ಹೆಸರಿಟ್ಟು, ಅಂಬೇಡ್ಕರ್ ಅವರ ಆರ್ಥಿಕ ಕೊಡುಗೆಯ ಕುರಿತು ಭಾರತದ ಕರೆನ್ಸಿ ವ್ಯವಸ್ಥೆ, ಕೇಂದ್ರೀಯ ಬ್ಯಾಂಕಿನ ಕಲ್ಪನೆ ಮತ್ತು ಫೆಡರಲ್ ವ್ಯವಸ್ಥೆಯ ಹಣಕಾಸು ಚೌಕಟ್ಟು – ಇವೆಲ್ಲದರಲ್ಲೂ ಒಬ್ಬ ಮಹಾನ್ ವ್ಯಕ್ತಿಯ ದರ್ಶನ ಸ್ಪಷ್ಟವಾಗಿ ಕಾಣುತ್ತದೆ. ಆ ಮಹಾನ್ ವ್ಯಕ್ತಿ ಬೇರೆ ಯಾರೂ ಅಲ್ಲ ಎಂದು ಹೇಳಿದರು. ಸ್ವಾತಂತ್ರ್ಯದ ನಂತರ ಅಂಬೇಡ್ಕರ್ ಅವರ ಆರ್ಥಿಕ ಕೊಡುಗೆಯನ್ನು ಅಧಿಕೃತವಾಗಿ ಗುರುತಿಸಿ ಗೌರವಿಸಿದ ಮೊದಲ ಪ್ರಧಾನ ಮಂತ್ರಿ, ಮೋದಿ. ಯೋಚಿಸಿ– ಯಾಕೆ ಅಂಬೇಡ್ಕರ್ ಅವರನ್ನು ಕೇವಲ ಸಾಮಾಜಿಕ ನ್ಯಾಯಕ್ಕೆ ಸೀಮಿತ ಮಾಡಿದರು? Indeed, it is Ambedkar Way & India's Way.

ಭಾಷಾನೀತಿ

ಸಾಮಗ ದತ್ತಾತ್ರಿ, ಬೆಂಗಳೂರು

ಶಿಕ್ಷಣ ಮಾಧ್ಯಮ: ಸುಪ್ರೀಂ ದ್ವಂದ್ವ

ಇದೇ ತಿಂಗಳ 12ರಂದು ಸುಪ್ರೀಂ ಕೋರ್ಟಿನ ದ್ವಿಸದಸ್ಯ ಪೀಠ ನೀಡಿದ ರಾಜಸ್ಥಾನೀ ಕುರಿತ ತೀರ್ಪು ಕರ್ನಾಟಕದಲ್ಲಿ ಕನ್ನಡ ಮಾಧ್ಯಮಕ್ಕೆ ಬಲ ನೀಡುವುದೇ? ಇಲ್ಲವೆನ್ನುವುದೇ ಬಹುಶಃ ಉತ್ತರ ಅಲ್ಲವೇ! ಈ ತೀರ್ಪಿಗೂ ಇದಕ್ಕೂ ಮುಂಚೆ 2014ರಲ್ಲಿ ಕರ್ನಾಟಕದ ಪ್ರಕರಣಕ್ಕೇ ಸಂಬಂಧಿಸಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪಿಗೂ ತತ್ವಶಃ ಏನೂ ವ್ಯತ್ಯಾಸವಿಲ್ಲ. ಎರಡೂ ತೀರ್ಪುಗಳನ್ನು ಸಂವಿಧಾನದ ವಿಧಿ 19(1)(ಎ) ನೆಲೆಯಲ್ಲೇ ಸುಪ್ರೀಂ ಕೋರ್ಟು ನೀಡಿರುವುದು. ಅಂದರೆ ಮಗುವಿನ ಶಿಕ್ಷಣ ಮಾಧ್ಯಮ ಯಾವುದಿರಬೇಕೆಂಬ ಆಯ್ಕೆಯ ಹಕ್ಕು ದೊರಕುವುದು ಮಗು ಅಥವಾ ಅದರ ತಂದೆ–ತಾಯಿ ಅಥವಾ ಪೋಷಕರಿಗೆ ಮಾತ್ರ.

ಸಂವಿಧಾನದ ವಿಧಿ 19(1)(ಎ)ರಲ್ಲಿ ಈ ಹಕ್ಕು ಅಂತರ್ಗತವಾಗಿದೆ ಎಂದು ವ್ಯಾಖ್ಯಾನಿಸುತ್ತದೆ ಸುಪ್ರೀಂ ಕೋರ್ಟ್. ಎರಡು ಪ್ರಕರಣಗಳಿಗೆ ಇರುವ ವ್ಯತ್ಯಾಸವೆಂದರೆ, 2014ರ ಪ್ರಕರಣದಲ್ಲಿ ಮೇಲ್ಮನವಿದಾರ ಆಗಿದ್ದ ಕರ್ನಾಟಕ ಪೋಷಕರ ಸಂಘವು ಇಂಗ್ಲಿಷ್ ಮಾಧ್ಯಮದ ಆಯ್ಕೆ ತನಗಿರುವ ಸಾಂವಿಧಾನಿಕ ಹಕ್ಕು ಎಂಬ ವಾದವನ್ನು ಮುಂದಿಟ್ಟಿತ್ತು (ರಾಜ್ಯ ಸರ್ಕಾರ ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡಿತ್ತು).

ರಾಜಸ್ಥಾನದ ಪ್ರಕರಣದಲ್ಲಿ ಮನವಿದಾರರಾದ ಪದಮ್ ಮೆಹ್ತಾ ಮತ್ತು ಇತರರದು ರಾಜಸ್ಥಾನಿ ಭಾಷೆಯಲ್ಲಿ ಶಿಕ್ಷಣ ನೀಡಬೇಕೆಂಬ ಕೋರಿಕೆ. ರಾಜಸ್ಥಾನ ಸರ್ಕಾರ ಇದನ್ನು ತಿರಸ್ಕರಿಸಿತ್ತು. ಎರಡು ತೀರ್ಪುಗಳಲ್ಲೂ ರಾಜ್ಯ ಸರ್ಕಾರಗಳ ನಿಲುವನ್ನು ಸುಪ್ರೀಂ ಕೋರ್ಟು ಪುರಸ್ಕರಿಸಿಲ್ಲ. ಕರ್ನಾಟಕದಲ್ಲಿ ಪೋಷಕರ ಸಂಘ ಆಂಗ್ಲ ಮಾಧ್ಯಮದ ಪರವಾಗಿತ್ತು. ರಾಜಸ್ಥಾನದಲ್ಲಿ ಮನವಿದಾರರು ರಾಜಸ್ಥಾನಿ ಭಾಷೆಯ ಪರ ವಾದಿಸಿದ್ದರು. ಎರಡು ಪ್ರಕರಣಗಳಲ್ಲೂ ಮಗುವಿನ ಶಿಕ್ಷಣ ಮಾಧ್ಯಮದ ಆಯ್ಕೆಯಲ್ಲಿ ಸಂವಿಧಾನಾತ್ಮಕವಾಗಿ ತಂದೆ ತಾಯಿ/ಪೋಷಕರದು ನಿರ್ಣಾಯಕ ಪಾತ್ರ ಎನ್ನುವುದು ಸುಪ್ರೀಂ ಕೋರ್ಟಿನ ತೀರ್ಪುಗಳ ಪ್ರಮಾಣ.

ಮಾತೃಭಾಷಾ ಶಿಕ್ಷಣದ ಪ್ರಾಮುಖ್ಯತೆಯನ್ನು ಒತ್ತಿ ಹೇಳುವ ಶಿಕ್ಷಣ ತಜ್ಞರ ಹೇಳಿಕೆಗಳು, ಕೊಠಾರಿ ಆಯೋಗದ ವರದಿ, ಮಕ್ಕಳ ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ 2009, ಅಲ್ಲಿನ ಸೆಕ್ಷನ್ 29(2)(ಎಫ್), ಸಂವಿಧಾನದ ವಿಧಿ 350ಎ, ಹಿಂದಿನ ತೀರ್ಪುಗಳು, 1968 ಮತ್ತು 1986ರ ರಾಷ್ಟ್ರೀಯ ಶಿಕ್ಷಣ ನೀತಿ, 1992ರ ರಾಷ್ಟ್ರೀಯ ಶಿಕ್ಷಣ ನೀತಿ, 2020ರ ರಾಷ್ಟ್ರೀಯ ಶಿಕ್ಷಣ ನೀತಿ ಹೀಗೆ ವಿವಿಧ ವಿಷಯಗಳು ತೀರ್ಪಿನಲ್ಲಿ ಚರ್ಚಿತವಾಗಿವೆ. ಸಂವಿಧಾನದ ವಿಧಿ 19(1)(ಎ) ನೀಡುವ ಹಕ್ಕನ್ನು ಉಲ್ಲೇಖಿಸುವ ಮೂಲಕ ಮನವಿದಾರರ ಪರವಾಗಿ ಮತ್ತು ರಾಜ್ಯ ಸರ್ಕಾರಗಳ ನಿಲುವಿಗೆ ವಿರುದ್ಧವಾಗಿ ಸುಪ್ರೀಂ ಕೋರ್ಟ್ ತೀರ್ಪುಗಳು ಇವೆಯೆನ್ನುವುದು ಗಮನಾರ್ಹ.

ಎಂದ ಮೇಲೆ ಜಗತ್ತಿನಾದ್ಯಂತ ಶಿಕ್ಷಣ ತಜ್ಞರು ಪ್ರತಿಪಾದಿಸುವ ಮಗುವಿನ ಮೊದಲ ಶಿಕ್ಷಣ ಮಾತೃಭಾಷೆಯಲ್ಲಿರಬೇಕೆನ್ನುವ ತತ್ವವು ನಮ್ಮ ಸಂವಿಧಾನದ ನೆಲೆಯಲ್ಲಿ ಪುರಸ್ಕೃತಗೊಳ್ಳದು ಎಂದಾಯಿತಲ್ಲವೇ? ಕರ್ನಾಟಕದ ಮೂಲೆ ಮೂಲೆಗಳಲ್ಲಿ ವ್ಯಾಪಿಸಿರುವ ಖಾಸಗಿ ಆಂಗ್ಲ ಮಾಧ್ಯಮ ಶಾಲೆಗಳಿಗೆ ಮಕ್ಕಳನ್ನು ಸೇರಿಸುವ ಹಂಬಲ ಮತ್ತು ತವಕ ಪೋಷಕರದು! ಪರಿಣಾಮವಾಗಿ ಮಕ್ಕಳ ಹಾಜರಿ ಸಾಕಷ್ಟು ಇಲ್ಲದೆ ಸಾವಿರಾರು ಸರ್ಕಾರೀ ಶಾಲೆಗಳು ಮುಚ್ಚಿವೆ; ಮುಚ್ಚುವ ಸ್ಥಿತಿಯಲ್ಲಿವೆ ಎನ್ನಬಹುದು. ಅಂದರೆ, ನಗರ ಹಾಗೂ ಪಟ್ಟಣಗಳ ಮಾತಂತಿರಲಿ ಗ್ರಾಮೀಣ ಪ್ರದೇಶಗಳಲ್ಲಿ ಸಹ ತಂದೆ ತಾಯಿ ಅಥವಾ ಪೋಷಕರಿಗೆ ಕನ್ನಡ ಮಾಧ್ಯಮ ಬೇಕಿಲ್ಲ, ಏಕೆ? ಕನ್ನಡ ಮಾಧ್ಯಮ ಅನ್ನ ಕೊಡದು!

ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಸುಪ್ರೀಂ ಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ, ಮಗುವಿನ ಶಿಕ್ಷಣ ಮಾಧ್ಯಮ ನಿರ್ಧಾರವಾಗಬೇಕಾದುದು ನಮ್ಮಲ್ಲಿ ಜಗತ್ತಿನಾದ್ಯಂತ ಶಿಕ್ಷಣ ತಜ್ಞರು ಪ್ರತಿಪಾದಿಸುವ ಶೈಕ್ಷಣಿಕ ತತ್ವಾನುಸಾರವಾಗಿಯೋ? ಸಾಂವಿಧಾನಿಕ ಹಕ್ಕಿನ ಅಡಿಯಲ್ಲೋ? ಇದು ಸಮಸ್ಯೆ.

ಕೋವಿಡ್‌ನಿಂದ ಬದಲಾಗದ ನಾವು ಯುದ್ಧದಿಂದ ಬದಲಾದೇವೆ?

ಪದಸಾಗರ

ನವೀನ್ ಸಾಗರ್
vveditoped@gmail.com

ಪೆಟ್ರೋಲ್ ರೇಟ್ ಎಷ್ಟಾದರೇನಂತೆ, ನಾವಂತೂ ಹಂಡ್ರೆಡ್ಡೇ ಹಾಕಿಸೋವು, ಅಂತ ಮೊದಲೆಲ್ಲ ಬಹಳ ಹಗುರವಾಗಿ ತೆಗೆದುಕೊಳ್ಳುತ್ತಿದ್ದೆವು. ಪೆಟ್ರೋಲ್ ಡೀಸೆಲ್ ಬೆಲೆ ಮಧ್ಯರಾತ್ರಿಯಿಂದಲೇ ಒಂದು ರೂಪಾಯಿ ಏರಿಕೆ ಎಂಬ ಸುದ್ದಿ ಬಂದಕೂಡಲೇ ಪೆಟ್ರೋಲ್ ಬಂಕ್ ಮುಂದೆ ಕ್ಯೂ ನಿಲ್ಲುತ್ತಿದ್ದ ಗಾಡಿಗಳನ್ನು ನೋಡಿ ವಿಚಿತ್ರ ಅನಿಸುತ್ತಿತ್ತು. ಇವರೆಲ್ಲರೂ ಫುಲ್ ಟ್ಯಾಂಕ್ ಪೆಟ್ರೋಲ್ ಹಾಕಿಸಿದರೂ ಉಳಿಸೋದು ಅಬ್ಬಬ್ಬಾ ಅಂದರೆ ಮೂವತ್ತೋ ನಲವತ್ತೋ ರೂಪಾಯಿ. ಕಾರುಗಳಾದರೆ ನೂರು ನೂರೈವತ್ತು ರೂಪಾಯಿ. ಇದು ನಿಜಕ್ಕೂ ಸನ್ನಿಯಲ್ಲವಾ ಅಥವಾ ಮೂರ್ಖತನವಲ್ಲವಾ ಅಂದುಕೊಳ್ಳುತ್ತಿದ್ದೆ. ಕೆಲವರಂತೂ ಅದೇ ನೂರು ರೂಪಾಯಿ ಪೆಟ್ರೋಲ್ ಹಾಕಿಸೋದಕ್ಕೂ ಕ್ಯೂ ನಿಂತುಬಿಡುತ್ತಿದ್ದರು. ಒಂದು ಎರಡು ರೂಪಾಯಿ ಉಳಿಸಿ ಜಯಿಸೋದಾದ್ರೂ ಏನು ಅಂತೆಲ್ಲ ಅನಿಸುತ್ತಿತ್ತು. ಆದರೆ ಒಂದೊಂದು ರೂಪಾಯಿ ಉಳಿತಾಯವೂ ಎಷ್ಟು ಮುಖ್ಯ ಎಂಬುದನ್ನು ಕಾಲ ಅರ್ಥ ಮಾಡಿಸುತ್ತದೆ. ಹಣದ ಬೆಲೆ ಏನು ಎಂಬುದನ್ನು ಜೀವನದ ಏರುಪೇರುಗಳು ತಿಳಿಸಿಕೊಡುತ್ತವೆ.

ಇಪ್ಪತ್ತೊಂದನೆಯ ಶತಮಾನದ ಆದಿಯಲ್ಲಿ ಮೊದಲ ಬೈಕ್ ಖರೀದಿಸಿದ್ದೆ. ನೂರು ರೂಪಾಯಿಯಲ್ಲಿ ಮೂರೂಮುಕ್ಕಾಲು ಲೀಟರ್ ಪೆಟ್ರೋಲ್ ಹಾಕಿಸಬಹುದಿತ್ತು. ಅಷ್ಟು ಪೆಟ್ರೋಲಿನಲ್ಲಿ ಸುಮಾರು ಇನ್ನೂರು ಕಿಲೋಮೀಟರ್ ಓಡಾಡಬಹುದಿತ್ತು. ಆದರೆ ಅಂದಿಗೆ ನೂರು ರೂಪಾಯಿಯೇ ಅತಿದೊಡ್ಡ ದುಡ್ಡು. ರಿಸರ್ವ್‌ಗಿಂತ ಕೊಂಚ ಮೇಲಿದ್ದರೆ ಸಾಕು ಎಂಬಂತೆ ಐವತ್ತು ರೂಪಾಯಿಗೆ ಪೆಟ್ರೋಲ್ ಹಾಕಿಸಿ ಹಣ ಉಳಿಸುತ್ತಿದ್ದೆವು. ಪೆಟ್ರೋಲ್ ಉಳಿಸಲು ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದೆವು. ಆದರೆ ಜೀವನ ಶೈಲಿ ಬದಲಾಗುತ್ತಾ ಹೋದಂತೆ ಮಿತವ್ಯಯ ಎಂಬುದು ಅರ್ಥ ಕಳೆದುಕೊಂಡಿತು. ದುಡಿಯೋದೇ ಖರ್ಚು ಮಾಡೋಕೆ ಎಂಬ ಮನಸ್ಥಿತಿ ರೂಪುಗೊಂಡಿತು. ನಮ್ಮ ದುಡ್ಡು ನಮ್ಮಿಷ್ಟ ಎಂಬ ಉಡಾಫೆ ಮೈಗೂಡಿತು. ಇಂದು ಪ್ರಧಾನಿ ಮೋದಿಯೇ ಹೇಳಿದರೂ ನಾವು ಕಡಿಮೆ ಖರ್ಚು ಮಾಡಲು ಸಿದ್ಧರಿಲ್ಲ. ನಮಗೆ ಹೇಳಲು ನೀವ್ಯಾರು ಎಂದು ಪ್ರಶ್ನಿಸುತ್ತಿದ್ದೇವೆ. ದೇಶದ ಆರ್ಥಿಕತೆ ಎಂಬುದು ನಾವು ದುಡಿಯುವ ಹಣದ ಮೇಲೆ ಮಾತ್ರವೇ ಅಲ್ಲ, ನಾವು ಮಾಡುವ ಖರ್ಚಿನ ಮೇಲೆಯೂ ಅವಲಂಬಿಸಿದೆ ಎಂಬುದು ನಮಗೆ ಅರ್ಥವಾಗುತ್ತಿಲ್ಲ. ಬೆಲೆ ಏರಿಕೆಯನ್ನು ಖಂಡಿಸುತ್ತಲೇ ನಮ್ಮ ದುಂದುವೆಚ್ಚವನ್ನೂ ಹೆಚ್ಚಿಸುತ್ತಿದ್ದೇವೆ. ನಾವು ಬದಲಾಗುವುದಿಲ್ಲ. ಆದರೆ ದೇಶ ಬದಲಾಗಬೇಕು. ನಾವು ಯಾವ ರೀತಿಯಲ್ಲೂ ದೇಶದ ಉದ್ಧಾರಕ್ಕಾಗಿ ಕೈಜೋಡಿಸುವುದಿಲ್ಲ. ಆದರೆ ದೇಶ ಉದ್ಧಾರವಾಗಬೇಕು. ಇದು ನಮ್ಮ ಧೋರಣೆಯಾಗಿದೆ.

ಏಪ್ರಿಲ್ ಮೊದಲ ವಾರದಲ್ಲಿ ಶ್ರೀಲಂಕಾಗೆ ಹೋಗಿದ್ದೆ. ಜಗತ್ತು ಆ ಸಮಯಕ್ಕಾಗಲೇ ಮಧ್ಯಪ್ರಾಚ್ಯ ಯುದ್ಧದ ಪರಿಣಾಮವನ್ನು ಕಾಣಲಾರಂಭಿಸಿತ್ತು. ನಾವು ಶ್ರೀಲಂಕಾವನ್ನು ಸುತ್ತಲು ಬಾಡಿಗೆ ಕಾರ್ ಬಳಸಲು ನಿರ್ಧರಿಸಿದ್ದೆವು. ಆಗ ಅಲ್ಲಿನ ಪೆಟ್ರೋಲ್ ದರ ಮತ್ತು ನಿರ್ಬಂಧಗಳ ಬಗ್ಗೆ ತಿಳಿದು ಅಚ್ಚರಿಯಾಯಿತು. ಇರಾನ್–ಇಸ್ರೇಲ್–ಅಮೆರಿಕ ಯುದ್ಧ ಶುರುವಾಗಿ ತೈಲಬಿಕ್ಕಟ್ಟು ಶುರುವಾಗುತ್ತಿದ್ದಂತೆಯೇ ಶ್ರೀಲಂಕಾ ಪೆಟ್ರೋಲ್ ಮಿತವ್ಯಯಕ್ಕೆ ಮುಂದಾಗಿಬಿಟ್ಟಿತು. ಸರಿ–ಬೆಸ (ಈವನ್–ಆಡ್) ನಿಯಮ ಜಾರಿಗೆ ತರಲಾಗಿತ್ತು. ಅಂದರೆ ವಾಹನಗಳ ನೋಂದಣಿ ಸಂಖ್ಯೆ ಈವನ್ ಇದ್ದವರು ಮಾತ್ರ ಪೆಟ್ರೋಲ್ ಕೊಳ್ಳಲು ಒಂದು ದಿನ, ಆಡ್ ಇದ್ದವರು ಕೊಳ್ಳಲು ಒಂದು ದಿನ ಎಂದು ನಿಗದಿಪಡಿಸಲಾಗಿತ್ತು. ಅದರ ಜತೆಗೆ ಕ್ಯೂ ಆರ್ ಕೋಡ್ ಸಿಸ್ಟಮ್ ಜಾರಿಗೆ ತರಲಾಗಿ, ಪ್ರತಿ ಕ್ಯೂ ಆರ್ ಕೋಡ್‌ಗೆ ವಾರಕ್ಕೆ ಇಪ್ಪತ್ತು ಲೀಟರ್ ಪೆಟ್ರೋಲ್ ಮಾತ್ರ ಎಂಬ ನಿರ್ಬಂಧ ಹಾಕಲಾಯಿತು. ಶ್ರೀಲಂಕಾದ ಯಾವ ನಾಗರಿಕರಿಗೂ ಅದಕ್ಕಿಂತ ಹೆಚ್ಚಿನ ಪೆಟ್ರೋಲ್ ಕೊಡುವುದಿಲ್ಲ. ಕಾಳಸಂತೆಯಲ್ಲಿ ಮಾರಲು ಸ್ಟೋರೇಜ್ ಕೂಡ ಮಾಡುವಂತಿಲ್ಲ. ಅದಕ್ಕೆ ಅವಕಾಶವೇ ಇಲ್ಲ. ಎಮರ್ಜೆನ್ಸಿ ಸರ್ವಿಸ್‌ಗಳ ಹೊರತಾಗಿ ಬೇರೆ ಯಾರಿಗೂ ಈ ರಿಯಾಯಿತಿ ಇಲ್ಲವೇ ಇಲ್ಲ. ಪ್ರವಾಸೋದ್ಯಮ ಶ್ರೀಲಂಕಾದ ಪ್ರಮುಖ ಆರ್ಥಿಕತೆಯ ಮಾರ್ಗವಾಗಿರುವುದರಿಂದ ಪ್ರವಾಸಿಗರಿಗೆ ಈ ನಿಯಮಾವಳಿ ಅನ್ವಯವಾಗುವುದಿಲ್ಲ. ಇದರಿಂದಾಗಿ ಪೆಟ್ರೋಲ್ ಬಳಕೆಗೆ ಕಡಿವಾಣ ಬಿದ್ದಂತಾಯಿತು. ಇದರ ಹೊರತಾಗಿ ಶ್ರೀಲಂಕಾ ಸರಕಾರ ಯಾವುದೇ ಹಿಂಜರಿಕೆ ಇಲ್ಲದೆ ಪೆಟ್ರೋಲ್ ಬೆಲೆಯನ್ನು ಏರಿಸಿಬಿಟ್ಟಿತು. ಮಾರ್ಚ್ ಹೊತ್ತಿಗೆ ಲೀಟರ್‌ಗೆ 293 ರುಪಾಯಿ ಇದ್ದ ಪೆಟ್ರೋಲ್ ದರ, ಮಾರ್ಚ್ 10ಕ್ಕೆ 317ಕ್ಕೇರಿತು. ಮತ್ತೆ ಹದಿನೈದು ದಿನದಲ್ಲಿ 398ಕ್ಕೆ ಏರಿತು. ಪ್ರಸ್ತುತ ಶ್ರೀಲಂಕಾದಲ್ಲಿ ಪೆಟ್ರೋಲ್ ದರ 417 ಶ್ರೀಲಂಕನ್ ರುಪೀ ಆಗಿದೆ. ಎರಡು ತಿಂಗಳಲ್ಲಿ ಏರಿದ್ದು ಸುಮಾರು 117 ಶ್ರೀಲಂಕನ್ ರುಪೀ. ಭಾರತದ ರುಪಾಯಿ ಲೆಕ್ಕದಲ್ಲಿ ನೋಡಿದರೆ ಸುಮಾರು 35 ರುಪಾಯಿಗಳಷ್ಟು ಏರಿಕೆ.

ಆದರೆ ಶ್ರೀಲಂಕಾದ ಪ್ರಜೆಗಳು ಇದಕ್ಕೆ ಪ್ರತಿಕ್ರಿಯಿಸುತ್ತಿರುವ ರೀತಿ ನಿಜಕ್ಕೂ ಅನುಕರಣೀಯ. ಪೆಟ್ರೋಲ್ ಬಳಕೆಯ ಕಡಿವಾಣಕ್ಕೆ ವಿರೋಧವಿಲ್ಲ. ಬೆಲೆ ಏರಿಕೆಯ ವಿರುದ್ಧ ಧರಣಿ ಪ್ರತಿಭಟನೆಗಳಿಲ್ಲ. ಯುದ್ಧದಿಂದಾಗಿ ಪರಿಸ್ಥಿತಿ ಹದಗೆಟ್ಟಿದೆ. ಈ ಸಮಯದಲ್ಲಿ ಸರಕಾರದ ನಿರ್ಧಾರಗಳನ್ನು ಗೌರವಿಸಬೇಕು. ಒಪ್ಪಿಕೊಳ್ಳಬೇಕು ಎಂದು ಅಲ್ಲಿನ ನಾಗರಿಕರು ಹೇಳುತ್ತಿದ್ದರೆ, ನಮ್ಮ ದೇಶದ ನಾಗರಿಕರೊಂದಿಗೆ ಹೋಲಿಸಿ ನೋಡಿಕೊಂಡು ನಾಚಿಕೆಯಾಗುತ್ತದೆ. ಶ್ರೀಲಂಕಾ ಆರ್ಥಿಕ ದಿವಾಳಿ ಕಂಡಂಥ ರಾಷ್ಟ್ರ, ಯಾವ ರೀತಿಯಲ್ಲೂ ಭಾರತದೊಂದಿಗೆ ಸ್ಪರ್ಧೆಗಿಳಿಯುವ ಅರ್ಹತೆ ಇಲ್ಲದಂಥ ದೇಶ. ಆದರೆ ಅವರ ನಾಗರಿಕ ಪ್ರಜ್ಞೆ ನಿಜಕ್ಕೂ ಮಾದರಿ ಅನಿಸಿಬಿಟ್ಟಿತು. ಅಲ್ಲಿನ ವಿರೋಧಪಕ್ಷವೂ ಸೇರಿದಂತೆ, ಸೈದ್ಧಾಂತಿಕ–ರಾಜಕೀಯ ವಿರೋಧಿಗಳೂ ಸರಕಾರದ ನಿರ್ಧಾರಗಳನ್ನು ಗೌರವಿಸಿ ಪಾಲಿಸುತ್ತಿದ್ದುದು ನಿಜಕ್ಕೂ ಅನುಕರಣೀಯ.

ಆದರೆ ಭಾರತ ಪೆಟ್ರೋಲ್ ಬೆಲೆ ಏರಿಕೆಯನ್ನು ನೋಡುತ್ತಿರುವುದು ಹೇಗೆ? ಪಂಚರಾಜ್ಯ ಚುನಾವಣೆ ಆಗೋದನ್ನೇ ಮೋದಿ ಕಾಯುತ್ತಿದ್ದರು. ಚುನಾವಣೆ ಗೆಲ್ತಾ ಇದ್ದ ಹಾಗೇ ಪೆಟ್ರೋಲ್ ಬೆಲೆ ಏರಿಸಿಬಿಟ್ಟರು ಅಂತ. ಈ ಸಮಯದಲ್ಲಿ ನಾವು ಒಮ್ಮೆ ಜಗತ್ತಿನಾದ್ಯಂತ ಹೇಗೆ ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆಯಾಗಿದೆ ಎಂಬುದನ್ನು ಗಮನಿಸಬೇಕು.

ನೆನಪಿರಲಿ...ಭಾರತ ವಿಶ್ವದಲ್ಲೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಮತ್ತು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ. ನಮ್ಮ ಕೈಗಾರಿಕೆಗಳು, ಸಾರಿಗೆ ಮತ್ತು ಇಡೀ ಆರ್ಥಿಕ ಚಕ್ರ ತಿರುಗೋದಕ್ಕೆ ಇಂಧನ ಅತಿ ಮುಖ್ಯ. ನಮ್ಮಲ್ಲಿ ಎಲ್ಲವೂ ಇದೆ. ಆದರೆ ಕಚ್ಚಾ ತೈಲಕ್ಕೆ ಮಾತ್ರ ನಾವು ಜಾಗತಿಕ ಮಾರುಕಟ್ಟೆಯನ್ನೇ ಅವಲಂಬಿಸಿದ್ದೇವೆ. ಅದರಲ್ಲೂ ದೊಡ್ಡ ಪಾಲು ಮಧ್ಯಪ್ರಾಚ್ಯದಿಂದಲೇ ಬರುತ್ತದೆ. ಇತ್ತೀಚಿನ ದಿನಗಳಲ್ಲಿ ರಷ್ಯಾದಿಂದ ಹೆಚ್ಚು ಆಮದು ಮಾಡಿಕೊಳ್ತಾ ಇದ್ದರೂ, ಮಧ್ಯಪ್ರಾಚ್ಯದ ಜಿಯೋ–ಪೊಲಿಟಿಕ್ಸ್ ಜಾಗತಿಕ ತೈಲ ದರವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸೋದು ವಾಸ್ತವ.

ಯುದ್ಧಕ್ಕೆ ಮುನ್ನ ಪ್ರತಿ ಬ್ಯಾರೆಲ್‌ಗೆ 75 ಡಾಲರ್ ಇದ್ದ ಕಚ್ಚಾತೈಲದ ಬೆಲೆ ದಿಢೀರನೆ 95 ಡಾಲರ್ ದಾಟಿ ಹೋದಾಗ

ಭಾರತೀಯ ತೈಲ ಮಾರ್ಕೆಟಿಂಗ್ ಕಂಪನಿಗಳು ಅದೇ ಬೆಲೆಗೆ ಖರೀದಿಸಬೇಕಾಗುತ್ತದೆ. ಇದರ ಜತೆಗೆ ಸಾಗಣೆ ವೆಚ್ಚ, ಇನ್ಶೂರೆನ್ಸ್ ಕೂಡ ಹೆಚ್ಚಾಗಿರೋದನ್ನು ಗಮನಿಸಬೇಕು. ಹೊರ್ಮುಜ್ ಜಲಸಂಧಿಯ ಬಿಕ್ಕಟ್ಟಿನಿಂದಾಗಿ ಸರಕುಗಳು ಸುತ್ತಿಕೊಂಡು ಬರುವ ಅನಿವಾರ್ಯತೆ. ಹದಿನೈದು ದಿನಗಳಲ್ಲಿ ತಲುಪುತ್ತಿದ್ದ ತೈಲ ಈಗ ದುಪ್ಪಟ್ಟು ಸಮಯ ತೆಗೆದುಕೊಳ್ಳುವಂತಾಗಿದೆ. ರಿಸ್ಕ್ ಫ್ಯಾಕ್ಟರ್ ಹೆಚ್ಚಾಗಿರುವುದರಿಂದ ಇನ್ಶೂರೆನ್ಸ್ ಪ್ರೀಮಿಯಂ ಕೂಡ ದುಬಾರಿಯಾಗಿದೆ. ಇತ್ತ ಡಾಲರ್ ಎದುರು ರುಪಾಯಿಯ ಬೆಲೆ ಕೂಡ ಕುಸಿತ ಕಂಡಿದೆ. ಜಾಗತಿಕ ಅಸ್ಥಿರತೆಯುಂಟಾದಾಗ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾಗಿ ಅಮೆರಿಕನ್ ಡಾಲರ್ ಕಡೆಗೆ ಮುಖ ಮಾಡುವುದರಿಂದ ರುಪಾಯಿ ಮೌಲ್ಯ ಕುಸಿಯುವುದು ಸಹಜವೇ. ಭಾರತವು ತೈಲ ಖರೀದಿಯನ್ನು ಡಾಲರ್‌ನಲ್ಲೇ ಮಾಡಬೇಕಿರುವುದರಿಂದ, ರುಪಾಯಿ ದುರ್ಬಲಗೊಂಡಾಗ ನಾವು ಅದೇ ಪ್ರಮಾಣದ ತೈಲಕ್ಕೆ ಹೆಚ್ಚಿನ ಹಣ ಪಾವತಿಸಬೇಕಾಗುತ್ತದೆ. ಬ್ಯಾರೆಲ್‌ಗೆ ಎಪ್ಪತ್ತೈದು ಡಾಲರ್ ಇದ್ದದ್ದು 130 ಡಾಲರ್‌ಗೆ ಏರಿದರೂ ನಾವು ಅದೇ ಬೆಲೆಗೆ ಪೆಟ್ರೋಲ್ ಕೊಡಬೇಕು ಅಂದರೆ ಹೇಗೆ ಸಾಧ್ಯ? ಜಾಗತಿಕವಾಗಿ ಬೆಲೆ ಏರಿದರೆ ಸರ್ಕಾರವೇ ಸಬ್ಸಿಡಿ ನೀಡಿ ಬೆಲೆ ಕಡಿಮೆ ಇಡಬಹುದಲ್ಲವೇ? ಎಂಬುದು ಸಾಮಾನ್ಯರ ತರ್ಕ. ಆದರೆ, ಆರ್ಥಿಕ ತಜ್ಞರ ದೃಷ್ಟಿಕೋನದಲ್ಲಿ ಇದು ದೇಶದ ಆರ್ಥಿಕತೆಯ ಆತ್ಮಹತ್ಯೆಗೆ ಸಮಾನ. ಸರ್ಕಾರ ತೈಲದ ಮೇಲಿನ ಸಬ್ಸಿಡಿಯನ್ನು ಹೆಚ್ಚಿಸಿ, ತೆರಿಗೆ ಕಡಿಮೆ ಮಾಡಿ ಎರಡೂವರೆ ತಿಂಗಳು ಭಾರ ಹೊತ್ತುಕೊಂಡಿತು. ಆದರೆ, ಅದನ್ನು ದೀರ್ಘ ಕಾಲ ಮುಂದುವರಿಸುವುದು ಸಾಧ್ಯವಾ? ಹಾಗೆ ಮಾಡಿದರೆ ಅದು ಬಜೆಟ್ ಮೇಲೆ ಏಟು ಕೊಡುತ್ತದೆ. ಇಂಧನಕ್ಕೆ ಕೊಟ್ಟ ಕೋಟ್ಯಂತರ ರುಪಾಯಿ ಸಬ್ಸಿಡಿ ಸರಿದೂಗಿಸೋಕೆ ದೇಶದ ಮೂಲಸೌಕರ್ಯ ಅಭಿವೃದ್ಧಿ (ರಸ್ತೆಗಳು, ರೈಲ್ವೆ, ಹೆದ್ದಾರಿಗಳು), ಶಿಕ್ಷಣ, ಆರೋಗ್ಯ ಮತ್ತು ರಕ್ಷಣಾ ವಲಯ ಇವೆಲ್ಲವನ್ನು ಬಲಿಕೊಡಬೇಕಾಗುತ್ತೆ. ಭಾರತದ ತೈಲ ಮಾರಾಟ ಕಂಪನಿಗಳು ಸಾರ್ವಜನಿಕ ವಲಯದ ಸಂಸ್ಥೆಗಳಾಗಿವೆ. ಜಾಗತಿಕವಾಗಿ ಬೆಲೆ ಏರಿದಾಗಲೂ ದೇಶೀಯವಾಗಿ ಬೆಲೆ ಹೆಚ್ಚಿಸದಿದ್ದರೆ, ಈ ಕಂಪನಿಗಳು ಬಿಲಿಯನ್‌ಗಟ್ಟಲೆ ನಷ್ಟ ಅನುಭವಿಸುತ್ತವೆ. ಈ ಕಂಪನಿಗಳು ನಷ್ಟದಲ್ಲಿದ್ದರೆ, ಹೊಸ ತೈಲ ಪರಿಶೋಧನೆ, ಸಂಸ್ಕರಣಾಗಾರಗಳ ಆಧುನೀಕರಣ ಮತ್ತು ಭವಿಷ್ಯದ ಇಂಧನ ಭದ್ರತೆಗೆ ಹೂಡಿಕೆ ಮಾಡಲು ಸಾಧ್ಯವಾಗುವುದಿಲ್ಲ. 2008–2012ರ ಅವಧಿಯಲ್ಲಿ ತೈಲ ಬಾಂಡ್‌ಗಳ ಮೂಲಕ ಸಬ್ಸಿಡಿ ನೀಡಿದ ಪರಿಣಾಮವನ್ನು ದೇಶ ಇಂದಿಗೂ ಅನುಭವಿಸುತ್ತಿದೆ.

ಒಂದು ಸಲ ಜಗತ್ತಿನಲ್ಲಿ ಮಾರ್ಚ್‌ನಿಂದ ಈಚೆಗೆ ಆಗಿರುವ ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆಯ ಕಡೆ ಕಣ್ಣಾಯಿಸಿ ನೋಡಿ. ಮಲೇಷಿಯಾದಲ್ಲಿ ಪೆಟ್ರೋಲ್ 50%, ಡೀಸೆಲ್ 70% ಏರಿಕೆಯಾಗಿದೆ. ಪಾಕಿಸ್ತಾನದಲ್ಲಿ 50%, ಅಮೆರಿಕದಲ್ಲಿ ಪೆಟ್ರೋಲ್ 45%, ಡೀಸೆಲ್ 48%, ದಕ್ಷಿಣ ಆಫ್ರಿಕಾದಲ್ಲಿ 30%, ಕೆನಡಾದಲ್ಲಿ 30%, ಬ್ರಿಟನ್ ಮತ್ತು ದಕ್ಷಿಣ ಕೊರಿಯಾಗಳಲ್ಲಿ ಸುಮಾರು 19%, ಜರ್ಮನಿ ಮತ್ತು ಜಪಾನ್‌ಗಳಲ್ಲಿ 10ರಿಂದ 15% ಏರಿಕೆ ದಾಖಲಾಗಿದೆ. ಬಹಳ ಅಚ್ಚರಿ ಅಂದರೆ, ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಡೀಸೆಲ್ ಬೆಲೆ 85% ವರೆಗೆ ಏರಿಕೆಯಾಗಿದೆ. ಹೀಗಿದ್ದೂ ಭಾರತ ಸರಕಾರ ಮೂರು ತಿಂಗಳುಗಳ ಕಾಲ ಬೆಲೆ ಏರಿಸದೆಯೇ, ಎಲ್ಲ ಭಾರವನ್ನು ತನ್ನ ಮೇಲೆ ಹಾಕಿಕೊಂಡು ನಿಭಾಯಿಸಿತು. ಇನ್ನು ಸಾಧ್ಯವೇ ಇಲ್ಲವೆಂದಾಗ ತಾತ್ಕಾಲಿಕ ಏರಿಕೆ ಎಂಬಂತೆ ಕೇವಲ 2.5%ನಷ್ಟು ಏರಿಕೆ ಮಾಡಿತು. ಇತರ ರಾಷ್ಟ್ರಗಳಂತೆ, ಪೆಟ್ರೋಲ್ ಬಳಕೆಯ ಮೇಲೆ ನಿರ್ಬಂಧ ಹೇರಿಲ್ಲ, ಮಿತಿ ಹಾಕಿಲ್ಲ. ಮಿತವ್ಯಯ ಮಾಡಿ, ಸಾರ್ವಜನಿಕ ಸಾರಿಗೆ ಬಳಸಿ, ಇವಿ ವಾಹನಗಳತ್ತ ಒಲವು ತೋರಿ ಎಂಬ ಮನವಿ ಅಥವಾ ಹಿತನುಡಿಗಳನ್ನು ಕೊಡಮಾಡಿತಷ್ಟೆ. ಆದರೆ ನಾವು ಪ್ರತಿಕ್ರಿಯಿಸುತ್ತಿರುವುದು ಮಾತ್ರ ರಾಜಕೀಯದ ಕಣ್ಣಿಂದ.

ಕೋವಿಡ್ ಎಂಬ ಜಾಗತಿಕ ಸಂಕಷ್ಟವೇ ಭಾರತೀಯರ ರಾಜಕೀಯ ಮನಸ್ಥಿತಿಯನ್ನು ಬದಲಿಸಲಿಲ್ಲ, ಇನ್ನು ಪರದೇಶದಲ್ಲಿ ನಡೆಯುತ್ತಿರುವ ಯುದ್ಧ ಬದಲಾಯಿಸೀತೇ? ಭ್ರಮೆಯಷ್ಟೆ. ನಾವು ಸರಕಾರ ಹೇಳಿದೆ ಎಂಬ ಕಾರಣಕ್ಕೆ ಮಾತು ಕೇಳಬೇಕಿಲ್ಲ. ಕನಿಷ್ಠ ಸ್ವಂತ ವಿವೇಚನೆ ಇದ್ದರೂ ನಾವು ಮಿತವ್ಯಯಕ್ಕೆ ಮುಂದಾಗಿ, ಹೊಸ ಆವಿಷ್ಕಾರಗಳಿಗೆ ಬೆಲೆ ಕೊಡುವ ಮೂಲಕ ಸರಕಾರದ ಭಾವನೆಗಳಿಗೆ ಸ್ಪಂದಿಸುತ್ತಿದ್ದೆವು. ಪೆಟ್ರೋಲ್ ಡೀಸೆಲ್ ಏರಿಕೆಯನ್ನು ವಿರೋಧಿಸುತ್ತಾ ನಾವು ಎಂದಿನಂತೆ ದುಂದುವೆಚ್ಚ ಮಾಡುತ್ತೇವೆ ಎಂಬುದು ನಮ್ಮ ಮನಸ್ಥಿತಿಯಾದರೆ, ಮುಂದಿನ ಭೀಕರ ಆರ್ಥಿಕ ಪರಿಣಾಮಗಳಿಗೆ ನಾವು ಹೊಣೆಯಾಗಬೇಕಾಗುತ್ತದೆ. ಪೆಟ್ರೋಲ್ ಡೀಸೆಲ್‌ಗಳ ಬೆಲೆ ಏರಿಕೆ ನೇರವಾಗಿ ದಿನನಿತ್ಯದ ಎಲ್ಲ ವಸ್ತುಗಳು, ಜೀವನಶೈಲಿಗಳು ದುಬಾರಿಯಾಗಲು ಕಾರಣವಾಗುತ್ತದೆ. ಅರ್ಥ ಮಾಡಿಕೊಳ್ಳದಿದ್ದರೆ ಅನುಭವಿಸಬೇಕಾಗುತ್ತದೆ.

ಭಟ್ಟರ್ ಸ್ಕಾಚ್

- ಪಿ.ಸಿ. ರಾಜು, ಭೈರಸಂದ್ರ
ಭಟ್ರೇ, ಮದುವೆ ಅಂದ್ರೆ ಏನು?
- **ಒಬ್ಬ ವ್ಯಕ್ತಿ ತನ್ನ ಜೀವನದಲ್ಲಿ ಇರುವ ಸಮಸ್ಯೆಗಳನ್ನು ಹಂಚಿಕೊಳ್ಳಲು, ಇನ್ನೊಂದು ದೊಡ್ಡ ಸಮಸ್ಯೆಯನ್ನು ತಂದುಕೊಳ್ಳುವುದೇ ಮದುವೆ!**

- ಸುಮಾ, ಬೆಂಗಳೂರು
ಭಟ್ರೇ, ಸ್ಕೂಲ್‌ಗೂ ಹಾಸ್ಪಿಟಲ್‌ಗೂ ಇರೋ ವ್ಯತ್ಯಾಸ ಏನು?
- **ಸ್ಕೂಲಿನಲ್ಲಿ 'ಗಂಟೆ' ಹೊಡೆದರೆ ಮನೆಗೆ ಹೋಗ್ತಾರೆ, ಹಾಸ್ಪಿಟಲ್‌ನಲ್ಲಿ 'ಗಂಟೆ' ಹೊಡೆದರೆ ಮೇಲೆ ಹೋಗ್ತಾರೆ!**

- ಕೇಶವ ಸಿ., ಸಾಗರ
ಭಟ್ರೇ, ಸತ್ತ ಮೇಲೆ ಮೊಬೈಲ್ ಏನಾಗುತ್ತೆ?
- **ಅನಾಥವಾಗುತ್ತೆ, ಯಾಕಂದ್ರೆ ಪಾಸ್‌ವರ್ಡ್ ಯಾರಿಗೂ ಗೊತ್ತಿರಲ್ಲ!**

- ಸುಧಾಕರ ರೆಡ್ಡಿ, ತುಮಕೂರು
ಭಟ್ರೇ, ಪ್ರೀತಿಗೂ ಮದುವೆಗೂ ಇರೋ ವ್ಯತ್ಯಾಸ ಏನು?
- **ಪ್ರೀತಿ ಎಂಬುದು ಸುಂದರವಾದ ಕನಸು, ಮದುವೆ ಎಂಬುದು ಆ ಕನಸಿನಿಂದ ಎಬ್ಬಿಸುವ ಅಲಾರಾಂ!**

- ಲೀಲಾ ಮಾರುತಿ, ಮಂಡ್ಯ
ಭಟ್ರೇ, ಕನ್ನಡಿಯ ಮುಂದೆ ನಿಂತು ಕಣ್ಣು ಮುಚ್ಚಿಕೊಂಡರೆ ಏನಾಗುತ್ತೆ?
- **ನಾವು ಹೇಗಿದ್ದೇವೆ ಅಂತ ನಮಗೇ ಕಾಣಿಸಲ್ಲ!**

- ವಿಶ್ವನಾಥ ಬಲ್ಲೇನಹಳ್ಳಿ, ಮದ್ದೂರು
ಭಟ್ರೇ, ಜಿರಳೆಗೆ ಯಾವುದರ ಭಯ ಅತಿ ಹೆಚ್ಚಾಗಿ ಇರುತ್ತದೆ?
- **ಹೆಂಗಸರ ಕೈಯಲ್ಲಿರುವ ಪೊರಕೆ ಅಥವಾ ಚಪ್ಪಲಿ ಭಯ!**

- ನತ್ತೂರು ಪ್ರಭು, ನತ್ತೂರು
ಭಟ್ರೇ, ಹೆಂಡತಿಗೂ, ಸರಕಾರಕ್ಕೂ ಸಾಮ್ಯತೆ ಏನು?
- **ಎರಡನ್ನೂ ನಾವು ವಿರೋಧಿಸಬಹುದು, ಆದರೆ ಬದಲಾಯಿಸಲು ಸಾಧ್ಯವಿಲ್ಲ!**

- ಮಂಜುನಾಥ ಸಾಲಗಾಮೆ, ಬೆಂಗಳೂರು
ಭಟ್ರೇ, ಸಾಲ ಕೊಟ್ಟವನು ಯಾಕೆ ಯಾವಾಗಲೂ ನಗುತ್ತಿರುತ್ತಾನೆ?
- **ನಿಮ್ಮನ್ನು ನೋಡಿದಾಗಲೆಲ್ಲ ಅವನಿಗೆ ಅವನ 'ಬಡ್ಡಿ' ನೆನಪಿಗೆ ಬರುತ್ತೆ!**

- ವಿದ್ಯಾಶ್ರೀ, ಕುಣಿಗಲ್
ಭಟ್ರೇ, ಕೆಲಸ ಮಾಡುವಾಗ ನಿದ್ದೆ ಬಂದರೆ ಏನು ಮಾಡಬೇಕು?
- **ಕಣ್ಣು ಮುಚ್ಚಿ ಕುಳಿತುಕೊಳ್ಳಬೇಕು, ಯಾರಾದರೂ ಕೇಳಿದರೆ 'ಧ್ಯಾನ ಮಾಡ್ತಿದ್ದೀನಿ' ಅಂತ ಹೇಳ್ಬೇಕು!**

- ಸಿ.ಕೆ. ಪ್ರಸಾದ, ಚಿಕ್ಕಬಳ್ಳಾಪುರ
ಭಟ್ರೇ, ಕಷ್ಟಪಟ್ಟು ಓದಿ ಎಕ್ಸಾಮ್ ಬರೆಯುವವನಿಗೂ, ಏನೂ ಓದದೆ ಎಕ್ಸಾಮ್ ಬರೆಯುವವನಿಗೂ ಏನು ವ್ಯತ್ಯಾಸ?
- **ಒಬ್ಬ ಆನ್ಸರ್ ಶೀಟ್ ತುಂಬಿಸುತ್ತಾನೆ, ಇನ್ನೊಬ್ಬ 'ಇನ್ನೊಂದು ಎಕ್ಸ್‌ಟ್ರಾ ಶೀಟ್ ಕೊಡಿ' ಅಂತ ಕೇಳುವವರನ್ನು ನೋಡಿ ನಿಟ್ಟುಸಿರು ಬಿಡುತ್ತಾನೆ!**

ಹೆರುವುದು ದೈಹಿಕ ಸುಖದ ಕೊನೆ ಫಲಿತಾಂಶವಲ್ಲ!

ನಾನು, ನನ್ನ ದೇಹ, ನನಗೆ, ನನ್ನಿಂದ ಎನ್ನುವುದು ಭಾರತೀಯ ಸಂಸ್ಕಾರವಲ್ಲ. 'ಪರೋಪಕಾರಂ ಇದಂ ಶರೀರಂ' ಎನ್ನುವುದು ಭಾರತೀಯ ಚಿಂತನೆ, ಸಂಸ್ಕಾರ. ನಾವು ಕೇವಲ ನಮಗಾಗಿ ಬದುಕುವುದಿಲ್ಲ, ಕೆಲಸ ಮಾಡುವುದಿಲ್ಲ. ಅಮ್ಮ, ಅಪ್ಪ, ಅಕ್ಕ, ತಂಗಿ, ಹೆಂಡತಿ, ಮಕ್ಕಳು, ಬಂಧು-ಮಿತ್ರರಿಗಾಗಿ ಬದುಕುವುದು ನಮ್ಮ ಬದುಕಿನ ರೀತಿ.

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಭೂಮಿ ಮೇಲೆ ಪ್ರತಿ ದಿನ ಲಕ್ಷಾಂತರ ಜನ ಹುಟ್ಟುತ್ತಾರೆ, ಸಾಯುತ್ತಾರೆ. ಅದರಲ್ಲಿ ವಿಶೇಷವೇನೂ ಇಲ್ಲ. ಹೀಗಾಗಿ ಉತ್ತಮರ ಹುಟ್ಟು ಸಂಭ್ರಮಿಸಬೇಕು. ಉತ್ತಮರ ಸಾವಿಗೆ ಸಂತಾಪಪಡಬೇಕು. ಒಬ್ಬ ಉತ್ತಮ ವ್ಯಕ್ತಿ ಯಾವುದೇ ವೃತ್ತಿಯಲ್ಲಿ ದ್ದರೂ, ಆತ ಇಲ್ಲವಾದಾಗ ಮತ್ತೆ ಅದೇ ಮಟ್ಟದ ವ್ಯಕ್ತಿಯನ್ನು ತಯಾರು ಮಾಡಲು ಸಮಾಜಕ್ಕೆ ಕನಿಷ್ಠ 3 ದಶಕ ಸಮಯ ಬೇಕಾಗುತ್ತದೆ. ಕೆಲವೊಮ್ಮೆ ಅಷ್ಟು ಮೇಧಾವಿ ಸಿಗದೆ ಕೂಡ ಹೋಗಬಹುದು. ಆಗ ಅಂತಹ ವ್ಯಕ್ತಿಯನ್ನು ಭೂಮಿ ಪಡೆದುಕೊಳ್ಳಲು ನೂರಾರು ವರ್ಷ ತೆಗೆದುಕೊಳ್ಳುತ್ತದೆ. ಯಾರಾದರೂ ಉತ್ತ ಮರು ಸತ್ತಾಗ ಶೋಕಿಸುವುದು ಈ ಕಾರಣಕ್ಕೆ! ಈ ಸಾಮಾನ್ಯಜ್ಞಾನ ಎಲ್ಲರಿಗೂ ಇರಬೇಕು.

ನಾನು, ನನ್ನ ದೇಹ, ನನಗೆ, ನನ್ನಿಂದ ಎನ್ನುವುದು ಭಾರತೀಯ ಸಂಸ್ಕಾರವಲ್ಲ. ಅದು ಪಾಶ್ಚಾತ್ಯ ಚಿಂತನೆ. 'ಪರೋಪಕಾರಂ ಇದಂ ಶರೀರಂ' ಎನ್ನುವುದು ಭಾರತೀ ಯ ಚಿಂತನೆ, ಸಂಸ್ಕಾರ. ನಾವು ಕೇವಲ ನಮಗಾಗಿ ಬದುಕುವುದಿಲ್ಲ, ಕೆಲಸ ಮಾಡುವುದಿಲ್ಲ. ಅಮ್ಮ, ಅಪ್ಪ, ಅಕ್ಕ, ತಂಗಿ, ಹೆಂಡತಿ, ಮಕ್ಕಳು, ಬಂಧು-ಮಿತ್ರರಿಗಾಗಿ ಬದುಕುವುದು ನಮ್ಮ ಬದುಕಿನ ರೀತಿ. ಜೀವನ ಶೈಲಿ. ನನ್ನ ಓದುಗರಿಗೆ ಈಗ ನಾನು ಬರೆಯುವ ಸಾಲು ಹೊಸತಲ್ಲ. ಮಕ್ಕಳನ್ನು ಸಾಕುವುದು ಒಂದೆರಡು ದಿನದ ಕೆಲಸವಲ್ಲ, ಅದು ಬರೋಬ್ಬರಿ ಇಪ್ಪತ್ತು ವರ್ಷದ ತಪಸ್ಸು. ಅವರನ್ನು ಈ ಸಮಾಜಕ್ಕೆ ಉತ್ತಮ ನಾಗರಿಕ ರನ್ನಾಗಿ, ಆಸ್ತಿಯನ್ನಾಗಿ ಪರಿವರ್ತಿಸಿ ಬಿಡಬೇಕು. ಅದು ವರ್ಷದಲ್ಲಿ ಆಗುವ ಮಾತಲ್ಲ. ಕನಿಷ್ಠ ಇಪ್ಪತ್ತು ವರ್ಷ ನಮ್ಮ ವೇಳೆಯನ್ನು ಅವರೊಂದಿಗೆ ಕಳೆಯಬೇಕು. ಅವ ರನ್ನು ತಿದ್ದಿತೀಡಿ ಸಮಾಜಕ್ಕೆ ಉಪಯೋಗವಾಗು ವಂತಹ ಪ್ರಜೆಗಳನ್ನಾಗಿ ಮಾಡಬೇಕು. ಯಾರಿಗೆ ಗೊತ್ತು ಈ ಭೂಮಿ ನೂರಾರು ವರ್ಷದಿಂದ ಕಾಯುತ್ತಿರುವ ವ್ಯಕ್ತಿ ನಮ್ಮ ಮಗುವಾಗಿರಬಹುದು! ವಜ್ರವನ್ನು ಸಾಣೆ ಹಿಡಿಯದಿದ್ದರೆ ಅದಕ್ಕೂ ಕಲ್ಲಿಗೂ ಹೆಚ್ಚಿನ ವ್ಯತ್ಯಾಸ ವೇನೂ ಕಾಣದು ಎನ್ನುವುದು ನೆನಪಿರಲಿ. ಮೊದಲೇ ಹೇಳಿದಂತೆ ನಾನು, ನನ್ನದು, ನನಗಾಗಿ ಎನ್ನುವುದು ಮತ್ತು ದೇಹಕ್ಕೆ, ದೇಹಸಿರಿಗೆ ಅತಿ ಹೆಚ್ಚು ಪ್ರಾಮುಖ್ಯತೆ ನೀಡುವುದು ಸ್ವಾರ್ಥದ ಬದುಕು. ಅದು ಪಾಶ್ಚಾತ್ಯ ಜೀವನ ಶೈಲಿ.

ಮೂರು ದಶಕಗಳ ಹಿಂದೆಯೇ ಇವತ್ತಿನ ಜೆನ್ ಝಿ ಹೇಳುವ ಮಾತುಗಳನ್ನು ಯೂರೋಪಿನಲ್ಲಿ ಕೇಳಿದ್ದೇನೆ. ಅವತ್ತಿಗೆ ಅಲ್ಲಿನ ಯುವಕ/ಯುವತಿಯರಿಗೆ ಮಕ್ಕಳು ಬೇಕಿರಲಿಲ್ಲ. ದಶಕಗಳಿಂದ ಜಪಾನ್ ಕೂಡ ಇದೇ ರೀತಿಯ ಮನಸ್ಥಿತಿ ಹೊಂದಿರುವ ನಾಗರಿಕರನ್ನು ಸೃಷ್ಟಿಸಿದೆ. ಬಹುತೇಕರಿಗೆ ಸುಖ ಬೇಕು ಆದರೆ ಜವಾಬ್ದಾರಿ ಬೇಡ. ಅಲ್ಲೇನಿದ್ದರೂ ಸ್ವ-ಸುಖವಷ್ಟೆ ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ. ಇರೋ ತನಕ ಮಜಾ ಮಾಡಬೇಕು ಎನ್ನುವುದು ಜೀವನದ ಪರಮ ಉದ್ದೇಶ. ಸಮಾಜಕ್ಕೆ ನಾವು ಉತ್ತಮರನ್ನು ಕೊಡುಗೆಯಾಗಿ ಕೊಟ್ಟು ಹೋಗುವುದು ನಮ್ಮ ಕರ್ತವ್ಯ. ಮಕ್ಕಳನ್ನು ಮಾಡಿಕೊಳ್ಳುವುದು ಎನ್ನುವುದು ಕೇವಲ ದೈಹಿಕ ಸುಖದ ಕೊನೆ ಫಲಿತಾಂಶವಲ್ಲ, ಅದು ಎಲ್ಲವನ್ನೂ ಮೀರಿದ ಪಾರಮಾರ್ಥಿಕ ಬದುಕು. ಒಳಿತು-ಕೆಡುಕಿನ ನಡುವಿನ ಸಂಘರ್ಷ ಶತಶತಮಾನಗಳಿಂದ ಸಾಗಿಬರುತ್ತಿದೆ. ಇಲ್ಲಿ ಈಕ್ವಿಲಿಬ್ರಿಯಂ ತಪ್ಪುವಂತಿಲ್ಲ. ಆದರೆ, ಇಂದೇನಾಗಿದೆ? ಉತ್ತಮರು ಎನಿಸಿಕೊಂಡವರು ಮದುವೆಯಾಗುತ್ತಿಲ್ಲ, ಇನ್ನು ಕೆಲವರು ಮಕ್ಕಳು ಬೇಡ ಎನ್ನುತ್ತಾರೆ. ಎಲ್ಲರೂ ಅವರವರ ಸ್ವಾರ್ಥ ನೋಡಿಕೊಂಡರೆ ಮುಂದಿನ ಭವಿಷ್ಯದ ಕಥೆಯೇನು? ಮೆಲ್ಲಗೆ ಈ ಭೂಮಿ ರಾಕ್ಷಸಿ ಪ್ರವೃತ್ತಿಯ ಜನರ ಕೈ ಸೇರುವುದು ನಿಶ್ಚಿತ.

ಇವತ್ತಿನ ಯುವಜನತೆ ಯೋಚಿಸುವಂತೆ ಅವರ ಹೆತ್ತವರು ಯೋಚಿಸಿದ್ದರೆ? ಇಂದು ನಮ್ಮ ಮೇಧಾವಿ ಜೆನ್ ಝಿ ಇರುತ್ತಿರಲಿಲ್ಲ. ಇವತ್ತಿನ ಜೆನ್ ಝಿಗಳು ತಮ್ಮ ಜೀವನವನ್ನು ಪೂರ್ಣವಾಗಿ ಉಪಭೋಗಿಸಬೇಕು ಎನ್ನುವ ಜಿದ್ದಿಗೆ ಬಿದ್ದಿದ್ದಾರೆ. ಅವರಿಗೆ ಮದುವೆ, ಮಕ್ಕಳು, ಸಂಸಾರ ಎನ್ನುವುದು ಜೀವನದ ಉತ್ತಮ 20ವರ್ಷ ಹಾಳುಮಾಡುತ್ತದೆ ಎನ್ನುವ ಭಾವನೆಯಿದೆ. ನೆನಪಿರಲಿ ನಾವು ಈ ಭೂಮಿಗೆ ಬಂದದ್ದಕ್ಕೆ, ಇಲ್ಲಿನ ಸಂಪನ್ಮೂಲ ಬಳಸಿದ್ದಕ್ಕೆ ನೀಡುವ ಪುಟಾಣಿ ಬಾಡಿಗೆ. ಅಷ್ಟೂ ಜವಾಬ್ದಾರಿ ಬೇಡ ಎನ್ನುವ ಇವತ್ತಿನ ಹುಡುಗ/ಹುಡುಗಿಯರ ಮನಃಸ್ಥಿತಿಗೆ ನನ್ನ

ಧಿಕ್ಕಾರ. ಇದನ್ನು ಬರೆಯುವುದೋ ಬೇಡವೋ ಎನ್ನುವ ಗೊಂದಲದಲ್ಲಿ ಸುಮ್ಮನಿದ್ದೆ. ಅದು ಅವರ ವೈಯಕ್ತಿಕ ವಿಷಯ, ಅವರು ಮದುವೆ ಆಗುತ್ತಾ ರೋ ಇಲ್ಲವೋ, ಮಕ್ಕಳನ್ನು ಮಾಡಿಕೊ ಳ್ಳುತ್ತಾರೋ ಇಲ್ಲವೋ, ಅದರಿಂದ ನನಗೇನು? ಅದು ಸಂಪೂರ್ಣವಾಗಿ ಅವರ ಪರ್ಸನಲ್ ಮ್ಯಾಟರ್! ಅಲ್ವಾ? ಇಲ್ಲ, ಇದೇ ನಾವು ಮಾಡುತ್ತಿರುವ ತಪ್ಪು. ಎಲ್ಲರೂ ಇದೇ ರೀತಿ ಯೋಚಿಸಲು ಶುರು ಮಾಡಿದರೆ? ಎಲ್ಲರೂ ನಮಗೇನು ಎಂದರೆ ಹೇಗಾಗುತ್ತದೆ. ಸಮಾಜ ಸೃಷ್ಟಿಯಾಗಿರುವುದು ನಮ್ಮಂತಹ ಜನರಿಂದ ಅಲ್ಲವೇ? ಸಮಾಜದಲ್ಲಿ ಯೋಚಿಸುವ ಸಂಖ್ಯೆ ಕಡಿಮೆಯಾಗುತ್ತಿದೆ. ಒಬ್ಬರು ಹೇಳಿದ್ದು, ಮಾಡಿದ್ದು ಸುಲಭ ಎನ್ನಿಸಿದರೆ ಅದನ್ನು ಬೇಗ ತಮ್ಮದಾಗಿಸಿ ಕೊಳ್ಳುತ್ತಾರೆ. ಬೆಳಗ್ಗೆ 4 ಗಂಟೆಗೆ ಏಳಿ, ವ್ಯಾಯಾಮ ಮಾಡಿ, ಪ್ರಾರ್ಥನೆ ಮಾಡಿ ಎನ್ನುವುದು ರುಚಿಸುವುದಿಲ್ಲ. ಅದೇ ಮದುವೆ, ಸಂಸಾರ ಮಾಡಿಕೊಳ್ಳಬೇಡಿ, ಇರುವು ದೊಂದು ಜೀವನ ಮಜಾ ಮಾಡಿ ಎಂದು ಒಮ್ಮೆ ಹೇಳಿ ಸಾಕು, ಅದನ್ನು ಜೆನ್ ಝಿ ಬಹಳ ಬೇಗ ಒಪ್ಪಿಕೊಂಡು ಬಿಡುತ್ತಾರೆ. ಇದೇ ಸರಿ ಎನ್ನುವ ನಿರ್ಧಾರಕ್ಕೆ ಬರುತ್ತಾರೆ. ನಿಮಗೆ ಗೊತ್ತಿರಲಿ, ಇಂದಿನ ಜನರೇಷನ್ ಮಕ್ಕಳು ನಮಗೆ ಸಿಗುತ್ತಿರುವ ಎಲ್ಲ ಸೌಲಭ್ಯಕ್ಕೂ ನಾವು ಹಕ್ಕು ದಾರರು ಎನ್ನುವಂತೆ ವರ್ತಿಸುತ್ತಿದ್ದಾರೆ. ನಾವು, ನಮ್ಮದು ಎನ್ನುವ ಜಾಗದಲ್ಲಿ ನಾನು, ನನ್ನದು ಎನ್ನುವ ಸ್ವ-ಸುಖ ಹೆಚ್ಚು ಮನ್ನಣೆ ಪಡೆದುಕೊಳ್ಳುತ್ತಿದೆ. ಸಮಾಜಕ್ಕೆ ಉತ್ತಮ ಸಂತಾನವನ್ನು ನೀಡಿ ಹೋಗುವುದು ಕರ್ತವ್ಯ ಎನ್ನುವ ಸಾಮಾನ್ಯ ತಿಳಿವಳಿಕೆ ಇಲ್ಲದ ಸ್ವಾರ್ಥ ಬದುಕಿಗೆ ನನ್ನ ಸಂತಾಪಗಳು. ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ಕಾಣಿಕೆ ನೀಡಲು ಇಪ್ಪತ್ತು ವರ್ಷದ ತಪಸ್ಸಿನ ಅವಶ್ಯಕತೆಯಿದೆ. ಕರ್ನಾಟಕ, ಆಂಧ್ರ, ತಮಿಳುನಾಡು ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳಲ್ಲಿ ಮಕ್ಕಳು ಮಾಡಿಕೊಳ್ಳುವ ಸಂಖ್ಯೆ ತೀವ್ರವಾಗಿ ಕುಸಿಯುತ್ತಿದೆ. ಇದನ್ನು ಮನಗಂಡು ಚಂದ್ರಬಾಬು ನಾಯ್ಡು ಅವರು ಮೂರನೇ ಮಗುವಿಗೆ 30 ಸಾವಿರ ಮತ್ತು ನಾಲ್ಕನೇ ಮಗುವನ್ನು ಮಾಡಿಕೊಂಡರೆ 40 ಸಾವಿರ ಹಣ ನೀಡುವುದಾಗಿ ಘೋಷಣೆ ಮಾಡಿದ್ದಾರೆ.

ಈ ರೀತಿ ಹೇಳುವುದಕ್ಕೆ ಒಂದು ಸರಳ ಲೆಕ್ಕಾಚಾರವಿದೆ. ಗಂಡ-ಹೆಂಡತಿ ದೈಹಿಕವಾಗಿ ಇಲ್ಲವಾದಾಗ ಅವರ ಸ್ಥಾನದಲ್ಲಿ ಕನಿಷ್ಠ ಇಬ್ಬರು ಮಕ್ಕಳಿದ್ದರೆ ಆಗ ಸತ್ತವರ ಜಾಗದಲ್ಲಿ ಅವರು ಇಬ್ಬರನ್ನು ಬಿಟ್ಟು ಹೋದಂತೆ ಆಗುತ್ತದೆ. ಅದು ಜನಸಂಖ್ಯೆ ಹೆಚ್ಚಳಕ್ಕೆ ಕಾರಣವಾಗುವುದಿಲ್ಲ, ಅದು ಅದೇ ಜನಸಂಖ್ಯೆ ಉಳಿಸಿಕೊಳ್ಳಲು ಸಹಾಯ ಮಾಡಿದಂತೆ ಆಗುತ್ತದೆ. ಒಂದು ಮಗುವಿದ್ದರೆ ಅದು ಜನಸಂಖ್ಯೆ ಕುಸಿತಕ್ಕೆ ಕಾರಣವಾಗುತ್ತದೆ. ಮೂರು ಅಥ ವಾ ಅದಕ್ಕಿಂತ ಹೆಚ್ಚು ಮಕ್ಕಳನ್ನು ಮಾಡಿಕೊಂಡರೆ ಮಾತ್ರ ಅದು ಜನಸಂಖ್ಯೆ ಹೆಚ್ಚಳಕ್ಕೆ ಕಾರಣವಾಗುತ್ತದೆ. ಈ ಲೆಕ್ಕಾಚಾರದಲ್ಲಿ ದಕ್ಷಿಣ ಭಾರತದ ಫರ್ಟಿಲಿಟಿ 1.5! ಅಂದರೆ ಪ್ರತಿ ಇಬ್ಬರಿಗೆ ಒಂದೂವರೆ ಮಕ್ಕಳು ಸರಾಸರಿ ಲೆಕ್ಕಾಚಾರದಲ್ಲಿ ಜನಿಸುತ್ತಿದ್ದಾರೆ. ಮೇಲಿನ ಲೆಕ್ಕಾಚಾರದಲ್ಲಿ ಇನ್ನೊಂದು ಸಣ್ಣ ಲೆಕ್ಕಾ ಚಾರವನ್ನು ಸಹಿತ ನಾವು ಮಾಡಬಹುದು.

ಈ ರೀತಿ ಹೆಚ್ಚಿನ ಮಕ್ಕಳನ್ನು ಅಂದರೆ ಮೂರು ಮತ್ತು ನಾಲ್ಕನೇ ಮಕ್ಕಳನ್ನು ಮಾಡಿಕೊಳ್ಳುವವರು ಯಾರು? ಎನ್ನುವುದು ಆ ಪ್ರಶ್ನೆ. ಉತ್ತರವನ್ನು ನಾನಿಲ್ಲಿ ಹೇಳಲು ಹೋಗು ವುದಿಲ್ಲ. ಬುದ್ಧಿವಂತ ಓದುಗರಿಗೆ ಅದನ್ನು ಹೇಳುವ ಅವಶ್ಯಕತೆ ಕೂಡ ಇಲ್ಲ. ಸಮಾಜದಲ್ಲಿ ಉತ್ತಮರ ಸಂಖ್ಯೆ ಕುಸಿಯುತ್ತಾ ಹೋಗುತ್ತದೆ. ಮುಂದಿನ ಮೂರ್ನಾಲ್ಕು ದಶಕದಲ್ಲಿ ಒಳಿತು ಮತ್ತು ಕೆಡುಕಿನ ನಡುವಿನ ಸಂಘರ್ಷ ತಾರಕಕ್ಕೇರುವ ಎಲ್ಲ ಸಾಧ್ಯತೆಗಳು ನಿಚ್ಚಳವಾಗಿದೆ.

ಹೆಚ್ಚು ಕಲಿತ ವಿದ್ಯಾವಂತ ಮಹಿಳೆಯರು ಒಂದಕ್ಕಿಂತ ಹೆಚ್ಚು ಮಕ್ಕಳನ್ನು ಹೆರಲು ಸಿದ್ಧವಿಲ್ಲ. ಕಲಿತ ಪೋಷಕ ರನ್ನು ಈ ಬಗ್ಗೆ ಕೇಳಿದರೆ, ಇವತ್ತಿನ ಶಿಕ್ಷಣ ವ್ಯವಸ್ಥೆ, ಕೆಲಸ, ಕಠಿಣವಾಗುತ್ತಿರುವ ಬದುಕು ಇವುಗಳ ಕಾರಣ ಹೇಳಿ ಒಂದು ಸಂತಾನ ಸೃಷ್ಟಿಸಿಕೊಂಡಿರುವುದೇ ಅಪರಾಧ ಎನ್ನುವಂತಾಗಿದೆ ಎನ್ನುತ್ತಿದ್ದಾರೆ. ಇದು ಇವತ್ತಿನ ಸಮಸ್ಯೆಯಲ್ಲ, ಕಳೆದ ಎರಡು ದಶಕದಿಂದ ಒಂದು ಮಗುವನ್ನು ಮಾಡಿಕೊಳ್ಳುವುದು ಅತಿ ಸಾಮಾನ್ಯ ಎನ್ನುವಂತಾಗಿದೆ. ಭಾರತದ ಕಥೆ ಹೀಗಾಗಿದೆ ಎಂದ ಮೇಲೆ ಪೂರ್ಣ ಮುಂದುವರಿದ ದೇಶಗಳ ಕಥೆ ಹೇಳುವುದೇ ಬೇಡ. ಇವತ್ತಿಗೆ ಚಂದ್ರಬಾಬು ನಾಯ್ಡು ಅವರು ಮೂರು ಮತ್ತು ನಾಲ್ಕನೇ ಮಗು ಮಾಡಿಕೊಂಡರೆ ಹಣದ ಆಮಿ ಷ ನೀಡಿದ್ದಾರೆ. ಎರಡು ದಶಕದ ಹಿಂದೆಯೇ ಯೂರೋಪಿನ ಸ್ಪೇನ್ ದೇಶದಲ್ಲಿ ಒಂದು ಮಗು ಮಾಡಿಕೊಂಡರೆ ಮೂರು ಸಾವಿರ ಯುರೋ ಹಣ ಕೊಡುವ ಯೋಜನೆ ಜಾರಿಗೆ ತಂದಿದ್ದರು!

ಕೇವಲ ಸಂಖ್ಯೆ ಹೆಚ್ಚಿಸಿಕೊಳ್ಳುವ ದೃಷ್ಟಿಯಲ್ಲಿ ಸಂತಾನ ಅಭಿವೃದ್ಧಿಗೆ ಮುಂದಾಗುವುದು ಕೂಡ ವಿವೇಚನೆಯಿಲ್ಲದ ನಡೆ. ಇಡೀ ಭೂಮಿಯನ್ನು ಆಳುತ್ತಿದ್ದ ಪೆಂಡ ಭೂತಗಳು ಕೂಡ ಅಳಿವಿಗೆ ತುತ್ತಾಗಿರುವುದು ನಮಗೆ ಗೊತ್ತಿರುವ ವಿಚಾರ. ಬದಲಾವಣೆ ಎನ್ನುವುದು ಸಹಜ. ಹೀಗಾಗಿ ಪ್ರತಿ ಐವತ್ತು ಅಥವಾ ನೂರು ವರ್ಷಕ್ಕೆ ಗುರು ತಿಸಲು ಅಸಾಧ್ಯ ಎನ್ನುವ ಮಟ್ಟಿನ ಬದಲಾವಣೆ ಆಗು ತ್ತಲೆ ಬರುತ್ತಿದೆ. ಹೀಗಾಗಿ ಸಾಮಾನ್ಯಜ್ಞಾನವಿರುವ ಜನ ಸಂಖ್ಯೆ ಹೆಚ್ಚಳವಾಗಬೇಕಿದೆ. ಮನುಷ್ಯ ಹುಟ್ಟಿದ ಮೇಲೆ ಮೂರು ಋಣಗಳನ್ನು ತೀರಿಸಬೇಕಂತೆ ಎಂದು ಶಾಸ್ತ್ರ ಹೇಳುತ್ತದೆ.

1. ದೈವ ಋಣ
2. ಮಾತಾ-ಪಿತೃ ಋಣ
3. ಗುರುವಿನ ಋಣ

ಭಗವಂತ ಅಥವಾ ಬ್ರಹ್ಮವಸ್ತು (ಸಕಲ ಚರಾಚರಗಳಲ್ಲಿ ಅಡಗಿರುವ ಚೈತನ್ಯ) ನಮ್ಮನ್ನು ಈ ಭೂಮಿಗೆ ತಂದಿದೆ. ಅದರ ಹಿಂದೆಯೂ ಯಾವುದೋ ಉದ್ದೇಶ ಇದ್ದೇ ಇದೆ. ಆ ಬ್ರಹ್ಮ ವಸ್ತುವಿನ ಉದ್ದೇಶವನ್ನ ಅರಿತು ಸಕಲ ಜೀವಜಂತುಗಳಿಗೆ ಆನಂದ ನೀಡುವಂತೆ ಬದುಕಿ ನಡೆ ದರೆ ಅಲ್ಲಿಗೆ ದೈವ ಋಣ ತೀರಿದಂತೆ.

ನಮ್ಮ ಹಿಂದಿನ ಪಿತೃಗಳು ಈ ಸಮಾಜಕ್ಕೆ ನಮ್ಮನ್ನು ಕೊಡುಗೆಯಾಗಿ ನೀಡಿದ್ದಾರೆ. ಅದರಂತೆ ನಾವು ಕೂಡ ಸಮಾಜದ ಉತ್ತಮ ಮುಂದುವರಿಕೆಗಾಗಿ ಉತ್ತಮ ಸಂತಾನವನ್ನು ಈ ಭೂಮಿಗೆ ನೀಡುವುದು ಕೂಡ ನಮ್ಮ ಕರ್ತವ್ಯ. ಆ ಮೂಲಕ ನಾವು ಮಾತಾ-ಪಿತೃಗಳ ಋಣವನ್ನು ತೀರಿಸಬಹುದು. ಆದರೂ ಮನುಷ್ಯ ಕೇವಲ ತಂದೆ ಅಥವಾ ತಾಯಿ ಒಬ್ಬರ ಋಣವನ್ನು ಮಾತ್ರ ತೀರಿಸಬಹುದಂತೆ. ಯಾಕೆಂದರೆ ಅವನು ತಂದೆಯಾಗಬಹುದು ಅಥವಾ ತಾಯಿಯಾಗಬಹುದು. ತಂದೆಯಾದರೆ ತಾಯಿಯ ಋಣ ಬಾಕಿ, ತಾಯಿ ಆದರೆ ತಂದೆಯ ಋಣ ಬಾಕಿ ಉಳಿಯುತ್ತದೆ ಎನ್ನುತ್ತದೆ ಶಾಸ್ತ್ರ. ಹೀಗಾಗಿ ಸಂತಾನದಲ್ಲಿ ಹೆಣ್ಣು- ಗಂಡು ಎರಡೂ ಇದ್ದವರು ಇಬ್ಬರ ಋಣವನ್ನು ತೀರಿಸಿದ ಸಮಾಧಾನ ಪಟ್ಟುಕೊಳ್ಳಬಹುದು.

ಮೇಲಿನ ಲೆಕ್ಕಾಚಾರ ನೋಡಿದಾಗ, ಇದ್ದುದರಲ್ಲಿ ಗುರುವಿನ ಋಣವನ್ನು ತೀರಿಸುವುದು ಸುಲಭ. ಗುರುವಿನಿಂದ ಕಲಿತ ಜ್ಞಾನವನ್ನು ತನ್ನ ಶಿಷ್ಯನಿಗೆ ಅಥವಾ ಮುಂದಿನ ಜನಾಂಗಕ್ಕೆ ವರ್ಗಾಯಿಸಿದರೆ ಅದು ಗುರುವಿನ ಋಣವನ್ನು ತೀರಿಸಿದಂತೆ. ಹೀಗಾಗಿ ಈ ಮನುಷ್ಯ ಈ ಮೂರು ಋಣಗಳ ತೀರಿಸುವಿಕೆಗಾಗಿ ತನ್ನ ಮಾನವ ಜನ್ಮವನ್ನು ಸವೆಸಬೇಕು ಎನ್ನುವುದು, ಆ ಮೂಲಕವಾಗಿ ಸತ್ಪ್ರಜೆಗಳ ಸೌಖ್ಯಸಮಾಜದ ಸ್ಥಾಪನೆ ಮಾಡುವುದು ಉದ್ದೇಶವಾಗಬೇಕು.

ಬಾಲ್ಯ, ಯೌವ್ವನ, ಮುಪ್ಪು ಮೂರೂ ಅವಸ್ಥೆಗಳಿಗೆ ಅದರದೇ ಆದ ಚೆಂದದ ಗುರಿ, ಉದ್ದೇಶ ಎಲ್ಲ ಇದೆ. ಬಾಲ್ಯದಲ್ಲಿ ಮುದ್ದಾಗಿ ತುಂಟತನದಿಂದ ಎಲ್ಲರ ಮನ ಗೆಲ್ಲುತ್ತೇವೆ.

ಯೌವ್ವನದಲ್ಲಿ ವಿದ್ಯೆ, ಉದ್ಯೋಗ, ವಿವಾ ಹ, ಆ ಬಂಧದಿಂದ ಜನಿಸುವ ಮಕ್ಕಳು, ಈ ಎಲ್ಲದರಿಂದ ಸ್ವತಃ ನಮಗೆ ಮತ್ತು ನಮ್ಮ ಪೋಷಕರಿಗೆ ಸಿಗುವ ಹೆಮ್ಮೆ, ಸಂತೋಷ, ಸಾರ್ಥಕತೆ ನೀಡಬೇಕು, ಪಡೆದುಕೊಳ್ಳಬೇಕು. ಕೊನೆಗೆ ವೃದ್ಧಾಪ್ಯದಲ್ಲಿ ಈ ಎಲ್ಲ ವ್ಯಾಮೋಹ, ಬಂಧಗಳಿಂದ ಒಂದೊಂದಾಗಿ ಬಿಡಿಸಿಕೊಂಡು ನಿರ್ಲಿಪ್ತರಾಗಿ, ಕೊನೆಯನ್ನು ಸ್ವೀಕರಿಸುವಂಥ ಬಾಳನ್ನು ಬದುಕಬೇಕು. ಪ್ರತಿ ಹಂತಕ್ಕೂ ಒಂದು ಅರ್ಥವಿದೆ.

ಇಂಥಾ ಉದಾತ್ತ ಸಂಸ್ಕೃತಿಯನ್ನು ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸುವ ಜವಾಬ್ದಾರಿ ಹೊರುವುದು ನೀರಸ ಕೆಲಸವಲ್ಲ. ಅದು ನಮ್ಮೆಲ್ಲರ ಪಾಲಿನ ಪೂಜನೀಯ ಕರ್ತವ್ಯ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ನಮ್ಮ ಆದ್ಯತೆ : ನಿಯತ್ತಿನ ನೀಟ್!

ಡಾ. ರವೀಶ್ ಅವರು 'ಸತ್ವಪರೀಕ್ಷೆ' ಅಂಕಣದಲ್ಲಿ ಬದಲಾಗಬೇಕಿರುವುದು ನಮ್ಮ ನಿಯತ್ತು, ನೀಟಲ್ಲ.. ಅಂತ ಸರಿಯಾಗಿ ಬರೆದಿದ್ದಾರೆ. ಕ್ರಿಶ 427ರಲ್ಲಿ ಸ್ಥಾಪಿತವಾದ ನಳಂದ ವಿವಿ ಶಾಸ್ತ್ರೋಕ್ತವಾಗಿ ಶುರುವಾದ ಅವರ ಶಿಕ್ಷಣ ಸಂಶೋಧನೆ ಈ ದಿನದ ತನಕ ನಡೆದಿದೆ. ಆಗಿನ ಕಾಲದಲ್ಲಿ ವಿದ್ಯಾರ್ಥಿಗಳ ಆಯ್ಕೆ, ಬೋಧಿಸುವ ಶಿಕ್ಷಕರು, ಶಿಕ್ಷಣದ ಗುಣಮಟ್ಟ ಎಷ್ಟು ವ್ಯವಸ್ಥಿತ ವಾಗಿತ್ತು ಎಂಬುದನ್ನು ಮನದಟ್ಟು ಮಾಡಿದ್ದಾರೆ. ಇದೇ ಕಾರಣಕ್ಕೆ, ಅನೇಕ ಹೊರ ದೇಶದ ವಿದ್ಯಾರ್ಥಿಗಳು ನಮ್ಮಲ್ಲಿ ವಿದ್ಯಾರ್ಜನೆಗೆ ಬರುತ್ತಿದ್ದರು. ಇಂದಿನ ಶಿಕ್ಷಣ ಸಂಸ್ಥೆಗಳು ಕೇವಲ ಕೋಚಿಂಗ್ ಸೆಂಟರ್‌ಗಳಾಗಿ ಕಾರ್ಯ ನಿರ್ವಹಿಸುತ್ತಿದ್ದು, ಮಕ್ಕಳನ್ನು ಬರೀ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರು ಮಾಡಿ ಹೊರದಬ್ಬುತ್ತಿವೆ, ಕೋಟಿ-ಕೋಟಿ ಗಳಿಸುತ್ತಿವೆ. ನಿಜವಾದ ಶಿಕ್ಷಣದಿಂದ ವಿದ್ಯಾರ್ಥಿಗಳು ವಂಚಿತರಾಗುತ್ತಿದ್ದು, ಇದೊಂದು ಸದೃಢ ಸಮಾಜದ ಬೆಳವಣಿಗೆಗೆ ಮಾರಕ. ಲೇಖಕರ ಕೆಲ ಮಾತುಗಳು ಶಿಕ್ಷಣ ಕುರಿತಂತೆ ಅವರ ಕಾಳಜಿ ಎತ್ತಿ ತೋರುತ್ತವೆ. ಶಿಕ್ಷಣ ಸಂಸ್ಥೆಗಳು ಜ್ಞಾನ ನೀಡುವುದರ ಬದಲು, ರಿಸಲ್ಟ್ ಉತ್ಪಾದಿಸುವ ಕಾರ್ಖಾನೆಗಳಿವೆ, ಶಿಕ್ಷಕ ತರಬೇತುದಾರನಾ ಗಿರಬಾರದು ಬದಲಾಗಿ ವಿದ್ಯಾರ್ಥಿಗಳಿಗೆ ಓದಿನ, ಜ್ಞಾನದ ಹಸಿವು ಹುಟ್ಟಿಸುವ ಗುರು ಆಗಬೇಕು, ಕಾಲೇಜಿನ ಯೋಗ್ಯತೆ ಅವುಗಳು ನೀಡುವ ಸ್ಪರ್ಧಾತ್ಮಕ ಪರೀಕ್ಷೆಯ ಫಲಿತಾಂಶಗಳ ಮೇಲೆ ನಿರ್ಧರಿಸು ವ ಪದ್ಧತಿಯಾಗಿ ನಿಲ್ಲಬೇಕು. ಸರಕಾರ ಮತ್ತು ಅದಕ್ಕೆ ಸಂಬಂಧಿಸಿದ ಇಲಾಖೆ ಮಂತ್ರಿ, ಸಂಸ್ಥೆಗಳು ಇವುಗಳನ್ನು ಗಮನಿಸಿ, ವ್ಯವಸ್ಥೆಯಲ್ಲಿ ಪಾರದರ್ಶಕತೆ ತರುವ ಪ್ರಾಮಾಣಿಕ ಕೆಲಸ ಆಗಬೇಕು, ಹತ್ತಿದ ಕಳಂಕ ಅಳಿಸಬೇಕು. ಯೋಗ್ಯ ರೀತಿಯಲ್ಲಿ ಚರ್ಚೆ ನಡೆಸಿ, ವಿಷಯ ಮಂಡಿಸಿದ ಲೇಖನವಿದು. ಲೇಖಕ ಮತ್ತು ಪತ್ರಿಕೆಗೆ ನನ್ನ ಧನ್ಯವಾದಗಳು.

- ಲಕ್ಷ್ಮೀಕಾಂತ ಪಾಟೀಲ

ಶಾಲಾ ವಾಹನ ದರ ಏರಿಕೆ ತಡೆ

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ, ಬಿಡಿಭಾಗಗಳ ದುಬಾರಿ ವೆಚ್ಚ ಮತ್ತು ವಿಮೆ, ತೆರಿಗೆಗಳ ಹೆಚ್ಚಳದಿಂದಾಗಿ ಖಾಸಗಿ ಶಾಲಾ ವಾಹನಗಳ ಮಾಸಿಕ ಶುಲ್ಕ ಕನಿಷ್ಠ ಶೇ.10ರಷ್ಟು ಹೆಚ್ಚಳವಾಗು ತ್ತಿರುವುದು ಪೋಷಕರಿಗೆ ಮತ್ತೊಂದು ದೊಡ್ಡ ಹೊರೆಯಾಗಿದೆ. ಈ ಗಾಗಲೇ ಶೈಕ್ಷಣಿಕ ಶುಲ್ಕ, ಪುಸ್ತಕ ಹಾಗೂ ಸಮವಸ್ತ್ರಗಳ ವೆಚ್ಚದಿಂದ ಕಂಗಾಲಾಗಿರುವ ಪೋಷಕರಿಗೆ ಈ ದರ ಏರಿಕೆ ಆತಂಕ ಮೂಡಿಸಿದೆ. ರಾಜ್ಯದಲ್ಲಿ ಸುಮಾರು 20 ಸಾವಿರಕ್ಕೂ ಹೆಚ್ಚು ಶಾಲಾ ವಾಹನಗಳು ಮಕ್ಕಳ ಸೇವೆಯಲ್ಲಿದ್ದು, ಇಂಧನ ದರ ಏರಿಕೆಯಿಂದಾಗಿ ಇವುಗಳ ನಿರ್ವಹಣೆ ಕಷ್ಟಕರವಾಗಿದೆ ಎಂದು ಮಾಲೀಕರ ಗೋಳು. ಶಾಲಾ ವಾಹನಗಳಿಗೆ ತ್ರೈಮಾಸಿಕ ರಸ್ತೆ ತೆರಿಗೆ ಮತ್ತು ಟೋಲ್ ಶುಲ್ಕದಲ್ಲಿ ವಿಶೇಷ ವಿನಾಯಿತಿ ನೀಡಬೇಕು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶಾಲಾ ಬಸ್ ಹಾಗೂ ವ್ಯಾನ್‌ಗಳಿಗೆ ರಿಯಾಯಿತಿ ದರದಲ್ಲಿ ಡೀಸೆಲ್ ಒದಗಿಸಬೇಕು. ಖಾಸಗಿ ಸಾರಿಗೆ ಕ್ಷೇತ್ರವು ನಷ್ಟಕ್ಕೆ ಸಿಲುಕದಂತೆ ಸರಕಾ ರವು ನಿಯಮಿತವಾಗಿ ಆರ್ಥಿಕ ಅನುದಾನ ಅಥವಾ ಪ್ಯಾಕೇಜ್ ಘೋಷಿಸಬೇಕು.

- ಡಾ. ವಿಜಯಕುಮಾರ್ ಎಚ್. ಕೆ., ರಾಯಚೂರು

ಹೆರಿಗೆಗೆ ಪ್ರೋತ್ಸಾಹಧನ ಸಲ್ಲ

ಜನಸಂಖ್ಯೆ ಕುಸಿತದ ಆತಂಕ ಎದುರಿಸುತ್ತಿರುವ ಆಂಧ್ರಪ್ರದೇಶ ಇದೀಗ ಜನನ ಪ್ರಮಾಣ ಹೆಚ್ಚಿಸಲು ನಗದು ಪ್ರೋತ್ಸಾಹದ ದಾರಿ ಹಿಡಿದಿದ್ದು, ಮೂರನೇ ಮಗುವಿಗೆ 30,000 ಹಾಗೂ ನಾಲ್ಕನೇ ಮಗುವಿಗೆ 40,000 ರು. ಪ್ರೋತ್ಸಾಹಧನ ನೀಡಲಾಗುವುದು ಎಂದು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡುರವರು ಘೋಷಿಸಿರುವುದು ವಿಪರ್ಯಾಸ. ಸರಕಾರದ ಹಣಕ್ಕೆ ಮಕ್ಕಳನ್ನು ಹೆರುವವರು ಬಡವರೇ ಹೊರತು ಶ್ರೀಮಂತರಲ್ಲ. ಸರಕಾರ ನೀಡಿದ ದುಡ್ಡು ಖಾಲಿಯಾದ ಮೇಲೆ ಈ ಮಕ್ಕಳ ಲಾಲನೆ ಪಾಲನೆ ಹಾಗೂ ಪೋಷಣೆ ಮಾಡುವವರು ಯಾರು? ಅವರ ಮುಂದಿನ ಶೈಕ್ಷಣಿಕ ವಿದ್ಯಾಭ್ಯಾಸಕ್ಕೆ ಹಣ ಬೇಡವೇ? ಮೊದಲೇ ಬಡತನದ ಬೇಗೆಯಿಂದ ಬಳಲುತ್ತಿರುವ ಕುಟುಂಬಕ್ಕೆ ಹಾಗೂ ಮಕ್ಕಳ ಭವಿಷ್ಯಕ್ಕೆ ಆಸರೆಯಾಗುವವರು ಯಾರು? ಮಕ್ಕಳನ್ನು ಹೆತ್ತು ಜನಸಂಖ್ಯೆ ಹೆಚ್ಚು ಮಾಡಿದರಷ್ಟೇ ಸಾಲದು. ಪೋಷಕರಿಗೆ ಹೀಗಿರುವ ಒಂದೆರಡು ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿ, ಒಳ್ಳೆಯ ಸಂಸ್ಕಾರವನ್ನು ಕಲಿಸಿ, ದೇಶ ಪ್ರೇಮ ಬೆಳೆಸಿದರೆ ಅದೇ ನಾವು ನಮ್ಮ ದೇಶಕ್ಕೆ ಮಾಡುವ ನಿಜವಾದ ದೇಶ ಸೇವೆ ಅಲ್ಲವೇ? ಇಷ್ಟಕ್ಕೂ ಅವರ ಮಾತನ್ನು ಆಂಧ್ರದ ಜನತೆ ಗಂಭೀರವಾಗಿ ತೆಗೆದುಕೊಳ್ಳದಿದ್ದರೆ ಅಷ್ಟೇ ಸಾಕು!

- ಹರಳಹಳ್ಳಿಪುಟ್ಟರಾಜು, ಪಾಂಡವಪುರ.

ಸಿಂಧೂ ಜಲ ಒಪ್ಪಂದ: ಅನ್ಯಾಯ ಯಾರಿಗೆ?

ನೀರನೋಟ
ಪ್ರದೀಪ್ ಕುಮಾರ ಸಕ್ಸೇನಾ
vveditoped@gmail.com

ಸಿಂಧೂ ನದಿ ವ್ಯವಸ್ಥೆಯು ಆರು ಪ್ರಮುಖ ನದಿಗಳನ್ನು ಒಳಗೊಂಡಿದೆ- ಸಿಂಧೂ (ಇಂಡಸ್), ಚೆನಾಬ್, ಝೇಲಂ, ರಾವಿ, ಬೀಸ್ ಮತ್ತು ಸಟ್ಲೆಜ್- ಈ ನದಿಗಳು ಭಾರತ ಮತ್ತು ಪಾಕಿಸ್ತಾನ ಎರಡೂ ಪ್ರದೇಶಗಳಲ್ಲಿ ಹರಿಯುತ್ತಿವೆ. ಈ ವ್ಯವಸ್ಥೆ ಸಿಂಧೂ ಕಣಿವೆಯಾದ್ಯಂತ ಕುಡಿಯುವ ನೀರು, ಕೃಷಿ ಮತ್ತು ವಿದ್ಯುತ್ ಉತ್ಪಾದನೆಯನ್ನು ಪೋಷಿಸುತ್ತದೆ. ಮತ್ತು ಗಡಿಗಳ ಎರಡೂ ಬದಿಗಳಲ್ಲಿ ಕೋಟ್ಯಂತರ ಜನರಿಗೆ ಜೀವನಾಧಾರವಾಗಿದೆ.

1947ರಲ್ಲಿ ಬ್ರಿಟಿಷ್ ಭಾರತವನ್ನು ವಿಭಜಿಸಿದಾಗ, ಸಿಂಧು ನದಿ ವ್ಯವಸ್ಥೆಯನ್ನೂ ಎರಡು ಉತ್ತರಾಧಿಕಾರಿ ದೇಶಗಳ ನಡುವೆ ವಿಂಗಡಿಸಲಾಯಿತು. ಭೌಗೋಳಿಕ ವಾಸ್ತವವು ಸ್ಪಷ್ಟವಾಗಿತ್ತು. ಮೇಲ್ದಂಡೆಯ ರಾಷ್ಟ್ರವಾಗಿರುವ ಭಾರತವು ಹೆಚ್ಚಿನ ನದಿಗಳ ಮೂಲ ಪ್ರದೇಶಗಳನ್ನು ಹೊಂದಿತ್ತು, ಆದರೆ ಪಾಕಿಸ್ತಾನದ ಕೃಷಿ ಹೃದಯಭೂಮಿ- ಹೆಚ್ಚು ನೀರಾವರಿ ಹೊಂದಿರುವ ಪಂಜಾಬ್ ಸಮತಟ್ಟುಗಳು- ಪೂರ್ವದಿಂದ ನಿರಂತರ ಹರಿದು ಬರುವ ನೀರಿನ ಮೇಲೆ ನಿರ್ಣಾಯಕವಾಗಿ ಅವಲಂಬಿತವಾಗಿದ್ದವು. ಭಾರತವು, ತನ್ನ ಹೊಸ ಪಶ್ಚಿಮ ನೆರೆಹೊರೆಯೊಂದಿಗೆ ಸ್ಥಿರತೆ ಮತ್ತು ಸಾಮಾನ್ಯ ಸಂಬಂಧಗಳನ್ನು ಬಯಸುವ ಜೊತೆಗೆ, ಪಂಜಾಬ್ ಮತ್ತು ರಾಜಸ್ಥಾನದಲ್ಲಿ ಸ್ವಂತ ಅಭಿವೃದ್ಧಿ ಉದ್ದೇಶಗಳಿಗಾಗಿ ಈ ವ್ಯವಸ್ಥೆಯನ್ನು ಬಳಸಿಕೊಳ್ಳುವ ಅವಶ್ಯಕತೆ ಇತ್ತು. ತನ್ನದೇ ಆದ ಪ್ರಮುಖ ದೇಶೀಯ ಅಗತ್ಯಗಳ ಹೊರತಾಗಿಯೂ, ಭಾರತವು 1960 ಸೆಪ್ಟೆಂಬರ್ 19ರಂದು ಪಾಕಿಸ್ತಾನದೊಂದಿಗೆ ಈ ಅತ್ಯಂತ ರಿಯಾಯಿತಿಪೂರ್ಣ ನೀರು ಹಂಚಿಕೆ ಒಪ್ಪಂದವನ್ನು ಮಾಡಿಕೊಂಡಿತು, ಈ ಒಪ್ಪಂದವನ್ನು ವಿಶ್ವ ಬ್ಯಾಂಕ್ ಸಹಾಯದಿಂದ ಸಾಧಿಸಲಾಯಿತು.

ಭಾರತ ಬೆಲೆ ತೆರಬೇಕಾಯಿತು

ಆರಂಭದಲ್ಲೇ ಭಾರತವು ತಾಳಿದ ಸಮಂಜಸ ಮತ್ತು ರಚನಾತ್ಮಕ ನಿಲುವು ಹಾಗೂ ಪಾಕಿಸ್ತಾನದ ಗರಿಷ್ಠವಾದ, ಕೆಲವೊಮ್ಮೆ ಅಸಂಗತವಾದ ಬೇಡಿಕೆಗಳ ನಡುವಿನ ಅಸಮಾನತೆಯಿಂದ ಮಾತುಕತೆಗಳ ದಿಕ್ಕು ರೂಪುಗೊಂಡಿತು. ಈ ಅಸಮಾನತೆಯೇ ಫಲಿತಾಂಶಗಳನ್ನು ನ್ಯಾಯಸಮ್ಮತವಾಗಿಡುವ ಬದಲು ಪಾಕಿಸ್ತಾನದ ಪರವಾಗಿ ತಳ್ಳಿತು. 5 ಫೆಬ್ರವರಿ 1954ರ ವಿಶ್ವ ಬ್ಯಾಂಕ್‌ನ ಮೊದಲ ಗಣನೀಯ ಪ್ರಸ್ತಾವನೆಯು ಇದನ್ನು ಸ್ಪಷ್ಟವಾಗಿ ವಿವರಿಸುತ್ತದೆ. ಈ ಆರಂಭಿಕ ಹಂತದಲ್ಲಿಯೂ, ಇದಕ್ಕೆ ಭಾರತದಿಂದ ಗಮನಾರ್ಹ ಏಕಪಕ್ಷೀಯ ರಿಯಾಯಿತಿಗಳು ಬೇಕಾಗಿದ್ದವು.

ಸಿಂಧೂ ಮತ್ತು ಚೆನಾಬ್ ನದಿಗಳ ಮೇಲ್ಭಾಗದಲ್ಲಿ ಕೈಗೊಳ್ಳಲಾಗುತ್ತಿದ್ದ ಎಲ್ಲಾ ಯೋಜಿತ ಭಾರತೀಯ ಅಭಿವೃದ್ಧಿ ಕಾರ್ಯಗಳನ್ನು ಕೈಬಿಡಬೇಕಾಯಿತು, ಬದಲಿಗೆ ಆ ಪ್ರಯೋಜನಗಳು ಪಾಕಿಸ್ತಾನಕ್ಕೆ ಸೇರಬೇಕಾಯಿತು. ಭಾರತವು ಚೆನಾಬ್ ನದಿಯಿಂದ ಸುಮಾರು 6 MAF ಅನ್ನು ತಿರುಗಿಸುವುದನ್ನು ತ್ಯಜಿಸಬೇಕಾಯಿತು. ಮೇರಲದಲ್ಲಿನ (ಈಗ ಪಾಕಿಸ್ತಾನದಲ್ಲಿದೆ) ಯಾವುದೇ ಚೆನಾಬ್ ನೀರು ಭಾರತೀಯ ಬಳಕೆಗೆ ಲಭ್ಯವಿರುವುದಿಲ್ಲ, ನದಿ ವ್ಯವಸ್ಥೆಯಿಂದ ಕಥ್‌ನಲ್ಲಿ ಯಾವುದೇ ಜಲಾಭಿವೃದ್ಧಿಗೆ ಅನುಮತಿ ನೀಡಲಾಗುವುದಿಲ್ಲ.

ಈ ಗಣನೀಯ ನಿರ್ಬಂಧಗಳ ಹೊರತಾಗಿಯೂ, ಭಾರತವು ತಕ್ಷಣವೇ ಉತ್ತಮ ನಂಬಿಕೆಯಲ್ಲಿ ಪ್ರಸ್ತಾಪವನ್ನು ಅಂಗೀಕರಿಸಿತು. ಇದು ತ್ವರಿತ ಪರಿಹಾರಕ್ಕಾಗಿ ಭಾರತದ ನಿಜವಾದ ಬಯಕೆಯನ್ನು ಸಂಕೇತಿಸುತ್ತದೆ. ಇದಕ್ಕೆ ತದ್ವಿರುದ್ಧವಾಗಿ, ಪಾಕಿಸ್ತಾನವು 1958 ಡಿಸೆಂಬರ್ 22ರವರೆಗೆ ಸುಮಾರು ಐದು ವರ್ಷಗಳವರೆಗೆ ತನ್ನ ಔಪಚಾರಿಕ ಅಂಗೀಕಾರವನ್ನು ವಿಳಂಬಗೊಳಿಸಿತು. ಭಾರತದ ಈ ಸದ್ಭಾವನೆಯ ನಡೆಯ ಪರಿಣಾಮವಾಗಿ, ಪಾಕಿಸ್ತಾನವು ಪಶ್ಚಿಮ ನದಿಗಳಲ್ಲಿ ಸಮಾನ ನಿರ್ಬಂಧಗಳಿಲ್ಲದೆ ಹೊಸ ಬಳಕೆಗಳನ್ನು ಅಭಿವೃದ್ಧಿಪಡಿಸುವುದನ್ನು ಮುಂದುವರೆಸಿತು. ಆದರೆ ಭಾರತದ ಮೇಲೆ ನಿರ್ಬಂಧಗಳನ್ನು ವಿಧಿಸಲಾಯಿತು. ಅಡೆತಡೆ ಮಾಡುವುದರಿಂದ ಲಾಭವಾಗುತ್ತದೆ ಮತ್ತು

ಸಹಕಾರ ದುಬಾರಿಯಾಗುತ್ತದೆ ಎಂಬ ಪಾಠವನ್ನು ಪಾಕಿಸ್ತಾನ ಕಲಿತುಕೊಂಡಿತು. ಮತ್ತು ಆ ಪಾಠವನ್ನು ನಂತರದಿಂದ ನಿರಂತರವಾಗಿ ಅನುಸರಿಸುತ್ತ ಬಂದಿದೆ.

ಭಾರತದ ತ್ಯಾಗದ ಪ್ರಮಾಣ

ಒಪ್ಪಂದದ ಹಂಚಿಕೆ ಸೂತ್ರದ ಅಡಿಯಲ್ಲಿ, ಭಾರತವು ಮೂರು ಪೂರ್ವ ನದಿಗಳಿಗೆ ವಿಶೇಷ ಹಕ್ಕುಗಳನ್ನು ಸ್ವೀಕರಿಸಿತು- ಸಟ್ಲೆಜ್, ಬಿಯಾಸ್ ಮತ್ತು ರಾವಿ- ಪಾಕಿಸ್ತಾನವು ಮೂರು ಪಶ್ಚಿಮ ನದಿಗಳಾದ ಸಿಂಧು, ಚೆನಾಬ್ ಮತ್ತು ಝೇಲಂನ ನೀರಿಗೆ ಹಕ್ಕುಗಳನ್ನು ಪಡೆದಿದೆ. ಭಾರತಕ್ಕೆ ತನ್ನದೇ ಪ್ರದೇಶದೊಳಗಿನ ಪಶ್ಚಿಮ ನದಿಗಳ ಮೇಲೆ ಕೆಲವು ಸೀಮಿತ, ಉಪಭೋಗವಲ್ಲದ ಬಳಕೆಗಳಿಗೆ ಅನುಮತಿ ನೀಡಲಾಯಿತು - ಮುಖ್ಯವಾಗಿ ಹರಿಯುವ ನದಿಯಿಂದ ಜಲವಿದ್ಯುತ್ ಉತ್ಪಾದನೆಗಾಗಿ, ಆದರೆ ಇದಕ್ಕೆ ವ್ಯಾಪಕ ವಿನ್ಯಾಸ ಮತ್ತು ಕಾರ್ಯಾಚರಣಾ ನಿರ್ಬಂಧಗಳು ಅನ್ವಯಿಸುತ್ತವೆ.

ಪ್ರಮಾಣದ ಪರಿಭಾಷೆಯಲ್ಲಿ, ಭಾರತಕ್ಕೆ ಹಂಚಿಕೆಯಾದ ಪೂರ್ವ ನದಿಗಳು ವಾರ್ಷಿಕ ಹರಿವಿನ ಸುಮಾರು 33 ಮಿಲಿಯನ್ ಎಕರೆ-ಅಡಿ (MAF) ಅನ್ನು ಹೊಂದಿರುತ್ತವೆ. ಮತ್ತು ಪಾಕಿಸ್ತಾನಕ್ಕೆ ಹಂಚಿಕೆಯಾದ ಪಶ್ಚಿಮ ನದಿಗಳು ಸುಮಾರು 135 MAF ನೀರನ್ನು ಹೊಂದಿರುತ್ತವೆ. ಇದರಿಂದ ಪಾಕಿಸ್ತಾನಕ್ಕೆ ಒಟ್ಟು ನದಿ ವ್ಯವಸ್ಥೆಯ ಸುಮಾರು 80 ಪ್ರತಿಶತ ಲಭ್ಯವಾಗುತ್ತದೆ. ಭಾರತವು ವಿಶಾಲವಾದ ಪಶ್ಚಿಮ ನದಿ ವ್ಯವಸ್ಥೆಯ ಮೇಲಿನ ಎಲ್ಲಾ ಹಕ್ಕುಗಳನ್ನು ತ್ಯಜಿಸುವ ಬದಲಾಗಿ 20 ಶೇಕಡಾ ಪಾಲನ್ನು ಪಡೆಯಿತು. ಒಪ್ಪಂದದಿಂದ ಭಾರತವು ಹೊಸ ನೀರನ್ನು ಪಡೆಯಲಿಲ್ಲ ಎಂಬುದು ನಿರ್ಣಾಯಕ ಅಂಶವಾಗಿದೆ. ಭಾರತಕ್ಕೆ ಲಭಿಸಿದ್ದು, ಅದು ಈಗಾಗಲೇ ಬಳಸುತ್ತಿದ್ದ ನೀರಿನ ಹರಿವಿನ ಮೇಲಿನ ಅಧಿಕೃತ ಮಾನ್ಯತೆ ಮಾತ್ರ. ಅದಕ್ಕಾಗಿ ಬಹಳ ದೊಡ್ಡ ಪಶ್ಚಿಮ ನದಿ ವ್ಯವಸ್ಥೆಯ ಮೇಲಿನ ಎಲ್ಲಾ ಹಕ್ಕುಗಳನ್ನು ತ್ಯಜಿಸಬೇಕಾಯಿತು. ಭಾರತಕ್ಕೆ ತನ್ನ ಪ್ರದೇಶದೊಳಗಿನ ಪಶ್ಚಿಮ ನದಿಗಳ ಮೇಲೆ ಕೆಲವು ಉಪಭೋಗವಲ್ಲದ ಬಳಕೆಗಳಿಗೆ ಅನುಮತಿ ನೀಡಲಾಯಿತು. ಮುಖ್ಯವಾಗಿ ನದಿಯ ಸಹಜ ಹರಿವನ್ನು ಬಳಸಿ ಜಲವಿದ್ಯುತ್ ಉತ್ಪಾದಿಸಲು ಅನುಮತಿಸಲಾಯಿತು.

ಹಣಕಾಸಿನ ನಿಬಂಧನೆ

ಒಪ್ಪಂದದ ಅತ್ಯಂತ ಗಮನಾರ್ಹವಾದ ಅಸಂಗತತೆ ಎಂದರೆ ಹಣಕಾಸಿನ ನಿಬಂಧನೆ. ಪಾಕಿಸ್ತಾನ-ಆಕ್ರಮಿತ ಕಾಶ್ಮೀರದಲ್ಲಿ ನೀರಿನ ಸಂಪನ್ಮೂಲಗಳ ಮೂಲಸೌಕರ್ಯವನ್ನು ನಿರ್ಮಿಸಲು ಪಾಕಿಸ್ತಾನಕ್ಕೆ ಪರಿಹಾರವಾಗಿ ಸುಮಾರು 62 ಮಿಲಿಯ ಡಾಲರ್ (ಪ್ರಸ್ತುತ ಮೌಲ್ಯದಲ್ಲಿ ಸುಮಾರು 2.5 ಬಿಲಿಯ) ಪಾವತಿಸಲು ಭಾರತ ಒಪ್ಪಿದೆ. ಈ ಪಾವತಿಯು ಒಂದು ವಿಶಿಷ್ಟ ಪೂರ್ವನಿದರ್ಶನವನ್ನು ಪ್ರತಿನಿಧಿಸುತ್ತದೆ. ಇದರಲ್ಲಿ ಈಗಾಗಲೇ ವ್ಯವಸ್ಥೆಯ ಬಹುಪಾಲು ನೀರನ್ನು ಬಿಟ್ಟುಕೊಡುತ್ತಿದ್ದ ಮೇಲ್ದಂಡೆ ದೇಶವು, ಹೆಚ್ಚುವರಿಯಾಗಿ ಸವಲತ್ತು ಪಡೆಯಲು ಕೆಳ ದಂಡೆಯ ನದಿಯ ದೇಶಕ್ಕೆ ಪಾವತಿಸಿತು. ಮೂಲಭೂತವಾದ ನೀರಿನ ಹಂಚಿಕೆ ಪ್ರಶ್ನೆಯಲ್ಲಿ ಪಾಕಿಸ್ತಾನದ ಪರವಾಗಿ ಹೆಚ್ಚು ಲಾಭಕರವಾಗಿದ್ದ ಒಪ್ಪಂದವನ್ನು ಅಂಗೀಕರಿಸಲು ಭಾರತವು ವಾಸ್ತವವಾಗಿ ಪಾಕಿಸ್ತಾನಕ್ಕೆ ಸಹಾಯಧನ ನೀಡಿದಂತಾಯಿತು.

ಒಪ್ಪಂದದ ರಚನಾತ್ಮಕ ಅನ್ಯಾಯ

ಈ ಒಪ್ಪಂದವು ಪಶ್ಚಿಮ ನದಿಗಳ ಬಳಕೆಯಲ್ಲಿ ಭಾರತಕ್ಕೆ ನಿರ್ದಿಷ್ಟ ವಿನ್ಯಾಸ ಮತ್ತು ಕಾರ್ಯಾಚರಣಾ ನಿರ್ಬಂಧಗಳ ಸರಣಿಯನ್ನು ವಿಧಿಸುತ್ತದೆ. ಆದರೆ ಅದಕ್ಕೆ ಸಮಾನವಾದ ಯಾವುದೇ ಬಾಧ್ಯತೆಗಳು ಪಾಕಿಸ್ತಾನಕ್ಕೆ ಇಲ್ಲ. ಭಾರತವು ತನ್ನ ಪ್ರದೇಶದಲ್ಲಿ ಸೀಮಿತ ನೀರಾವರಿ ಬೆಳೆ ಪ್ರದೇಶವನ್ನು ಮಾತ್ರ ಅಭಿವೃದ್ಧಿಪಡಿಸಬಹುದು. ಪಶ್ಚಿಮ ನದಿಗಳಲ್ಲಿನ ಯಾವುದೇ ಸಂಗ್ರಹಣಾ ಸೌಲಭ್ಯದಲ್ಲಿ ಹಿಡಿದಿಟ್ಟುಕೊಳ್ಳಬಹುದಾದ ನೀರಿನ ಪ್ರಮಾಣದ ಮೇಲೆ ಭಾರತವು ಕಟ್ಟುನಿಟ್ಟಿನ ಮಿತಿಗಳನ್ನು ಎದುರಿಸುತ್ತಿದೆ. ಸಂಗ್ರಹಣೆ ಮತ್ತು ಸಂಗ್ರಹ ಸಾಮರ್ಥ್ಯದ ಮೇಲಿನ ನಿರ್ಬಂಧಗಳನ್ನು ಒಳಗೊಂಡಂತೆ ಪಶ್ಚಿಮ ನದಿಗಳನ್ನು ಬಳಸಿ ನಿರ್ಮಿಸುವ ಜಲವಿದ್ಯುತ್ ಸೌಲಭ್ಯಗಳಿಗೆ ಭಾರತವು ನಿರ್ದಿಷ್ಟ ವಿನ್ಯಾಸದ ಮಾನದಂಡಗಳನ್ನು ಅನುಸರಿಸಬೇಕು.ಈ ನಿರ್ಬಂಧಗಳು ಏಕಪಕ್ಷೀಯವಾಗಿವೆ. ಭಾರತದ ಪ್ರದೇಶದೊಳಗೇ ಭಾರತದ ಕಾನೂನುಬದ್ಧ ಸಂಪನ್ಮೂಲಗಳ ಅಭಿವೃದ್ಧಿಯನ್ನು ನಿರ್ಬಂಧಿಸಲಾಗಿದೆ. ಆದರೆ ಪಾಕಿಸ್ತಾನದ ಮೇಲೆ ಸಮಾನವಾದ ಪಾರದರ್ಶಕತೆ ಅಥವಾ ನಿರ್ಬಂಧದ ಅವಶ್ಯಕತೆಗಳನ್ನು ವಿಧಿಸಿಲ್ಲ. ಇದರ ಫಲವಾಗಿ, ಈ ಒಪ್ಪಂದವು ಮೇಲ್ದಂಡೆಯ ದೇಶವಾದ ಭಾರತವನ್ನು ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಒಳಪಟ್ಟ ಪಕ್ಷವಾಗಿ ಪರಿಗಣಿಸುತ್ತದೆ. ಆದರೆ ಕೆಳದಂಡೆಯ ದೇಶವು ಖಚಿತ ನೀರಿನ ಹರಿವಿನಿಂದ ಲಾಭ ಪಡೆಯುತ್ತದೆ.

(ಲೇಖಕರು ನಿವೃತ್ತ ಸಿಂಧೂ ಜಲ ಒಪ್ಪಂದ ಆಯುಕ್ತರು)

ಪ್ರಸ್ತುತ

ಮಿರ್ಲೆ ಚಂದ್ರಶೇಖರ

ಸಾಧನೆಗೆ ಬೇಕಿಲ್ಲ ಅಕ್ಷರ, ಬೇಕು ಛಲ

ಸಮಾಜದಲ್ಲಿ ಒಂದೊಳ್ಳೆ ಕೆಲಸ ಮಾಡಬೇಕೆಂದರೆ ವಿದ್ಯೆ ಕಲಿಯಲೇ ಬೇಕೆಂಬುದು ಕಡ್ಡಾಯವಲ್ಲ. ಓದುಬರಹ ಗೊತ್ತಿಲ್ಲದವರೂ ಸಹ ವಿದ್ಯಾವಂತರು ನಾಚುವಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ತೋರಿದ್ದಾರೆ. ನಿಜ ಹೇಳಬೇಕೆಂದರೆ ವಿದ್ಯಾವಂತರಲ್ಲದವರು ಜೀವನದಲ್ಲಿ ನೆರೆಹೊರೆಗೆ ಅಂಜಿ ಬದುಕುತ್ತಾರೆ, ಇವರು ಮೋಸ ಹೋಗುತ್ತಾರೆಯೇ ಹೊರತು ಯಾರಿಗೂ ಮೋಸ ಮಾಡುವುದಿಲ್ಲ, ಸಂಪಾದಿಸಿದ್ದು ತನಗೆ ತನ್ನ ಕುಟುಂಬಕ್ಕೆ ಎನ್ನುವುದಿಲ್ಲ ಅವಿದ್ಯಾವಂತರು. ಗಳಿಸಿದ್ದರಲ್ಲಿ ಸ್ವಲ್ಪ ಬೇರೆಯ ವರಿಗೂ ಖರ್ಚು ಮಾಡುತ್ತಾರೆ, ಇಲ್ಲಿಯೂ ಸ್ವಾರ್ಥಿಗಳು ಇಲ್ಲವೆಂದೇನಿಲ್ಲ. ಪ್ರಮಾಣದಲ್ಲಿ ಹೆಚ್ಚು ಸಂಖ್ಯೆಯವರು ಶಾಲೆಯ ಮೆಟ್ಟಿಲು ಹತ್ತದವರು ಇನ್ನೂ ನ್ಯಾಯನೀತಿ ಎಂಬುದನ್ನು ಇಟ್ಟುಕೊಂಡಿದ್ದಾರೆ. ವಿದ್ಯಾವಂತರ ನಡವಳಿಕೆಯು ಸರ್ಕಾರದಿಂದ ಆಗಬೇಕಿರುವ ಕೆಲಸಕ್ಕೆ ಸರ್ಕಾರಿ ಕಚೇರಿಗಳಿಗೆ ಹೋಗಿಬಂದವರಿಗೆ ಅನುಭವಕ್ಕೆ ಬಂದಿರುತ್ತದೆ.

ನ್ಯಾಯ-ಅನ್ಯಾಯವನ್ನು ಬದಿಗಿಟ್ಟು ಹೇಳುವುದಾದರೆ ಓದಿನಿಂದ ವಂಚಿತರಾದವರಿಗೆ ದೊಡ್ಡವರಾದ ಮೇಲೆ ನಾನು ಶಾಲೆಗೆ ಹೋಗದೆ ತಪ್ಪು ಮಾಡಿದೆ ಎಂಬ ಗಿಲ್ಟ್ ಕಾಡುತ್ತಿರುತ್ತದೆ. ನನ್ನಂತೆ ನನ್ನ ಮಕ್ಕಳು ವಿದ್ಯೆಯಿಂದ ವಂಚಿತರಾಗುವುದು ಬೇಡ ಎಂಬ ಮನಸ್ಥಿತಿಯಲ್ಲಿ ಇರುತ್ತಾರೆ. ಗುಣ ಹಾಗೂ ವಿನಯಕ್ಕೆ ವಿದ್ಯೆಯ ಅವಶ್ಯಕತೆ ಇಲ್ಲ. ವಿದ್ಯೆ ಇಲ್ಲದೆಯೂ ತನ್ನವರಿಗೆ ಹಾಗೂ ಜನ್ಮ ನೀಡಿದ ಮಣ್ಣಿಗೆ ನಿಷ್ಠನಾಗಿ ಸಾಮರ್ಥ್ಯಕ್ಕೆ ಅನುಸಾರ ಕೊಡುಗೆ ನೀಡುತ್ತಾನೆ.

ದಕ್ಷಿಣ ಕನ್ನಡ ಜಿಲ್ಲೆಯ ಹರೇಕಳ ಗ್ರಾಮದ 70 ವರ್ಷದ ಹಿರಿಯರಾದ ಕಿತ್ತಳೆ ಹಣ್ಣು ವ್ಯಾಪಾರಿ ಹಾಜಬ್ಬರವರು ಬಡವರಾದ್ದರಿಂದ ವಿದ್ಯೆ ಕಲಿಯಲಾಗಲಿಲ್ಲ. ತಾವು ಅವಿದ್ಯಾವಂತರಾದರೂ ಇವರು ಮಾಡಿದ ಮಹತ್ತರವಾದ ಸಾಧನೆಯಿಂದ ರಾಷ್ಟ್ರಪತಿ ಭವನದಲ್ಲಿ ದೇಶದ ಅತ್ಯುನ್ನತ ಪ್ರಶಸ್ತಿ ಪದ್ಮಶ್ರೀಯನ್ನು ಆಗಿನ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರಿಂದ ಪಡೆದರು. ಅಕ್ಷರ ಸಂತ ಹರೇಕಳ ಹಾಜಬ್ಬ ಬರಿಗಾಲಲ್ಲಿ ಪ್ರಶಸ್ತಿ ಪಡೆದದ್ದನ್ನು ನೋಡಿ ದೇಶವೇ ಆಶ್ಚರ್ಯಚಕಿತವಾಯಿತು.

ಈ ವ್ಯಕ್ತಿ ಅನಕ್ಷರಸ್ಥ ಜೊತೆಗೆ ಬಡವರು. ಹೊತ್ತಿಗೆ ದುಡಿದು ತಿನ್ನುವ ಸಾಧಾರಣ ಮನುಷ್ಯ. ನಮ್ಮ ಕನ್ನಡಿಗ ಎನ್ನುವುದು ನಮ್ಮ ಹೆಮ್ಮೆ. ಕಿತ್ತಳೆ ಹಣ್ಣು ಮಾರಾಟದಿಂದ ನಿತ್ಯ ಸಂಪಾದಿಸುತ್ತಿದ್ದ ಹಣ ಕೇವಲ ರೂ. 150. ಕಡಿಮೆ ಮೊತ್ತದ ಸಂಪಾದನೆಯಲ್ಲೇ ಉಳಿಸಿದ ಹಣದಲ್ಲಿ ಪ್ರಾಥಮಿಕ ಶಾಲೆಯೊಂದನ್ನು ನಿರ್ಮಿಸಿ, ಮಹಾನ್ ವ್ಯಕ್ತಿಗಳ ಸಾಲಿನಲ್ಲಿ ಇವರೂ ಒಬ್ಬರಾದರು.ಹಾಜಬ್ಬರವರು ಶಾಲೆ ಕಟ್ಟಿಸಲು ಕಾರಣವಿದೆ. ಕೆಲವು ವರ್ಷಗಳ ಹಿಂದೆ ವಿದೇಶಿ ಪ್ರವಾಸಿಯೊಬ್ಬರು ಕಿತ್ತಳೆ ಹಣ್ಣಿನ ಬೆಲೆಯನ್ನು ಇಂಗ್ಲೀಷ್‌ನಲ್ಲಿ ಕೇಳಿದಾಗ, ಅವರು ಕೇಳಿದ್ದು ಅರ್ಥವಾಗದೆ ಮುಜುಗರ ಅನುಭವಿಸುತ್ತಾರೆ. ಇವರಿಗೆ ತಾವಿದ್ದ ಊರಿನಲ್ಲಿ ಯಾವುದೇ ಶಿಕ್ಷಣದ ಸವಲತ್ತುಗಳು ಇಲ್ಲದಿದ್ದ ಕಾರಣ ವಿದ್ಯೆಯಿಂದ ವಂಚಿತರಾಗುತ್ತಾರೆ. ಶಾಲೆಯೊಂದು ಇದ್ದಿದ್ದರೆ ನಾನೂ ಕೂಡ ಓದಬಹುದಿತ್ತು ಎಂಬ ಹಿನ್ನೆಲೆಯಲ್ಲಿ ಮುಜುಗರಕ್ಕೆ ಒಳಗಾದ ದಿನವೇ ಶಾಲೆ ಕಟ್ಟಿಸುವುದಾಗಿ ಪ್ರತಿಜ್ಞೆ ಮಾಡುತ್ತಾರೆ.ಇಂಗ್ಲಿಷ್ ಬಾರದೇ ಇರುವ ಕಾರಣ ಅನುಭವಿಸಿದ ನೋವು ನಮ್ಮ ಊರಿನ ಮಕ್ಕಳಿಗೂ ಬಾರದೆಂಬ ಉತ್ಕಟ ಬಯಕೆಯಿಂದ ಶಾಲೆಯೇ ಇಲ್ಲದ ತನ್ನೂರಿನಲ್ಲಿ ಸಣ್ಣ ಉಳಿತಾಯದ ಮೊತ್ತದಿದ ಪ್ರಾಥಮಿಕ ಶಾಲೆಯನ್ನು ಕಟ್ಟಿಸಿದರು. ಬಿಬಿಸಿ ಮೂಲಕ ಹಾಜಬ್ಬನವರು ಹೊರದೇಶಗಳಿಗೂ ಪರಿಚಯವಾದರು.

ಇವರಿಂದ ಪ್ರೇರೇಪಣೆಗೊಂಡ ಕೆಲವರು ತನ್ನೂರಿಗೆ, ತಾನು ಓದಿದ ಶಾಲೆಗೆ ಏನಾದರೂ ಸೇವೆ ಮಾಡಬೇಕೆನ್ನುವ ಆಸೆಯು ಚಿಗುರದೆ ಇರದು. ಇದೇ ದಿಕ್ಕಿನಲ್ಲಿ ನಮ್ಮೂರಿನ ಹಿರಿಯ ವಿದ್ಯಾರ್ಥಿಗಳ ಒಕ್ಕೂಟ ಕೆಲಸ ಮಾಡುತ್ತಿದೆ. ಹಾಜಬ್ಬರವರೊಂದಿಗೆ ಹೋಲಿಕೆ ಮಾಡಲಾಗದು. ಅವರು ಏಕಾಂಗಿಯಾಗಿ ದುಡಿದ ತನ್ನದೇ ಹಣದಿಂದ ಶಾಲೆ ಕಟ್ಟಿದರು. ನಮ್ಮದು ಸಾಮೂಹಿಕ ವಂತಿಗೆ ಮತ್ತು ಬೆಂಬಲ. ನಾಲ್ಕೈದು ದಶಕಗಳ ಹಿಂದೆ ಓದಿದ ಶಾಲೆಯನ್ನು ಅಭಿವೃದ್ಧಿಪಡಿಸಬೇಕೆನ್ನುವುದು ಹಳೆಯ ವಿದ್ಯಾರ್ಥಿಗಳ ಹಂಬಲ.

ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಕಟ್ಟಡಗಳೆರಡೂ ಅನುಪಯುಕ್ತವಾಗಿ ಇಂದೋ ನಾಳೆಯೋ ಬೀಳುವಂತಿವೆ. ಶಾಲೆಗಳು ಬೇರೆ ಕಟ್ಟಡಗಳಲ್ಲಿ ನಡೆಯುತ್ತಿವೆ. ಕಟ್ಟಡಗಳನ್ನು ನೋಡಿದಾಗಲೆಲ್ಲಾ ಕರುಳು ಕಿತ್ತು ಬರುತ್ತದೆ, ಮುರಿದ ಗೋಡೆಗಳು, ತೂತುತೂತಾಗಿರುವ ಛಾವಣಿ, ಮಕ್ಕಳ ನಗುವಿಲ್ಲದೆ ಸ್ಮಶಾನ ಮೌನ, ಇಣುಕಿದರೆ ಬಣಗುಡುತ್ತಿರುವ ಖಾಲಿ, ತರಗತಿಗಳು ಕೂಗಿ ಕೇಳುತ್ತವೆ; ನನ್ನನ್ನು ಉಳಿಸಿ ಭವಿಷ್ಯದ ಬೆಳಕಿಗೆ ದಾರಿ ತೋರಲು, ಮಕ್ಕಳ ಕನಸುಗಳನ್ನು ಉಳಿಸಲು. ಇಂಥ ನೋವಿನ ಸಂದಿಗ್ಧತೆಯನ್ನು ನನ್ನಂತೆಯೇ ವಯೋಮಾನದ ಹಿರಿಯ ವಿದ್ಯಾರ್ಥಿಗಳು ತಮ್ಮ ಶಾಲೆಯನ್ನು ನೋಡುವಾಗ ಅನುಭವಿಸಿರುತ್ತಾರೆ. ಸರ್ಕಾರದ ವ್ಯವಸ್ಥೆಯಲ್ಲಿ ಹಳೆಯ ಕಟ್ಟಡಗಳ ನಿರ್ವಹಣೆ ಮಾಡುವುದಕ್ಕೆ ಮನಸ್ಸು ಮಾಡುವುದಿಲ್ಲ, ದಿನ ಕಳೆದಂತೆ ಶಿಥಿಲವಾಗುತ್ತಿರುತ್ತವೆ.

ಶಾಲೆ ಅಭಿವೃದ್ಧಿಗಾಗಿಯೇ ಒಕ್ಕೂಟ ಮಾಡಿಕೊಂಡ ಸಮಾನ ಮನಸ್ಕ ಹಿರಿಯ ವಿದ್ಯಾರ್ಥಿಗಳ ಗುಂಪಿನಲ್ಲಿ ಲಕ್ಷದಿಂದ ಕೋಟಿ ದುಡಿದವರು ಹಾಗೂ ಇನ್ನೂ ಸಂಪಾದನೆಯಲ್ಲಿ ಇರುವವರಿದ್ದಾರೆ. ಸಂಖ್ಯೆಗೆ ಲೆಕ್ಕವಿಲ್ಲ ಎಲ್ಲರಿಗೂ ಉತ್ಕಟ ಬಯಕೆ, ನನ್ನೂರು ನನ್ನ ಶಾಲೆ ಎಂಬ ಅಭಿಮಾನ, ಆದರೂ ಪ್ರಗತಿ ಆಮೆ ನಡಿಗೆಯಲ್ಲಿದೆ. ಹಾಜಬ್ಬ ಏಕಾಂಗಿಯಾಗಿ ಅದೂ ಅನಕ್ಷರಸ್ಥರಾಗಿ ಸಾಧಿಸಿದ್ದಾದರೂ ಹೇಗೆ? ಎಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ನಮ್ಮ ಒಕ್ಕೂಟದಲ್ಲಿ ದೊಡ್ಡ ಹುದ್ದೆಯಲ್ಲಿದ್ದವರು, ಡಾಕ್ಟರೇಟ್ ಪಡೆದವರು, ಇಂಜಿನಿಯರ್‌ಗಳು, ಡಾಕ್ಟರ್‌ಗಳು, ಶಿಕ್ಷಣ ತಜ್ಞರು, ಶಿಕ್ಷಕರು ಹೀಗೆ ಎಲ್ಲಾ ಹಿರಿಯರು ಇದ್ದಾಗ್ಯೂ ಸಭೆ ಸಮಾರಂಭಗಳಲ್ಲೇ ಸಮಯ ಕಳೆದು ಹೋಗುತ್ತಿದೆ. ಹಾಜಬ್ಬನವರ ಸಾಧನೆಯ ಕಥೆ ಕೇಳಿದಾಗ ನನಗನಿಸಿದ್ದು, ಸಾಧನೆಗೆ ಸಂಖ್ಯೆ ಮುಖ್ಯವಲ್ಲ ಛಲ ಮತ್ತು ತ್ಯಾಗ ಮನೋಭಾವ ಎನ್ನುವುದು.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:123

ಸಮಾಚಾರ ಸಣ್ಣದಲ್ಲ

ವಿಜಯ್ ಸರಕಾರ ಆರು ತಿಂಗಳಷ್ಟೆ: ಡಿಎಂಕೆ ಶಾಸಕ

ಚೆನ್ನೈ: ತಮಿಳುನಾಡಿನಲ್ಲಿ ಸದ್ಯ ಇರುವ ಸಿಎಂ ಜೋಸೆಫ್ ವಿಜಯ್ ನೇತೃತ್ವದ ಸಮ್ಮಿಶ್ರ ಸರಕಾರ 6 ತಿಂಗಳೂ ಇರುವುದಿಲ್ಲ. ಡಿಎಂಕೆ ನಾಯಕ ಎಂ.ಕೆ.ಸ್ಟಾಲಿನ್ ಅವರೇ ಮರಳಿ ಅಧಿಕಾರಕ್ಕೆ ಬರುತ್ತಾರೆ ಎಂದು ತಿರುಚೆಂಡೂರು ಕ್ಷೇತ್ರದ ದ್ರಾವಿಡ ಮುನ್ನೇತ್ರ ಕಳಗಂ(ಡಿಎಂಕೆ) ಪಕ್ಷದ ಶಾಸಕ ಅನಿತಾ ರಾಧಾಕೃಷ್ಣನ್ ಹೇಳಿದ್ದಾರೆ. ತಿರುಚೆಂಡೂರು ಕ್ಷೇತ್ರದಲ್ಲಿ ಕಳೆದ 25 ವರ್ಷಗಳಿಂದ ನಿರಂತರ ಗೆಲ್ಲುತ್ತಾ ಬಂದಿರುವ ಅನಿತ ರಾಧಾಕೃಷ್ಣನ್, ವಿಲ್ಲಿವಕ್ಕಂ ಕ್ಷೇತ್ರದ ಟಿವಿಕೆ ಶಾಸಕ ಆಧವ್ ಅರ್ಜುನ್ ರಾಜೀನಾಮೆ ನೀಡಿ, ತಿರುಚೆಂಡೂರಿನಲ್ಲಿ ತಮ್ಮ ವಿರುದ್ಧ ಸ್ಪರ್ಧಿಸಿ ಗೆದ್ದು ತೋರಿಸಿ ನೋಡೋಣ ಎಂದೂ ಸವಾಲೆಸೆದಿದ್ದಾರೆ. 2001ರಿಂದ ಎಐಎಡಿಎಂಕೆ ಟಿಕೆಟ್‌ನಲ್ಲಿ ಬಳಿಕ 2009ರಿಂದ ಡಿಎಂಕೆ ಟಿಕೆಟ್‌ನಲ್ಲಿ ಸ್ಪರ್ಧಿಸಿ ಸತತವಾಗಿ ಆ ಕ್ಷೇತ್ರದಲ್ಲಿ ಅನಿತ ಗೆಲ್ಲುತ್ತಾ ಬಂದಿದ್ದಾರೆ.

ಚಿತ್ರ ನಿರ್ಮಾಪಕ 85ನೇ ವಯಸ್ಸಿನಲ್ಲಿ ಆತ್ಮಹತ್ಯೆ

ಚೆನ್ನೈ: ತಮಿಳು ಚಿತ್ರರಂಗದ, 85 ವರ್ಷದ ಹಿರಿಯ ನಿರ್ಮಾಪಕ ಕೆ.ರಾಜನ್ ಚೆನ್ನೈನ ಅಡಯಾರ್ ಸೇತುವೆಯಿಂದ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನೇರ ಮಾತು, ವಿವಾದಾತ್ಮಕ ಹೇಳಿಕೆಗಳಿಂದಾಗಿ ಹೆಚ್ಚು ಗಮನ ಸೆಳೆಯುತ್ತಿದ್ದ ರಾಜನ್ ಅವರ ಆತ್ಮಹತ್ಯೆ ತಮಿಳು ಚಿತ್ರರಂಗಕ್ಕೆ

ಭಾರೀ ಆಘಾತ ಉಂಟಾಗಿದೆ. ವ್ಯಾಪಕ ಚರ್ಚೆಗೂ ಕಾರಣವಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ನದಿಯಿಂದ ಮೃತದೇಹ ಹೊರತೆಗೆದು ಆಸ್ಪತ್ರೆಗೆ ರವಾನಿಸಿದರು. ಮರಣೋತ್ತರ ಪರೀಕ್ಷೆ ಬಳಿಕ ಕುಟುಂಬದವರಿಗೆ ಮೃತದೇಹ ಹಸ್ತಾಂತರಿಸಲಾಗಿದೆ. ಆತ್ಮಹತ್ಯೆಗೆ ಕಾರಣ ತಿಳಿದುಬಂದಿಲ್ಲ. ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ. 1983ರಲ್ಲಿ ನಟ ಸುರೇಶ್ ಅಭಿನಯದ ಬ್ರಹ್ಮಚಾರಿಗಳು ಚಿತ್ರದ ಮೂಲಕ ನಿರ್ಮಾಪಕರಾಗಿ ಸಿನಿಪಯಣ ಆರಂಭಿಸಿದ ರಾಜನ್, 5 ದಶಕಗಳಿಂದಲೂ ತಮಿಳು ಚಿತ್ರರಂಗದಲ್ಲಿ ಸಕ್ರಿಯವಾಗಿದ್ದರು. 'ಗಣೇಶ್ ಸಿನಿ ಆರ್ಟ್ಸ್' ಬ್ಯಾನರ್‌ನಡಿ ಹಲವಾರು ಚಿತ್ರಗಳನ್ನು ನಿರ್ಮಿಸಿದ್ದರು. ಅಬ್ಬಾಸ್ ಮತ್ತು ಕುನಾಲ್ ಅಭಿನಯದ ಉಣರ್ಚಿಗಳ್ ಸೇರಿ ಕೆಲ ಸಿನಿಮಾಗಳ ನಿರ್ದೇಶನವನ್ನೂ ಮಾಡಿದ್ದರು. 2000ರಲ್ಲಿ ಚೆನ್ನೈ ಫಿಲ್ಮ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ ಅಧ್ಯಕ್ಷರಾಗಿದ್ದರು. ಪುತ್ರ ಪ್ರಭುಕಾಂತ್ ನಟನಾಗಿ ತಮಿಳು ಚಿತ್ರರಂಗದಲ್ಲಿದ್ದಾರೆ.

ಭಾರತ ವಿದ್ಯಾರ್ಥಿನಿ ಅಮೆರಿಕದಲ್ಲಿ ಸಾವು

ಷಿಕಾಗೊ: ಅಮೆರಿಕದ ಷಿಕಾಗೊ ಬಳಿ ನಡೆದ ರಸ್ತೆ ಅಪಘಾತದಲ್ಲಿ 25 ವರ್ಷದ ಭಾರತೀಯ ವಿದ್ಯಾರ್ಥಿನಿ ದುರ್ಮರಣಕ್ಕೀಡಾಗಿದ್ದಾಳೆ. ವಾಹನದಲ್ಲಿದ್ದ ಇತರೆ ಆರು ಮಂದಿ ಗಾಯಗೊಂಡಿದ್ದಾರೆ. ತೆಲಂಗಾಣದ ನಲ್ಗೊಂಡ ಜಿಲ್ಲೆ ಮೂಲದ 25 ವರ್ಷದ ನವ್ಯಾ ಗಡುಸು ಮೃತ ಯುವತಿ. ಏಳು



ಯುವತಿಯರು ಪ್ರವಾಸಕ್ಕೆ ತೆರಳಿದ್ದ ಕೆಂಪು ಮಿನಿವ್ಯಾನ್ ಇಂಡಿಯಾನಾದ ಲೇಕ್ ಕೌಂಟಿಯ ಕ್ರೌನ್ ಪಾಯಿಂಟ್ ಬಳಿ ಇಂಟರ್ ಸ್ಟೇಟ್-65 ಹೆದ್ದಾರಿಯಲ್ಲಿ ಶನಿವಾರ ತಡರಾತ್ರಿ 11.15ರಲ್ಲಿ ಅಪಘಾತವಾಗಿದೆ. ತೀವ್ರವಾಗಿ ಗಾಯಗೊಂಡಿದ್ದ ನವ್ಯಾ, ಚಿಕಿತ್ಸೆಗೆ ಸ್ಪಂದಿಸದೇ ಆಸ್ಪತ್ರೆಯಲ್ಲಿ ಭಾನುವಾರ ಬೆಳಗ್ಗೆ ಅಸುನೀಗಿದಳು ಎಂದು ಲೇಕ್ ಕೌಂಟಿ ಕರೋನರ್ ಕಚೇರಿ ತಿಳಿಸಿದೆ. ಷಿಕಾಗೋದಲ್ಲಿರುವ ಭಾರತೀಯ ಕಾನ್ಸುಲೇಟ್ ಜನರಲ್ ಸಂತಾಪ ವ್ಯಕ್ತಪಡಿಸಿದ್ದಾರೆ. ನವ್ಯಾ ಕುಟುಂಬದ ಜತೆ ಸಂಪರ್ಕದಲ್ಲಿರುವುದಾಗಿ ಹೇಳಿದ್ದಾರೆ.

ಅಮೆರಿಕ ಯುದ್ಧ ವಿಮಾನಗಳ ಡಿಕ್ಕಿ

ವಾಷಿಂಗ್ಟನ್: ಅಮೆರಿಕದ ಇಡಾಹೊದಲ್ಲಿ ಮೌಂಟೇನ್ ಹೋಮ್ ಏರ್‌ಫೋರ್ಸ್ ಬೇಸ್‌ನಲ್ಲಿ ಅಮೆರಿಕ ವಾಯುಪಡೆಯ 2 ಯುದ್ಧ ವಿಮಾನಗಳು ಭಾನುವಾರದ ವಾಯು ಪ್ರದರ್ಶನ ವೇಳೆ ಪರಸ್ಪರ ಡಿಕ್ಕಿ ಹೊಡೆದುಕೊಂಡಿದ್ದು, ಹೊತ್ತಿ ಉರಿದು ಕೆಲ ಕ್ಷಣಗಳಲ್ಲೇ ಭಸ್ಮವಾಗಿವೆ. ಸುದೈವವಶಾತ್ ಎರಡೂ ಯುದ್ಧ ವಿಮಾನಗಳಲ್ಲಿದ್ದ ಯೋಧರು ಕಡೆಕ್ಷಣದಲ್ಲಿ ವಿಮಾನದಿಂದ ಹೊರಜಿಗಿದಿದ್ದರಿಂದ ಜೀವಂತ ಪಾರಾಗಿದ್ದಾರೆ. ಪ್ಯಾರಾಚ್ಯೂಟ್‌ಗಳ ನೆರವಿನಲ್ಲಿ ಸುರಕ್ಷಿತವಾಗಿ ನೆಲಕ್ಕಿಳಿದಿದ್ದಾರೆ. ಯುದ್ಧ ವಿಮಾನಗಳೆರಡರೂ ಏರೋಬ್ಯಾಟಿಕ್ ಕುಶಲತೆ ಪ್ರದರ್ಶನದಲ್ಲಿದ್ದಾಗ ತೀರಾ ಸಮೀಪಕ್ಕೆ ಬಂದಿದ್ದರಿಂದ ಪರಸ್ಪರ ಡಿಕ್ಕಿಯಾಗಿವೆ. ಬಳಿಕ ಬೆಂಕಿಯ ಚೆಂಡಿನಂತೆ ನೆಲಕ್ಕಪ್ಪಳಿಸಿ ಉರಿದುಹೋಗಿವೆ. ಆಯೋಜಕರು ಈ ಏರ್ ಶೋಗಾಗಿ 2 ವರ್ಷಗಳಿಂದ ತಯಾರಿ ನಡೆಸಿದ್ದರು ಎನ್ನಲಾಗಿದೆ.

{ ರಾಹುಲ್ ಗಾಂಧಿ } ಕಾಂಗ್ರೆಸ್ ನಾಯಕ

'ನೀಟ್' ಪ್ರಶ್ನೆಪತ್ರಿಕೆ ಸೋರಿಕೆ ದೇಶಾದ್ಯಂತ 23 ಲಕ್ಷ ವೈದ್ಯಕೀಯ ಆಕಾಂಕ್ಷಿಗಳ ಭವಿಷ್ಯವನ್ನು ದಿಕ್ಕುಗೆಡಿಸಿದೆ. ಪ್ರಧಾನಿ ನರೇಂದ್ರ ಮೋದಿ ವೈಯಕ್ತಿಕ ಹೊಣೆ ಹೊತ್ತುಕೊಳ್ಳಬೇಕು ಅಥವಾ ಸೋರಿಕೆ ತಡೆಯಲಾಗದ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್‌ರನ್ನು ವಜಾ ಮಾಡಬೇಕು. ದೇಶದ ಶಿಕ್ಷಣ ವ್ಯವಸ್ಥೆಯನ್ನು ಬಿಜೆಪಿ-ಆರ್‌ಎಸ್‌ಎಸ್ ಜೋಡಿ ಹಾಳುಗೆಡವಿವೆ.

ಗಡಿಯಾಚೆ ಉಗ್ರರಿಗೆ ಆರ್ಥಿಕ ನೆರವು ಆರೋಪಿಗೆ ಜಾಮೀನು

'ಯುಎಪಿಎ'ಯಡಿ 2020ರಲ್ಲಿ ಎನ್‌ಐಎ ಪ್ರಕರಣ-ಬಂಧನ ಜಾಮೀನು ಸಾಮಾನ್ಯ ನಿಯಮ, 'ಯುಎಪಿಎ'ಗೂ ಅನ್ವಯ ಸುಪ್ರೀಂಕೋರ್ಟ್ ನ್ಯಾ.ನಾಗರತ್ನ, ನ್ಯಾ.ಉಜ್ವಲ್ ಭುಯಾನ್ ಪೀಠ

ದೆಹಲಿ: 'ಜಾಮೀನು ಸಾಮಾನ್ಯ ನಿಯಮ ಮತ್ತು ಜೈಲು ವಿನಾಯಿತಿ' ಎಂಬ ತತ್ವವು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯಿದೆ-1967'(ಯುಎಪಿಎ) ಪ್ರಕರಣಗಳಿಗೂ ಅನ್ವಯವಾಗುತ್ತದೆ ಎಂದು ಹೇಳಿರುವ ಸುಪ್ರೀಂ ಕೋರ್ಟ್, 'ಯುಎಪಿಎ' ಪ್ರಕರಣದಡಿ 6 ವರ್ಷಗಳ ಹಿಂದೆ ಬಂಧಿತನಾಗಿದ್ದ ಕಾಶ್ಮೀರದ ವ್ಯಕ್ತಿಗೆ ಸೋಮವಾರ ಜಾಮೀನು ಮಂಜೂರು ಮಾಡಿದೆ.

ನ್ಯಾ.ಬಿ.ವಿ.ನಾಗರತ್ನ

ನ್ಯಾ. ಉಜ್ವಲ್ ಭುಯಾನ್

ಜಮ್ಮು-ಕಾಶ್ಮೀರದಲ್ಲಿ ಮಾದಕವಸ್ತು ಕಳ್ಳಸಾಗಣೆ ಮಾಡುತ್ತಾ, ಅದರಿಂದ ಬರುತ್ತಿದ್ದ ಹಣವನ್ನು ಗಡಿಯಾಚೆಗಿನ ಭಯೋತ್ಪಾದಕ ಸಂಘಟನೆಗಳಿಗೆ ರವಾನಿಸುತ್ತಾ ಉಗ್ರ ಸಂಘಟನೆಗಳಿಗೆ ನೆರವು ನೀಡುತ್ತಿದ್ದ ಆರೋಪದಡಿ ಬಂಧಿತನಾಡಿ, 'ಯುಎಪಿಎ' ಕಾಯಿದೆಯ ವಿವಿಧ ಸೆಕ್ಷನ್‌ಗಳಡಿ ತನಿಖೆ ಎದುರಿಸುತ್ತಿರುವ ಜಮ್ಮು-ಕಾಶ್ಮೀರದ ಹಂದ್ವಾರ ನಿವಾಸಿ ಸೈಯದ್ ಇಫ್ತಿಕರ್ ಅಂದ್ರಾಬಿ ಎಂಬಾತನಿಗೆ ಜಾಮೀನು ಮಂಜೂರು ಮಾಡಿರುವ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಮತ್ತು ನ್ಯಾ.ಉಜ್ವಲ್ ಭುಯಾನ್ ಅವರ ದ್ವಿಸದಸ್ಯ ಪೀಠ, ಈ ಅಭಿಪ್ರಾಯ ವ್ಯಕ್ತಪಡಿಸಿದೆ.

'ಆರೋಪಿಗೆ ಜಾಮೀನು ಮಂಜೂರು ಮಾಡಲಾಗಿದೆ. ಆರೋಪಿಯು ತನ್ನ ಪಾಸ್‌ಪೋರ್ಟ್ ಅನ್ನು ತನಿಖಾಧಿಕಾರಿಗಳಿಗೆ ಹಸ್ತಾಂತರಿಸಬೇಕು, ಸ್ಥಳೀಯ ಪೊಲೀಸ್ ಠಾಣೆಗೆ 15 ದಿನಗಳಿಗೊಮ್ಮೆ ಹಾಜರಾಗಿ ವರದಿ ಮಾಡಿಕೊಳ್ಳಬೇಕು' ಎಂಬ ಷರತ್ತನ್ನೂ ಪೀಠ ವಿಧಿಸಿದೆ.

ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯಿದೆ-1967(ಯುಎಪಿಎ) ಮತ್ತು ಭಾರತೀಯ ದಂಡ ಸಂಹಿತೆಯ(ಐಪಿಸಿ) ವಿವಿಧ ಸೆಕ್ಷನ್‌ಗಳಡಿ ಸೈಯದ್ ಇಫ್ತಿಕರ್ ವಿರುದ್ಧ 6 ವರ್ಷಗಳ ಹಿಂದೆ ಅಪರಾಧ ಪ್ರಕರಣ ದಾಖಲಾಗಿದ್ದು, ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ತನಿಖೆ ನಡೆಸುತ್ತಿದೆ.

'ಯುಎಪಿಎ' ಕಾಯಿದೆಯ ಕಠಿಣವಾದ ಸೆಕ್ಷನ್ 43ಡಿ(5)ರ ಅಡಿಯಲ್ಲಿ ಬಂಧಿತನಾಗಿದ್ದರೂ, ಆ ಆರೋಪಿಯನ್ನು ಅನಿರ್ದಿಷ್ಟಾವಧಿಗೆ ಜೈಲಿನಲ್ಲಿರಿಸಲು ಸಾಧ್ಯವಿಲ್ಲ. ಸಂವಿಧಾನದ ವಿಧಿಗಳಾದ 21 ಮತ್ತು 22ನೇ ಅನ್ವಯವೇ ತನಿಖಾ ಸಂಸ್ಥೆಗಳು, ನ್ಯಾಯಾಲಯಗಳು ಕಾರ್ಯನಿರ್ವಹಿಸಬೇಕಿದೆ ಎಂಬುದರತ್ತ ದ್ವಿಸದಸ್ಯ ಪೀಠ ಗಮನ ಸೆಳೆದಿದೆ.

ಅನ್‌ಲಾಫುಲ್ ಆಕ್ಟಿವಿಟೀಸ್(ಪ್ರಿವೆಂಷನ್) ಆಕ್ಟ್-1967ರ (ಯುಎಪಿಎ) ಅಧ್ಯಾಯ 4 ಮತ್ತು 6ರಡಿ ಸೂಚಿಸಲಾದ ಅಪರಾಧಗಳನ್ನು ನಡೆಸಿದ್ದಾನೆ ಎಂಬ ಕಾರಣಕ್ಕೆ ಬಂಧನಕ್ಕೆ ಒಳಗಾಗಿದ್ದರೆ, ಪಬ್ಲಿಕ್ ಪ್ರಾಸಿಕ್ಯೂಟರ್ ವಿರೋಧ ಇಲ್ಲದೇ ಇದ್ದರೆ ಆ ಆರೋಪಿಗೆ ಸ್ವಂತ ಬಾಂಡ್ ಮೇಲೆಯೂ ಜಾಮೀನು ನೀಡಬಹುದು ಎಂಬುದನ್ನು 'ಯುಎಪಿಎ' ಸೆಕ್ಷನ್ 43ಡಿ(5) ಹೇಳುತ್ತದೆ. ಜಾಮೀನು ಪಡೆಯುವುದು ನಿಯಮ ಮತ್ತು ವಿಚಾರಣೆ ನಡೆಯುತ್ತಿರುವಾಗ ಜೈಲಿನಲ್ಲಿ ಆರೋಪಿಯನ್ನು ಇರಿಸುವುದು ನಿಯಮವಲ್ಲ ಎಂಬುದೇ ಸಂವಿಧಾನದ ವಿಧಿ 21 ಮತ್ತು 22ರಿಂದ ಹುಟ್ಟಿಕೊಂಡಿರುವ ತತ್ವಗಳಾಗಿವೆ. ಕಾನೂನಿನ ಆಳ್ವಿಕೆಯಿಂದ ನಿಯಂತ್ರಿಸಲಾಗುವ ಯಾವುದೇ ನಾಗರಿಕ ಸಮಾಜದ ಮೂಲಾಧಾರವೆಂದರೆ ಬಂಧಿತ ವ್ಯಕ್ತಿಯು 'ಅಪರಾಧಿ' ಎಂಬುದು ಸಾಬೀತಾಗುವವರೆಗೂ ಆತ ಕೇವಲ 'ಆರೋಪಿ' ಎಂಬುದಾಗಿದೆ ಎಂಬ ಅಂಶವನ್ನು ದ್ವಿಸದಸ್ಯ ಪೀಠ ಒತ್ತಿಹೇಳಿದೆ.

ಮೈಲುಗಲ್ಲು: 'ಯುಎಪಿಎ' ಅಡಿಯಲ್ಲಿ ಜಾಮೀನಿಗೆ ಸಂಬಂಧಿಸಿದಂತೆ 2021ರಲ್ಲಿ ಕೆ.ಎ.ನಜೀಬ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ಆದೇಶವು ಒಂದು ಮೈಲುಗಲ್ಲಾಗಿದೆ. ಕೆ.ಎ.ನಜೀಬ್ ಪ್ರಕರಣದಲ್ಲಿನ ಸುಪ್ರೀಂ ಕೋರ್ಟ್‌ನ ತೀರ್ಪನ್ನು ವಿಚಾರಣಾ ನ್ಯಾಯಾಲಯ, ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ನ ಕೆಳಹಂತದ ಪೀಠಗಳು ದುರ್ಬಲಗೊಳಿಸಲು, ದಾರಿ ತಪ್ಪಿಸಲು ಅಥವಾ ನಿರ್ಲಕ್ಷಿಸಲು ಸಾಧ್ಯವಿಲ್ಲ ಎಂದೂ ಸುಪ್ರೀಂ ಕೋರ್ಟ್ ದೃಢವಾಗಿ ಹೇಳಿದೆ.

> ಸುಪ್ರೀಂ ಕೋರ್ಟ್‌ನ ಮೇಲಿನ ಹಂತದ ಪೀಠಗಳು ನೀಡಿರುವ ತೀರ್ಪುಗಳನ್ನು ಕೆಳಗಿನ ಹಂತದ ಪೀಠಗಳು, ಹೈಕೋರ್ಟ್‌ಗಳು, ವಿಚಾರಣಾ ನ್ಯಾಯಾಲಯಗಳು ಅನುಸರಿಸಬೇಕು. ನ್ಯಾಯಾಂಗದಲ್ಲಿ ಈ ಶಿಸ್ತು ಪಾಲನೆ ಬಹಳ ಮುಖ್ಯ. ಒಂದೊಮ್ಮೆ ಜಾಮೀನು ಮಂಜೂರು ವಿಚಾರದಲ್ಲಿ ಪ್ರಕರಣದಲ್ಲಿ ಗೊಂದಲ, ಅನುಮಾನಗಳು ಇದ್ದಲ್ಲಿ ಪ್ರಕರಣವನ್ನು ಉನ್ನತ ಶ್ರೇಣಿಯ ಪೀಠಕ್ಕೆ ಶಿಫಾರಸು ಮಾಡಬಹುದು. ಬದಲಾಗಿ ಮೇಲಿನ ಹಂತದ ಪೀಠದ ತೀರ್ಪುಗಳನ್ನು ನಿರ್ಲಕ್ಷಿಸುವುದು, ಸಡಿಲಗೊಳಿಸುವುದನ್ನು ಕೆಳಹಂತದ ಪೀಠಗಳು ಮಾಡಬಾರದು.
>
> -ನ್ಯಾ.ಉಜ್ವಲ್ ಭುಯಾನ್ ಸುಪ್ರೀಂ ಕೋರ್ಟ್

ಗಡಿಯಾಚೆ ಉಗ್ರರಿಗೆ ನೆರವು ಆರೋಪದಡಿ ಇಫ್ತಿಕರ್ ಸೆರೆ

ಸೈಯದ್ ಇಫ್ತಿಕರ್ ಆಂದ್ರಾಬಿಯ ಮೊಬೈಲ್ ಫೋನ್ ಕರೆಯ ದಾಖಲೆಗಳನ್ನು ಪರಿಶೀಲಿಸಿದಾಗ ಆತ ಗಡಿಯಾಚೆಗಿನ ಭಯೋತ್ಪಾದಕ ಸಂಘಟನೆಗಳೊಂದಿಗೆ



ಸಂಪರ್ಕದಲ್ಲಿದ್ದ. ಮಾದಕದ್ರವ್ಯಗಳನ್ನು ಸರಬರಾಜು ಮಾಡುತ್ತಾ ಅದರಿಂದ ಬರುತ್ತಿದ್ದ ಹಣವನ್ನು ಉಗ್ರ ಸಂಘಟನೆಗಳಿಗೆ ಕೊಡುತ್ತಿದ್ದ ಎಂಬುದು ತನಿಖೆಯಿಂದ ತಿಳಿದುಬಂದಿದೆ ಎಂದು ತನಿಖಾ ಸಂಸ್ಥೆ 'ಎನ್‌ಐಎ' ಆರೋಪಿಸಿದೆ. ಹಾಗಾಗಿಯೇ ಕಾನೂನುಬಾಹಿರ ಚಟುವಟಿಕೆಗಳ ತಡೆಗಟ್ಟುವಿಕೆ ಕಾಯಿದೆ ಮತ್ತು ಭಯೋತ್ಪಾದನೆಗೆ ಸಂಬಂಧಿಸಿದ ಕಲಂಗಳಡಿಯಲ್ಲಿ 2020ರಲ್ಲಿ 'ಎನ್‌ಐಎ' ಪ್ರಕರಣ ದಾಖಲಿಸಿಕೊಂಡು, ಇಫ್ತಿಕರ್‌ನನ್ನು ಬಂಧಿಸಿ ತನಿಖೆ ನಡೆಸುತ್ತಿದೆ. ಆರೋಪಿ ಇಫ್ತಿಕರ್ 6 ವರ್ಷಗಳಿಂದ ಜೈಲಿನಲ್ಲೇ ಇದ್ದಾನೆ. ಇದಕ್ಕೂ ಮುನ್ನ ಸೈಯದ್ ಇಫ್ತಿಕರ್ ಆಂದ್ರಾಬಿ ವಿಚಾರಣಾ ನ್ಯಾಯಾಲಯ ಮತ್ತು ಜಮ್ಮು-ಕಾಶ್ಮೀರ ಮತ್ತು ಲಡಾಖ್ ಹೈಕೋರ್ಟ್‌ಗಳಿಗೆ ಜಾಮೀನು ಅರ್ಜಿ ಸಲ್ಲಿಸಿದ್ದ. ಆ ನ್ಯಾಯಾಲಯಗಳಲ್ಲಿ ಆತನ ಜಾಮೀನು ಅರ್ಜಿ ವಜಾಗೊಂಡಿತ್ತು. ಅದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದ.

ಉಮರ್‌ಗೆ ಜಾಮೀನು ನಕಾರ ತಪ್ಪು

2020ರಲ್ಲಿ ದೆಹಲಿಯಲ್ಲಿ ನಡೆಸಿದ ದಂಗೆ ಕೃತ್ಯಗಳಲ್ಲಿ ಬಂಧಿತನಾಗಿ, 'ಯುಎಪಿಎ'ಯ ಹಲವು ಕಲಂಗಳಡಿ ತನಿಖೆ ಎದುರಿಸುತ್ತಿರುವ ಜವಹರಲಾಲ್ ನೆಹರು ವಿವಿಯ ಮಾಜಿ

ಉಮರ್ ಖಾಲಿದ್

ವಿದ್ಯಾರ್ಥಿ ನಾಯಕ ಉಮರ್ ಖಾಲಿದ್ ಜಾಮೀನು ಅರ್ಜಿಯು 2026 ಜನವರಿಯಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ತಿರಸ್ಕೃತವಾಗಿರುವುದನ್ನು ನ್ಯಾಯಮೂರ್ತಿ ಬಿ.ವಿ.ನಾಗರತ್ನ ಮತ್ತು ನ್ಯಾ. ಉಜ್ವಲ್ ಭುಯಾನ್ ಅವರ ದ್ವಿಸದಸ್ಯ ಪೀಠವು ಇದೇ ವೇಳೆ ಪ್ರಶ್ನೆ ಮಾಡಿದೆ. 2020ರ ಸೆಪ್ಟೆಂಬರ್‌ನಲ್ಲಿ ಬಂಧಿತನಾದ ದೆಹಲಿ ದಂಗೆಗೆ ಸಂಚು ನಡೆಸಿದ ಆರೋಪಿ ಉಮರ್ ಖಾಲಿದ್‌ನ ಜಾಮೀನು ಅರ್ಜಿ ವಿಚಾರಣೆ ವೇಳೆಯಲ್ಲಿಯೂ 'ಜಾಮೀನು ಎಂಬುದು ನಿಯಮ ಮತ್ತು ಜೈಲಿನಲ್ಲಿ ಇರಿಸುವುದರಿಂದ ವಿನಾಯಿತಿ' ಎಂಬ ತತ್ವವನ್ನು ಅನುಸರಿಸಲಾಗಿಲ್ಲ ಎಂದೂ ದ್ವಿಸದಸ್ಯ ಪೀಠ ಅಸಮಾಧಾನ ಹೊರಹಾಕಿದೆ. ಉಮರ್ ಖಾಲಿದ್ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಜಾಮೀನು ಅರ್ಜಿಯೂ 2026ರ ಜನವರಿಯಲ್ಲಿ ವಜಾಗೊಂಡಿತ್ತು. ಆ ಬಳಿಕ ಸಲ್ಲಿಸಲಾದ ಮರು ಪರಿಶೀಲನಾ ಅರ್ಜಿಯೂ ಏಪ್ರಿಲ್‌ನಲ್ಲಿ ತಿರಸ್ಕೃತವಾಗಿದೆ.

ಮೋದಿ, ಶಾ ಭೇಟಿಗಾಗಿ ದೆಹಲಿಗೆ ಹಾಜರು

ಸಿಎಂ ಸತೀಶನ್ ಪ್ರಮಾಣ ವಚನಕ್ಕೆ ವಿಜಯ್ ಗೈರು

ತಿರುವನಂತಪುರಂ: ಕೇರಳದ ನೂತನ ಮುಖ್ಯಮಂತ್ರಿಯಾಗಿ ಕಾಂಗ್ರೆಸ್ ನಾಯಕ ವಿ.ಡಿ.ಸತೀಶನ್ ಸೋಮವಾರ ಅಧಿಕಾರ ಸ್ವೀಕರಿಸಿದರು. ಆದರೆ, ಈ ಸಮಾರಂಭಕ್ಕೆ ಆಹ್ವಾನಿತರಾಗಿದ್ದರೂ ತಮಿಳುನಾಡು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಗೈರು ಹಾಜರಾಗಿರುವುದು ವ್ಯಾಪಕ ಚರ್ಚೆಗೆ ಕಾರಣವಾಗಿದೆ.

ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ತಮ್ಮ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಕ್ಷಕ್ಕೆ ಸ್ಪಷ್ಟ ಬಹುಮತ ಸಿಗದ ಕಾರಣ ಕಾಂಗ್ರೆಸ್‌ನ 5 ಶಾಸಕರು ಸೇರಿದಂತೆ ವಿವಿಧ ಸಣ್ಣಪುಟ್ಟ ಪಕ್ಷಗಳ ಬೆಂಬಲ ಪಡೆದು ಸರಕಾರ ರಚಿಸಿರುವ ವಿಜಯ್, ಕೇರಳದಲ್ಲಿ ದಶಕದ ಬಳಿಕ ಕಾಂಗ್ರೆಸ್ ಸರಕಾರ ಸ್ಥಾಪನೆ ಆಗುವ ಸಂದರ್ಭಕ್ಕೆ ಸಾಕ್ಷಿಯಾಗದೇ ಇರುವುದು ಅಚ್ಚರಿಗೆ ಕಾರಣವಾಗಿದೆ. ಕಾಂಗ್ರೆಸ್ ನಾಯಕರಿಂದಲೇ ಅಧಿಕೃತ ಆಮಂತ್ರಣವಿದ್ದರೂ

ಕೊನೆ ಕ್ಷಣದಲ್ಲಿ ಸಮಾರಂಭದಿಂದ ವಿಜಯ್ ದೂರ ಉಳಿದಿರುವುದಕ್ಕೆ ಹಲವು ಬಗೆಯ ವ್ಯಾಖ್ಯಾನಗಳು ಮಾಧ್ಯಮಗಳಲ್ಲಿ ವ್ಯಕ್ತವಾಗುತ್ತಿವೆ. ವಿಜಯ್ ರಾಜಕೀಯ ಸಿದ್ಧಾಂತ 'ತಮಿಳು ಅಸ್ಮಿತೆ'ಗೆ ಸೀಮಿತ. ಹಾಗಾಗಿ ತಮ್ಮ ಪಕ್ಷವನ್ನು ಪೂರ್ಣವಾಗಿ ಕಾಂಗ್ರೆಸ್ ಅವಲಂಬಿತ ಎಂದು ಬಿಂಬಿಸಬಾರದು ಎಂಬ ಕಾರಣಕ್ಕೆ ವಿಜಯ್ ಗೈರಾಗಿರಬಹುದು ಎಂದು ರಾಜಕೀಯ ತಜ್ಞರು ವಿಶ್ಲೇಷಿಸಿದ್ದಾರೆ.

ಅಲ್ಲದೇ, ತಮ್ಮ ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು 'ಟಿವಿಕೆ' ಪಕ್ಷವನ್ನು ಕೇರಳಕ್ಕೂ ವಿಸ್ತರಿಸಬೇಕು ಎಂದು ಒತ್ತಾಯಿಸುತ್ತಿರುವುದನ್ನು ವಿಜಯ್ ಗಂಭೀರವಾಗಿ ಪರಿಗಣಿಸಿದ್ದಾರೆ. ಕೇರಳದಲ್ಲಿಯೂ ವಿಜಯ್ ನಟನೆ ಮತ್ತು ಸಿನಿಮಾಗಳಿಗೆ ದೊಡ್ಡ ಸಂಖ್ಯೆಯ ಅಭಿಮಾನಿಗಳಿದ್ದಾರೆ. ಪಕ್ಷ ವಿಸ್ತರಣೆ ಆಲೋಚನೆಯಿಂದಲೂ ವಿಜಯ್ ಕೇರಳ ಕಾಂಗ್ರೆಸ್ ಸರಕಾರ ರಚನೆ ಕಾರ್ಯಕ್ರಮಕ್ಕೆ ಗೈರಾಗಿರಬಹುದು ಎಂಬ ಮಾತುಗಳೂ ಕೇಳಿಬರುತ್ತಿವೆ.

ದೆಹಲಿಗೆ 3 ದಿನ ಪ್ರವಾಸ

ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಮೇ 22ರಂದು ದೆಹಲಿಗೆ ತೆರಳಲಿದ್ದು, ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಲಿದ್ದಾರೆ. 3 ದಿನಗಳ ಮೊದಲ ರಾಜಧಾನಿ ಪ್ರವಾಸ ವೇಳೆ ವಿಜಯ್, ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರನ್ನು ಭೇಟಿ ಮಾಡಿ ಲಂಕಾ ಕರಾವಳಿ ಕಾವಲು ಪಡೆಗಳಿಂದ ತಮಿಳುನಾಡು ಮೀನುಗಾರರ ಮೇಲೆ ಪದೇ ಪದೇ ದಾಳಿಗಳಾಗುವ ಬಗ್ಗೆ ಚರ್ಚಿಸಿ ಶಾಶ್ವತ ಪರಿಹಾರಕ್ಕೆ ಮನವಿ ಮಾಡಲಿದ್ದಾರೆ. ಕೇಂದ್ರದ ಗೃಹ ಸಚಿವ ಅಮಿತ್ ಶಾ ಮತ್ತು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ರಾಜ್ಯದ ಅಭಿವೃದ್ಧಿ ವಿಷಯಗಳಿಗೆ ಕೇಂದ್ರದ ನೆರವು ಕೋರಲಿದ್ದಾರೆ ಎಂದು ಸಿಎಂ ಕಚೇರಿ ಮೂಲಗಳು ತಿಳಿಸಿವೆ.

ದಾವೂದ್ ಆಪ್ತ ಬಂಟ ಇಕ್ಬಾಲ್ ಮಿರ್ಚಿ 700 ಕೋ.ರು. ಆಸ್ತಿ ಜಪ್ತಿ

ದೆಹಲಿ: ಮುಂಬೈ ಬಾಂಬ್ ಸ್ಫೋಟ, ನಕಲಿ ನೋಟು ಚಲಾವಣೆ, ಭಯೋತ್ಪಾದಕರಿಗೆ ನೆರವು ನೀಡುವುದೂ ಸೇರಿದಂತೆ ಭಾರತದ ವಿರುದ್ಧ ಹಲವಾರು ಅಪರಾಧಗಳನ್ನು ನಡೆಸಿ ಪಾಕಿಸ್ತಾನದಲ್ಲಿ ಅಡಗಿಕೊಂಡಿರುವ ಪರಮ ಪಾತಕಿ ದಾವೂದ್ ಇಬ್ರಾಂಹಿ. ಈತನ ಆಪ್ತಬಂಟ ಇಕ್ಬಾಲ್ ಮಿರ್ಚಿ. ಮುಂಬೈನ ಹಲವೆಡೆ ಇದ್ದ ಇಕ್ಬಾಲ್ ಮಿರ್ಚಿ ಮತ್ತು

ಮುಂಬೈ, ದುಬೈನಲ್ಲಿನ ಹಲವು ಸ್ಥಿರಾಸ್ತಿಗಳ ಜಪ್ತಿ-ಹರಾಜಿಗೆ ಕೋರ್ಟ್ ಅನುಮತಿ

ಆತನ ಕುಟುಂಬದವರ ಒಡೆತನಕ್ಕೆ ಸೇರಿದ್ದ 700 ಕೋಟಿ ರು.ಗೂ ಅಧಿಕ ಮಾರುಕಟ್ಟೆ ಮೌಲ್ಯದ ಹಲವಾರು ಸ್ಥಿರಾಸ್ತಿಗಳನ್ನು ಜಾರಿ ನಿರ್ದೇಶನಾಲಯ(ಇ.ಡಿ) ಸೋಮವಾರ ಜಪ್ತಿ ಮಾಡಿದೆ. ಈ ಮಾಹಿತಿಯನ್ನು ಇ.ಡಿ. ಅಧಿಕಾರಿಗಳೇ ಸುದ್ದಿಸಂಸ್ಥೆಗೆ ನೀಡಿದ್ದಾರೆ.

ಈ ಸಂಬಂಧ ಇ.ಡಿ. ಅಧಿಕಾರಿಗಳು ಮಾರ್ಚ್‌ನಲ್ಲಿಯೇ 'ಪ್ರಿವೆನ್ಷನ್ ಆಫ್ ಮನಿ ಲಾಂಡರಿಂಗ್ ಆಕ್ಟ್'(ಪಿಎಂಎಲ್‌ಎ) ಅರ್ಥಾತ್ ಅಕ್ರಮ ಹಣ ವರ್ಗಾವಣೆ ತಡೆ ಕಾಯಿದೆಯಡಿ ವಿಶೇಷ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಹಲವು ಸುತ್ತು ವಿಚಾರಣೆ ನಡೆಸಿದ ಬಳಿಕ ನ್ಯಾಯಾಲಯ 'ಫಜಿಟೀವ್ ಎಕನಾಮಿಕ್ ಅಫೆಂಡರ್ಸ್ ಆಕ್ಟ್'(ಎಫ್‌ಇಒ)ನಡಿ, ಅಂದರೆ ಘೋಷಿತ ಆರ್ಥಿಕ ಅಪರಾಧಿಗಳ ಕಾಯಿದೆಯಡಿ ಮಿರ್ಚಿ ಮತ್ತು ಆತನ ಕುಟುಂಬದವರ ಆಸ್ತಿ ಜಪ್ತಿಗೆ ಇ.ಡಿ.ಗೆ ಅವಕಾಶ ಮಾಡಿಕೊಟ್ಟಿದೆ. ಮುಂಬೈ ಮಹಾನಗರದ ವೊರ್ಲಿಯಲ್ಲಿರುವ ರಬಿಯಾ ಮ್ಯಾನ್ಷನ್, ಮರಿಯಂ ಲಾಡ್ಜ್, ಸೀ ವ್ಯೂ ಪ್ರಾಪರ್ಟೀಸ್, ಅಲ್ಲದೇ, ದುಬೈನಲ್ಲಿರುವ ಹೋಟೆಲ್ ಮಿಡ್‌ವೆಸ್ಟ್, ಬುರ್ ದುಬೈನಲ್ಲಿನ ಅಪಾರ್ಟ್‌ಮೆಂಟ್, ಡಿಇಸಿ ಟವರ್ಸ್ ಹಾಗೂ 15 ವಿವಿಧ ಸ್ಥಿರಾಸ್ತಿಗಳನ್ನೂ ಜಪ್ತಿ ಮಾಡಿ ಹರಾಜು ಮಾಡುವುದಕ್ಕೆ ಇ.ಡಿ.ಗೆ ಕೋರ್ಟ್ ಅನುಮತಿ ನೀಡಿದೆ. ಇವೆಲ್ಲಾ ಆಸ್ತಿಗಳ ಒಟ್ಟಾರೆ ಮಾರುಕಟ್ಟೆ ಮೌಲ್ಯ 700.27 ಕೋಟಿ ರು.ಗಳಿಗೂ ಅಧಿಕ ಎಂದು ಅಂದಾಜು ಮಾಡಲಾಗಿದೆ.

ಬಾರಾಮುಲ್ಲಾ ಸಂಸದ, ಉಗ್ರ ಸಹಚರ ಆರೋಪಿ ರಶೀದ್‌ಗೆ ಜಾಮೀನು

ದೆಹಲಿ: ಉಗ್ರರಿಗೆ ಆರ್ಥಿಕ ನೆರವು ನೀಡಿದ ಆರೋಪದಡಿ ವರ್ಷಗಳಿಂದ ಬಂಧನದಲ್ಲಿರುವ ಕೇಂದ್ರಾಡಳಿತ ಪ್ರದೇಶ ಜಮ್ಮು-ಕಾಶ್ಮೀರದ ಬಾರಾಮುಲ್ಲಾ ಲೋಕಸಭಾ ಕ್ಷೇತ್ರದ ಸದಸ್ಯ ಷೇಕ್ ಅಬ್ದುಲ್ ರಶೀದ್ ಅಲಿಯಾಸ್ ಇಂಜಿನಿಯರ್

ರಶೀದ್‌ಗೆ ದೆಹಲಿ ಹೈಕೋರ್ಟ್ ಜೂ.2ರವರೆಗೂ ಮಧ್ಯಂತರ ಜಾಮೀನು ಮಂಜೂರು ಮಾಡಿದೆ. ರಶೀದ್ ತನ್ನ ತಂದೆಯ ನಿಧನವಾಗಿದೆ. ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲು ಜಾಮೀನು ಬೇಕಿದೆ ಎಂದು ವಕೀಲರ ಮೂಲಕ ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ. ನ್ಯಾಯಮೂರ್ತಿ ಪ್ರತಿಭಾ ಎಂ.ಸಿಂಗ್ ಮತ್ತು ನ್ಯಾ.ಮಧು ಜೈನ್ ಅವರ ದ್ವಿಸದಸ್ಯ ಪೀಠ ಹಲವು ಷರತ್ತುಗಳನ್ನು ವಿಧಿಸಿ ಮಧ್ಯಂತರ ಜಾಮೀನು ಮಂಜೂರು ಮಾಡಿದೆ. ಆರೋಪಿಯ ಜತೆಗೆ ಸದಾ ಕನಿಷ್ಠ ಇಬ್ಬರು (ಸಮವಸ್ತ್ರದಲ್ಲಿಲ್ಲದ) ಪೊಲೀಸ್ ಅಧಿಕಾರಿಗಳ ಜತೆಗೇ ಇರಬೇಕು. ತಿಹಾರ್ ಸೆರೆಮನೆಯಿಂದ ಹೊರಟು ಶ್ರೀನಗರ ತಲುಪಿ ಅಂತಿಮ ವಿಧಿಗಳಲ್ಲಿ ಪಾಲ್ಗೊಂಡು, ಆ ಬಳಿಕ ಮರಳಿ ತಿಹಾರ್ ಸೆರೆಮನೆ ಸೇರುವವರೆಗೂ ಈ ಭದ್ರತೆ ಕಾಯ್ದುಕೊಳ್ಳಬೇಕು ಎಂಬ ನಿರ್ದೇಶನವನ್ನೂ ಪೀಠ ಪೊಲೀಸ್ ಇಲಾಖೆಗೆ ನೀಡಿದೆ. ಅಲ್ಲದೇ, ಆರೋಪಿಯು ಸಮಾಧಿ ಮಾಡುವ ಸ್ಥಳಕ್ಕೆ(ಖಬರಸ್ತಾನ) ತೆರಳಬಹುದು. ಅದು ಬಿಟ್ಟರೆ ಮನೆಯಲ್ಲಿಯೇ ಇರಬೇಕು. ಬೇರೆ ಎಲ್ಲಿಯೂ ಹೋಗುವಂತಿಲ್ಲ ಎಂಬ ಷರತ್ತನ್ನೂ ಕೋರ್ಟ್ ವಿಧಿಸಿದೆ.

'ನೀಟ್' ಸೋರಿಕೆ: ಮಹಾ ಕೋಚಿಂಗ್ ಮಾಲೀಕ ಸೆರೆ

ಲಾತೂರ್: ಮಹಾರಾಷ್ಟ್ರದ ಲಾತೂರ್ ನಗರದಲ್ಲಿ ರೇಣುಕೈ ರಸಾಯನಶಾಸ್ತ್ರ ವಿಷಯದ ಕೋಚಿಂಗ್ ಕ್ಲಾಸ್ ನಡೆಸುತ್ತಿರುವ ಶಿವರಾಜ್

ಶಿವರಾಜ್ ರಘುನಾಥ್

ರಘುನಾಥ್ ಮೋಟೆಗಾಂವ್ಕರ್ ಎಂಬಾತನನ್ನು ವೈದ್ಯಕೀಯ ಶಿಕ್ಷಣದ ಪ್ರವೇಶ ಪರೀಕ್ಷೆ 'ನೀಟ್ ಯುಜಿ-2026'ರ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಸೋಮವಾರ ಬಂಧಿಸಲಾಗಿದೆ.

ಆರೋಪಿ ಮೋಟೆಗಾಂವ್ಕರ್, ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ದುಷ್ಟರ ತಂಡದ ಸಕ್ರಿಯ ಸದಸ್ಯ ಎಂದು ಸಿಬಿಐ ಅಧಿಕಾರಿಗಳು ಆರೋಪಿಸಿದ್ದಾರೆ.

ಸಿಬಿಐ ಅಧಿಕಾರಿಗಳ ತಂಡ ಭಾನುವಾರ ಮೋಟೆಂಗಾಂವ್ಕರ್‌ನ ಮನೆ ಮತ್ತು ಕೋಚಿಂಗ್ ಸೆಂಟರ್ ಮೇಲೆ ದಾಳಿ ನಡೆಸಿದ್ದು, ಆತನ ಮೊಬೈಲ್‌ಫೋನ್ ಪರಿಶೀಲಿಸಿದಾಗ ಅದರಲ್ಲಿ ವೈದ್ಯಕೀಯ ಪ್ರವೇಶ ಪರೀಕ್ಷೆಯ ಪ್ರಶ್ನೆಪತ್ರಿಕೆಗಳ ಪ್ರತಿ ಇದ್ದಿತು. ಅದನ್ನು ಹಲವರಿಗೆ ಮೋಟೇಂಗಾಂವ್ಕರ್ ಹಂಚಿಕೊಂಡಿರುವುದೂ ಪತ್ತೆಯಾಯಿತು. ಆ ಬಳಿಕ ಆತನನ್ನು ಬಂಧಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೋಟೆಗಾಂವ್ಕರ್‌ಗೆ 2026ರ ನೀಟ್ ಯುಜಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಮತ್ತು ಕೀ ಉತ್ತರಗಳ ಪ್ರತಿಗಳು ಮೇ 3ರ ಪರೀಕ್ಷೆಗೆ ಮುಂಚಿತವಾಗಿ ಯೇ ಅಂದರೆ, ಏ.23ರಂದೇ ಸಿಕ್ಕಿದ್ದವು. ಆತ ಲಕ್ಷಾಂತರ ರು. ಹಣ ಪಡೆದು ಹಲವು ವ್ಯಕ್ತಿಗಳಿಗೆ ಮಾರಾಟ ಮಾಡಿದ್ದ ಎಂಬುದೂ ಪ್ರಾಥಮಿಕ ತನಿಖೆ ವೇಳೆ ದೃಢಪಟ್ಟಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ.ಬಂ. ಸ್ತ್ರೀಗೆ ಮಾಸಿಕ 3,000 ರು., ಉಚಿತ ಬಸ್ ಪ್ರಯಾಣ

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ ಇದೇ ಮೊದಲ ಬಾರಿಗೆ ಸ್ಥಾಪನೆ ಆಗಿರುವ ಬಿಜೆಪಿ ಸರಕಾರ, 'ಅನ್ನಪೂರ್ಣ' ಯೋಜನೆಯಡಿ ರಾಜ್ಯದ ಮಹಿಳೆಯರಿಗೆ ಮಾಸಿಕ 3 ಸಾವಿರ ರು.ಗಳ ಬಂಪರ್ ಕೊಡುಗೆ ಘೋಷಿಸಿದೆ. ಅಲ್ಲದೇ, ಸರಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೂ ಅವಕಾಶ ಮಾಡಿಕೊಟ್ಟಿದೆ.

ಜೂ.1 ರಿಂದಲೇ ಜಾರಿ: ಸಿಎಂ

7ನೇ ರಾಜ್ಯ ವೇತನ ಆಯೋಗ ರಚನೆಗೂ ಸಂಪುಟ ಒಪ್ಪಿಗೆ

ಸಚಿವ ಸಂಪುಟ ಸಭೆ ಎರಡೂ ಯೋಜನೆಗಳಿಗೂ ಸೋಮವಾರ ಅನುಮೋದನೆ ನೀಡಿದ್ದು, ಜೂ.1 ರಿಂದಲೇ ಜಾರಿಗೊಳಿಸಲು ಮುಖ್ಯಮಂತ್ರಿ ಸುವೇಂದು ಅಧಿಕಾರಿ ನಿರ್ಧರಿಸಿದ್ದಾರೆ.

ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿ ನಡೆಸಿದ ಸಚಿವ ಅಗ್ನಿಮಿತ್ರ ಪಾಲ್, 'ಸಿಎಎ' ಅಡಿ ಭಾರತದ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಿದ ಮತ್ತು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗಾಗಿ ನ್ಯಾಯಮಂಡಳಿಗಳನ್ನು ಸಂಪರ್ಕಿಸುವ ಮಹಿಳೆಯರು ಸಹ 'ಅನ್ನಪೂರ್ಣ' ಯೋಜನೆಯ ಪ್ರಯೋಜನಗಳನ್ನು ಪಡೆಯುತ್ತಾರೆ ಎಂದು ಹೇಳಿದ್ದಾರೆ.

ಅಲ್ಲದೇ, ರಾಜ್ಯ ಸರಕಾರದ ನೌಕರರಿಗೆ, ಶಿಕ್ಷಣ ಮಂಡಳಿಗಳು, ಸರಕಾರಿ ಶಿಕ್ಷಣ ಸಂಸ್ಥೆಗಳಲ್ಲಿನ ಉದ್ಯೋಗಿಗಳಿಗೆ ವೇತನ ಹೆಚ್ಚಳಕ್ಕೆ ಸಂಬಂಧಿಸಿ 7ನೇ ರಾಜ್ಯ ವೇತನ ಆಯೋಗ ರಚನೆಗೂ ಸಂಪುಟ ಒಪ್ಪಿಗೆ ನೀಡಿದೆ ಎಂದಿದ್ದಾರೆ.

ಧರ್ಮ ಆಧರಿಸಿ ಸಂಘ-ಸಂಸ್ಥೆಗಳಿಗೆ ಸರಕಾರದ ಆರ್ಥಿಕ ನೆರವು ನೀಡುವ ಹಿಂದಿನ ಸರಕಾರದ ಯೋಜನೆಗಳನ್ನು ತಕ್ಷಣದಿಂದಲೇ ರದ್ದುಗೊಳಿಸಲು ಸಚಿವ ಸಂಪುಟ ನಿರ್ಧರಿಸಿದೆ. ಮಮತಾ ಸರಕಾರ ಜಾರಿಗೆ ತಂದಿದ್ದ, ಮುಸ್ಲಿಮರ 77 ಜಾತಿಗಳನ್ನು ಒಳಗೊಂಡಿದ್ದ 'ರಾಜ್ಯ ಒಬಿಸಿ ಪಟ್ಟಿ'ಯನ್ನೂ ರದ್ದುಗೊಳಿಸಲಾಗುತ್ತಿದೆ. ಕೋಟಾ ಅರ್ಹತೆ ನಿರ್ಧರಿಸಲು ತನಿಖಾ ಸಮಿತಿ ರಚಿಸಲಾಗುತ್ತದೆ ಎಂದು ಸಚಿವ ಪಾಲ್ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಭೇಟಿ: ನೆದರ್‌ಲೆಂಡ್-ಭಾರತ ಹಲವು ಒಪ್ಪಂದ

ಬೆಂಗಳೂರಿನಲ್ಲಿ ಇಂಡೊ-ಡಚ್ ಡೇರಿ ತರಬೇತಿ ಕೇಂದ್ರ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ 5 ದೇಶಗಳಲ್ಲಿನ ವಾರ ಅವಧಿಯ ಪ್ರವಾಸ ಕಾಲದಲ್ಲಿ ಸದ್ಯ ನೆದರ್‌ಲೆಂಡ್‌ಗೆ ಭೇಟಿ ನೀಡಿ ಅಲ್ಲಿನ ಸರಕಾರದ ಜತೆ ದ್ವಿಪಕ್ಷೀಯ ಸಂಬಂಧ ವೃದ್ಧಿಯ ಬಗ್ಗೆ ಚರ್ಚೆ ನಡೆಸಿ ಹಲವು ಒಪ್ಪಂದಗಳನ್ನು ಮಾಡಿಕೊಂಡಿರುವುದರಿಂದ ಭಾರತಕ್ಕೆ 17 ಬಗೆಯ ಅನುಕೂಲಗಳಾಗಲಿವೆ ಎಂದು ಭಾರತದ ವಿದೇಶಾಂಗ ಸಚಿವಾಲಯ ಹೇಳಿದೆ.

ಬೆಂಗಳೂರು ಸಮೀಪದ ಹೆಸರುಘಟ್ಟದಲ್ಲಿನ ಪಶುಸಂಗೋಪನಾ ಶ್ರೇಷ್ಠತಾ ಕೇಂದ್ರ, 'ಸೆಂಟರ್ ಆಫ್ ಎಕ್ಸಲೆನ್ಸ್ ಫಾರ್ ಅನಿಮಲ್ ಹಸ್ಬೆಂಡರಿ'(ಸಿಇಎಎಚ್)ನಲ್ಲಿ ನೆದರ್‌ಲೆಂಡ್‌ನಿಂದ 'ಇಂಡೊ-ಡಚ್ ಸೆಂಟರ್ ಆಫ್ ಎಕ್ಸಲೆನ್ಸ್ ಆನ್ ಟ್ರೇನಿಂಗ್ ಇನ್ ಡೇರಿ' ಘಟಕದ ಕಾರ್ಯಾರಂಭ. ಕ್ಷೀರೋತ್ಪಾದನೆ-ಪಶುಸಂಗೋಪಕರ ಆದಾಯ ವೃದ್ಧಿಗೆ ಉತ್ತಮ ಡೇರಿ ತಂತ್ರಜ್ಞಾನದ ನೆರವು. ಪಶುಸಂಗೋಪನಾ ಕ್ಷೇತ್ರಕ್ಕೆ ತಾಂತ್ರಿಕ ಕೌಶಲದ ಸಹಕಾರ. ಭಾರತದ ಪಶುವೈದ್ಯರು-ಡೇರಿ ತಜ್ಞರಿಗೆ ತರಬೇತಿ-ಕೌಶಲಾಭಿವೃದ್ಧಿ. ಪಶು ಆರೋಗ್ಯ ಮತ್ತು ರೋಗ ನಿಯಂತ್ರಣ ಬಲಪಡಿಸುವಿಕೆಗೆ ನೆದರ್‌ಲೆಂಡ್ ಜತೆ ಒಪ್ಪಂದವಾಗಿದೆ ಎಂದು ವಿದೇಶಾಂಗ ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್ ಭಾನುವಾರ 'ಎಕ್ಸ್' ಸಂದೇಶದಲ್ಲಿ ತಿಳಿಸಿದ್ದಾರೆ.

ಪ್ರಧಾನಿ ಮೋದಿ ಅವರ ಈಗಿನ ಆಮ್‌ಸ್ಟರ್‌ಡಾಮ್ ಭೇಟಿಯು ನೆದರ್‌ಲೆಂಡ್-ಭಾರತದ ನಡುವಿನ ದ್ವಿಪಕ್ಷೀಯ ಸಂಬಂಧವನ್ನು 'ತಂತ್ರಾತ್ಮಕ ಸಹಭಾಗಿತ್ವ'ದ ಮಟ್ಟಕ್ಕೆ ಏರಿಸಿದೆ. ಪರಿಣಾಮವಾಗಿ ಭಾರತದ ಸೆಮಿಕಂಡಕ್ಟರ್ ಉದ್ಯಮ ಕ್ಷೇತ್ರ, ಹಸಿರು ಇಂಧನ,

ಬೆಂಗಳೂರು ಸಮೀಪದ ಹೆಸರುಘಟ್ಟದಲ್ಲಿನ 'ಸಿಇಎಎಚ್' ಘಟಕ

ಶಿಕ್ಷಣ, ಕೃಷಿ-ಪಶುಸಂಗೋಪನೆ, ಆರೋಗ್ಯ ಮತ್ತು ಸಾಂಸ್ಕೃತಿಕ ವಿನಿಮಯ ಕ್ಷೇತ್ರಗಳಲ್ಲಿ ಭಾರತಕ್ಕೆ ಗಣನೀಯ ಲಾಭ ತಂದುಕೊಡಲಿದೆ. ನೆದರ್‌ಲೆಂಡ್‌ನಲ್ಲಿ ಉನ್ನತ ವ್ಯಾಸಂಗ ಬಯಸುವ ಭಾರತದ ವಿದ್ಯಾರ್ಥಿಗಳಿಗೆ ಮತ್ತು ಉದ್ಯೋಗ ಅರಸು ವೃತ್ತಿಪರರಿಗೆ ಹೊಸ ಅವಕಾಶಗಳು ಸೃಷ್ಟಿಯಾಗಲಿವೆ ಎಂದೂ ಜೈಸ್ವಾಲ್ ಗಮನ ಸೆಳೆದಿದ್ದಾರೆ.

ಯುರೋಪ್ ಖಂಡದ ದೇಶವಾದ ನೆದರ್‌ಲೆಂಡ್ ಭಾರತದ ಪ್ರಮುಖ ವ್ಯಾಪಾರ ಪಾಲುದಾರ ರಾಷ್ಟ್ರವಾಗಿದೆ. 2024-25ರಲ್ಲಿ ಎರಡೂ ದೇಶಗಳ ವ್ಯಾಪಾರ ವಹಿವಾಟು ಮೊತ್ತ 2780 ಕೋಟಿ ಡಾಲರ್‌ಗಳಷ್ಟಾಗಿತ್ತು. ಅದಲ್ಲದೇ 5560 ಕೋಟಿ ಡಾಲರ್‌ಗಳಷ್ಟು ವಿದೇಶಿ ನೇರ ಹೂಡಿಕೆ ನೆದರ್‌ಲೆಂಡ್‌ನಿಂದ ಭಾರತಕ್ಕೆ ಹರಿದುಬಂದಿತ್ತು. ಡಚ್ಚರ ಈ ದೇಶ ಭಾರತದಲ್ಲಿನ 4ನೇ ಅತಿದೊಡ್ಡ ಹೂಡಿಕೆದಾರ ರಾಷ್ಟ್ರ ಎನಿಸಿಕೊಂಡಿದೆ.

ನೆದರ್‌ಲೆಂಡ್‌ನಿಂದ ಭಾರತಕ್ಕೆ ಪ್ರಯೋಜನ

- ತ್ರಿಪುರಾ ಪಶ್ಚಿಮ ಭಾಗ ಇಂಡೋ-ಡಚ್ ಪುಷ್ಪ ಉದ್ಯಾನ ವಾಣಿಜ್ಯ ಕೇಂದ್ರ ಸ್ಥಾಪನೆ. ರೈತರಿಗೆ ಹೆಚ್ಚು ಹಣ ತರುವ ಪುಷ್ಪಗಳ ಕೃಷಿ ಚಟುವಟಿಕೆಗೆ ತರಬೇತಿ.
- ಗುಜರಾತ್‌ನ ಧೋಲೇರಾದಲ್ಲಿ ನೆದರ್‌ಲೆಂಡ್‌ನ ಸೆಮಿಕಂಡಕ್ಟರ್ ಕಂಪನಿ 'ಫ್ಯಾಬ್' ಸ್ಥಾಪನೆ. ಟಾಟಾ ಎಲೆಕ್ಟ್ರಾನಿಕ್ಸ್-ನೆದರ್‌ಲೆಂಡ್‌ನ ಎಎಸ್‌ಎಂಎಲ್ ಮಧ್ಯೆ ಸಹಕಾರ.
- ನೀರಾವರಿ-ಕೈಗಾರಿಕೆಗೆ ನೀರು ಸಂಗ್ರಹದ ಗುಜರಾತ್ ಕಲ್ಪಾಸರ್ ಯೋಜನೆಗೆ ನೆದರ್‌ಲೆಂಡ್ ಇಂಜಿನಿಯರಿಂಗ್ ಸಹಕಾರ.
- ಭಾರತ-ನೆದರ್‌ಲೆಂಡ್ ತಂತ್ರಾತ್ಮಕ ಸಹಭಾಗಿತ್ವ-2030ಕ್ಕೆ ಮಾರ್ಗಸೂಚಿ ರಚನೆ. ಭಾರತದಲ್ಲಿ ನೆದರ್‌ಲೆಂಡ್ ಹೂಡಿಕೆ ಹೆಚ್ಚಳ. ಶುದ್ಧ ನೀರು, ಸುರಕ್ಷಿತ ಆಹಾರ, ಹಸಿರು ನಗರ, ಸಾರ್ವಜನಿಕ ಆರೋಗ್ಯ ಉತ್ತಮಗೊಳಿಸುವ ವ್ಯವಸ್ಥೆ.
- ಎರಡೂ ದೇಶವಾಸಿಗಳಿಗೆ ವೀಸಾ ವಿತರಣೆ ಸರಳ. ಭಾರತದ ವಿದ್ಯಾರ್ಥಿ-ಅಧ್ಯಾಪಕರಿಗೆ ಡಚ್ ವಿವಿಗಳಲ್ಲಿ ಅಧ್ಯಯನ-ಬೋಧನೆಗೆ ಹೆಚ್ಚು ಅವಕಾಶ. ಜಂಟಿ ಸಂಶೋಧನಾ ಯೋಜನೆ, ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತೆಗೆ ಉತ್ತೇಜನ. ಭಾರತದ ನಳಂದಾ ಮತ್ತು ನೆದರ್‌ಲೆಂಡ್‌ನ

ಗ್ರೊನಿಂಗೆನ್ ವಿವಿ ನಡುವೆ ಪರಸ್ಪರ ಸಹಕಾರ.

- ಅಪರೂಪದ ಪ್ರಮುಖ ಖನಿಜಗಳ ಕ್ಷೇತ್ರದಲ್ಲಿ ಪರಸ್ಪರ ವಿನಿಮಯ. ಭಾರತದ ಗಣಿಗಾರಿಕೆ ಸಾಮರ್ಥ್ಯ ವೃದ್ಧಿ.
- ಹಸಿರು ಜಲಜನಕ ರಫ್ತು ಮಾರುಕಟ್ಟೆ ವಿಸ್ತರಣೆ. ಮೂಲಸೌಕರ್ಯ ವೃದ್ಧಿಗೆ ನೆದರ್‌ಲೆಂಡ್ ಹೂಡಿಕೆ. ಭಾರತದ 'ಗ್ರೀನ್ ಹೈಡ್ರೋಜನ್'ಗೆ ಯುರೋಪಲ್ಲಿ ರಫ್ತು ಮಾರುಕಟ್ಟೆ ವಿಸ್ತರಣೆ. ಜಾಗತಿಕ ಜಲಜನಕ ಕೇಂದ್ರವಾಗಿ ಭಾರತದ ಸ್ಥಾನ ಭದ್ರ.

ಸಮಾಚಾರ ಸಣ್ಣದಲ್ಲ

50 ಮಕ್ಕಳಿಗೆ ಉಚಿತ ಶಸ್ತ್ರಚಿಕಿತ್ಸೆ

ಬೆಂಗಳೂರು: ರಾಜ್ಯದ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಮಕ್ಕಳ ಆರೋಗ್ಯ ರಕ್ಷಣೆಗೆ ಕಾವೇರಿ ಗ್ರೂಪ್ ಆಫ್ ಹಾಸ್ಪಿಟಲ್ಸ್ ಮಹತ್ವದ ಹೆಜ್ಜೆಯನ್ನಿಟ್ಟಿದೆ. ಹುಟ್ಟಿನಿಂದ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವ ಕರ್ನಾಟಕದ 50 ಮಕ್ಕಳಿಗೆ ಸಂಪೂರ್ಣ ಉಚಿತವಾಗಿ ಹೃದಯ ಮತ್ತು ಬೆನ್ನುಮೂಳೆಯ ಶಸ್ತ್ರಚಿಕಿತ್ಸೆಗಳನ್ನು ನೀಡಲು ಆಸ್ಪತ್ರೆಯು ಸಂಕಲ್ಪ 2.0: ಪುಟ್ಟ ಜೀವಕ್ಕೆ ಆಸರೆ ಯೋಜನೆ ಆರಂಭಿಸಿದೆ. ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿಸಲಾಗಿದ್ದ ಕಾವೇರಿ ಬ್ರೈನ್ ಅಂಡ್ ಹಾರ್ಟ್ ಸಮ್ಮಿಟ್ 2026 ಉದ್ಘಾಟನಾ ಸಮಾರಂಭದಲ್ಲಿ ಈ ಯೋಜನೆಗೆ ಚಾಲನೆ ನೀಡಲಾಯಿತು. ಯೋಜನೆಯಡಿ ಹುಟ್ಟಿನಿಂದಲೇ ಹೃದಯ ಕಾಯಿಲೆ ಇರುವ 25 ಮಕ್ಕಳಿಗೆ ಉಚಿತ ಕಾರ್ಡಿಯಾಕ್ ಶಸ್ತ್ರಚಿಕಿತ್ಸೆ ಮತ್ತು ಬೆನ್ನುಮೂಳೆಯ ವೈಕಲ್ಯವಿರುವ 25 ಮಕ್ಕಳಿಗೆ ಉಚಿತ ಸುಧಾರಿತ ಶಸ್ತ್ರಚಿಕಿತ್ಸೆಗಳನ್ನು ನೀಡಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

ಮೇ ಅಂತ್ಯದೊಳಗೆ ಕಾಮಗಾರಿ ಪೂರ್ಣಗೊಳಿಸಿ

ಬೆಂಗಳೂರು: ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಳೆಗಾಲಕ್ಕೂ ಮುನ್ನ ರಸ್ತೆ, ಚರಂಡಿ ಹಾಗೂ ವಿವಿಧ ಮೂಲಸೌಕರ್ಯ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸುವಂತೆ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.ನಗರ ಪಾಲಿಕೆಯ ಕಚೇರಿಯಲ್ಲಿ ನಡೆದ ವಿಡಿಯೊ ಸಂವಾದ ಆಧಾರಿತ ಸಮಗ್ರ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಎಸ್‌ಐಪಿ ಹಾಗೂ ಸಿಎಂಐಡಿಪಿ ಯೋಜನೆಗಳಡಿ ನಡೆಯುತ್ತಿರುವ ಕಾಮಗಾರಿಗಳ ಪ್ರಗತಿ, ರಸ್ತೆ ಗುಂಡಿ ಮುಚ್ಚುವಿಕೆ, ನೀರು ನಿಲುವು ಪ್ರದೇಶಗಳ ಸಮಸ್ಯೆ, ಸ್ಕೈವಾಕ್ ಕಾಮಗಾರಿ ಹಾಗೂ ಮಳೆಗಾಲ ಪೂರ್ವ ಸಿದ್ಧತೆ ಕುರಿತು ಚರ್ಚೆ ನಡೆಸಲಾಗಿದೆ ಎಂದರು.

ಪ್ರೆಸ್‌ಕ್ಲಬ್‌ನಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಕೃಷಿ ಸಚಿವ ಚಲುವರಾಯಸ್ವಾಮಿ

38 ಸಾವಿರ ಮೆ. ಟನ್ ಗೊಬ್ಬರ ಕೊರತೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ 38 ಸಾವಿರ ಮೆಟ್ರಿಕ್ ಟನ್ ರಸಗೊಬ್ಬರ ಕೊರತೆ ಇದೆ. 14 ಸಾವಿರ ಟನ್ ಯೂರಿಯಾ ಕೊರತೆ ಇದೆ. ಯುದ್ಧದ ಕಾರಣದಿಂದ ಇದು ತಡವಾಗಿದೆ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ತಿಳಿಸಿದರು.

ಪ್ರೆಸ್‌ಕ್ಲಬ್‌ನಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿ, ರಸಗೊಬ್ಬರ ಕೊರತೆ ಬಗ್ಗೆ ಕೇಂದ್ರದ ಜೊತೆ ಮಾತುಕತೆ ನಡೆಯುತ್ತಿದೆ. ರಸಗೊಬ್ಬರ ಬಳಕೆ ಕಡಿಮೆ ಬಳಕೆ ಹಾಗೂ ಪರ್ಯಾಯ ಗೊಬ್ಬರ ಮೂಲಗಳ ಬಳಕೆಗೆ ಕರೆ ನೀಡಲಾಗುತ್ತಿದೆ. ಜೂನ್‌ನಲ್ಲಿ ಮುಂಗಾರು ಆರಂಭವಾಗಲಿದೆ. ರಸಗೊಬ್ಬರ ಪೂರೈಕೆ ಸಮಸ್ಯೆ ಬಗ್ಗೆ ಪರಿಣಾಮಕಾರಿ ವಿಜಿಲೆನ್ಸಿ ಮಾಡಲು ಸೂಚಿಸಲಾಗಿದೆ. ಫ್ರೂಟ್ ಐಡಿ ಮೂಲಕ ರೈತರಿಗೆ ಮಾತ್ರ ಗೊಬ್ಬರ ವಿತರಿಸಲು ಕ್ರಮ ವಹಿಸಲಾಗಿದೆ ಎಂದು ಹೇಳಿದರು.

ಪ್ರಸಕ್ತ ಮುಂಗಾರು ಹಂಗಾಮಿಗೆ ಕೇಂದ್ರದಿಂದ ಒಟ್ಟು 30.05 ಲಕ್ಷ ಮೆಟ್ರಿಕ್ ಟನ್ ವಿವಿಧ ಗ್ರೇಡ್‌ನ ರಸಗೊಬ್ಬರಗಳನ್ನು ಹಂಚಿಕೆ ಮಾಡಲಾಗಿದೆ. (ಯೂರಿಯಾ-11.10 ಲಕ್ಷ ಮೆ.ಟನ್, ಡಿ.ಎ.ಪಿ. 4 ಲಕ್ಷ ಮೆ.ಟನ್, ಎಂ.ಒ.ಪಿ 2.12 ಲಕ್ಷ ಮೆ.ಟನ್, ಕಾಂಪ್ಲೆಕ್ಸ್ 11.88 ಲಕ್ಷ ಮೆ.ಟನ್, ಎಸ್.ಎಸ್.ಪಿ 0.95 ಲಕ್ಷ ಮೆ.ಟನ್) ಸರಬರಾಜು ಮಾಡಲಾಗಿದೆ. ಕಳೆದ ಸಾಲುಗಳಿಗೆ ಹೋಲಿಸಿದಲ್ಲಿ ಯೂರಿಯಾ ರಸಗೊಬ್ಬರದ ಆರಂಭಿಕ ಶಿಲ್ಕು ತುಂಬಾ ಕಡಿಮೆ ಇದೆ. (2023ರಲ್ಲಿ 3.91 ಲಕ್ಷ ಮೆ.ಟನ್, 2024ರಲ್ಲಿ 5.41 ಲಕ್ಷ ಮೆ.ಟನ್, 2025ರಲ್ಲಿ 3.46 ಲಕ್ಷ ಮೆ.ಟನ್) ಪಸಕ್ತ ಸಾಲಿನಲ್ಲಿ 2.80 ಲಕ್ಷ ಮೆ.ಟನ್ ಮಾತ್ರ ಇದೆ. ಜತೆಗೆ ಕೇಂದ್ರದಿಂದ ಬೇಡಿಕೆಗೆ ಅನುಗುಣವಾಗಿ ಯೂರಿಯಾ ಮತ್ತು ಡಿ.ಎ.ಪಿ. ಸರಬರಾಜು ಆಗಿರುವುದಿಲ್ಲ. ಇದರಿಂದಾಗಿ ಮುಂಗಾರು ಹಂಗಾಮಿನಲ್ಲಿ ಗೊಬ್ಬರಗಳ ಕೊರತೆಯಾಗುವ ಸಾಧ್ಯತೆ ಇದೆ ಎಂದರು.

ಜನರ ಒಳಿತಾಗಿ ವಿಪಕ್ಷಗಳು ಕೆಲಸ ಮಾಡುತ್ತಿರುವುದನ್ನು ನಾನು ನೋಡಿಲ್ಲ. ಸರಕಾರ ಟೀಕಿಸುವ, ತಿದ್ದುವ ಕೆಲಸ ಮಾಡುತ್ತಿಲ್ಲ. ಬದಲಿಗೆ ವೈಯಕ್ತಿಕ ಟೀಕೆ ಬಿಟ್ಟು ಬೇರೇನನ್ನೂ ಅವರು ಮಾಡು ತ್ತಿಲ್ಲ. ವಿಪಕ್ಷಗಳ ಜೊತೆ ಮಾಧ್ಯಮಗಳೂ ಸರಕಾರವನ್ನು ತಿದ್ದುವ, ಸಲಹೆ ನೀಡುವ ಕಾರ್ಯ ಮಾಡಬಹುದು. ಎಲೆಕ್ಟ್ರಾನಿಕ್ ಹಾಗೂ ಸೋಶಿಯಲ್ ಮೀಡಿಯಾ ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಅನ್ನುವುದು ಕಣ್ಮುಂದೆ ಇದೆ. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ನಾವು ಕೆಲಸ ಮಾಡಬೇಕಿದೆ ಎಂದರು.

40 ಲಕ್ಷ ರೈತರಿಗೆ 470 ಕೋಟಿ ರು. ಸಹಾಯಧನ: 40 ಲಕ್ಷ ರೈತರಿಗೆ 470 ಕೋಟಿ ರು. ಸಹಾಯಧನ ನೀಡಲಾಗಿದೆ. ಕೇಂದ್ರದಿಂದ ನಮ್ಮ ಪಾಲಿನ 20 ಸಾವಿರ ಕೋಟಿ ರು. ಅನುದಾನ ಬರುವುದಕ್ಕೆ ಬಾಕಿ ಇದೆ. ಸುಪ್ರೀಂ ಕೋರ್ಟ್ ಆದೇಶದ ಮೇಲೆ ಇಲ್ಲಿಯವರೆಗೆ 3,454 ಕೋಟಿ ರು. ಮಾತ್ರ ಅನುದಾನ ನೀಡಿದೆ. ಕೃಷಿ ಹೊಂಡಗಳ ಮೂಲಕ ಬೆಳೆಗಳ ನೀರಿನ ಬವಣೆ ತಪ್ಪಿಸಲಾಗುತ್ತಿದೆ. ಸಿರಿಧಾನ್ಯ ಮೇಳ, ಮತ್ತು ಬೆಳೆ ಕಾರ್ಯ ಬಗ್ಗೆ ಪ್ರಗತಿ ಸಾಧಿಸಿದ್ದೇವೆ. ನಮ್ಮ ರಾಜ್ಯವೊಂದರಲ್ಲೇ 58 ಕೃಷಿ ಲ್ಯಾಬ್‌ಗಳಿವೆ ಎಂದು ಸಚಿವ ಚಲುವರಾಯಸ್ವಾಮಿ ತಿಳಿಸಿದರು. ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್, ಅಧ್ಯಕ್ಷ ಬಿ.ಎಚ್. ಹರೀಶ್, ಪ್ರೆಸ್‌ಕ್ಲಬ್‌ಅಧ್ಯಕ್ಷ ಶ್ರೀಧರ್, ಶಿವಕುಮಾರ್ ಬೆಳ್ಳಿತಟ್ಟೆ ಉಪಸ್ಥಿತರಿದ್ದರು.

ಪ್ರೆಸ್‌ಕ್ಲಬ್‌ನಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಕೃಷಿ ಸಚಿವ ಚಲುವರಾಯಸ್ವಾಮಿ ಭಾಗವಹಿಸಿದ್ದರು.

> ರೈತರ ಕೃಷಿ ಉಪಕರಣಗಳ ಸಬ್ಸಿಡಿ ಹೆಚ್ಚಿಸಿದ್ದೇವೆ. ಅವುಗಳ ಮೂಲ ಬೆಲೆಯ ಅರ್ಧದಷ್ಟು ಸಬ್ಸಿಡಿ ಕೊಡಿಸುತ್ತಿದ್ದೇವೆ. ಅರ್ಹ ಫಲಾನುಭವಿಗಳಿಗೆ ಇವು ತಲುಪುತ್ತಿವೆ. ಸೂಕ್ಷ್ಮ ನೀರಾವರಿ ಯೋಜನೆಯಲ್ಲೂ ಸಾವಿರ ಕೋಟಿ ರು. ಯೋಜನೆ ಹಂಚಿಕೆ ಆಗಿದೆ. ಮಣ್ಣು ಪರೀಕ್ಷೆ ಮೂಲಕ ರೈತರ ಬೆಳೆ ಪದ್ಧತಿ ಬದಲಾವಣೆ ಮತ್ತು ಅಳವಡಿಕೆ ಬಗ್ಗೆ ಶಿಕ್ಷಣ, ಪರಿಣಿತಿ ಒದಗಿಸಲಾಗುತ್ತಿದೆ.
>
> – ಚಲುವರಾಯಸ್ವಾಮಿ, ಕೃಷಿ ಸಚಿವ

ಆತ್ಮಹತ್ಯೆ ಸಂಖ್ಯೆ ಇಳಿಕೆ

ಕೃಷಿ ಕ್ಷೇತ್ರಕ್ಕೆ ಹೊಸ ಚೈತನ್ಯ ನೀಡಲು ಬದ್ಧವಾಗಿದೆ. ಕೃಷಿ ಕೇವಲ ಬದುಕಿನ ಅನಿವಾರ್ಯತೆಯನ್ನಾಗಿ ಸದೆ, ಅದನ್ನು ಗೌರವಯುತ ಮತ್ತು ಲಾಭದಾಯಕ ಉದ್ಯಮವನ್ನಾಗಿ ಪರಿವರ್ತಿಸುವುದು ಸರಕಾರದ ಪ್ರಮುಖ ಗುರಿಯಾಗಿದೆ. ಕಳೆದ 3 ವರ್ಷದಲ್ಲಿ ದಕ್ಷ ಆಡಳಿತದಿಂದ ರೈತರ ಆತ್ಮಹತ್ಯೆಗಳು ಗಣನೀಯವಾಗಿ ಇಳಿಕೆಯಾಗಿವೆ. ಕೃಷಿ ಭಾಗ್ಯ ಯೋಜನೆಯಡಿ 435.05 ಕೋಟಿ ಸಹಾಯಧನದೊಂದಿಗೆ 36,213 ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದ್ದು, 173 ಕೋಟಿ ವೆಚ್ಚದಲ್ಲಿ 524 ಹೈಟೆಕ್ ಹಾರ್ವೆಸ್ಟರ್ ಹಬ್‌ಗಳನ್ನು ಸ್ಥಾಪಿಸಲಾಗಿದೆ. ಬೀಜ ಪರಂಪರೆ ಮೂಲಕ 2,100 ದೇಶಿ ತಳಿಗಳನ್ನು ಸಂರಕ್ಷಿಸಿ ಕರ್ನಾಟಕ ದೇಶಕ್ಕೇ ಮಾದರಿಯಾಗಿದೆ ಎಂದರು.

ಅಪ್ಪಾಜಿ ಕ್ಯಾಂಟೀನ್‌ನಲ್ಲಿ 1 ರುಪಾಯಿಗೆ ಊಟ

ಕಾರ್ಯಕ್ರಮದಲ್ಲಿ ವೇಳೆ ವಿಧಾನ ಪರಿಷತ್ ಸದಸ್ಯ ಟಿ.ಎ ಶರವಣ ಮಾತನಾಡಿದರು. ಈ ವೇಳೆ ಬಿಗ್ ಬಾಸ್ ಸೀಸನ್ -12 ವಿನ್ನರ್ ಗಿಲ್ಲಿ ನಟ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬೆಂಗಳೂರು: ಮಾಜಿ ಪ್ರಧಾನಮಂತ್ರಿ ಎಚ್.ಡಿ.ದೇವೇಗೌಡ ಅವರ ಜನ್ಮದಿನದ ಅಂಗವಾಗಿ ವಿಧಾನ ಪರಿಷತ್ ಸದಸ್ಯ ಟಿ.ಎ ಶರವಣ ಹಮ್ಮಿಕೊಂಡಿದ್ದ ವಿಶೇಷ ಸೇವಾ ಕಾರ್ಯಕ್ರಮ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು. ಬಸವನಗುಡಿಯ ಹನು ಮಂತನಗರದ 50 ಅಡಿ ರಸ್ತೆಯಲ್ಲಿರುವ ನಮ್ಮ ದೇವೇಗೌಡ ಅಪ್ಪಾಜಿ ಕ್ಯಾಂಟೀನ್‌ನಲ್ಲಿ ಸೋಮವಾರ ಒಂದು ದಿನ ಕೇವಲ 1ರು.ಕ್ಕೆ ಉಪಹಾರ ಹಾಗೂ ಮುದ್ದೆ ಊಟ ವಿತರಿಸ ಲಾಯಿತು. ಬೆಳಗ್ಗೆಯಿಂದಲೇ ಸಾವಿರಾರು ಜನರು ಕ್ಯಾಂಟೀನ್‌ಗೆ ಆಗಮಿಸಿ ಆಹಾರ ಸೇವಿಸಿ ಸಂತಸ ವ್ಯಕ್ತಪಡಿಸಿದರು.

ಈ ವೇಳೆ ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ ಮಾತನಾಡಿ, ಕಾರ್ಯಕ್ರಮದ ಅಂಗವಾಗಿ ಪೌರ ಕಾರ್ಮಿಕರು ಹಾಗೂ ಆಟೋ ಚಾಲಕರಿಗೆ ಬಟ್ಟೆಗಳನ್ನು ವಿತರಿಸಲಾ ಯಿತು. ಸಮಾಜದ ಶ್ರಮಜೀವಿಗಳಿಗೆ ಗೌರವ ಸೂಚಿಸುವ ಉದ್ದೇಶದಿಂದ ಈ ಸೇವಾ ಕಾರ್ಯ ಆಯೋಜಿಸಲಾಗಿದೆ. ಕಳೆದ 9 ವರ್ಷಗಳಿಂದ ನಮ್ಮ ದೇವೇಗೌಡ ಅಪ್ಪಾಜಿ ಕ್ಯಾಂಟೀನ್ ಅನ್ನುಸ್ವಂತ ವೆಚ್ಚದಲ್ಲಿ ನಿರಂತರ ವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಪ್ರತಿ ದಿನ ಸಾವಿರಾರು ಜನರಿಗೆ ಕಡಿಮೆ ದರದಲ್ಲಿ ಶುಚಿ, ರುಚಿಕರ ಹಾಗೂ ಗುಣಮಟ್ಟದ ಊಟ-ಉಪಾಹಾರವನ್ನು ಈ ಕ್ಯಾಂಟೀನ್ ಒದಗಿಸುತ್ತಿದೆ. ವಿಶೇಷವಾಗಿ ಕೋವಿಡ್ ಸಂಕಷ್ಟದ ಅವಧಿಯಲ್ಲಿ ಲಕ್ಷಾಂತರ ಜನರಿಗೆ ಈ ಕ್ಯಾಂಟೀನ್ ನೆರವಾಗಿತ್ತು. ಹಸಿದವರಿಗೆ ಅನ್ನ ನೀಡಬೇಕು ಎಂಬುದು ದೇವೇಗೌಡರ ಆಶಯ. ಆ ಕನಸನ್ನು ನನಸಾಗಿಸುವ ನಿಟ್ಟಿ ನಲ್ಲಿ ಸೇವಾ ಕಾರ್ಯ ನಿರಂತರವಾಗಿ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಗಿಲ್ಲಿ ನಟ ಆಕರ್ಷಣೆ:ಈ ವಿಶೇಷ ಕಾರ್ಯಕ್ಕೆ ಬಿಗ್ ಬಾಸ್ ಸೀಸನ್ -12 ವಿನ್ನರ್ ಗಿಲ್ಲಿ ನಟ ಅವರ ಆಗಮನ ಮೆರಗು ನೀಡಿತು. ಗಿಲ್ಲಿ ಅವರನ್ನು ನೋಡಲು, ಸಾವಿರಾರು ಜನ ಸೇರಿದ್ದರು.

ವಿಟಿಯು ವಿದ್ಯಾರ್ಥಿಗಳಿಗೆ ಡ್ರೋನ್ ಲೈಸೆನ್ಸ್ ತರಬೇತಿ

ನಿಯೋಸ್ಕೈ ಸಿಇಒ ಶರತ್ ಚಂದ್ರ ವಿದ್ಯಾರ್ಥಿಗಳಿಗೆ ಡ್ರೋನ್ ಲೈಸೆನ್ಸ್ ಕುರಿತು ತರಬೇತಿ ನೀಡಿದರು. ಈ ವೇಳೆ ಸಂಶೋಧನೆ ಮತ್ತು ಅಭಿವೃದ್ಧಿ ಏರೋಸ್ಪೇಸ್ ರಕ್ಷಣಾ ನಿರ್ದೇಶಕ ಡಾ.ಕಮಾಂಡರ್ ದೇವೇಂದ್ರ ಸಿಂಗ್, ವಿಟಿಯು ವಿಶೇಷಾಧಿಕಾರಿ ಡಾ.ಅಜಿತ್ ಪದ್ಯಾಣ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬೆಂಗಳೂರು: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ನಿಯೋಸ್ಕೈ ಕಂಪನಿಯ ಸಹಯೋಗದೊಂದಿಗೆ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಡ್ರೋನ್ ಲೈಸೆನ್ಸ್ ಒದಗಿಸಿಕೊಡಲು ಮುಂದಾಗಿದೆ. ಇದಕ್ಕಾಗಿ ವಿಟಿಯು ಮತ್ತು ನಿಯೋಸ್ಕೈನ ಜತೆಗೂಡಿ ಒಂದು ವಾರದ ಡ್ರೋನ್ ತರಬೇತಿ ನೀಡಲಿದ್ದು, ಆನಂತರ ನಾಗರಿಕ ವಿಮಾನಯಾನ ಮಹಾನಿರ್ದೇ ಶನಾಲಯದಿಂದ ಡ್ರೋನ್ ಪರವಾನಗಿ ಕೊಡಿಸಲಿದೆ.

ಈ ಕುರಿತು ನಿಯೋಸ್ಕೈ ಸಿಇಒ ಶರತ್ ಚಂದ್ರ ಮಾತನಾಡಿ, ಇಂದು ಮಾನವ ರಹಿತ ಯುದ್ಧಗಳೇ ಹೆಚ್ಚಾಗಿವೆ. ಇದಕ್ಕಾಗಿ ಡ್ರೋನ್‌ಗೆ ಹೆಚ್ಚಿನ ಪ್ರಾಮುಖ್ಯತೆ ಸಿಕ್ಕಿದೆ. ಆದರೆ, ಡ್ರೋನ್ ಚಲಾಯಿಸುವುದಕ್ಕೂ ಕೂಡ ಕೆಲವು ನಿಯಮಗಳಿವೆ. ತರಬೇತಿಯ ಅವಶ್ಯಕತೆ ಇದೆ. ಇದನ್ನು ನಾವು ತಿಳಿಸಿಕೊಡಲಿದ್ದೇವೆ. ಆನಂತರ ಪರವಾನಗಿ ಕೊಡಿಸಲಿದ್ದು, ನೀವು ವಾಣಿಜ್ಯ ಕಾರ್ಯಗಳಿಗೆ ಡ್ರೋನ್ ಬಳಕೆ ಮಾಡಬಹುದಾಗಿದೆ ಎಂದರು.

ಸಂಶೋಧನೆ ಮತ್ತು ಅಭಿವೃದ್ಧಿ ಏರೋಸ್ಪೇಸ್ ರಕ್ಷಣಾ ನಿರ್ದೇಶಕ ಡಾ.ಕಮಾಂಡರ್ ದೇವೇಂದ್ರ ಸಿಂಗ್ ಮಾತನಾಡಿ, ಇಂದು ಡ್ರೋನ್ ಹೆಚ್ಚು ಪ್ರಖ್ಯಾತಿ ಪಡೆದುಕೊಳ್ಳುತ್ತಿದೆ. ಡೆಲಿವರಿ ಕಂಪನಿಗಳು ಡ್ರೋನ್ ಬಳಕೆಗೆ ಹೆಚ್ಚು ಆಸಕ್ತಿ ತೋರುತ್ತಿರುವುದರಿಂದ ಭವಿಷ್ಯದಲ್ಲಿ ಡ್ರೋನ್ ಹಾರಾಟ ನಡೆಸುವವರಿಗೆ ಹೆಚ್ಚಿನ ಬೇಡಿಕೆ ಸಿಗಲಿದೆ. ಸಾಮಾನ್ಯವಾಗಿ ಡ್ರೋನ್ ತರಬೇತಿ, ಪರವಾನಗಿಗಾಗಿ 1 ಲಕ್ಷ ರು.ವೆಚ್ಚ ಮಾಡಬೇಕಿರುತ್ತದೆ. ವಿಟಿಯು ಉಚಿತವಾಗಿ ಇದನ್ನು ನೀಡುತ್ತಿದೆ ಎಂದರು. ವಿಟಿಯು ವಿಶೇಷಾಧಿಕಾರಿ ಡಾ.ಅಜಿತ್ ಪದ್ಯಾಣ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮಹೀಂದ್ರ ಸಂಸ್ಥೆ ಮ್ಯೂಸಿಯಂ ಇತಿಹಾಸದ ಸಾಕ್ಷಿ: ಆನಂದ್ ಮಹೀಂದ್ರ

ಬೆಂಗಳೂರು: ಭಾರತದ ಪ್ರಮುಖ ಉದ್ಯಮ ಸಮೂಹವಾದ ಮಹೀಂದ್ರಾ ಗ್ರೂಪ್ ತನ್ನ 81 ವರ್ಷಗಳ ಪಯಣ, ಮೌಲ್ಯಗಳು ಹಾಗೂ ಭವಿಷ್ಯದ ದೃಷ್ಟಿ ಕೋನವನ್ನು ಪರಿಚಯಿಸುವ ಉದ್ದೇಶ ದಿಂದ ಆರಂಭಿಸಿರುವ ಮ್ಯೂಸಿಯಂ ಆಫ್ ಲಿವಿಂಗ್ ಹಿಸ್ಟರಿ ವಿಶೇಷ ಗಮನ ಸೆಳೆದಿದೆ ಎಂದು ಮಹೇಂದ್ರ ಗ್ರೂಪ್ ಚೇರ್‌ಮನ್ ಆನಂದ್ ಮಹೀಂದ್ರ ತಿಳಿಸಿದರು.

2022ರ ಜುಲೈನಲ್ಲಿ ಮುಂಬೈನ ವರ್ಲಿಯಲ್ಲಿರುವ ಮಹೀಂದ್ರಾ ಟವರ್ಸ್‌ನಲ್ಲಿ ಪ್ರಾರಂಭವಾದ ಈ ಮ್ಯೂಸಿಯಂ, ಕೇವಲ ಇತಿಹಾಸದಲ್ಲಿ ಉಳಿಯುತ್ತದೆ, ಭವಿಷ್ಯದತ್ತ ಸಾಗುವ ಚೈತನ್ಯಮಯ ವೇದಿಕೆಯಾಗಿಯೂ ರೂಪುಗೊಂಡಿದೆ. ಮಹೇಂದ್ರ ಸಂಸ್ಥೆಯ 8 ವಿಶಿಷ್ಟ ಪಯಣ, ಅದರ ಮೌಲ್ಯಾಧಾರಿತ ಬೆಳವಣಿಗೆ ಮತ್ತು ಮುಂದಿನ ಕನಸುಗಳನ್ನು ಈ ಮ್ಯೂಸಿಯಂ ರೀತಿಯಲ್ಲಿ ಪರಿಚಯಿ ಸುತ್ತಿದೆ. ಅಂತರರಾಷ್ಟ್ರೀಯ ಮ್ಯೂಸಿಯಂ ದಿನದ ಅಂಗವಾಗಿ ಸಾರ್ವಜನಿಕರಿಗೆ ಮುಕ್ತವಾಗಿ ರುವ ಈ ಮ್ಯೂಸಿಯಂನಲ್ಲಿ ಕಲಾತ್ಮಕ ಇನ್‌ಸ್ಟಾಲೇಶನ್‌ಗಳು, ವಿಶೇಷವಾಗಿ ನಿರ್ಮಿಸಲಾದ ಚಿತ್ರಗಳು, ಕಥಾನಕಗಳು ಮತ್ತು ತಂತ್ರಜ್ಞಾನಧಾರಿತ ಪ್ರದರ್ಶನಗಳ ಮೂಲಕ ಮಹೇಂದ್ರ ಸಂಸ್ಥೆಯ ಇತಿಹಾಸ ಕಟ್ಟಿಕೊಡಲಾಗಿದೆ ಎಂದರು.

ಮಳೆ ಹಾನಿ ಪ್ರದೇಶಕ್ಕೆ ಭೇಟಿ

ಬೆಂಗಳೂರು: ನಗರದಲ್ಲಿ ಸೋಮವಾರ ಸುರಿದ ಬಾರಿ ಮಳೆಯಿಂದ ಜೆ.ಸಿ.ನಗರ, ಕುರುಬರ ಹಳ್ಳಿಯ 23 ಮತ್ತು 24ನೇ ಮುಖ್ಯರಸ್ತೆಯಲ್ಲಿ ಮನೆಗಳಿಗೆ ನೀರು ನುಗ್ಗಿ ದಿನಸಿ ಪದಾರ್ಥ, ಇನ್ನಿತರೆ ವಸ್ತುಗಳು ಹಾನಿಯಾಗಿದ್ದು, ಸ್ಥಳಕ್ಕೆ ಬಿಬಿಎಂಪಿ ಆಡಳಿತ ಪಕ್ಷದ ಮಾಜಿ ನಾಯಕ ಎಂ.ಶಿವರಾಜು ಭೇಟಿ ನೀಡಿ ವೀಕ್ಷಣೆ ಮಾಡಿದರು. ಪಾಲಿಕೆ ಸಿಬ್ಬಂದಿ ಮಳೆನೀರು ಕಾಲುವೆಗೆ ಸರಾಗವಾಗಿ ಸಾಗಲು ದುರಸ್ತಿ ಮಾಡಿದರು. ಮಳೆ ನೀರಿನಿಂದ ಹಾನಿಯಾದ ಮನೆಗಳಿಗೆ ಪರಿಹಾರಕ್ಕಾಗಿ ಮುಖ್ಯ ಆಯುಕ್ತರಿಗೆ ಮನವಿ ಮಾಡಲಾಗುವುದು ಎಂದು ಶಿವರಾಜು ತಿಳಿಸಿದ್ದಾರೆ. ಪಾಲಿಕೆ ಅಧಿಕಾರಿಗಳು, ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು

ಭೂಗತ ವಿದ್ಯುತ್ ಕೇಬಲ್ ಅಳವಡಿಸಿ

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ವತಿಯಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಹಳೆಯ ಎರಡು ಪ್ರಮುಖ ವಿದ್ಯುತ್ ಮಾರ್ಗಗಳಾದ ನೆಲಮಂಗಲ ಉಪ ಕೇಂದ್ರದಿಂದ ಬೃಂದಾವನದ ಬಳಿ ಇರುವ ಗೋಪುರದವರೆಗೂ ಸದರಿ 110 ಕೆ.ವಿ ವಿದ್ಯುತ್ ಮಾರ್ಗವನ್ನು 220 ಕೆ.ವಿ ಮಾರ್ಗ ಹಾಗೂ ನೆಲಮಂಗಲ ಉಪಕೇಂದ್ರದಿಂದ 220/66 ಕೆ.ವಿ ವಿದ್ಯುತ್ ಅನ್ನು ಪೀಣ್ಯ ಉಪಕೇಂದ್ರದವರೆಗೂ ಪ್ರಸ್ತುತವಿರುವ ಪೀಣ್ಯ ಉಪಕೇಂದ್ರಕ್ಕೆ ಸಂಪರ್ಕ 400/220 ಕೆವಿ ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆಗೆ ಭೂ ಮಾಲೀಕರಿಂದ ತೀವ್ರ ವಿರೋಧ ವ್ಯಕ್ತವಾಯಿತು.

ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ಶಿವನಪುರ, ಗಜ್ಜಗದಹಳ್ಳಿ, ನಾರಾಯಣಪ್ಪನಪಾಳ್ಯ, ಹಾರೋಕ್ಯಾತನಹಳ್ಳಿ, ದೊಂಬರಹಳ್ಳಿ, ಲಕ್ಷ್ಮೀಪುರ, ಶ್ರೀಕಂಠಪುರ, ಕರಿವೋಬನಹಳ್ಳಿ, ತಿರುಮಲಾಪುರ, ದೊಡ್ಡಬಿದರೆಕಲ್ಲು, ನೆಲಗದರನಹಳ್ಳಿ, ಶಿವಪುರ, ಚೊಕ್ಕಸಂದ್ರ ಮತ್ತು ಪೀಣ್ಯ 2ನೇ ಹಂತದ ಮೂಲಕ ಹಾದು ಹೋಗಲಿದ್ದು, ಹೊಸದಾಗಿ ನಿರ್ಮಿಸಲಾಗುವ ವಿದ್ಯುತ್ ಗೋಪುರಗಳ ಜಾಗದ ನೈಜ ಭೂಮಾಲೀಕರಿಗೆ ನಿಯಮಾನುಸಾರ ಪರಿಹಾರ ನೀಡಲು ನಗರ ಜಿಲ್ಲಾಧಿಕಾರಿಗಳು ಆದೇಶಿಸಿರುವ ಹಿನ್ನಲೆಯಲ್ಲಿ ಪೀಣ್ಯದ ಎಸ್‌ಆರ್‌ಎಸ್ ಹತ್ತಿರದ ಕೆಪಿಟಿಸಿಎಲ್ ಆವರಣದಲ್ಲಿ ಸಾರ್ವಜನಿಕ ಸಭೆ ಏರ್ಪಡಿಸಲಾಗಿತ್ತು. ಸಭೆಯಲ್ಲಿ ಶೇ.30 ರಷ್ಟು ಪರಿಹಾರಕ್ಕೆ ಒಪ್ಪದ ಭೂ ಮಾಲೀಕರು ವಿರೋಧ ವ್ಯಕ್ತಪಡಿಸಿದರು.

ಭೂ ಮಾಲೀಕ ಸಿದ್ದಗಂಗಯ್ಯ ಮಾತನಾಡಿ, ಕೆಪಿಟಿಸಿಎಲ್ ಅವರು ಬಫರ್ ಜೋನ್ ಎಂದು 38 ಮೀಟರ್ ಅಗಲ ಜಮೀನು ಒತ್ತುವರಿ ಮಾಡಿ ಲಕ್ಷಾಂತರ ಜನರು ಕಟ್ಟಿರುವ ಮನೆ ಹಾಗೂ ನಿವೇಶನ ಆಕ್ರಮಿಸಿಕೊಳ್ಳಲು ಮುಂದಾಗಿದ್ದಾರೆ. ಹೈಟೆನ್ಷನ್ ಎತ್ತರ ಮತ್ತು ಅಗಲ ಮಾಡುತ್ತಿದ್ದಾರೆ ನಮಗೆ ಮಾಹಿತಿ ನೀಡದೆ ಪರಿಹಾರ ನೀಡದೆ ಅಕ್ರಮ ನಡೆಸುತ್ತಿದ್ದಾರೆ. ಸರಕಾರ ನಮಗೆ ಸೂಕ್ತ ಪರಿಹಾರ ನೀಡಲಿ. ಸುರಂಗ ಕೊರೆದು ಅಂಡರ್ ಗ್ರೌಂಡ್ ಕೇಬಲ್ ಹಾಕಿ ಅಲ್ಲಲ್ಲಿ ಸಬ್ ಸ್ಟೇಷನ್ ಮಾಡಲಿ, ನಮ್ಮ ಆಕ್ಷೇಪಣೆ ಇಲ್ಲ ಎಂದು ಆಗ್ರಹಿಸಿದರು.

ತಿಪ್ಪೇನಹಳ್ಳಿ ಗ್ರಾಮದ ನಿವಾಸಿ ಲೋಕೇಶ್, ಕೆಪಿಟಿಸಿಎಲ್ ನವರು ಸಭೆಯ ಬಗ್ಗೆ ಸರಿಯಾದ ಮಾಹಿತಿ ನೀಡಿಲ್ಲ. ಜನರ ವಿರುದ್ಧ ಕೆಲಸ ಮಾಡುತ್ತಿರುವ ಕೆಪಿಟಿಸಿಎಲ್ ವಿರುದ್ಧ ದಿಕ್ಕಾರ ಹಾಕುತ್ತೇವೆ. ಪೊಲೀಸ್ ಇಲಾಖೆಯವರನ್ನು ಕರೆಸಿ ನಮಗೆ ಎದುರಿಸುತ್ತಿರುವ ಕೆಲಸ ಮಾಡುತ್ತಿದ್ದಾರೆ. ನಾವು ಅಲ್ಲಿ ಕೆಲಸ ಮಾಡಲು ಬಿಡುವುದಿಲ್ಲ ಎಂದು ವಿರೋಧ ವ್ಯಕ್ತಪಡಿಸಿದರು. ಸಭೆಯಲ್ಲಿ ಕೆಪಿಟಿಸಿಎಲ್ ಎಇಇ ಲತಾ, ಎಂಜಿನಿಯರ್‌ಗಳಾದ ಸುಮ, ಸೌಮ್ಯ, ಪೊಲೀಸ್ ಇನ್ಸ್‌ಪೆಕ್ಟರ್‌ಗಳಾದ ಚಿಕ್ಕಸ್ವಾಮಿ, ಪ್ರಶಾಂತ್ ಹಾಗೂ ನೂರಾರು ಭೂಮಾಲೀಕರಿದ್ದರು.

ನಗರದಲ್ಲಿ ಮಳೆಯ ಸಿಂಚನ

ಬೆಂಗಳೂರು: ತೀವ್ರ ಬೇಸಿಗೆಯಿಂದ ಬಳಲಿದ್ದ ಉದ್ಯಾನನಗರಿ ಬೆಂಗಳೂರಿಗೆ ಕೊನೆಗೂ ಮಳೆರಾಯ ತಂಪೆರೆದಿದ್ದು, ಸಂಜೆ ನಗರಾದ್ಯಂತ ಭಾರಿ ಮಳೆಯಾಗಿದೆ.

ನಗರದ ವಿವಿಧೆಡೆ ಗಾಳಿ ಸಹಿತ ಭಾರಿ ಮಳೆಯಾಗಿದ್ದು, ರಸ್ತೆಗಳಲ್ಲಿ ನೀರು ನಿಂತು ನದಿಯಂತಾಗಿದ್ದವು. ಪರಿಣಾಮ ವಾಹನ ಸವಾರರು ಪರದಾಡುವಂತಾಯಿತು. ಏಕಾಏಕಿ ಸುರಿದ ಭಾರಿ ಮಳೆಯಿಂದಾಗಿ ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದವರು ಸಮಸ್ಯೆಗೆ ಸಿಲುಕುವಂತಾಯಿತು. ರಸ್ತೆ ಬದಿಗಳಲ್ಲೇ ಬೈಕ್ ನಿಲ್ಲಿಸಿ ಬಸ್ ನಿಲ್ದಾಣಗಳಲ್ಲಿ, ಅಂಗಡಿ ಮುಂಗಟ್ಟುಗಳ ಎದುರು ಸವಾರರು ನಿಂತ ದೃಶ್ಯಗಳು ಕಂಡುಬಂತು.

ಬೆಂಗಳೂರಿನ ವಸಂತನಗರ, ಸಿಟಿ ಮಾರ್ಕೆಟ್, ಮೆಜೆಸ್ಟಿಕ್, ಶಾಂತಿನಗರ, ಜಯನಗರ, ಜೆ.ಪಿ. ನಗರ, ಬನಶಂಕರಿ, ಕೋಣನಕುಂಟೆ, ಹೆಬ್ಬಾಳ, ಯಲಹಂಕ, ಸದಾಶಿವನಗರ, ರಾಜಾಜಿನಗರ, ವಿಜಯನಗರ, ಚಂದ್ರಾಲೇಔಟ್, ಇಂದಿರಾನಗರ, ಲಗ್ಗೆರೆ, ನಂದಿನಿ ಲೇಔಟ್, ಮಹಾಲಕ್ಷ್ಮೀ ಲೇಔಟ್, ಸುಬ್ರಮಣ್ಯ ನಗರ, ನಾಗರಬಾವಿ, ಮೂಡಲಪಾಳ್ಯ, ಗಿರಿನಗರ, ಬಸವನಗುಡಿ, ಮಲ್ಲೇಶ್ವರಂ, ಮೆಜೆಸ್ಟಿಕ್, ಶೇಷಾದ್ರಿಪುರಂ ಸೇರಿದಂತೆ ಹಲವೆಡೆ ಮಳೆಯಾಗಿದೆ. ಇತ್ತ ಮುಂಜಾಗ್ರತಾ ಕ್ರಮವಾಗಿ ಕೆ.ಆರ್. ಸರ್ಕಲ್ ಅಂಡರ್ ಪಾಸ್ ಬಂದ್ ಮಾಡಲಾಗಿದೆ. ಮಳೆ ಹಿನ್ನೆಲೆ ನೀರು ಸಂಗ್ರಹಣೆ ಸಾಧ್ಯತೆ ಇರುವ ಕಾರಣ ಮುಂಜಾಗ್ರತ ಕ್ರಮವಾಗಿ ಕೆ.ಆರ್. ಸರ್ಕಲ್ ಅಂಡರ್ ಪಾಸ್ ಬಂದ್ ಮಾಡಲಾಗಿದೆ. ಬ್ಯಾರಿಕೇಡ್ ಹಾಕುವ ಮೂಲಕ ವಾಹನಗಳ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿತ್ತು.

ರಾಜ್ಯಾದ್ಯಂತ ಇನ್ನೂ 5 ದಿನ ಮಳೆ ಸಾಧ್ಯತೆ: ಹವಾಮಾನ ಇಲಾಖೆಯ ಪ್ರಕಾರ, ರಾಜ್ಯದ ಹಲವೆಡೆ ಮುಂದಿನ ದಿನಗಳಲ್ಲಿ ಭಾರಿ ಮಳೆಯ ನಿರೀಕ್ಷೆಯಿದೆ. ಬೆಂಗಳೂರು ಮಾತ್ರವಲ್ಲದೆ ರಾಜ್ಯದ ಹಲವೆಡೆ ಭಾರಿ ಮಳೆಯಾಗುವ ಸಾಧ್ಯತೆ ಇರುವ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಕರಾವಳಿ, ಉತ್ತರ, ದಕ್ಷಿಣ ಒಳನಾಡಿನ ಕೆಲ ಭಾಗಗಳಲ್ಲಿ ಮಳೆಯ ನಿರೀಕ್ಷೆ ಇದ್ದು, ಗಂಟೆಗೆ 40-50 ಕಿ.ಮೀ. ಗಾಳಿ, ಗುಡುಗು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ. ಮುಂದಿನ ಮೂರು ದಿನ ನಗರದಲ್ಲಿ 75ರಿಂದ 115 ಮಿಲಿಮೀಟರ್‌ವರೆಗೆ ಜೋರು ಮಳೆ ಸುರಿಯಬಹುದು. ಮೇ 19, 20ರಂದು ನಗರಕ್ಕೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಮುಂದಿನ 5 ದಿನ ವರುಣ ತಂಪೆರೆಯುವ ಸಾಧ್ಯತೆಗಳು ದಟ್ಟವಾಗಿವೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಆರ್ಭಟಿಸುತ್ತಿರುವ ಪೂರ್ವ ಮುಂಗಾರು ಮಳೆ ರಾಜಧಾನಿಯಲ್ಲಿ ಸಕ್ರಿಯವಾಗಲಿದೆ.

ಎಲ್ಲೆಲ್ಲಿ ಮಳೆ ಅಬ್ಬರ?

ಕೊಪ್ಪಳ, ಧಾರವಾಡ, ಗದಗ, ವಿಜಯನಗರ, ಹಾವೇರಿ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಉಳಿದಂತೆ ವಿಜಯಪುರ, ಯಾದಗಿರಿ, ರಾಯಚೂರು, ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ನೈಸೂರು, ಮಂಡ್ಯ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ ಮತ್ತು ಮೈಸೂರಿನಲ್ಲಿಯೂ ಮಳೆಯ ಮುನ್ಸೂಚನೆ ಇದೆ.

ವಿಪತ್ತು ನಿರ್ವಹಣೆಗಾಗಿ ಸದಾ ಸನ್ನದ್ಧರಾಗಿರಿ

ಬೆಂಗಳೂರು: ಮುಂಗಾರು ಮಳೆ ಆರಂಭವಾಗುತ್ತಿರುವ ಹಿನ್ನೆಲೆ ಜಿಬಿಎ ವ್ಯಾಪ್ತಿಯ ಎಲ್ಲಾ ನಗರ ಪಾಲಿಕೆಗಳು ವಿಪತ್ತು ನಿರ್ವಹಣೆಗೆ ಸಂಪೂರ್ಣ ಸಜ್ಜಾಗಿರಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಬನ್ನೇರುಘಟ್ಟ ರಸ್ತೆ ಮತ್ತು ಜಯನಗರದ ಶಾಲಿನಿ ಮೈದಾನದಲ್ಲಿ ಆಯೋಜಿಸಿದ್ದ ಪರೇಡ್ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಬಳಿಕ ಮಾತನಾಡಿದ ಅವರು, ಮಳೆಗಾಲ ಆರಂಭಕ್ಕೂ ಮುನ್ನ ಎಲ್ಲಾ ವಿಭಾಗಗಳಲ್ಲಿ ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಬೇಕು. ಯಾವುದೇ ಅನಾಹುತ ಸಂಭವಿಸದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಕೈಗೊಳ್ಳಬೇಕು. ಮಳೆಗಾಲದ ವೇಳೆ ಕಾರ್ಯನಿರ್ವಹಿಸುವ ವಿಪತ್ತು ನಿರ್ವಹಣಾ ತಂಡಗಳು, ರಾಜಕಾಲುವೆ ಸ್ವಚ್ಛತಾ ತಂಡಗಳು, ಮರ ಕಟಾವು ಸಿಬ್ಬಂದಿ, ಸಿಲ್ಟ್ ಮತ್ತು ಟ್ರ್ಯಾಕ್ಟರ್ ತಂಡಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು. ನಗರ ಪಾಲಿಕೆಗಳಲ್ಲಿರುವ ಶಾಶ್ವತ ನಿಯಂತ್ರಣ ಕೊಠಡಿಗಳು ಹಾಗೂ ಉಪವಿಭಾಗ ಮಟ್ಟದಲ್ಲಿ ಸ್ಥಾಪಿಸಲಾಗುವ ತಾತ್ಕಾಲಿಕ ನಿಯಂತ್ರಣ ಕೊಠಡಿಗಳು ಸಾರ್ವಜನಿಕರ ದೂರುಗಳಿಗೆ ತ್ವರಿತ ಸ್ಪಂದನೆ ನೀಡಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ರಸ್ತೆ ಬದಿಯ ಶೋಲ್ಡರ್ ಡ್ರೇನ್ ಹಾಗೂ ಗ್ರೇಟಿಂಗ್‌ಗಳ ಬಳಿ ಸಂಗ್ರಹವಾಗಿರುವ ತ್ಯಾಜ್ಯ ತಕ್ಷಣ ತೆರವುಗೊಳಿಸಿ ಸ್ವಚ್ಛತೆ ಕಾಪಾಡುವಂತೆ ಸೂಚಿಸಲಾಯಿತು. ಪಾದಚಾರಿ ಮಾರ್ಗಗಳಲ್ಲಿ ಹಾನಿಗೊಂಡಿರುವ ಸ್ಲ್ಯಾಬ್ ಮತ್ತು ಕರ್ಬ್ ಸ್ಟೋನ್‌ಗಳನ್ನು ತಕ್ಷಣ ದುರಸ್ತಿಪಡಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಬನ್ನೇರುಘಟ್ಟ ರಸ್ತೆ ಐಐಎಂ ಸಮೀಪ ಜಲಮಂಡಳಿ ಕೈಗೊಂಡಿರುವ ಪೈಪ್‌ಲೈನ್ ಕಾಮಗಾರಿ ವಿಳಂಬವಾಗಿರುವುದು ಅಸಮಾಧಾನದ ಸಂಗತಿ. ಕಾಮಗಾರಿ ಪೂರ್ಣಗೊಂಡ ಪ್ರದೇಶಗಳಲ್ಲಿ ಸಮರ್ಪಕ ರಸ್ತೆ ಪುನರ್‌ನಿರ್ಮಾಣವಾಗದ ಕಾರಣ ರಸ್ತೆ ಕುಸಿತ ಉಂಟಾಗಿ ವಾಹನ ಸಂಚಾರಕ್ಕೆ ತೊಂದರೆ ಆಗುತ್ತಿದೆ. ದುರಸ್ತಿಗೊಂಡ ಭಾಗಗಳಲ್ಲಿ ಗುಣಮಟ್ಟ ಕಾಪಾಡಿಕೊಂಡು 10 ದಿನಗಳೊಳಗೆ ರಸ್ತೆ ಪುನರ್‌ನಿರ್ಮಾಣ ಕಾಮಗಾರಿ ಪೂರ್ಣಗೊಳಿಸುವಂತೆ ಜಲಮಂಡಳಿ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪರಿಶೀಲನಾ ಸಂದರ್ಭದಲ್ಲಿ ಶಾಸಕ ಸತೀಶ್ ರೆಡ್ಡಿ ಉಪಸ್ಥಿತರಿದ್ದರು.

ಜಿಬಿಎ ಮುಖ್ಯಆಯುಕ್ತ ಮಹೇಶ್ವರ್ ರಾವ್ ಬನ್ನೇರುಘಟ್ಟ ರಸ್ತೆ ದುರಸ್ತಿಯನ್ನು ಪರಿಶೀಲನೆ ಮಾಡಿದರು. ಈ ವೇಳೆ ಶಾಸಕ ಸತೀಶ್ ರೆಡ್ಡಿ, ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

'ಒಂದು ರಾಷ್ಟ್ರ ಒಂದು ಚುನಾವಣೆ' ಕುರಿತು ಸಂವಾದ ಕಾರ್ಯಕ್ರಮ

ಒಎನ್‌ಒಇಗೆ ಪದ್ಮ ಪುರಸ್ಕೃತರ ಬೆಂಬಲ

ಬೆಂಗಳೂರು: ಒಂದು ದೇಶ-ಒಂದು ಚುನಾವಣೆ ವಿಷಯದಲ್ಲಿ ರಾಜಕೀಯ ಪಕ್ಷಗಳ ಪರ-ವಿರೋಧದ ನಡುವೆ ಕರ್ನಾಟಕ ಪದ್ಮ ಪ್ರಶಸ್ತಿ ಪುರಸ್ಕೃತರು ಬೆಂಬಲ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನಲ್ಲಿ ನಡೆದ 'ಒಂದು ರಾಷ್ಟ್ರ ಒಂದು ಚುನಾವಣೆ' ಕುರಿತಾದ ಸಂವಾದ ಕಾರ್ಯಕ್ರಮದಲ್ಲಿ ರಾಜ್ಯದ ಪದ್ಮಪ್ರಶಸ್ತಿ ಪುರಸ್ಕೃತರು ತಮ್ಮ ಅಭಿಪ್ರಾಯ ಹಂಚಿಕೊಂಡರು. ಈ ವೇಳೆ ಒಂದು ದೇಶ-ಒಂದು ಚುನಾವಣೆಯಿಂದಾಗಿ, ಆರ್ಥಿಕ ಲಾಭದೊಂದಿಗೆ, ಪದೇ ಪದೇ ಚುನಾವಣೆಗಳು ಎದುರಾಗುವುದರಿಂದ ಆಗುವ ಹಲವು ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ. ನೀತಿ ಸಂಹಿತೆಗಳಿಂದ ಯೋಜನೆಗಳಿಗೆ ಆಗಬಹುದಾದ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ ಎಂದು ಅಭಿಪ್ರಾಯಪಟ್ಟರು.

ಬಳಿಕ ಮಾತನಾಡಿದ ಜಂಟಿ ಸದನ ಸಮಿತಿ ಅಧ್ಯಕ್ಷ ಪಿ.ಪಿ.ಚೌಧರಿ, ದೇಶದಲ್ಲಿ ಒಂದು ವರ್ಷಕ್ಕೆ ಐದಾರು ರಾಜ್ಯಗಳಲ್ಲಿ ಚುನಾವಣೆಗಳು ನಡೆಯುತ್ತವೆ. ಇದರಿಂದ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ವಿವಿಧ ವಲಯಗಳ ಜನರ ಮೇಲೆ ಪರಿಣಾಮ ಬೀರುತ್ತಿದೆ. ಒಂದು ರಾಜ್ಯದಲ್ಲಿ ಚುನಾವಣೆ ನಡೆದಾಗ, ಇತರ ರಾಜ್ಯಗಳ ಮೇಲೂ ಅದರ ಪರಿಣಾಮ ಉಂಟಾಗುತ್ತದೆ. ಈ ಹಿನ್ನೆಲೆಯಲ್ಲಿ ಒಂದು ರಾಷ್ಟ್ರ ಒಂದು ಚುನಾವಣೆ ಜಾರಿಯಾದಾಗ, ಶಿಕ್ಷಕರು, ಆರಕ್ಷಕರು, ಇತರ ಚುನಾವಣಾ ಸಿಬ್ಬಂದಿಯ ಹೊರೆ ಕಡಿಮೆಯಾಗುತ್ತದೆ. ಕಾರ್ಮಿಕರು, ವಲಸಿಗರು ಸೇರಿದಂತೆ ದೇಶಾದ್ಯಂತ ಎಲ್ಲರಿಗೂ ಮತದಾನದ ಅವಕಾಶ ದೊರೆಯಬೇಕು ಎನ್ನುವುದು ಈ ಸಮಿತಿಯ ಉದ್ದೇಶ. ಹಾಗಾಗಿ ಚುನಾವಣೆಯನ್ನು ಒಮ್ಮೆ, ಹಲವು ಹಂತಗಳಲ್ಲಿ ನಡೆಸಿದಾಗ ಎಲ್ಲರಿಗೂ ಪ್ರಜಾಪ್ರಭುತ್ವದ ಹಬ್ಬದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಲಿದೆ ಎಂದು ಹೇಳಿದರು.

ಚುನಾವಣೆ ಸುರಕ್ಷಿತವಾಗಿ ನಡೆಯುವುದಕ್ಕೆ ಚುನಾವಣಾ ಆಯೋಗ, ಗೃಹ ಸಚಿವಾಲಯ, ಇವಿಎಂ ಯಂತ್ರಗಳ ಸಿದ್ಧತೆ, ಅಂಚೆ ಮತಗಳು ಹೀಗೆ ವಿವಿಧ ರೀತಿಯ ಸಹಯೋಗ ಅವಶ್ಯಕ. ಸಮಿತಿಯ ಪ್ರಸ್ತಾವನೆಗಳು ಎಲ್ಲರಿಗೂ ತೃಪ್ತಿಕರವಾದಾಗ ಒಂದು ರಾಷ್ಟ್ರ ಒಂದು ಚುನಾವಣೆ ಅನುಷ್ಠಾನವೂ ಸುಲಭವಾಗುತ್ತದೆ. ಇದರಿಂದ ಚುನಾವಣೆಯ ವೆಚ್ಚವನ್ನೂ ದೊಡ್ಡ ಪ್ರಮಾಣದಲ್ಲಿ ತಗ್ಗಿಸಬಹುದು. ಭಾರತ ವಿವಿಧತೆಯಲ್ಲಿ ಏಕತೆ ಹೊಂದಿರುವಂತೆ ರಾಜಕೀಯ ಚಿತ್ರಣವೂ ಸಹ ಹಲವು ವೈವಿಧ್ಯತೆಗಳನ್ನು ಹೊಂದಿದೆ. ವಿವಿಧ ಪ್ರದೇಶಗಳಿಂದ ಪ್ರತಿನಿಧಿಸುವ ಜನಪ್ರತಿನಿಧಿಗಳು ತಮ್ಮ ಸಂಸ್ಕೃತಿ, ಪರಂಪರೆಯನ್ನು ಎತ್ತಿ ಹಿಡಿಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಎಂದು ಹೇಳಿದರು.

ಇದೇ ವೇಳೆ ಪದ್ಮ ಪ್ರಶಸ್ತಿ ಪುರಸ್ಕೃತರು, ಮಾಧ್ಯಮ ಪ್ರತಿನಿಧಿಗಳು ತಮ್ಮ ಅಭಿಪ್ರಾಯ ಮಂಡಿಸಿದರು.

ಬೆಂಗಳೂರಿನಲ್ಲಿ ನಡೆದ 'ಒಂದು ರಾಷ್ಟ್ರ ಒಂದು ಚುನಾವಣೆ' ಕುರಿತಾದ ಸಂವಾದ ಕಾರ್ಯಕ್ರಮದಲ್ಲಿ ರಾಜ್ಯದ ಪದ್ಮಪ್ರಶಸ್ತಿ ಪುರಸ್ಕೃತರು ಭಾಗವಹಿಸಿದ್ದರು.

ಸಮಾಚಾರ ಸಣ್ಣದಲ್ಲ

ಬೆಟ್ಟದ ನೆಲ್ಲಿಕಾಯಿ ನುಂಗಿ 2 ವರ್ಷದ ಮಗು ಸಾವು

ಕೋಲಾರ: ಬೆಟ್ಟದ ನೆಲ್ಲಿಕಾಯಿ ಗಂಟಲಲ್ಲಿ ಸಿಲುಕಿ ಎರಡು ವರ್ಷದ ಮಗು ಸಾವನ್ನಪ್ಪಿರುವ ಘಟನೆ ಕೋಲಾರದಲ್ಲಿ ನಡೆದಿದೆ. ಕೋಲಾರ ಜಿಲ್ಲೆ ಮಾಲೂರು ಪಟ್ಟದ ಗಾಂಧಿ ಸರ್ಕಲ್‌ನಲ್ಲಿ ಈ ಘಟನೆ ನಡೆದಿದ್ದು, ರವಿ ಹಾಗೂ ಮಾಲಾ ದಂಪತಿಯ ಎರಡು ವರ್ಷದ ಗಂಡು ಮಗು ವಿಜಯೇಂದ್ರ ಮೃತಪಟ್ಟಿದ್ದಾನೆ. ಘಟನೆ ನಡೆದ ದಿನ ಆಟವಾಡುವಾಗ ಮಗು ಬೆಟ್ಟದ ನೆಲ್ಲಿಕಾಯಿ ನುಂಗಿದೆ. ಈ ವೇಳೆ ಅದು ಗಂಟಲಲ್ಲಿ ಸಿಲುಕಿಕೊಂಡಿದೆ. ಪರಿಣಾಮ ಉಸಿರಾಟದ ಸಮಸ್ಯೆ ಉಂಟಾಗಿದ್ದು, ಕೂಡಲೇ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಗಂಟಲಲ್ಲಿ ಸಿಲುಕಿದ್ದ ನೆಲ್ಲಿಕಾಯಿ ಹೊರ ತೆಗೆಯಲಾಗದೇ ಮಗು ಸಾವನ್ನಪ್ಪಿದೆ. ಪೋಷಕರ ಆಕ್ರಂದನ ಮುಗಿಲು ಮುಟ್ಟಿದ್ದು, ಮಾಲೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ

2ನೇ ಬಾರಿಗೆ ತನಿಖೆಗೆ ಹಾಜರಾದ ವಚನಶ್ರೀ

ಹರಿಹರ: ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ವೀರಶೈವ ಲಿಂಗಾಯಿತ ಪಂಚಮಸಾಲಿ ಪೀಠದ ಪದಚ್ಯುತ ಪೀಠಾಧ್ಯಕ್ಷ ವಚನಾನಂದ ಸ್ವಾಮೀಜಿ ಅವರು ಸೋಮವಾರ 2ನೇ ಬಾರಿಗೆ ಹರಿಹರ ಗ್ರಾಮಾಂತರ ಠಾಣೆಗೆ ಹಾಜರಾಗಿ ವಿಚಾರಣೆ ಎದುರಿಸಿದರು. ಕಾರಿನಲ್ಲಿ ಪೊಲೀಸ್ ಠಾಣೆಗೆ ಆಗಮಿಸಿದ ಸ್ವಾಮೀಜಿ ಅವರನ್ನು ಬೆಳಗ್ಗೆ 10 ರಿಂದ ಮಧ್ಯಾಹ್ನ 2.15ರವರೆಗೆ ತನಿಖಾಧಿಕಾರಿ ಹರಿಹರ ವೃತ್ತ ನಿರೀಕ್ಷಕ (ಸಿಪಿಐ) ಸುರೇಶ್ ಸಗರಿ ಅವರು ಸತತವಾಗಿ ವಿಚಾರಣೆ ನಡೆಸಿದರು. ವಿಚಾ ರಣೆ ಮುಗಿದ ಬಳಿಕ ಮಾಧ್ಯಮಗಳೊಂದಿಗೆ ಮಾತ ನಾಡಿದ ಶ್ರೀಗಳು, ಪೊಲೀಸರು ನೋಟಿಸ್ ನೀಡಿದ್ದ ರಿಂದ 2ನೇ ಬಾರಿಗೆ ತನಿಖೆಗೆ ಹಾಜರಾಗಿದ್ದೇನೆ. ಪೊಲೀಸರಿಗೆ ನನ್ನ ಕಡೆಯಿಂದ ಸಂಪೂರ್ಣ ಸಹಕಾರ ನೀಡುತ್ತೇನೆ ಎಂದು ತಿಳಿಸಿದರು. ಇದಕ್ಕೂ ಮುನ್ನ ಮೇ 14ರಂದು ಮೊದಲ ಬಾರಿಗೆ ಪೊಲೀಸರು ಶ್ರೀಗಳನ್ನು 5 ಗಂಟೆಗಳ ಕಾಲ ವಿಚಾರಣೆ ನಡೆಸಿ, ಬಳಿಕ ಹರಿಹರ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ್ದರು. ಇದೀಗ 4 ದಿನಗಳ ಅಂತರದಲ್ಲಿ ಶ್ರೀಗಳು ಮತ್ತೆ ವಿಚಾರಣೆ ಎದುರಿಸಿದ್ದಾರೆ.

ಉ.ಪ್ರ. ಅಪಘಾತ: ಎಂಟು ಮಂದಿ ಸಾವು

ಲಖನೌ: ಉತ್ತರ ಪ್ರದೇಶದ ಅಂಬೇಡ್ಕರ್ ನಗರದಲ್ಲಿನ ಅಕಬರ್‌ಪುರ-ಜಲಾಲ್‌ಪುರ ರಸ್ತೆ ಯಲ್ಲಿ ಸೋಮವಾರ ಬೆಳಗ್ಗೆ ಎರಡು ಮೋಟಾರ್ ಬೈಕ್‌ಗಳು ಪರಸ್ಪರ ಡಿಕ್ಕಿಯಾಗಿದ್ದು, ಸಮೀಪದಲ್ಲಿದ್ದ ಜನರೆಲ್ಲಾ ಅಪಘಾತದಲ್ಲಿ ಗಾಯಗೊಂಡವರಿಗೆ ನೆರವಾಗಲು ಗುಂಪುಗೂಡಿದ್ದರು. ಅದೇ ಸಮಯದಲ್ಲಿ ಕಾರೊಂದು ವೇಗವಾಗಿ ಬಂದು ರಸ್ತೆಯಂಚಲ್ಲಿ ನಿಂತಿದ್ದ ಗುಂಪಿನ ಮೇಲೆ ಹರಿದಿದ್ದರಿಂದ 8 ಮಂದಿ ಸಾವಿಗೀಡಾದರು. ಹಲವರು ಗಾಯಗೊಂಡರು.

ಡಾಲರ್ ಎದುರು ಕುಸಿದ ರುಪಾಯಿ

ದೆಹಲಿ: ಜಾಗತಿಕ ಮಾರುಕಟ್ಟೆಯ ಅಸ್ಥಿರತೆ, ವಿದೇಶಿ ಬಂಡವಾಳದ ಹೊರಹರಿವು ಕಾರಣದಿಂದಾಗಿ ಅಮೆರಿಕದ ಡಾಲರ್ ಎದುರು ಭಾರತದ ರುಪಾಯಿ ಮೌಲ್ಯ ದೇಶದ ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಸೋಮವಾರ 96.29 ರು.ಗಳ ಮಟ್ಟಕ್ಕೆ ಕುಸಿಯಿತು. ಇದು ಡಾಲರ್ ಎದುರು ರುಪಾಯಿಯ ಸಾರ್ವಕಾಲಿಕ ಕನಿಷ್ಠ ಮಟ್ಟವಾಗಿದೆ. ಇದರ ಪರಿಣಾಮ ದೇಶದ ಆಮದು ವೆಚ್ಚ ಗಣನೀಯವಾಗಿ ಹೆಚ್ಚಲಿದೆ. ಸೋಮವಾರದ ಆರಂಭಿಕ ವಹಿವಾಟಿನಲ್ಲಿ ಡಾಲರ್ ಎದುರು ರುಪಾಯಿ ಮತ್ತಷ್ಟು ಮೌಲ್ಯ ಕಳೆದುಕೊಂಡಿತು. ದಿನದಲ್ಲಿ 22 ಪೈಸೆಗಳಷ್ಟು ನಷ್ಟವಾಯಿತು. ಅಮೆರಿಕದ ಕೇಂದ್ರೀಯ ಬ್ಯಾಂಕ್ ನೀತಿಗಳು, ಜಾಗತಿಕ ಮಟ್ಟದಲ್ಲಿನ ಡಾಲರ್ ಸೂಚಿಪಟ್ಟಿ ಬಲಗೊಳ್ಳುತ್ತಿರುವುದು ಮತ್ತು ಕಚ್ಚಾ ತೈಲ ದರದಲ್ಲಿ ಏರಿಕೆ ಆಗಿರುವುದೇ ರುಪಾಯಿಯ ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಪ್ರಮುಖ ಕಾರಣಗಳು ಎಂದು ಆರ್ಥಿಕ ತಜ್ಞರು ವಿಶ್ಲೇಷಣೆ ಮಾಡಿದ್ದಾರೆ.

ರಷ್ಯಾ ತೈಲ ಖರೀದಿ ನಿಲ್ಲದು: ಭಾರತ

ಅಮೆರಿಕ ನಿರ್ಬಂಧದ ಬೆದರಿಕೆ ನಡುವೆಯೂ ಭಾರತದ ಖಡಕ್ ನಿಲುವು
ತೈಲ ಖರೀದಿಯಲ್ಲಿ ಆರ್ಥಿಕ ಹಿತಾಸಕ್ತಿಯೇ ಮುಖ್ಯ: ಕೇಂದ್ರ ಸ್ಪಷ್ಟೋಕ್ತಿ

ದೆಹಲಿ: ಅಮೆರಿಕದ ನಿರ್ಬಂಧಗಳು ಇರಲಿ, ಬಿಡಲಿ, ಭಾರತ ಮಾತ್ರ ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದನ್ನು ಮುಂದುವರಿಸಲಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಹೇಳಿದ್ದಾರೆ. ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಸಂಘರ್ಷ ಮತ್ತು ಜಾಗತಿಕವಾಗಿ ಗಗನಕ್ಕೇರುತ್ತಿರುವ ಇಂಧನ ಬೆಲೆಗಳ ನಡುವೆ, ದೇಶದ ಇಂಧನ ಭದ್ರತೆ

ಮತ್ತು ಆರ್ಥಿಕ ಹಿತಾಸಕ್ತಿಯೇ ನಮಗೆ ಮುಖ್ಯ ಎಂದು ಹೇಳಿದ್ದಾರೆ.

ರಷ್ಯಾದ ಕಡಲ ತೈಲದ ಮೇಲೆ ಟ್ರಂಪ್ ಆಡಳಿತ ವಿಧಿಸಿದ್ದ ನಿರ್ಬಂಧಗಳ ವಿನಾಯಿತಿ ಇತ್ತೀಚೆಗೆ ಮುಕ್ತಾಯಗೊಂಡಿತ್ತು. ಇದರ ಬೆನ್ನಲ್ಲೇ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮೂಡಿದ್ದ ಆತಂಕಗಳಿಗೆ ಭಾರತ ಈ ಮೂಲಕ ಉತ್ತರ ನೀಡಿದೆ.

ಆಮದು ತಂತ್ರ ಬದಲಿಲ್ಲ: ಸೋಮವಾರ ಮಾಧ್ಯಮಗಳಿಗೆ ಮಾಹಿತಿ ನೀಡಿದ ಸುಜಾತಾ ಶರ್ಮಾ, ಭಾರತದ ಆಮದು ನೀತಿಯಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಸ್ಪಷ್ಟಪಡಿಸಿದರು. ರಷ್ಯಾ ಮೇಲಿನ ಅಮೆರಿಕದ ವಿನಾಯಿತಿ ಬಗ್ಗೆ ಹೇಳುವುದಾದರೆ, ನಾವು ಹಿಂದೆಯೂ ರಷ್ಯಾದಿಂದ ತೈಲ ಖರೀದಿ ಮಾಡುತ್ತಿದ್ದೆವು. ಅಂದರೆ, ವಿನಾಯಿತಿ ಸಿಗುವ ಮುಂಚೆಯೂ, ವಿನಾಯಿತಿ ಇದ್ದಾಗಲೂ ಮತ್ತು ಈಗಲೂ ಖರೀದಿ ಮುಂದುವರಿಸಿದ್ದೇವೆ ಎಂದು ಅವರು ಹೇಳಿದರು.

ಭಾರತದ ಕಚ್ಚಾ ತೈಲ ಆಮದು ಸಂಪೂರ್ಣವಾಗಿ ಮಾರುಕಟ್ಟೆಯ ಸ್ಥಿತಿಗತಿ ಮತ್ತು ಪೂರೈಕೆ ಜಾಲವನ್ನು ಅವಲಂಬಿಸಿದೆ ಎಂದು ಶರ್ಮಾ ತಿಳಿಸಿದರು. ಯಾವುದೇ ದೇಶದಿಂದ ತೈಲ ಖರೀದಿಸಲು ನಮಗೆ 'ವಾಣಿಜ್ಯ ಜ್ಞಾನ' ಇರಬೇಕು, ಅಂದರೆ ಲಾಭ ಆಗಬೇಕು. ಅಮೆರಿಕದ ವಿನಾಯಿತಿ ಮುಗಿದಿರುವುದರಿಂದ ನಮ್ಮ ಖರೀದಿ ಮೇಲೆ ಯಾವುದೇ ಪರಿಣಾಮ ಆಗಲ್ಲ, ಎಂದು ಅವರು ವಿವರಿಸಿದರು.

ಇದೇ ವೇಳೆ, ದೇಶದಲ್ಲಿ ಇಂಧನ ಲಭ್ಯತೆ ಬಗ್ಗೆ ಯಾವುದೇ ಆತಂಕ ಬೇಡ ಎಂದು ಅವರು ಭರವಸೆ ನೀಡಿದರು. ಕಚ್ಚಾ ತೈಲದ ಯಾವುದೇ ಕೊರತೆ ಇಲ್ಲ. ಸಾಕಷ್ಟು ಪ್ರಮಾಣದಲ್ಲಿ ತೈಲ ಲಭ್ಯವಿದೆ. ಈ ವಿನಾಯಿತಿ ಇರಲಿ, ಬಿಡಲಿ, ಇದರಿಂದ ಏನೂ ವ್ಯತ್ಯಾಸ ಆಗಲ್ಲ ಎಂದು ಶರ್ಮಾ ಭರವಸೆ ನೀಡಿದರು.

ಪ್ರಾದೇಶಿಕ ಸಂಘರ್ಷ: ಕಚ್ಚಾ ತೈಲ ಬೆಲೆ ಇನ್ನಷ್ಟು ಏರಿಕೆ

ಪೆಟ್ರೋಲಿಯಂ ಸಚಿವಾಲಯ ಈ ಖಡಕ್ ನಿಲುವು ಪ್ರಕಟಿಸಿರುವ ಹೊತ್ತಲ್ಲೇ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಗಗನಕ್ಕೇರಿದೆ. ಪ್ರಾದೇಶಿಕ ಸಂಘರ್ಷ ಮತ್ತು ಹೊರ್ಮುಜ್ ಜಲಸಂಧಿಯ ಸುತ್ತಮುತ್ತ ಪೂರೈಕೆಯಲ್ಲಿ ವ್ಯತ್ಯಯವಾಗಬಹುದೆಂಬ ಆತಂಕ ಇದಕ್ಕೆ ಕಾರಣ. ಅಂತಾರಾಷ್ಟ್ರೀಯ ಬ್ರೆಂಟ್ ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ 0.93%ರಷ್ಟು ಏರಿಕೆಯಾಗಿ 110.28 ಡಾಲರ್‌ಗೆ ತಲುಪಿದೆ. ಹಾಗೆಯೇ ಅಮೆರಿಕದ ಕಚ್ಚಾ ತೈಲದ ಬೆಲೆ 0.85%ರಷ್ಟು ಹೆಚ್ಚಾಗಿ 106.32 ಡಾಲರ್ ಆಗಿದೆ. ಪಶ್ಚಿಮ ಏಷ್ಯಾ ಬಿಕ್ಕಟ್ಟಿನಿಂದಾಗಿ ಜಾಗತಿಕ ಇಂಧನ ವಿತರಣಾ ಜಾಲಕ್ಕೆ ಅಡ್ಡಿಯಾಗಬಹುದೆಂಬ ಭಯದಿಂದ ಇಂಧನ ಮಾರುಕಟ್ಟೆಗಳು ಅಸ್ಥಿರವಾಗಿವೆ. ಕಳೆದ ಕೆಲವು ವರ್ಷಗಳಿಂದ, ರಷ್ಯಾದ ಕಚ್ಚಾ ತೈಲವು ಭಾರತದ ಪ್ರಮುಖ ಆಮದುಗಳಲ್ಲಿ ಒಂದಾಗಿದೆ. ಯಾಕೆಂದರೆ, ಬೇರೆ ದೇಶಗಳಿಗೆ ಹೋಲಿಸಿದರೆ ರಷ್ಯಾದಿಂದ ರಿಯಾಯಿತಿ ದರದಲ್ಲಿ ತೈಲ ಸಿಗುತ್ತಿದೆ. ಈಗ ಪೆಟ್ರೋಲಿಯಂ ಸಚಿವಾಲಯದ ಹೇಳಿಕೆ ಪ್ರಕಾರ, ವಾಣಿಜ್ಯಕವಾಗಿ ಲಾಭದಾಯಕ ಮತ್ತು ಸುಲಭವಾಗಿ ಲಭ್ಯವಿದ್ದಲ್ಲಿ, ಪಾಶ್ಚಿಮಾತ್ಯ ನಿಯಮಗಳ ಬದಲಾವಣೆಯ ಹೊರತಾಗಿಯೂ ಭಾರತ ರಷ್ಯಾದಿಂದ ತೈಲ ಆಮದು ಮುಂದುವರಿಸಲಿದೆ.

ಮತ್ತೊಬ್ಬ ಆಪ್ ನಾಯಕ ಬಂಧನ

ದೆಹಲಿ: ಬ್ಯಾಂಕ್ ಸಾಲ ವಂಚನೆ ಮತ್ತು ಹಣ ವರ್ಗಾವಣೆ ಪ್ರಕರಣದಲ್ಲಿ ಆಮ್ ಆದ್ಮಿ ಪಕ್ಷದ ದೆಹಲಿ ನಾಯಕ, ಉದ್ಯಮಿ ದೀಪಕ್ ಸಿಂಗ್ಲಾರನ್ನು ಜಾರಿ ನಿರ್ದೇಶನಾಲಯ (ಇಡಿ) ಬಂಧಿಸಿದೆ. ದೆಹಲಿ ಮತ್ತು

ಬ್ಯಾಂಕ್‌ಗೆ 150 ಕೋಟಿ ರುಪಾಯಿ ವಂಚನೆ ಆರೋಪ, ಸಿಂಗ್ಲಾರನ್ನು ಬಂಧಿಸಿದ ಇಡಿ

ಆಪ್ ಸಂಘಟನಾ ರಚನೆ ಮಾಹಿತಿ ವಶಪಡಿಸಿಕೊಳ್ಳಲು ಬಿಜೆಪಿ ಯತ್ನ: ಆಪ್ ವ್ಯಂಗ್ಯ

ಗೋವಾದಲ್ಲಿ ಇಡಿ ದೀಪಕ್ ಸಿಂಗ್ಲಾ ಮತ್ತು ಇತರರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ತೀವ್ರ ಶೋಧ ನಡೆಸಿತು. 150 ಕೋಟಿ ರು.ಗಳನ್ನು ಅಕ್ರಮ ಸಾಗಣೆ ನಡೆಸಿ, ಬ್ಯಾಂಕ್‌ಗಳಿಗೆ ವಂಚನೆ ನಡೆಸಿದ್ದಾರೆಂಬ ಆರೋಪ ಅವರ ಮೇಲಿದೆ. ದೀಪ್ ಬಂಧನವನ್ನು ಆಮ್ ಆದ್ಮಿ ಪಕ್ಷದ ನಾಯಕಿ, ದೆಹಲಿ ಮಾಜಿ ಮುಖ್ಯಮಂತ್ರಿ ಆತಿಷಿ ಕಟುಶಬ್ದಗಳಲ್ಲಿ ಖಂಡಿಸಿದ್ದಾರೆ.

ದೀಪಕ್ ಸಿಂಗ್ಲಾ ಆಪ್‌ನ ಗೋವಾದ ಸಹ ಉಸ್ತುವಾರಿಯೂ ಆಗಿದ್ದರು. ಇತ್ತೀಚೆಗೆ ಗೋವಾದಲ್ಲಿ ಆಪ್ ಬೆಳವಣಿಗೆ ಕಂಡಿದೆ. ಇದನ್ನು ಸಹಿಸದೇ ದೀಪಕ್‌ರನ್ನು ಬಂಧಿಸಲಾಗಿದೆ ಎನ್ನುವುದು ಆತಿಷಿ ಆರೋಪ. ಈ ಬಗ್ಗೆ ಟ್ವೀಟ್ ಮಾಡಿರುವ ಅವರು, 'ಆಮ್ ಆದ್ಮಿ ಪಕ್ಷ ಗೋವಾದಲ್ಲಿ ಬೆಳೆಯುತ್ತಿದೆ. ಆದ್ದರಿಂದ ಬಿಜೆಪಿಯ ನಿಷ್ಠಾವಂತ ಯೋಧ ಇಡಿಯನ್ನು ಗೋವಾಕ್ಕೂ ಕಳುಹಿಸಲಾಗಿದೆ. ಸೋಮವಾರ ಬೆಳಗ್ಗೆ ದೀಪಕ್ ಸಿಂಗ್ಲಾ ಅವರ ದೆಹಲಿ, ಗೋವಾದ ನಿವಾಸಗಳ ಮೇಲೆ ದಾಳಿ ನಡೆಸಲಾಗಿದೆ. ಇದು ಬರೀ ಸ್ವಯಂಸೇವಕರನ್ನು ಹೆದರಿಸುವ ಯತ್ನವಲ್ಲ, ನಮ್ಮ ಇಡೀ ಸಂಘಟನೆಯ ಮಾಹಿತಿಯನ್ನು ವಶಪಡಿಸಿಕೊಳ್ಳುವ ಯತ್ನ' ಎಂದಿದ್ದಾರೆ. ಸಿಂಗ್ಲಾ ದೆಹಲಿಯ ವಿಶ್ವಾಸ್ ನಗರ ವಿಧಾನಸಭಾ ಸ್ಥಾನದಿಂದ ಆಮ್ ಆದ್ಮಿ ಪಕ್ಷದ (ಎಎಪಿ) ಅಭ್ಯರ್ಥಿಯಾಗಿದ್ದರು. ತನಿಖೆಯ ಭಾಗವಾಗಿ 2024ರಲ್ಲಿಯೂ ಅವರ ಮೇಲೆ ಇಡಿ ದಾಳಿ ನಡೆಸಲಾಗಿತ್ತು. ದೆಹಲಿಯ ಸುಭಾಷ್ ನಗರದ ಬಾಬಾಜಿ ಫೈನಾನ್ಸ್ ಗ್ರೂಪ್‌ನ ರಾಮ್ ಸಿಂಗ್ ಎಂದು ಗುರುತಿಸಲಾದ ವ್ಯಕ್ತಿಯ ನಿವಾಸದ ಮೇಲೆ ತನಿಖೆಯ ಭಾಗವಾಗಿ ದಾಳಿ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಹಾರದ ಸಸಾರಾಮ್ ರೈಲು ನಿಲ್ದಾಣದಲ್ಲಿ ನಿಲುಗಡೆಯಾಗಿದ್ದ ಪ್ಯಾಸೆಂಜರ್ ರೈಲಿನ ಬೋಗಿಯೊಂದು ಸೋಮವಾರ ಹೊತ್ತಿ ಉರಿದು ಪೂರ್ಣ ಸುಟ್ಟುಹೋಗಿದೆ. ಪ್ರಯಾಣಿಕರು ಒಳಗೆ ಇಲ್ಲದ ಕಾರಣ ಯಾವುದೇ ಸಾವು-ನೋವು ಉಂಟಾಗಿಲ್ಲ. ಅಗ್ನಿ ಅವಘಡಕ್ಕೆ ಶಾರ್ಟ್ ಸರ್ಕಿಟ್ ಕಾರಣವೆಂದು ಶಂಕಿಸಲಾಗಿದ್ದು ತನಿಖೆ ನಡೆಸಲಾಗುತ್ತಿದೆ.

ಆಟೋ ರಫ್ತು ಪ್ರಮಾಣ ಶೇ.38ರಷ್ಟು ಏರಿಕೆ

ಉದಯೋನ್ಮುಖ ಮಾರುಕಟ್ಟೆಗಳಲ್ಲಿ ಭಾರತೀಯ ಕಂಪನಿಗಳಿಗೆ ಅಗ್ರ ಸ್ಥಾನ

ದೆಹಲಿ: ಏಪ್ರಿಲ್ ತಿಂಗಳಲ್ಲಿ ವಾಹನ ರಫ್ತುಗಳಲ್ಲಿ ಶೇ.38ರಷ್ಟು ತೀವ್ರ ಏರಿಕೆ ಕಂಡುಬಂದಿರುವುದು, ದೇಶೀಯ ಬೇಡಿಕೆ ವಿವಿಧ ವಿಭಾಗಗಳಲ್ಲಿ ಅಸ್ಥಿರವಾಗಿರುವ ಈ ಸಂದರ್ಭದಲ್ಲಿ ಭಾರತೀಯ ವಾಹನ ತಯಾರಕರು ವಿದೇಶಿ ಮಾರುಕಟ್ಟೆಗಳನ್ನು ಪ್ರಮುಖ ಬೆಳವಣಿಗೆಯ ಆಧಾರವಾಗಿ ಬಳಸುತ್ತಿದ್ದಾರೆ ಎಂದು ಸೂಚಿಸುತ್ತದೆ. ಜಾಗತಿಕ ವ್ಯಾಪಾರವು ಸುಂಕಗಳ ಒತ್ತಡ, ಕುಂಠಿತ ಬಳಕೆ ಹಾಗೂ ಭೌಗೋಳಿಕ ರಾಜಕೀಯ ಅನಿಶ್ಚಿತತೆಗಳಿಂದ ಆವರಿಸಲ್ಪಟ್ಟಿದ್ದರೂ, ಭಾರತದ ಆಟೋ ರಫ್ತುಗಾರರು ಅಪರೂಪದ ಸ್ಥೈರ್ಯವನ್ನು ಕಂಡುಕೊಂಡಿದ್ದಾರೆ.

ಈ ಪ್ರವೃತ್ತಿಯ ಮಹತ್ವವನ್ನು ಹೆಚ್ಚಿಸುವುದು ಅದರ ವ್ಯಾಪಕತೆ. ಪ್ರಯಾಣಿಕ ವಾಹನಗಳು, ಮೋಟಾರ್‌ಸೈಕಲ್‌ಗಳು, ಸ್ಕೂಟರ್‌ಗಳು ಮತ್ತು ತ್ರಿಚಕ್ರ ವಾಹನಗಳಲ್ಲಿ ಸಹ ಬೆಳವಣಿಗೆ ಕಂಡುಬಂದಿದೆ. ಇದು ಬೆಳವಣಿಗೆ ಒಂದೇ ವಿಭಾಗಕ್ಕೆ ಅಥವಾ ಮಾರುಕಟ್ಟೆಗೆ ಸೀಮಿತವಾಗಿಲ್ಲ ಎಂದು ಸೂಚಿಸುತ್ತದೆ.

ಉದ್ಯಮದ ಅಧಿಕಾರಿಗಳು ಹೇಳುವಂತೆ, ಸ್ಥಿರಗೊಂಡ ಸರಬರಾಜು ಸರಪಳಿಗಳು, ಸ್ಪರ್ಧಾತ್ಮಕ ಬೆಲೆಗಳು ಮತ್ತು ಆಫ್ರಿಕಾ, ಲ್ಯಾಟಿನ್ ಅಮೆರಿಕ ಹಾಗೂ ಏಷ್ಯಾದ ಕೆಲವು ಭಾಗಗಳಲ್ಲಿ ಇಂಧನ-ಕ್ಷಮ ವಾಹನಗಳ ಹೆಚ್ಚುತ್ತಿರುವ ಬೇಡಿಕೆ ಭಾರತೀಯ ಕಂಪನಿಗಳಿಗೆ ಲಾಭವಾಗುತ್ತಿದೆ. ದ್ವಿಚಕ್ರ ವಾಹನಗಳು ಅತ್ಯುತ್ತಮ ಪ್ರದರ್ಶನ ನೀಡಿವೆ. ಮೋಟಾರ್‌ಸೈಕಲ್ ರಫ್ತುಗಳು ವರ್ಷದಿಂದ ವರ್ಷಕ್ಕೆ ಶೇ.36ಕ್ಕಿಂತ ಹೆಚ್ಚು ಏರಿಕೆ ಕಂಡು 4.26 ಲಕ್ಷ ಯುನಿಟ್‌ಗಳನ್ನು ದಾಟಿವೆ. ಇದು ಹೀರೋ ಮೋಟೋಕಾರ್ಪ್, ಬಜಾಜ್ ಆಟೋ ಮತ್ತು ಟಿವಿಎಸ್ ಮೋಟರ್ ಕಂಪನಿಗಳು ವಿಶೇಷವಾಗಿ ಕಡಿಮೆ ವೆಚ್ಚ ಮತ್ತು ಇಂಧನ ದಕ್ಷತೆ ಮುಖ್ಯವಾದ ಮಾರುಕಟ್ಟೆಗಳಲ್ಲಿ ಜಾಗತಿಕ ವ್ಯಾಪ್ತಿಯನ್ನು ತೋರಿಸುತ್ತದೆ.

- **ಹ್ಯುಂಡೈ ಮೋಟರ್ ಇಂಡಿಯಾ:** 150 ದೇಶಗಳಿಗೆ 3.9 ಮಿಲಿಯನ್ ವಾಹನಗಳನ್ನು ರಫ್ತು.
- **ಮಾರುತಿ ಸುಜುಕಿ ಇಂಡಿಯಾ:** ರಫ್ತುಗಳು ಏಪ್ರಿಲ್‌ನಲ್ಲಿ ಶೇ.43 ಏರಿಕೆ ಕಂಡು 39,638 ಯುನಿಟ್ ತಲುಪಿವೆ.
- ಬಜಾಜ್ ಆಟೋ, ಅತಿ ದೊಡ್ಡ ದ್ವಿಚಕ್ರ ರಫ್ತುಗಾರ ಏಪ್ರಿಲ್‌ನಲ್ಲಿ 2,29,890 ಯುನಿಟ್‌ಗಳನ್ನು ರಫ್ತು ಮಾಡಿದ್ದು, ಇದು ಶೇ.78ರಷ್ಟು ಏರಿಕೆಯಾಗಿದೆ.
- ಟಿವಿಎಸ್ ಕಂಪನಿಯ ರಫ್ತುಗಳು ಏಪ್ರಿಲ್‌ನಲ್ಲಿ 1,06,788 ಯುನಿಟ್‌ಗಳಾಗಿದ್ದು, ಹಿಂದಿನ ವರ್ಷಕ್ಕೆ ಸಮಾನವಾಗಿದೆ.
- ಹೀರೋ ಮೋಟೋಕಾರ್ಪ್, ರಫ್ತು ಕ್ಷೇತ್ರದಲ್ಲಿ ತಡವಾಗಿ ಪ್ರವೇಶಿಸಿದರೂ, ಕಳೆದ ಎರಡು ವರ್ಷಗಳಲ್ಲಿ ಕ್ರಮವಾಗಿ ಶೇ.41ರಷ್ಟು ಮತ್ತು ಶೇ.40ರಷ್ಟು ಬೆಳವಣಿಗೆ ಸಾಧಿಸಿದೆ.

2030ರೊಳಗೆ ರಫ್ತುಗಳ ಪಾಲನ್ನು ಶೇ.30ಕ್ಕೆ ಏರಿಸುವ ಗುರಿ. ಪ್ರಸ್ತುತ ಮ್ಯಾಕ್ರೋ ಪರಿಸ್ಥಿತಿ ಅನಿಶ್ಚಿತವಾಗಿದ್ದರೂ, ನಮ್ಮ ಉತ್ಪನ್ನಗಳಿಗೆ ಪ್ರಮುಖ ಮಾರುಕಟ್ಟೆಗಳಲ್ಲಿ ಬೇಡಿಕೆ ಮುಂದುವರಿದಿದೆ.

– ತರುಣ್ ಗರ್ಗ್ ಹ್ಯುಂಡೈ ಮೋಟರ್ ಇಂಡಿಯಾ ಸಿಇಒ

ಭಾರತದ ರಫ್ತುಗಳಿಗೆ ಭಾರೀ ಉತ್ತೇಜನ: ಶೇ.13.59 ಏರಿಕೆ

ವಾಣಿಜ್ಯ ಹಿನ್ನಡೆ ಇಳಿಕೆ; ಪೆಟ್ರೋಲಿಯಂ, ಎಲೆಕ್ಟ್ರಾನಿಕ್ಸ್ ಕ್ಷೇತ್ರಗಳಿಂದ ಬಲವಾದ ಬೆಳವಣಿಗೆ

ದೆಹಲಿ: ಏಪ್ರಿಲ್ 2026ರಲ್ಲಿ ಭಾರತದ ಒಟ್ಟು ರಫ್ತುಗಳು (ವಸ್ತುಗಳು ಮತ್ತು ಸೇವೆಗಳು ಸೇರಿ) 80.80 ಶತಕೋಟಿ ಡಾಲರ್ (ರು. 7.49 ಲಕ್ಷ ಕೋಟಿ) ತಲುಪಿದ್ದು, ಕಳೆದ ವರ್ಷದ ಇದೇ ಅವಧಿಯ 71.13 ಶತಕೋಟಿ ಡಾಲರ್ (ರು. 6.15 ಲಕ್ಷ ಕೋಟಿ) ಹೋಲಿಸಿದರೆ ಶೇ.13.59ರಷ್ಟು ಏರಿಕೆಯನ್ನು ದಾಖಲಿಸಿವೆ.

ಸರಕು ರಫ್ತುಗಳು ರು. 4.03 ಲಕ್ಷ ಕೋಟಿ ಆಗಿದ್ದು, ಶೇ.13.78ರಷ್ಟು ವೃದ್ಧಿ ಕಂಡಿವೆ. ಸೇವಾ ರಫ್ತುಗಳು ರು. 3.45 ಲಕ್ಷ ಕೋಟಿ ಆಗಿ ಹೆಚ್ಚಳಗೊಂಡಿವೆ.

ಇನ್ನೊಂದೆಡೆ, ಒಟ್ಟು ಆಮದುಗಳು ರು. 8.21 ಲಕ್ಷ ಕೋಟಿ ಆಗಿದ್ದು, ಕಳೆದ ವರ್ಷದ ರು. 7.11 ಲಕ್ಷ ಕೋಟಿಗಿಂತ ಹೆಚ್ಚಾಗಿದೆ. ಆದಾಗ್ಯೂ, ವಾಣಿಜ್ಯ ಹಿನ್ನಡೆ ರು. 72,336.22 ಕೋಟಿಗೆ ಇಳಿಕೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಇದು ರು. 96,499.02 ಕೋಟಿಯಾಗಿತ್ತು.

ಜತೆಗೆ ಸಮುದ್ರ ಆಹಾರಗಳು, ಕಬ್ಬಿಣದ ಅದಿರು, ಕಾಫಿ, ರಾಸಾಯನಿಕಗಳು ಮತ್ತು ಕರಕುಶಲ ವಸ್ತುಗಳಲ್ಲಿಯೂ ಧನಾತ್ಮಕ ಬೆಳವಣಿಗೆ ಕಂಡುಬಂದಿದ್ದು, ಭಾರತದ ಬಾಹ್ಯ ವ್ಯಾಪಾರ ಕ್ಷೇತ್ರದ ಶಕ್ತಿಯನ್ನು ಮತ್ತೊಮ್ಮೆ ತೋರಿಸಿದೆ.

ವಸ್ತುಗಳು	ಏರಿಕೆ
1. ಸರಕು ರಫ್ತುಗಳು	ಶೇ.13.78
2. ಪೆಟ್ರೋಲಿಯಂ ಉತ್ಪನ್ನಗಳು	ಶೇ.9.01
3. ಎಲೆಕ್ಟ್ರಾನಿಕ್ ವಸ್ತುಗಳು	ಶೇ.40.31
4. ಎಂಜಿನಿಯರಿಂಗ್ ವಸ್ತುಗಳು	ಶೇ.8.76
5. ಮಾಂಸ, ಹಾಲು ಮತ್ತು ಕೋಳಿ ಉತ್ಪನ್ನಗಳು	ಶೇ.48.03
6. ಔಷಧಿ ಮತ್ತು ಫಾರ್ಮಾಸ್ಯೂಟಿಕಲ್	ಶೇ.7.12

ಮುಂಬೈ: ಅಪಘಾತಕ್ಕೆ 12 ಬಲಿ

ಮುಂಬೈ: ಮದುವೆಯ ಅತಿಥಿಗಳನ್ನು ಕರೆದುಕೊಂಡು ಹೋಗುತ್ತಿದ್ದ ಟ್ರಕ್‌ಗೆ ಕಂಟೇನರ್ ಡಿಕ್ಕಿ ಹೊಡೆದ ಪರಿಣಾಮ 12 ಮಂದಿ ದುರ್ಮರಣಕ್ಕೀಡಾದ ಘಟನೆ ಮಹಾರಾಷ್ಟ್ರದ ಪಾಲ್ಘರ್‌ನಲ್ಲಿ ಸಂಭವಿಸಿದೆ. ಸೋಮವಾರ ಮುಂಬೈ-ಅಹಮದಾಬಾದ್ ಹೆದ್ದಾರಿಯಲ್ಲಿ ಈ ಘಟನೆ ನಡೆದಿದೆ. 40ಕ್ಕೂ ಹೆಚ್ಚು ಅತಿಥಿಗಳು ಸಣ್ಣ ಟ್ರಕ್‌ನಲ್ಲಿ ಪ್ರಯಾಣಿಸುತ್ತಿದ್ದರು. ಬೆಳಗಿನ ಜಾವ 4 ಗಂಟೆ ಸುಮಾರಿಗೆ, ಕಂಟೇನರ್-ಟ್ರಕ್ ನಡುವೆ ಭೀಕರ ಅಪಘಾತ ಸಂಭವಿಸಿದೆ. ಅಪಘಾತದಲ್ಲಿ ಮದುವೆಗೆ ಹೋಗುತ್ತಿದ್ದ ಟ್ರಕ್ ನಜ್ಜುಗುಜ್ಜಾಗಿದೆ. ಎರಡೂ ವಾಹನಗಳು ಪಲ್ಟಿಯಾಗಿದ್ದರಿಂದ ಅನೇಕ ಪ್ರಯಾಣಿಕರು ಅವಶೇಷಗಳೊಳಗೆ ಸಿಲುಕಿಕೊಂಡರು. ಘಟನೆಯ ನಂತರ, ಸ್ಥಳೀಯ ನಿವಾಸಿಗಳು, ಪೊಲೀಸರು ಮತ್ತು ರಕ್ಷಣಾ ತಂಡಗಳು ಸ್ಥಳಕ್ಕೆ ಧಾವಿಸಿವೆ.

ಆಫ್ರಿಕಾದಲ್ಲಿ ಹೆಚ್ಚಿದ ಎಬೋಲಾ: ಜಾಗತಿಕ ತುರ್ತು ಸ್ಥಿತಿ ಘೋಷಣೆ

ಅಬುಜಾ (ನೈಜೀರಿಯಾ): ಆಫ್ರಿಕಾದ ಕಾಂಗೋ ಮತ್ತು ನೆರೆಯ ಉಗಾಂಡ ದೇಶದಲ್ಲಿ ಎಬೋಲಾ ರೋಗ ಉಲ್ಬಣಿಸಿರುವ ಹಿನ್ನೆಲೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಜಾಗತಿಕ ಆರೋಗ್ಯ ತುರ್ತು ಪರಿಸ್ಥಿತಿಯನ್ನು ಘೋಷಿಸಿದೆ. ಈ 2 ದೇಶಗಳಲ್ಲಿ 300ಕ್ಕೂ ಅಧಿಕ ಅನುಮಾನಾಸ್ಪದ ಪ್ರಕರಣಗಳು ಪತ್ತೆಯಾಗಿದ್ದು 88 ಮಂದಿ ಸಾವನ್ನಪ್ಪಿದ್ದಾರೆ. ಆದರೆ, ಕೋವಿಡ್ ಸಾಂಕ್ರಾಮಿಕದಂತಹ ಪರಿಸ್ಥಿತಿ ನಿರ್ಮಾಣವಾಗಿಲ್ಲ ಎಂದು ತಿಳಿಸಿದೆ. ಜತೆಗೆ ಅಂತಾರಾಷ್ಟ್ರೀಯ ಗಡಿಗಳನ್ನು ಮುಚ್ಚಬೇಕಾಗಿಲ್ಲ ಎಂದು ತಿಳಿಸಿದೆ. ಈ ಹರಡಿರುವ ಎಬೋಲಾ ಅಪರೂಪದ, ಚಿಕಿತ್ಸೆ ನೀಡಲು ಕಷ್ಟಕರವಾದ ರೂಪಾಂತರವಾಗಿದೆ.

ತೈವಾನ್ ಭೂಕಂಪ: ಇಬ್ಬರು ಬಲಿ, 7000 ಜನ ಸ್ಥಳಾಂತರ

ಲಿಯುರುಝೌ ನಗರದಲ್ಲಿ ಭೂಕಂಪದಿಂದಾಗಿ ಕಟ್ಟಡ ಧರೆಗುರುಳಿದೆ.

ಗುವಾಂಗ್‌ಕ್ಸಿ: ತೈವಾನ್‌ನ ಗುವಾಂಗ್‌ಕ್ಸಿ ಪ್ರದೇಶದಲ್ಲಿ ಸೋಮವಾರ ಮುಂಜಾನೆ ರಿಕ್ಟರ್ ಮಾಪಕದಲ್ಲಿ 5.2ರಷ್ಟು ತೀವ್ರತೆಯ ಭೂಕಂಪವಾಗಿದೆ. ಇಬ್ಬರು ಸಾವಿಗೀಡಾಗಿ, ಒಬ್ಬರು ಕಾಣೆಯಾಗಿದ್ದಾರೆ. ಹಲವರು ಗಾಯಗೊಂಡಿದ್ದಾರೆ. ನಾಲ್ವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಭೂಕಂಪದ ತೀವ್ರತೆಗೆ ವಾಸದ ಮನೆಗಳು ಸೇರಿದಂತೆ ಒಟ್ಟ 13 ಕಟ್ಟಡಗಳು ಕುಸಿದಿವೆ. ಕುಸಿದ ಕಟ್ಟಡಗಳಡಿ ಸಿಲುಕಿ ಕೊಂಡಿದ್ದ 91 ವರ್ಷದ ವೃದ್ಧರೊಬ್ಬರನ್ನು ರಕ್ಷಿಸಲಾಗಿದೆ. ಹಿರಿಯ ಜೀವ ಸಣ್ಣ ಗಾಯವೂ ಇಲ್ಲದೇ ಜೀವಂತ ಪಾರಾಗಿದ್ದಾರೆ.

ಲಿಯುರುಝೌ, ನಾನಿಂಗ್ ಮತ್ತು ಗುಯಿಲಿನ್, ಗುವಾಂಗ್‌ಕ್ಸಿ ನಗರಗಳಲ್ಲಿ ಭೂಕಂಪದ ಅನುಭವವಾಗಿದೆ,

ಸೋಮವಾರ ರಾತ್ರಿ 12.21ರ ಮುಂಜಾನೆ ಲಿಯುನಾನ್ ಜಿಲ್ಲೆಯಲ್ಲಿ ಭೂಕಂಪವಾಗಿದೆ. ಕಂಪನದ ಕೇಂದ್ರಬಿಂದು ತೈಯಾಂಗ್‌ಚುನ್ ಪಟ್ಟಣದ ಬಳಿ 8 ಕಿ.ಮೀ. ಭೂಮಿಯಾಳದಲ್ಲಿ ಇತ್ತು ಎಂದು ವರದಿಯಾಗಿದೆ. ಕಂಪನ ಬಹಳ ಬಲವಾಗಿದ್ದವು ಎಂದು ಮಾಧ್ಯಮಗಳು ವರದಿ ಮಾಡಿದೆ.

ಮುನ್ನೆಚ್ಚರಿಕೆ ಕ್ರಮವಾಗಿ 7,000ಕ್ಕೂ ಹೆಚ್ಚು ಜನರನ್ನು ಸ್ಥಳಾಂತರಿಸಲಾಗಿದೆ. ಪರಿಹಾರ ಮತ್ತು ರಕ್ಷಣಾ ತಂಡಗಳು ಪೀಡಿತ ಪ್ರದೇಶಗಳಲ್ಲಿ ಕಾರ್ಯಾಚರಣೆಯನ್ನು ಮುಂದುವರೆಸಿವೆ. ತೈವಾನ್‌ನ ನೆರೆಹೊರೆಯ ಚೀನಾ, ಜಪಾನ್, ಫಿಲಿಪ್ಪೀನ್ಸ್ ದೇಶಗಳಲ್ಲಿಯೂ ಭೂಕಂಪನದ ಅನುಭವವಾಗಿದೆ.

ವಿಶ್ವದಲ್ಲಿ ಮತ್ತೆ ಬಡತನ ಭೀತಿ: ಪ್ರಧಾನಿ ಮೋದಿ

ವಿಶ್ವ ಸಮುದಾಯಕ್ಕೆ ಗಂಭೀರ ಎಚ್ಚರಿಕೆ
ಕರೋನಾ, ಯುದ್ಧ, ಇಂಧನ ಬಿಕ್ಕಟ್ಟು ಉಲ್ಲೇಖ

ದೆಹಲಿ: ವಿಶ್ವವನ್ನು ಕೆಲ ವರ್ಷಗಳಿಂದ ಸರಣಿ ಬಿಕ್ಕಟ್ಟುಗಳು ಕಾಡುತ್ತಿವೆ. ಇವುಗಳಿಂದ ಪಾಠ ಕಲಿಯದೇ ಇದ್ದರೆ, ವಿಶ್ವಾದ್ಯಂತ ಮತ್ತೊಮ್ಮೆ ಭೀಕರ ಬಡತನ ತಲೆದೋರಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಜಾಗತಿಕ ಜನ

ಯುದ್ಧ ಮತ್ತು ರಾಜತಾಂತ್ರಿಕ ಬಿಕ್ಕಟ್ಟುಗಳಿಂದಾಗಿ ತೈಲ ಹಾಗೂ ಆಹಾರ ಧಾನ್ಯಗಳ ಬೆಲೆ ಗಗನಕ್ಕೆ

ಸಮುದಾಯ ಎಚ್ಚರಿಸಿದ್ದಾರೆ.

ದೆಹಲಿಯಲ್ಲಿನ ಆರ್ಥಿಕ ತಜ್ಞರ ಸಭೆಯನ್ನುದ್ದೇಶಿಸಿ ವರ್ಚುವಲ್ ಭಾಷಣ ಮಾಡಿರುವ ಪ್ರಧಾನಿ ಮೋದಿ, ಕಳೆದ ಕೆಲವು ವರ್ಷಗಳಲ್ಲಿ ಸರಣಿ ಸಮಸ್ಯೆಗಳ ಕಾರಣ ಈ ಅವಧಿಯು ವಿಪತ್ತುಗಳ ದಶಕವಾಗಿತ್ತು. ಜಾಗತಿಕ ಮಟ್ಟದ ಆರ್ಥಿಕ ಸ್ಥಿರತೆಗೆ ಸವಾಲುಗಳ ಸರಣಿಯೇ ಎದುರಾಗಿತ್ತು ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಯುದ್ಧ ಮತ್ತು ರಾಜತಾಂತ್ರಿಕ ಬಿಕ್ಕಟ್ಟುಗಳಿಂದಾಗಿ ತೈಲ ಹಾಗೂ ಆಹಾರ ಧಾನ್ಯಗಳ ಬೆಲೆ ಗಗನಕ್ಕೇರಿದೆ. ಹಲವಾರು ದೇಶಗಳಲ್ಲಿನ ಹಣದುಬ್ಬರವೂ ಅಪಾಯಕಾರಿ ಮಟ್ಟ ಮುಟ್ಟಿದೆ. ಸೂಕ್ತ ನೀತಿಗಳು, ಬಲಿಷ್ಠ ಆಡಳಿತ ಮತ್ತು ನಿರಂತರ ಆರ್ಥಿಕ ಸುಧಾರಣಾ ಕ್ರಮಗಳು ಇಲ್ಲದೇ ಇದ್ದರೆ ಕಳೆದ ಹತ್ತು ವರ್ಷಗಳಲ್ಲಿ ಸರಕಾರಗಳು ಕೈಗೊಂಡ ಬಡತನ ನಿರ್ಮೂಲನೆಯಲ್ಲಿನ ಸಾಧನೆಯು ಉಲ್ಟಾ ಆಗುತ್ತದೆ. ಜಗತ್ತು ಮತ್ತೆ ಬಡತನದ ಕೂಪಕ್ಕೆ ಬೀಳುತ್ತದೆ ಎಂದು ಮೋದಿ ಆತಂಕ ವ್ಯಕ್ತಪಡಿಸಿದರು.

ಸಮಯೋಚಿತ ನೀತಿ, ಸಕಾಲಿಕ ಆರ್ಥಿಕ ಸುಧಾರಣೆಗಳಿಂದಾಗಿ ಭಾರತ ಕರೋನಾದಂತಹ ದೊಡ್ಡ ಹೊಡೆತದಿಂದಲೂ ಪಾರಾಗಿದೆ. ಮತ್ತೆ ಬಲಿಷ್ಠವಾಗಿದೆ. ಭವಿಷ್ಯದ ಆಘಾತಗಳನ್ನು ತಡೆಯಲು ಜಾಗತಿಕ ನಾಯಕರು ಸ್ವಾವಲಂಬನೆ, ನಾವೀನ್ಯತೆ , ಕೌಶಲಾಭಿವೃದ್ಧಿ ಮತ್ತು ಸಬ್‌ಕಾ ವಿಕಾಸ್ ಕ್ರಮಗಳತ್ತ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಜನರನ್ನು ಬಡತನ ಕೂಪದಿಂದ ರಕ್ಷಿಸಲು ಜಾಗತಿಕ ಪೂರೈಕೆ ಸರಪಳಿ, ಇಂಧನ ಭದ್ರತೆ ಮತ್ತು ಆಹಾರ ಭದ್ರತೆ ವಿಷಯದಲ್ಲಿ ಎಲ್ಲಾ ದೇಶಗಳು ಪರಸ್ಪರ ಸಹಕಾರ ಅಗತ್ಯ ಎಂದರು.

ಮಹಾನಗರ ಪಾಲಿಕೆಗಳಿಗೆ ಸೂಪರ್ ಪವರ್?

ನೀತಿ ಆಯೋಗ ನಗರ ಆಡಳಿತ ಸುಧಾರಣಾ ವರದಿಯಲ್ಲಿ ಹೆಚ್ಚಿನ ಅಧಿಕಾರದ ಶಿಫಾರಸು

ಭಾರತವನ್ನು 2047ರೊಳಗೆ ಅಭಿವೃದ್ಧಿಶೀಲ ರಾಷ್ಟ್ರವನ್ನಾಗಿಸಲು ನಗರ ಆಡಳಿತದಲ್ಲಿ ದೊಡ್ಡ ಮಟ್ಟದ ಬದಲಾವಣೆ ಅಗತ್ಯವೆಂದು ನೀತಿ ಆಯೋಗ ಹೇಳಿದೆ. 'ಮೂವಿಂಗ್ ಟುವರ್ಡ್ಸ್ ಎಫೆಕ್ಟಿವ್ ಸಿಟಿ ಗವರ್ನಮೆಂಟ್' ವರದಿಯಲ್ಲಿ ದೇಶದ 10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯ ನಗರಗಳಿಗೆ ನೇರ ಮೇಯರ್ ವ್ಯವಸ್ಥೆ, ಬಲಿಷ್ಠ ನಗರ ಸರಕಾರ ಹಾಗೂ ಉತ್ತಮ ಹಣಕಾಸು ವ್ಯವಸ್ಥೆ ತರಲು ಶಿಫಾರಸು ಮಾಡಲಾಗಿದೆ. ಭಾರತದಲ್ಲಿ 46 ದಶಲಕ್ಷ-ಪ್ಲಸ್ ನಗರಗಳಿವೆ, ಇವು ದೇಶದ ಜಿಡಿಪಿಗೆ ಸುಮಾರು ಶೇ.60ರಷ್ಟು ಕೊಡುಗೆ ನೀಡುತ್ತಿವೆ. ನಗರೀಕರಣ ವೇಗವಾಗಿ ಹೆಚ್ಚುತ್ತಿರುವುದರಿಂದ ಬಲಿಷ್ಠ ನಗರ ಸರಕಾರ ಅಗತ್ಯವಿದೆ ಎಂದು ವರದಿ ತಿಳಿಸಿದೆ.

ಪ್ರಮುಖ ಅಂಶಗಳು

ನೇರವಾಗಿ ಜನರಿಂದ ಮೇಯರ್ ಆಯ್ಕೆ
- ಮೇಯರ್‌ಗೆ 5 ವರ್ಷದ ನಿಗದಿತ ಅವಧಿ
- ನಗರ ಆಡಳಿತದ ಸಂಪೂರ್ಣ ಹೊಣೆಗಾರಿಕೆ
- ಅಧಿಕಾರಿಗಳಿಗಿಂತ ಜನಪ್ರತಿನಿಧಿಗಳಿಗೆ ಹೆಚ್ಚಿನ ಅಧಿಕಾರ

ಮೇಯರ್-ಇನ್-ಕೌನ್ಸಿಲ್ ವ್ಯವಸ್ಥೆ
- ಪ್ರತಿ ವಿಭಾಗಕ್ಕೆ ಪ್ರತ್ಯೇಕ ಜವಾಬ್ದಾರಿ
- ನಗರ ಯೋಜನೆ, ನೀರು, ಕಸ ನಿರ್ವಹಣೆ, ಸಾರಿಗೆ ಎಲ್ಲವೂ ಒಂದೇ ನಗರ ಸರಕಾರದಡಿ

ನಗರಗಳಿಗೆ ಹೆಚ್ಚಿನ ಆರ್ಥಿಕ ಸ್ವಾಯತ್ತೆ
- ನಗರ ಸಂಸ್ಥೆಗಳಿಗೆ ಸ್ವಂತ ಆದಾಯ ಸಂಗ್ರಹಿಸುವ ಅಧಿಕಾರ
- ರಾಜ್ಯ ಹಣಕಾಸು ಆಯೋಗಗಳನ್ನು ಬಲಪಡಿಸುವ ಶಿಫಾರಸು

ನಗರ ಸೇವೆಗಳಲ್ಲಿ ಏಕೀಕರಣ
- ನೀರು, ಸಾರಿಗೆ, ಅಗ್ನಿಶಾಮಕ, ಸ್ವಚ್ಛತೆ ಮುಂತಾದ ಸೇವೆಗಳು ಒಂದೇ ಆಡಳಿತದಡಿ

ಕರ್ನಾಟಕದ ಆಡಳಿತ ಮಾದರಿ

ಪ್ರಮುಖ ಸಮಸ್ಯೆಗಳು
- ಬೆಂಗಳೂರಿನ ಜಿಬಿಎ - ಹೊಣೆಗಾರಿಕೆ ಸ್ಪಷ್ಟವಿಲ್ಲ
- ಬೆಂಗಳೂರಿನಲ್ಲಿ: ಮೇಯರ್‌ಗೆ ಕೇವಲ 2.5 ವರ್ಷದ ಅವಧಿ - ಕೆಲಸ ವಿಳಂಬ
- ನಿಜವಾದ ಆಡಳಿತಾಧಿಕಾರ ಮುಖ್ಯ ಆಡಳಿತಾಧಿಕಾರಿ ಕೈಯಲ್ಲಿ - ಜನರಿಗೆ ತೊಂದರೆ
- ನೀರು - ಬಿಡಬ್ಲ್ಯುಎಸ್‌ಎಸ್‌ಬಿ - ಯೋಜನೆಗಳಲ್ಲಿ ಗೊಂದಲ
- ಸಾರಿಗೆ - ಬಿಎಂಟಿಸಿ - ನಗರ ಯೋಜನೆ - ಬಿಡಿಎ

ಒಂದು ನಗರ-ಒಂದು ಸರಕಾರಕ್ಕೆ ಶಿಫಾರಸು

ನಗರದ ಎಲ್ಲ ಪ್ರಮುಖ ಸೇವೆಗಳು ನಗರ ಸರಕಾರದಡಿಯಲ್ಲಿ ಇರಬೇಕು
- ನೀರು • ಬಸ್ ಸೇವೆ • ಕಸ ನಿರ್ವಹಣೆ • ನಗರ ಯೋಜನೆ • ಅಗ್ನಿಶಾಮಕ ಸೇವೆ • ಸ್ವಚ್ಛತೆ

ಟೀಕೆ
- ಪ್ರಸ್ತುತ ಹಲವೆಡೆ ಮೇಯರ್ ಕೇವಲ ಸಭಾಧ್ಯಕ್ಷರಂತಿದ್ದಾರೆ.

ಶಿಫಾರಸು
- ಮೇಯರ್‌ಗೆ ಮುಖ್ಯಮಂತ್ರಿ ಮಟ್ಟದ ಅಧಿಕಾರ?
- ಜನರಿಂದ ನೇರವಾಗಿ ಮೇಯರ್ ಆಯ್ಕೆ
- 5 ವರ್ಷ ನಿಗದಿತ ಅವಧಿ
- ಪೂರ್ಣ ಆಡಳಿತಾಧಿಕಾರ
- ಅಧಿಕಾರಿಗಳಿಗೆ ನೇರ ನಿಯಂತ್ರಣ

ವಿಶ್ವವಾಣಿ ಬೆಂಗಳೂರು 19-05-2026 ಮಂಗಳವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ



ಜೀವವನ್ನು ಬಲಿಕೊಟ್ಟ ಲಾಜ಼ರನಿಗೆ ಕೀರ್ತಿಯು ಸಲ್ಲಲೇ ಇಲ್ಲ!

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
naasomeswara@gmail.com

19ನೇಯ ಶತಮಾನದ ಕೊನೆಯ ಭಾಗ. ಹಳದಿ ಜ್ವರ ಅಥವಾ ಯೆಲ್ಲೋ ಫೀವರ್ ಎನ್ನುವುದು ಕೇವಲ ಒಂದು ಜ್ವರ ಮಾತ್ರವಾಗಿರಲಿಲ್ಲ. ಅದೊಂದು ಮಹಾಮಾರಿ. ಸದ್ದಿಲ್ಲದ ಹಾಗೆ ನಗರವನ್ನು ಪ್ರವೇಶಿಸುತ್ತಿತ್ತು. ಮನೆಯ ಬಾಗಿಲನ್ನು ತಟ್ಟದೆ ಒಳನುಗ್ಗುತ್ತಿತ್ತು. ಮನೆಯಲ್ಲಿರುವವರನ್ನೆಲ್ಲ ನುಂಗಿ ನೀರು ಕುಡಿದು, ಮುಂದಿನ ಮನೆಯನ್ನು ಅರಸಿಕೊಂಡು ಹೋಗುತ್ತಿತ್ತು. ಶಾಲಾ ಕಾಲೇಜುಗಳನ್ನು ಮುಚ್ಚಿದರು. ಅಂಗಡಿಮುಂಗಟ್ಟುಗಳಿಗೆ ಬೀಗವನ್ನು ಹಾಕಿದರು. ಮಾರುಕಟ್ಟೆಯು ಬಂದಾಯಿತು. ಬೀದಿಗಳು ಬಿಕೋ ಎನ್ನಲಾರಂಭಿಸಿದವು. ಊರಿನ ಪ್ರತಿಯೊಂದು ಮನೆಯು ಆಸ್ಪತ್ರೆಯಾಯಿತು. ಸಾವನ್ನು ಸ್ವಾಗತಿಸುವ ಕಾಯುವ ಕೋಣೆಯಾಗಿ ಪರಿವರ್ತಿತವಾಯಿತು.

ಒಬ್ಬ ವಯಸ್ಕನಿಗೆ ಏಳುವಾಗಲೇ ಜ್ವರ. ಸಂಜೆಯಾಗುತ್ತಿರುವಂತೆಯೇ ಅವನ ಕಣ್ಣುಗಳು ಕಾಮಾಲೆ ಪೀಡಿತರಂತೆ ಹಳದಿ ಬಣ್ಣವನ್ನು ತಳೆಯುತ್ತಿತ್ತು. ರಾತ್ರಿಯ ಒಳಗೆ ವಿಪರೀತ ವಾಂತಿ. ಅಂತಿಂತಹ ವಾಂತಿಯಲ್ಲ. ಕಡು ಕಪ್ಪು ವಾಂತಿ. ಎರಡು ಮೂರು ದಿನಗಳಲ್ಲಿ ಸಾವು ಬಂದು ಅವನನ್ನು ಕರೆದೊಯ್ಯುತ್ತಾ ಆ ದೇಹಕ್ಕೆ ಚಿರವಿಶ್ರಾಂತಿಯನ್ನು ನೀಡುತ್ತಿತ್ತು.

ಹಳದಿ ಜ್ವರವು ಪ್ರಜಾಪ್ರಭುತ್ವವಾದಿಯಾಗಿತ್ತು. ಬಡವರನ್ನು, ಶ್ರೀಮಂತರನ್ನು, ಬುದ್ಧಿವಂತರನ್ನು, ದಡ್ಡರನ್ನು, ಸೈನಿಕರನ್ನು, ಶ್ರೀಸಾಮಾನ್ಯರನ್ನು, ವ್ಯಾಪಾರಿಗಳನ್ನು, ಗುಲಾಮರನ್ನು, ಮಾಲಿಕರನ್ನು, ಪುರೋಹಿತರನ್ನು, ವೈದ್ಯರನ್ನು, ದಾದಿಯರನ್ನು, ಹೆಂಗಸರನ್ನು, ಮಕ್ಕಳನ್ನು ಯಾರಿಗೂ ವಿನಾಯತಿಯನ್ನು ನೀಡದೆ ಅವರನ್ನು ಕೊಲ್ಲುತ್ತಿತ್ತು. ಹಳದಿಜ್ವರವು ನಿಷ್ಪಕ್ಷಪಾತಿಯಾಗಿದ್ದರೂ ಸಹ, ಅದೇನೋ ಬಡವರನ್ನು ಕಂಡರೆ ವಿಪರೀತ ಪ್ರೀತಿ. ಅವರನ್ನು ಹೆಚ್ಚಿನ ಪ್ರಮಾಣದಲ್ಲಿ ಕರೆದೊಯ್ಯುತ್ತಿತ್ತು. ಬಡವರು ಸಾಮಾನ್ಯವಾಗಿ ಜನನಿಬಿಡ ಪ್ರದೇಶಗಳಲ್ಲಿ ಹಾಗೂ ಜೌಗು ಪ್ರದೇಶದ ಬಳಿ ವಾಸಿಸುತ್ತಿದ್ದರು.

● ಸ್ಪ್ಯಾನಿಶ್-ಅಮೆರಿಕನ್ ಯುದ್ಧ:

1898 ಸ್ಪ್ಯಾನಿಶ್-ಅಮೆರಿಕನ್ ಯುದ್ಧವು ನಡೆಯಿತು. ಈ ಯುದ್ಧದಲ್ಲಿ ಎಷ್ಟು ಜನರು ಗುಂಡೇಟಿನಿಂದ ಸತ್ತರೋ, ಅದಕ್ಕಿಂತಲೂ ಹೆಚ್ಚಿನ ಪ್ರಮಾಣದ ಜನರು ಹಳದಿಜ್ವರದಿಂದ ಸಾಯಲಾರಂಭಿಸಿದರು. ಯುದ್ಧವು ಅಮೆರಿಕ ಮತ್ತು ಸ್ಪೇನ್ ದೇಶದ ನಡುವೆ ನಡೆಯಿತು. ಯುದ್ಧವು ಪ್ರಧಾನವಾಗಿ ಕ್ಯೂಬಾ, ಪ್ಯುರೆಟೊ ರಿಕೊ, ಗ್ವಾಮ್, ಫಿಲಿಫೈನ್ಸ್ ಪ್ರದೇಶದಲ್ಲಿ ನಡೆದವು. ಕ್ಯೂಬಾನ್ನರು ಸ್ಪೇನ್‌ನವರಿಂದ ಸ್ವಾತಂತ್ರವನ್ನು ಪಡೆಯಲು ಹೋರಾಟವನ್ನು ನಡೆಸುತ್ತಿದ್ದರು. ಸ್ಪೇನಿಗಳು ಕ್ಯೂಬನ್ನರಿಗೆ ಚಿತ್ರಹಿಂಸೆಯನ್ನು ಕೊಟ್ಟು ಕೊಲ್ಲುವ ಸುದ್ದಿಯನ್ನು ಕೇಳಿದ ಅಮೆರಿಕವು ಸ್ಪೇನ್ ಮೇಲೆ ಯುದ್ಧವನ್ನು ಸಾರಿತು. ಈ ಯುದ್ಧದಲ್ಲಿ ಅಮೆರಿಕವು ವಿಜಯಿಯಾಯಿತು. ನಿಜ. ಆದರೆ ಹವಾನದಿಂದ ನ್ಯೂ ಅರ್ಲೆನ್ಸ್ ವರೆಗಿನ ಬಂದರು ನಗರಗಳು ಹಳದಿಜ್ವರದ ಸಾಮ್ರಾಜ್ಯವಾಗಿ ಜನರನ್ನು ನಿರ್ದಯವಾಗಿ ಕೊಲ್ಲುತ್ತಿದ್ದವು. ಹಳದಿಜ್ವರದ ನಿಯಂತ್ರಣವು ಕೇವಲ ವೈದ್ಯಕೀಯ ತುರ್ತು ಸ್ಥಿತಿ ಮಾತ್ರವಾಗಿರಲಿಲ್ಲ, ರಾಜಕೀಯ, ಮಿಲಿಟರಿ ಹಾಗೂ ಸಾರ್ವಜನಿಕರ ಅಳಿವು-ಉಳಿವಿನ ಪ್ರಶ್ನೆಯಾಗಿತ್ತು.

ಹಳದಿಜ್ವರ ಬರಲು ಏನು ಕಾರಣ ಎಂದು ಯಾರಿಗೂ ತಿಳಿದಿರಲಿಲ್ಲ. ಕೆಲವರು ಕೆಟ್ಟ ಗಾಳಿ ಕಾರಣವೆಂದರು. ರೋಗಿಗಳು ಧರಿಸಿದ್ದ ವಸ್ತ್ರಗಳು ಎಂದರು. ಉಳಿದವರು ಇಲ್ಲ ಅವರ ಮಲಗುವ ಹಾಸಿಗೆಯಿಂದ ಹರಡುತ್ತದೆ ಎಂದರು. ಆಗ ಮನೆಮಂದಿಯು ರೋಗಿಗಳ ಬಟ್ಟೆ, ಹಾಸಿಗೆ, ಹೊದಿಕೆ ಎಲ್ಲವನ್ನೂ ಸುಟ್ಟರು. ಬಂದರುಗಳನ್ನು ಪ್ರವೇಶಿಸುವ ಹಡಗುಗಳನ್ನು ಕ್ವಾರಂಟೈನ್ ಮಾಡಿದರು. ಆದರೆ ರೋಗವು ಮಾತ್ರ ಕಡಿಮೆಯಾಗಲಿಲ್ಲ.

ಕ್ಯೂಬಾ ದೇಶದ ವೈದ್ಯ ಕಾರ್ಲೋಸ್ ಯುವಾನ್ ಫಿನ್ಲೆ (1833-1915) ಮೊದಲ ಬಾರಿಗೆ ಹಳದಿ ಜ್ವರವು ಹರಡುವುಕೆಗೆ ಬಹುಶಃ ಸೊಳ್ಳೆಗಳು ಕಾರಣವಿರಬೇಕೆಂದು 1881ರಷ್ಟು ಹಿಂದೆಯೇ ತರ್ಕಿಸಿದ. ಏಡಿಸ್ ಈಜಿಪ್ಟೈ ಎಂಬ ಬಿಳಿಬಣ್ಣದ ಗೆರೆಗಳಿರುವ ಸೊಳ್ಳೆಯು, ಸದ್ದಿಲ್ಲದ ಹಾಗೆ ಹಳದಿಜ್ವರವನ್ನು ರೋಗಿಗಳಿಂದ ಆರೋಗ್ಯವಂತರಿಗೆ ಹರಡುತ್ತಿತ್ತು. ಆದರೆ ಫಿನ್ಲೆಯ ಮಾತನ್ನು ಯಾರೂ ಕೇಳಿಸಿಕೊಳ್ಳಲಿಲ್ಲ. ಹೊಸ ವೈಜ್ಞಾನಿಕ ಪರಿಕಲ್ಪನೆಗಳು ಯಾವಾಗಲೂ ಮೂರು ಅಡ್ಡಿಗಳನ್ನು ದಾಟಬೇಕಾದದ್ದು ಅನಿವಾರ್ಯವಾಗಿರುತ್ತದೆ. ಮೊದ ಮೊದಲು ಹಾಸ್ಯ ಮಾಡಿ ನಕ್ಕು ನಿರ್ಲಕ್ಷಿಸಿ ಮುಂದೆ ಹೋಗುತ್ತಾರೆ. ಎರಡನೇಯ ಹಂತದಲ್ಲಿ ತಮ್ಮ ಸೋಲನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲದ ಹುಸಿತಜ್ಞರು ಬಲವಾಗಿ ಪ್ರತಿರೋಧಿಸುತ್ತಾರೆ. ಕೊನೆಗೆ ಮೂರನೇಯ ಘಟ್ಟದಲ್ಲಿ ನಿರಾಕರಿಸಲು ಸಾಧ್ಯವೇ ಇಲ್ಲದಂತಹ ಪುರಾವೆಯನ್ನು ಒದಗಿಸಿದಾಗ ಸದ್ದಿಲ್ಲದಂತೆ ಸತ್ಯವನ್ನು ಒಪ್ಪಿಕೊಂಡು ಮುನ್ನಡೆಯುತ್ತಾರೆ. ಹಳದಿಜ್ವರದ ವಿಚಾರದಲ್ಲಿಯೂ ಹೀಗೆಯೇ ನಡೆಯಿತು. ಫಿನ್ಲೆ ಮೂರನೇಯ ಅಡ್ಡಿಯನ್ನು ತಲುಪುವ ವೇಳೆಗೆ 20 ವರ್ಷಗಳಾಗಿದ್ದವು.

● ಹಳದಿಜ್ವರ ಆಯೋಗ:

1900ರ ವೇಳೆಗೆ ಅಮೆರಿಕ ಸರಕಾರವು ಮೇಜರ್ ವಾಲ್ಟರ್ ರೀಡ್ (1851-1902) ಅವರ ನೇತೃತ್ವದಲ್ಲಿ ಹಳದಿಜ್ವರ ಆಯೋಗವನ್ನು (ಯೆಲ್ಲೋಫೀವರ್ ಕಮಿಷನ್) ನೇಮಿಸಿತು. ರೀಡ್ ಅವರ ತಂಡದಲ್ಲಿ ಜೇಮ್ಸ್ ಕೆರೋಲ್ (1854-1907), ಜೆಸ್ಸಿ ವಿಲಿಯಂ ಲಾಜ಼ರ್ (1866-1900), ಮತ್ತು ಅರಿಸ್ಟೈಡ್ ಅಗ್ರಿಮೊಂಟೆ (1868-1931) ಇದ್ದರು. ಮೂವರು ಕ್ಯೂಬಾಕ್ಕೆ ಹೊರಟರು. ಮಾರಣಾಂತಿಕ ಹಳದಿಜ್ವರವು ಹೇಗೆ ಬರುತ್ತದೆ ಎನ್ನುವ ಏಕೈಕ ಪ್ರಶ್ನೆಗೆ ಉತ್ತರವನ್ನು ಹುಡುಕುವುದು ಅವರ ಪ್ರಾಥಮಿಕ ಆದ್ಯತೆಯಾಗಿತ್ತು.



ಹಳದಿಜ್ವರಕ್ಕೆ ಕಾರಣವನ್ನು ಕಂಡುಹಿಡಿಯಲು ಹೊರಟ ತಂಡವು ಹವಾನ ಬಳಿಗೆ ಬಂದಿತು. ಅಲ್ಲಿ ತಮ್ಮ ಪ್ರಯೋಗಾಲಯವನ್ನು ಸ್ಥಾಪಿಸಿತು. ಪ್ರಯೋಗಾಲಯ ಎಂದರೆ ಕಲ್ಲಿನ ಇಲ್ಲವೇ ಇಟ್ಟಿಗೆಯ ಕಟ್ಟಡವಾಗಿರಲಿಲ್ಲ. ಅದೊಂದು ಗುಡಿಸಲಾಗಿತ್ತು. ವಿಶೇಷವಾಗಿ ನಿರ್ಮಿಸಿದ ಈ ಗುಡಿಸಲುಗಳಲ್ಲಿಯೇ ಸಂಶೋಧಕರು ಉಳಿದುಕೊಂಡರು. ಅವರ ಹಾಸಿಗೆ ಹೊದಿಕೆಗಳನ್ನು ಅಲ್ಲಿಯೇ ಜೋಡಿಸಿಕೊಂಡರು. ಜತೆಗೆ ಅವರ ಅಧ್ಯಯನದಲ್ಲಿ ಪಾಲುಗೊಳ್ಳಲು ಅನೇಕ ಸ್ವಯಂಸೇವಕರು ಬಂದಿದ್ದರು. ಅವರೂ ಸಹ ಇದೇ ಗುಡಿಸಲುಗಳಲ್ಲಿ ಉಳಿದುಕೊಳ್ಳಬೇಕಾಗಿ ಬಂದಿತು. ಅವರ ಪ್ರಯೋಗಾಲಯ, ಅಧ್ಯಯನದ ಮೇಜು, ಅಡುಗೆಮನೆ, ಊಟದ ಮನೆ, ಸ್ನಾನ ಶೌಚಗಳೆಲ್ಲ ಈ ಗುಡಿಸಲುಗಳಲ್ಲೇ ನಡೆಯಬೇಕಾಗಿತ್ತು. ಫಿನ್ಲೆ ಸೊಳ್ಳೆಯ ಮೂಲಕ ಹಳದಿಜ್ವರವು ಹರಡುತ್ತದೆ ಎಂಬ ಮಾತಿನ ಸತ್ಯಾಸತ್ಯತೆಯನ್ನು ಪರೀಕ್ಷಿಸಲೆಂದು ಅವರು ಸೊಳ್ಳೆಗಳನ್ನು ಸಾಕುವ ವಿಶೇಷ ಪಂಜರಗಳನ್ನೂ ತಂದಿದ್ದರು.

ಹಳದಿಜ್ವರವು ಹೇಗೆ ಬರುತ್ತದೆ ಎಂಬುದನ್ನು ಅಧಿಕೃತವಾಗಿ ಕಂಡುಹಿಡಿದ ಈ ಸ್ಥಳವು ಕ್ಯಾಂಪ್ ಲಾಜ಼ರ್ ಎಂದು ಇತಿಹಾಸದಲ್ಲಿ ಹೆಸರಾಗಿದೆ. ರೀಡ್ ಅವರ ತಂಡದಲ್ಲಿದ್ದ ಜೆಸ್ಸಿ ವಿಲಿಯಂ ಲಾಜ಼ರ್ ಅವರು, ಹಳದಿ ಜ್ವರದ ಅಧ್ಯಯನದಲ್ಲಿ ತಮ್ಮನ್ನು ತಾವು ಬಲಿಕೊಟ್ಟರು. ಹಾಗಾಗಿ ಅವರ ನೆನಪಿನಲ್ಲಿ ಈ ಸಂಶೋಧನಾ ಕೇಂದ್ರವನ್ನು ಕ್ಯಾಂಪ್ ಲಾಜ಼ರ್ ಎಂದು ಕರೆದರು.

● ಜೈವನೈತಿಕತೆ:

ವೈದ್ಯಕೀಯ ಸಂಶೋಧನೆಗಳಲ್ಲಿ ಸ್ವಯಂಸೇವಕರ ಪಾತ್ರ ಬಹಳ ದೊಡ್ಡದು. ಅವರು ಪ್ರಜ್ಞಾಪೂರ್ವಕವಾಗಿ ಪ್ರಯೋಗದಲ್ಲಿ ಭಾಗಿಯಾಗಬೇಕಾಗುತ್ತದೆ. ಅಧ್ಯಯನದಲ್ಲಿ ಅಜ್ಞಾನ ಪಾರ್ಶ್ವಪರಿಣಾಮಗಳು ಕಂಡುಬರುತ್ತವೆ. ಜೀವಹೋಗುವ ಇಲ್ಲವೇ ಜೀವನಪರ್ಯಂತ ಪಾರ್ಶ್ವಪರಿಣಾಮಗಳ ನರಳುವ ಸಾಧ್ಯತೆಯು ಅಧಿಕವಾಗಿರುತ್ತದೆ. ಹಾಗಾಗಿ ತಿಳಿದೂ ತಿಳಿದು ಅಧ್ಯಯನದಲ್ಲಿ ಭಾಗಿಯಾಗಲು ಎಂಟೆದೆ ಬೇಕು. ಹಳದಿಜ್ವರದ ಅಧ್ಯಯನದಲ್ಲಿ ಪಾಲುಗೊಳ್ಳಲು ಬರುವ ಸ್ವಯಂಸೇವಕರನ್ನು ಜೈವನೈತಿಕತೆಯಿಂದ (ಬಯೋಎಥಿಕ್ಸ್) ಹಾಗೂ ಅವರ ಯೋಗಕ್ಷೇಮವನ್ನು ಅಧಿಕೃತವಾಗಿ ಹಾಗೂ ವ್ಯವಸ್ಥಿತವಾಗಿ ಹೊರುವ ಪ್ರಥಮ ಪ್ರಯತ್ನವು ಮಾನವನ ಇತಿಹಾಸದಲ್ಲಿ ಮೊದಲ ಬಾರಿಗೆ ನಡೆಯಿತು. ಅಲ್ಲಿಯವರೆಗೆ ವೈದ್ಯಕೀಯ ಪ್ರಯೋಗಗಳಿಗೆ ಗುಲಾಮರನ್ನು ಇಲ್ಲವೇ ಮರಣದಂಡನೆಗೆ ಗುರಿಯಾದ ಖೈದಿಗಳನ್ನು ಬಳಸುತ್ತಿದ್ದರು. ಈಗ ಮೊದಲಬಾರಿಗೆ ಅಧ್ಯಯನದಲ್ಲಿ ಪಾಲುಗೊಳ್ಳುವ ಸ್ವಯಂಸೇವಕರ ಲಿಖಿತ ಒಪ್ಪಿಗೆಯನ್ನು ಪಡೆದರು. ಸ್ವಯಂಸೇವಕನಿಗೆ ಅರ್ಥವಾಗುವ ಭಾಷೆಯಲ್ಲಿ ಪ್ರಯೋಗದ ಎಲ್ಲ ವಿವರಗಳನ್ನು ಬರೆದು, ಮುಖ್ಯವಾಗಿ ಪಾರ್ಶ್ವಪರಿಣಾಮಗಳು ಹಾಗೂ ಸಾವು ಸಂಭವ ಸಾಧ್ಯತೆಯನ್ನು ವಿವರಿಸಿ, ಅವನ ಸಹಿಯನ್ನು ತೆಗೆದುಕೊಳ್ಳುತ್ತಿದ್ದರು. ತಿಳಿಹೇಳಿದ ಒಪ್ಪಿಗೆ ಪತ್ರವನ್ನು ಸ್ಪ್ಯಾನಿಶ್ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಸಿದ್ಧಪಡಿಸಿದರು. ಹಾಗಾಗಿ ಅಧುನಿಕ ವೈದ್ಯಕೀಯ ಇತಿಹಾಸದಲ್ಲಿ ಮಾನವನ ಮಹಾನ್ ಜೈವನೈತಿಕ ಪ್ರಥಮ ಪ್ರಯೋಗ (ದಿ ಗ್ರೇಟ್ ಹ್ಯೂಮನ್ ಎಕ್ಸ್‌ಪೆರಿಮೆಂಟ್ ಇನ್ ಬಯೋಎಥಿಕ್ಸ್) ಎಂದು ಹೆಸರಾಗಿದೆ.

● ಹಳದಿಜ್ವರ ಕ್ರಮಬದ್ಧ ಅಧ್ಯಯನವು ಆರಂಭವಾಯಿತು.

- ಪ್ರಥಮ ಪ್ರಯೋಗ:

ಮೊತ್ತಮೊದಲು ಹಳದಿಜ್ವರ ಪೀಡಿತರ ಉಡುಪು, ಹಾಸಿಗೆ, ಹೊದಿಕೆಗಳಿಂದ ಹಳದಿ ಜ್ವರವು ಬರುವುದಿಲ್ಲ ಎನ್ನುವುದನ್ನು ನಿರೂಪಿಸಬೇಕಾಗಿತ್ತು. ಡಾ। ರಾಬರ್ಟ್ ಕುಕ್ ಮತ್ತು ಹಲವು ಅಮೆರಿಕನ್ ಸೈನಿಕರು



ಸ್ವಯಂಸೇವಕರಾಗಿ ಬಂದರು. ಅವರೆಲ್ಲರೂ ಹಳದಿಜ್ವರದಿಂದ ಸತ್ತವರ ಪೈಜಾಮಗಳಲ್ಲಿ ಧರಿಸಿದರು. ಅವರು ವಾಂತಿಮಾಡಿದ್ದ, ಭೇದಿ ಹೊಡೆದಿದ್ದ ಬೆಡ್ ಶೀಟುಗಳ ಮೇಲೆ ಮಲಗಿದರು. ಅದೊಂದು ಮಾನಸಿಕ ಸ್ಥೈರ್ಯದ ಪರೀಕ್ಷೆಯಾಗಿತ್ತು. ಹೀಗೆ ಒಂದಲ್ಲ, 20 ದಿನಗಳವರೆಗೆ ಒಂದು ಕೋಣೆಯಲ್ಲಿ ಕಳೆದರು. ಒಬ್ಬ ವ್ಯಕ್ತಿಗೂ ಹಳದಿಜ್ವರವು ಬರಲಿಲ್ಲ. ಹಳದಿಜ್ವರವು ಉಟ್ಟಬಟ್ಟೆಗಳಿಂದ, ರೋಗಿ ಉಪಯೋಗಿಸಿದ ವಸ್ತುಗಳಿಂದ, ಅವರು ಬಳಸಿದ ಹಾಸಿಗೆ ಹೊದಿಕೆಗಳಿಂದ ಹರಡುವುದಿಲ್ಲ ಎನ್ನುವುದಕ್ಕೆ ಅಗತ್ಯ ಪುರಾವೆಯು ಈಗ ದೊರೆತಿತ್ತು.

- ಆತ್ಮಾಹುತಿ: ಅಧ್ಯಯನದ ಎರಡನೇಯ ಹಂತಕ್ಕೆ ಸಿದ್ಧವಾದರು. ಫಿನ್ಲೆ ಹೇಳಿದ ಸೊಳ್ಳೆಗಳ ಮೂಲಕ ಹರಡುವ ಸಿದ್ಧಾಂತಕ್ಕೆ ಅಗತ್ಯವಾದ ಪುರಾವೆಯನ್ನು ಒದಗಿಸಬೇಕಾಗಿತ್ತು. ಅಧ್ಯಯನದ ಮೊತ್ತಮೊದಲ ಘಟ್ಟ ಆರಂಭವಾಯಿತು. ಹಳದಿಜ್ವರ ಪೀಡಿತರನ್ನು ಒಂದು ಕೋಣೆಯಲ್ಲಿ ಮಲಗಿಸಿದರು. ಅವರ ಕೋಣೆಯ ಒಳಗೆ ಸೊಳ್ಳೆಗಳನ್ನು ಹಿಂಡು ಹಿಂಡಾಗಿ ಬಿಟ್ಟರು. ಸೊಳ್ಳೆಗಳು ಹಳದಿಜ್ವರ ಪೀಡಿತರ ರಕ್ತವನ್ನು ಹೀರಿದವು. ನಂತರ ಆ ಎಲ್ಲ ಸೊಳ್ಳೆಗಳನ್ನು ಹಿಡಿದು ಪಂಜರದಲ್ಲಿ ನಿಗದಿತ ದಿನಗಳವರೆಗೆ ಇಟ್ಟರು.

ಈಗ ಅಧ್ಯಯನದ ಎರಡನೇಯ ಘಟ್ಟ ಆರಂಭವಾಯಿತು. ರೀಡ್ ತಂಡದಲ್ಲಿದ್ದ ಜೇಮ್ಸ್ ಕೆರೋಲ್ ಮತ್ತು ಜೆಸ್ಸಿ ಲಾಜ಼ರ್ ತಾವೇ ಮೊದಲ ಸ್ವಯಂಸೇವಕರಾಗಿ ಮುಂದೆ ಬಂದರು. ಅವರನ್ನು ಒಂದು ಕೋಣೆಯಲ್ಲಿ ಇರಿಸಿ, ಆ ಕೋಣೆಯ ಒಳಗೆ ಪಂಜರದಲ್ಲಿದ್ದ ರೋಗಗ್ರಸ್ತ ಸೊಳ್ಳೆಗಳನ್ನು ಬಿಟ್ಟರು. ಸೊಳ್ಳೆಗಳು ಇಬ್ಬರೂ ಸಂಶೋಧಕರನ್ನು ಕಚ್ಚಿದವು. ಇಬ್ಬರಿಗೂ ಹಳದಿಜ್ವರವು ಬಂದಿತು. ಜೆಸ್ಸಿ ಲಾಜ಼ರ್ ಹಳದಿಜ್ವರದ ತೀವ್ರತೆಯನ್ನು ತಾಳಿಕೊಳ್ಳಲಾಗದೆ ಜೀವವನ್ನು ಬಿಟ್ಟ. ಜೇಮ್ಸ್ ಕೆರೋಲ್, ಹಳದಿಜ್ವರದಿಂದ ಸುಧಾರಿಸಿಕೊಂಡರೂ ಆತ ಪರಿಪೂರ್ಣ ಆರೋಗ್ಯವಂತನಾಗಲಿಲ್ಲ. 1907ರಲ್ಲಿ ಹೃದಯಸ್ನಾಯು ಉರಿಯೂತಕ್ಕೆ (ಮಯೋಕಾರ್ಡೈಟಿಸ್) ತುತ್ತಾಗಿ ಮರಣಿಸಿದ. ತನ್ನ ಹೃದಯಸ್ನಾಯು ದುರ್ಬಲಗೊಳ್ಳಲು ಹಳದಿಜ್ವರವೇ ಕಾರಣವಾಗಿರಬಹುದು ಎಂದು ಆತ ನಂಬಿದ್ದ.

ಅಮೆರಿಕದ ಒಹಾಯೋ ಪ್ರಾಂತದ ಸೈನಿಕ ಜಾನ್ ಆರ್. ಕಿಸ್ಸಿಂಜರ್ ಹಾಗೂ ಜಾನ್ ಜೆ. ಮೊರಾನ್ ಸ್ವಯಂಸೇವಕರಾಗಿ ಮುಂದೆ ಬಂದರು. ಪ್ರಯೋಗದಲ್ಲಿ ಭಾಗಿಯಾಗುತ್ತಿದ್ದ ಇಬ್ಬರಿಗೂ ಪ್ರತಿಫಲವಾಗಿ ರೀಡ್ ಚಿನ್ನದ ಬಿಸ್ಕತ್ತುಗಳನ್ನು ನೀಡಿದ. ಆದರೆ ಅವರು ಚಿನ್ನವನ್ನು ನಿರಾಕರಿಸಿದರು. ವಿಜ್ಞಾನಕ್ಕಾಗಿ ಹಾಗೂ ಮನುಕುಲದ ಹಿತಕ್ಕಾಗಿ ತಾವು ಪ್ರಯೋಗದಲ್ಲಿ ಭಾಗಿಯಾಗುತ್ತಿರುವ ಕಾರಣ, ತಮಗೆ ಯಾವುದೇ ಪ್ರತಿಫಲವು ಬೇಡವೆಂದರು.

ಒಂದು ಕೋಣೆ. ಅದನ್ನು ತಂತಿಬಲೆಯ ಮೂಲಕ ಎರಡು ಭಾಗಗಳನ್ನಾಗಿ ವಿಂಗಡಿಸಿದರು. ಮೊದಲ ಭಾಗದಲ್ಲಿ ಮೊರಾನ್ ಮಲಗಿದ. ಆ ಭಾಗದಲ್ಲಿ ಹಳದಿಜ್ವರಕ್ಕೆ ಕಾರಣವಾದ ಜೀವಿಯನ್ನು ಉದರದಲ್ಲಿ ಪೋಷಿಸುತ್ತಿದ್ದ ಒಂದು ಡಜ಼ನ್ ಸೊಳ್ಳೆಗಳನ್ನು ಬಿಟ್ಟರು. ಇನ್ನೊಂದು ಭಾಗದಲ್ಲಿ ಇಬ್ಬರು ಆರೋಗ್ಯವಂತ ಯುವಕರು. ಆದರೆ, ಅವರಿದ್ದ ಭಾಗದಲ್ಲಿ ಸೊಳ್ಳೆಗಳನ್ನು ಬಿಡಲಿಲ್ಲ. ಸೊಳ್ಳೆಯಿಂದ ಕಚ್ಚಿಸಿಕೊಂಡ ಮೊರಾನ್ ಹಳದಿಜ್ವರ ಪೀಡಿತನಾದ. ಇಬ್ಬರು ಆರೋಗ್ಯವಂತರು ಸ್ವಸ್ಥವಾಗಿದ್ದರು. ಇಂತಹುದೇ ಮತ್ತೊಂದು ಪ್ರಯೋಗದಲ್ಲಿ ಜಾನ್ ಆರ್. ಕಿಸ್ಸಿಂಜರ್ ಸಹ ಹಳದಿಜ್ವರ ಪೀಡಿತನಾದ. ಮೊರಾನ್ ಮತ್ತು ಕಿಸ್ಸಿಂಜರ್ ಬದುಕುಳಿದರೂ ಸಹ, ಜೀವನಪರ್ಯಂತ ಒಂದಲ್ಲ ಒಂದು ರೀತಿಯ ನರಬೇನೆಯಿಂದ ನರಳಿದರು. 1901ರಲ್ಲಿ ಕ್ಲಾರಾ ಮಾಸ್ ಎನ್ನುವ ನರ್ಸ್ ಹಳದಿಜ್ವರ ಅಧ್ಯಯನದಲ್ಲಿ ಸ್ವಯಂಸೇವಕಿಯಾಗಿ ಬಂದಳು. ಅವಳಿಗೆ ಹಳದಿಜ್ವರವು ಅಂಟಿಕೊಂಡಿತು. ಆದರೆ, ಆಕೆ ಅದರಿಂದ ಚೇತರಿಸಿಕೊಳ್ಳಲಾಗದೆ ಅಸುವನ್ನು ನೀಗಿದಳು. ಕ್ಲಾರಾ ಮಾಸ್ ಸತ್ತಕೂಡಲೇ ಅಮೆರಿಕದಲ್ಲಿ ಹುಯಿಲೆದ್ದಿತು. ಜನರನ್ನು ಪ್ರಜ್ಞಾಪೂರ್ವಕವಾಗಿ ಕೊಲ್ಲುವ ಈ ಪ್ರಯೋಗವನ್ನು ನಿಲ್ಲಿಸಬೇಕೆಂದು ಆಗ್ರಹಿಸಿದರು.

● ಪನಾಮ ಕಾಲುವೆ:

ಹಳದಿಜ್ವರಕ್ಕೆ ಕಾರಣ ಒಂದು ವೈರಸ್. ಈ ವೈರಸ್ಸನ್ನು ರೋಗಿಗಳಿಂದ ಆರೋಗ್ಯವಂತರಿಗೆ ಹರಡುವುದು ಏಡಿಸ್ ಈಜಿಪ್ಟೈ ಎಂಬ ಸೊಳ್ಳೆ. ಇದನ್ನು ಮೊದಲ ಬಾರಿಗೆ ತಿಳಿಸಿದವನು ಕ್ಯೂಬಾ ವೈದ್ಯ ಫಿನ್ಲೆ. ಸೊಳ್ಳೆಯಿಂದಲೇ ಹಳದಿಜ್ವರ ಹರಡುತ್ತದೆ ಎನ್ನುವುದಕ್ಕೆ ಪುರಾವೆಯನ್ನು ನೀಡಿದವರು ಕ್ಯಾಂಪ್ ಲಾಜ಼ರ್‌ನಲ್ಲಿದ್ದ ರೀಡ್ ಮತ್ತು ಅವನ ಸಂಗಡಿಗರು. ಈ ಮಾಹಿತಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡವನು ಅಮೆರಿಕದ ವೈದ್ಯ ವಿಲಿಯಂ ಕ್ರಾಫರ್ಡ್ ಗೋರ್ಗಾಸ್. ಪನಾಮ ಕಾಲುವೆಯನ್ನು ನಿರ್ಮಿಸುವ ಹೊಣೆಯನ್ನು ಫ್ರೆಂಚ್ ಎಂಜಿನಿಯರುಗಳು ಹೊತ್ತಿದ್ದರು. ಆದರೆ, ಹಳದಿಜ್ವರದ ಉಪಟಳವನ್ನು ತಡೆಯಲಾಗದೆ ಅವರು ಯೋಜನೆಯಿಂದ ಹಿಂದಕ್ಕೆ ಸರಿದರು. ಆಗ ಅಮೆರಿಕನ್ ಎಂಜಿನಿಯರುಗಳಿಗೆ ಗೋರ್ಗಾಸ್ ಸಹಾಯ ಮಾಡಿದ. ಸೊಳ್ಳೆಗಳ ವರ್ಧನಾ ತಾಣಗಳನ್ನು ನಿರ್ಮೂಲನ ಮಾಡಿದರೆ, ಸಹಜವಾಗಿ ಹಳದಿಜ್ವರವು ಮಾಯವಾಗುತ್ತದೆ ಎಂದು ಲೆಕ್ಕ ಹಾಕಿದ. ಪನಾಮ ಕಾಲುವೆಯಲ್ಲಿ ನೀರು ನಿಲ್ಲದಂತೆ ಮಾಡಿದ. ಸೊಳ್ಳೆಗಳ ವರ್ಧನಾತಾಣಗಳನ್ನು ಪತ್ತೆಹಚ್ಚಿ ಅಲ್ಲಿದ್ದ ಸೊಳ್ಳೆಗಳ ಲಾರ್ವಗಳನ್ನು ನಿವಾರಿಸಿದ. ಇಡೀ ಪ್ರದೇಶದಲ್ಲಿ ನಿಯಮಿತವಾಗಿ ಧೂಮಸಿಂಚನವನ್ನು (ಫ್ಯೂಮಿಗೇಶನ್) ಮಾಡಿ ಸೊಳ್ಳೆಗಳನ್ನು ನಿವಾರಿಸಿದ. ಸೊಳ್ಳೆಗಳು ಜಾಗೃತವಾಗಿರುವ ವೇಳೆಯಲ್ಲಿ ಹೊರಗೆ ಓಡಾಡಬಾರದು ಎಂದ. ಮನೆಯ ಒಳಗೆ ಸೊಳ್ಳೆಯ ಪರದೆಯೊಳಗೇ ಮಲಗಬೇಕೆಂದ... ಈ ಎಲ್ಲ ಕ್ರಮಗಳಿಂದ ಹಳದಿಜ್ವರವು ಪನಾಮ ಪ್ರದೇಶದಿಂದ ಮಾಯವಾಯಿತು. ಅಮೆರಿಕನ್ ಎಂಜಿನಿಯರು ಗಳು ಪನಾಮ ಕಾಲುವೆಯನ್ನು ಕಟ್ಟಿ ಮುಗಿಸಿದರು.

● ವೈರುಧ್ಯ:

ಸಂಶೋಧನೆಗಳಲ್ಲಿ ಒಬ್ಬರಿಗೋ ಇಬ್ಬರಿಗೋ ಯಶಸ್ಸು ದೊರೆಯುತ್ತದೆ. ಹಳದಿಜ್ವರವು ಸೊಳ್ಳೆಗಳಿಂದ ಹರಡುತ್ತದೆ ಎನ್ನುವುದನ್ನು ಕಂಡುಹಿಡಿದ ಕೀರ್ತಿ ಮೇಜರ್ ವಾಲ್ಟರ್ ರೀಡ್-ಗೆ ಸಂದಿದೆ. ಅದು ಫಿನ್ಲೆಗೆ ಸಲ್ಲಬೇಕಾಗಿತ್ತು. ಕ್ಯಾರೆಲ್, ಲಾಜ಼ರ್, ಕ್ಲಾರಾ ಮಾಸ್, ಕಿಸ್ಸಿಂಜರ್, ಮೊರಾನ್ ಮುಂತಾದ ಅಸಂಖ್ಯ ಜನರಿಗೆ ಯಶಸ್ಸಿನಲ್ಲಿ ಯಾವುದೇ ಪಾಲು ದೊರೆಯಲಿಲ್ಲ. ಜೀವವನ್ನು ಬಲಿದಾನ ಮಾಡಿದ, ಜೀವನಪರ್ಯಂತ ನೋವಿನಿಂದ ನರಳುವ ಸ್ವಯಂಸೇವಕರಿಗೆ ಯಾವುದೇ ಕೀರ್ತಿಯು ದೊರೆಯುವುದಿಲ್ಲ. ಇದು ವೈದ್ಯಕೀಯ ಸಂಶೋಧನಾ ಜಗತ್ತಿನ ವೈರುಧ್ಯವಾಗಿದೆ.

ಲೇಡಿ ಮೆಹರ್‌ಬಾಯಿ ಟಾಟಾ ಮತ್ತು ಜುಬಿಲಿ ವಜ್ರ

ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಭಾರತದ ಕೈಗಾರಿಕಾ ಇತಿಹಾಸದಲ್ಲಿ 'ಟಾಟಾ' ಸಂಸ್ಥೆಯ ಹೆಸರು ಎಷ್ಟು ಪ್ರಮುಖವೋ, ದೇಶದ ಜನರ ಕಷ್ಟಕ್ಕೆ ಹೆಗಲು ಕೊಡುವ ಅವರ ಲೋಕೋಪಕಾರಿ ಗುಣವೂ ಅಷ್ಟೇ ಪ್ರಸಿದ್ಧ. ಈ ಉದಾತ್ತ ಪರಂಪರೆಯ ಹಿಂದೆ ಕೇವಲ ಪುರುಷರ ಶ್ರಮ ಮಾತ್ರವಿರಲಿಲ್ಲ, ಅದಕ್ಕೆ ಅಡಿಪಾಯ ಹಾಕಿದ ಕರುಣಾಮಯಿ ಮಹಿಳೆಯರ ತ್ಯಾಗವೂ ಇತ್ತು. ಅಂತಹ ಒಂದು ಅಪರೂಪದ, ಕಣ್ಣೀರು ತರಿಸುವ ಮತ್ತು ಪ್ರೇರಣೆ ನೀಡುವ ಭಾವುಕ ಕಥೆಯೇ ಲೇಡಿ ಮೆಹರ್‌ಬಾಯಿ ಟಾಟಾ ಅವರ ಜೀವನ ಗಾಥೆ. ಇದು ಕೇವಲ ಒಂದು ವಜ್ರದ ಕಥೆಯಲ್ಲ; ಆ ವಜ್ರದ ಹೊಳಪನ್ನು ಮೀರಿಸಿದ ಭಾರತೀಯ ನಾರಿಯೊಬ್ಬರ ವಿಶಾಲ ಹೃದಯದ ಕಥೆ.

ಮೆಹರ್‌ಬಾಯಿ ಅವರು ಭಾರತದ ಕೈಗಾರಿಕಾ ಪಿತಾಮಹ ಜಮ್ಸೆಡ್ಜಿ ಟಾಟಾ ಅವರ ಹಿರಿಯ ಸೊಸೆ ಹಾಗೂ ಸರ್ ದೊರಾಬ್ಜಿ ಟಾಟಾ ಅವರ ಧರ್ಮಪತ್ನಿ. ಮೆಹರ್‌ಬಾಯಿ ಅವರು ಕೇವಲ ಸುಂದರಿಯಷ್ಟೇ ಅಲ್ಲ, ಅತ್ಯಂತ ವಿದ್ಯಾವಂತ ಹಾಗೂ ಸಮಾಜಸೇವಕಿಯಾಗಿದ್ದರು. 1900ರ ದಶಕದ ಆರಂಭದಲ್ಲಿ ಅವರ ಪತಿ ದೊರಾಬ್ಜಿ ಟಾಟಾ ಅವರು ಮೆಹರ್‌ಬಾಯಿ ಅವರಿಗೆ ಜಗತ್ತಿನ ಅತ್ಯಂತ ಅಪರೂಪದ ವಜ್ರವೊಂದನ್ನು ಉಡುಗೊರೆಯಾಗಿ ನೀಡಿದ್ದರು. ಅದುವೇ 'ಜುಬಿಲಿ ಡೈಮಂಡ್'

ಸುಮಾರು 245 ಕ್ಯಾರೆಟ್ ತೂಕದ ಈ ವಜ್ರವು ಜಗತ್ಪ್ರಸಿದ್ಧ 'ಕೊಹಿನೂರ್' ವಜ್ರಕ್ಕಿಂತಲೂ ದುಪ್ಪಟ್ಟು ದೊಡ್ಡದಾಗಿತ್ತು. ಯಾವುದೇ ಸಭೆ-ಸಮಾರಂಭ ಗಳಿಗೆ ಹೋದಾಗ ಮೆಹರ್‌ಬಾಯಿ ಅವರು ಈ ಭವ್ಯವಾದ ವಜ್ರದ ಹಾರವನ್ನು ಧರಿಸುತ್ತಿದ್ದರು. ಅದು ಅವರ ಸೌಂದರ್ಯಕ್ಕೆ ಮತ್ತು ಟಾಟಾ ಸಾಮ್ರಾಜ್ಯದ ವೈಭವಕ್ಕೆ ಹಿಡಿದ ಕನ್ನಡಿಯಾಗಿತ್ತು.

ಕಾಲ ಉರುಳಿತು. 1920ರ ದಶಕದಲ್ಲಿ ಮೊದಲ ಮಹಾಯುದ್ಧ ಮುಗಿದ ನಂತರ, ಭಾರತದಲ್ಲಿ ತೀವ್ರ ಆರ್ಥಿಕ ಮುಗ್ಗಟ್ಟು ಎದುರಾಯಿತು. ಟಾಟಾ ಸಂಸ್ಥೆಯ ಹೆಮ್ಮೆಯ ಉದ್ಯಮವಾದ 'ಟಾಟಾ ಐರನ್ ಅಂಡ್ ಸ್ಟೀಲ್ ಕಂಪನಿ' (TISCO & ಇಂದಿನ ಟಾಟಾ ಸ್ಟೀಲ್) ಭಾರಿ ನಷ್ಟವನ್ನು ಅನುಭವಿಸಿತು. ಪರಿಸ್ಥಿತಿ ಎಷ್ಟು ಹದಗೆಟ್ಟಿತ್ತೆಂದರೆ, ಕಂಪನಿಯ ಸಾವಿರಾರು ಕಾರ್ಮಿಕರಿಗೆ ಸಂಬಳ ನೀಡಲು ಕೂಡ ಹಣವಿರಲಿಲ್ಲ. ಬ್ಯಾಂಕುಗಳು ಸಾಲ ನೀಡಲು ನಿರಾಕರಿಸುತ್ತಿದ್ದವು. ಇಡೀ ಟಾಟಾ ಸಾಮ್ರಾಜ್ಯವೇ ಮುಳುಗುವ ಭೀತಿಯಲ್ಲಿತ್ತು.

ಈ ಸಂಕಷ್ಟದ ಸಮಯದಲ್ಲಿ ಲೇಡಿ ಮೆಹರ್‌ಬಾಯಿ ಅವರು ಕೈಕಟ್ಟಿ ಕುಳಿತುಕೊಳ್ಳಲಿಲ್ಲ. ಪತಿಯ ಅಸಹಾಯಕತೆಯನ್ನು ಕಂಡ ಅವರು, ತಮಗಿಷ್ಟವಾದ ಇಡೀ ಜಗತ್ತೇ ಬೆರಗಾಗುತ್ತಿದ್ದ ಆ 245 ಕ್ಯಾರೆಟ್‌ನ ಜುಬಿಲಿ ವಜ್ರ ಸೇರಿದಂತೆ ತಮ್ಮ ಬಳಿಯಿದ್ದ ಎಲ್ಲ ವೈಯಕ್ತಿಕ ಆಭರಣಗಳನ್ನು ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಅಡವಿಡಲು ಮುಂದಾದರು.

ನನ್ನ ಆಭರಣಗಳಿಗಿಂತ ನನ್ನ ದೇಶದ ಉದ್ಯಮ ಮತ್ತು ನಮ್ಮನ್ನು ನಂಬಿದ ಕಾರ್ಮಿಕರ ಹೊಟ್ಟೆ ಮುಖ್ಯ ಎಂಬುದು ಅವರ ಉದಾತ್ತ ಚಿಂತನೆಯಾಗಿತ್ತು. ಆ ಒಡವೆಗಳನ್ನು ಅಡವಿಟ್ಟು ತಂದ ಹಣದಿಂದ ಕಂಪನಿಯು ಚೇತರಿಸಿಕೊಂಡಿತು, ಕಾರ್ಮಿಕರ ಸಂಬಳ ಪಾವತಿಯಾಯಿತು. ದೇಶದ ಅತಿ ದೊಡ್ಡ ಉದ್ಯಮವೊಂದು ಮುಚ್ಚಿಹೋಗ ದಂತೆ ಒಬ್ಬ ಮಹಿಳೆಯ ತ್ಯಾಗ ಅಂದು ಕಾಪಾಡಿತ್ತು.

ಟಾಟಾ ಕಂಪನಿಯೇನೋ ಬದುಕಿತು, ಆದರೆ ದುರದೃಷ್ಟವಶಾತ್ ಮೆಹರ್‌ಬಾಯಿ ಅವರ ಆಯುಷ್ಯ ಮುಗಿಯುತ್ತಾ ಬಂದಿತ್ತು. 1930ರ ದಶಕದ ಆರಂಭದಲ್ಲಿ ಅವರಿಗೆ ಲ್ಯುಕೇಮಿಯಾ ಕಾಯಿಲೆ ಇರುವುದು ಪತ್ತೆಯಾಯಿತು. ಅಂದು ಭಾರತದಲ್ಲಿ ಕ್ಯಾನ್ಸರ್‌ಗೆ ಯಾವುದೇ ಸೂಕ್ತ ಚಿಕಿತ್ಸೆ ಇರಲಿಲ್ಲ. ತೀವ್ರವಾಗಿ ಬಳಲಿದ ಮೆಹರ್‌ಬಾಯಿ ಅವರು 1931ರಲ್ಲಿ, ತಮ್ಮ 52ನೇ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದರು.

ಪತ್ನಿಯ ಅಗಲಿಕೆಯಿಂದ ಸರ್ ದೊರಾಬ್ಜಿ ಟಾಟಾ ಅವರು ಸಂಪೂರ್ಣವಾಗಿ ಜರ್ಜರಿತರಾದರು. ತನ್ನ ಹೆಂಡತಿಯನ್ನು ಬಲಿಪಡೆದ ಈ ಭೀಕರ ಕಾಯಿಲೆ ಭಾರತದ ಇನ್ಯಾವ ನಾಗರಿಕರಿಗೂ ಬರಬಾರದು, ಬಂದರೆ ಅವರಿಗೆ ದೇಶದಲ್ಲೇ ಉತ್ತಮ ಚಿಕಿತ್ಸೆ ಸಿಗಬೇಕು ಎಂದು ಅವರು ನಿರ್ಧರಿಸಿದರು. ಅದಕ್ಕಾಗಿ ದೊರಾಬ್ಜಿ ಅವರು ತಮ್ಮ ಪತ್ನಿಯ ಪ್ರೀತಿಯ ಸಂಕೇತವಾಗಿದ್ದ ಆ ಜುಬಿಲಿ ವಜ್ರ ಮತ್ತು ಇತರ ಎಲ್ಲ ಒಡವೆಗಳನ್ನು ಜಗತ್ತಿನ ಮಾರುಕಟ್ಟೆಯಲ್ಲಿ ಮಾರಿ ಕೋಟ್ಯಂತರ ರುಪಾಯಿ ಹಣವನ್ನು ಸಂಗ್ರಹಿಸಿದರು.

ಆ ಒಡವೆಗಳನ್ನು ಮಾರಿದ ಹಣದಿಂದ ದೊರಾಬ್ಜಿ ಟಾಟಾ ಅವರು ಕ್ಯಾನ್ಸರ್ ಸಂಶೋಧನೆ ಮತ್ತು ಚಿಕಿತ್ಸೆಗಾಗಿ ಒಂದು ಬೃಹತ್ ನಿಧಿಯನ್ನು ಸ್ಥಾಪಿಸಿದರು. ಇದೇ ಮುಂದೆ ಮುಂಬೈನಲ್ಲಿ ಲಕ್ಷಾಂತರ ಬಡ ಕ್ಯಾನ್ಸರ್ ರೋಗಿಗಳಿಗೆ ಉಚಿತ ಹಾಗೂ ರಿಯಾಯಿತಿ ದರದಲ್ಲಿ ಮರುಜೀವ ನೀಡುತ್ತಿರುವ ಜಗತ್ಪ್ರಸಿದ್ಧ 'ಟಾಟಾ ಮೆಮೋರಿಯಲ್ ಆಸ್ಪತ್ರೆ'ಯಾಗಿ ರೂಪಾಂತರಗೊಂಡಿತು.

ತಮ್ಮ ಸಾವಿಗೂ ಮುನ್ನ (1932ರಲ್ಲಿ) ದೊರಾಬ್ಜಿ ಅವರು ತಮ್ಮ ಇಡೀ ಆಸ್ತಿಯನ್ನು ಸೇರಿಸಿ ಸರ್ ದೊರಾಬ್ಜಿ ಟಾಟಾ ಟ್ರಸ್ಟ್ ಅನ್ನು ಸ್ಥಾಪಿಸಿದರು. ಇದು ಇಂದಿಗೂ ಭಾರತದ ಅತ್ಯಂತ ದೊಡ್ಡ ಲೋಕೋಪಕಾರಿ ಟ್ರಸ್ಟ್ ಆಗಿದೆ.

ಒಂದು ವಜ್ರದ ಹಾರ ಕೇವಲ ಆಡಂಬರದ ವಸ್ತುವಾಗಿ ಉಳಿಯದೆ, ಒಂದು ದೇಶದ ಉದ್ಯಮವನ್ನು ಬದುಕಿಸಿತು ಮತ್ತು ಇಂದಿಗೂ ಕೋಟ್ಯಂತರ ಜನರ ಜೀವ ಉಳಿಸುತ್ತಿರುವ ಆಸ್ಪತ್ರೆಯಾಗಿ ಮಾರ್ಪಟ್ಟಿತು. ಮೆಹರ್‌ಬಾಯಿ ಅವರ ತ್ಯಾಗ ಮತ್ತು ಅವರ ಪತಿಯ ಅಮರ ಪ್ರೇಮದ ಸಂಕೇತವಾಗಿ ಈ ಕಥೆ ಇತಿಹಾಸದಲ್ಲಿ ಸದಾ ಹೊಳೆಯುತ್ತಿರುತ್ತದೆ.

ಮನಸ್ಸಿನ ನಿರಾಳತೆಯೇ ಆರೋಗ್ಯಕ್ಕೆ ಸೋಪಾನ!

● ಬಸವರಾಜ ಶಿವಪ್ಪ ಗಿರಗಾಂವಿ

ಮನಸ್ಸೇ ಮರ್ಕಟ. ನೋಡಿದ್ದನ್ನು ಬೇಡುವುದು ಮತ್ತು ಮಾಡುವುದು ಸ್ವಾಭಾವಿಕ. ಇದು ಮನದಲ್ಲಿ ಚಂಚಲ ಹಾಗೂ ಗೊಂದಲವುಂಟಾಗಲು ಕಾರಣ. ಸದ್ಯದ ಅರೆ-ಬರೆ ಜ್ಞಾನ, ಸೋಮಾರಿತನ ಮತ್ತು ಸಮಾಧಾನವಿಲ್ಲದ ಬದುಕಿನಿಂದಾಗಿ ಪ್ರತಿಯೊಂದು ಕೆಲಸಗಳಲ್ಲಿ ದೃಢ ನಿರ್ಧಾರ ತೆಗೆದುಕೊಳ್ಳಲು ಅಡಚಣೆಯಾಗುತ್ತಿರುವುದಲ್ಲದೆ ಕಾಲಹರಣ ಹಾಗೂ ಹಾನಿ ಸಹ ಅನುಭವಿಸಲಾಗುತ್ತಿದೆ. ಸಮರ್ಪಕ ಜ್ಞಾನವಿದ್ದಾಗ ಮನಸ್ಸು ಸ್ಥಿರವಾಗುತ್ತದೆ ಮತ್ತು ಪ್ರತಿ ಕೆಲಸಗಳಲ್ಲಿ ಸಂಪೂರ್ಣವಾಗಿ ತನ್ಮಯತೆ ಹೊಂದಿ ಸೂಕ್ತ ನಿರ್ಣಯ ಮತ್ತು ಮನಸ್ಸಿನ ನಿರಾಳತೆಗೆ ಕಾರಣವಾಗುತ್ತದೆ.

ಮನಸ್ಸಿನಲ್ಲಿ ನಿರಾಳತೆ ಇರದಿದ್ದರೆ ಮಾನಸಿಕ ಮತ್ತು ಶಾರೀರಿಕ ಆರೋಗ್ಯವು ಹದಗೆಡುತ್ತದೆ. ಇಂದು ಬಹುತೇಕರಲ್ಲಿ ಮನಸ್ಸಿನ ನಿರಾಳತೆಯ ಕೊರತೆಯಿಂದಾಗಿ ಸ್ಥೂಲಕಾಯ, ಮಧುಮೇಹ, ರಕ್ತದೊತ್ತಡ ಮತ್ತು ಹೃದಯರೋಗಗಳು ಹೆಚ್ಚಾಗುತ್ತಿವೆಯಲ್ಲದೆ ಹಿಡಿದ ಕೆಲಸಗಳಲ್ಲಿ ಸೋಲು, ಹಾನಿ ಮತ್ತು ಅಪಹಾಸ್ಯಗಳು ಸಂಭವಿಸುತ್ತಿವೆ. ಮೊದಲೆ ರೋಗಗ್ರಸ್ಥ ಬದುಕು ಹೆಚ್ಚಾಗುತ್ತಿರುವ ಪ್ರಸಕ್ತ ಕಾಲಘಟ್ಟದಲ್ಲಿ ಮನಸ್ಸಿನ ನಿರಾಳತೆಯ ಕೊರತೆಯಿಂದಾಗಿ ಆನಂದಮಯ ಬದುನ್ನು ಕಳೆದುಕೊಳ್ಳುತ್ತಿರುವುದು ದುರಂತ.

ಮನಸ್ಸಿನಲ್ಲಿ ನಿರಂತರವಾಗಿರುವ ತಳಮಳ, ಚಂಚಲ, ಗೊಂದಲ, ದುಃಖ, ದಣಿವು, ದುಮ್ಮಾನ ಮತ್ತು ದುಗುಡತೆಗಳಿದ್ದಲ್ಲಿ ಆರೋಗ್ಯಕರ ಬದುಕು ಅಸಾಧ್ಯ. ಸದ್ಯದ ವೇಗಕರ ದಿನಮಾನಗಳಲ್ಲಿ ಸಹನೆ ಮತ್ತು ಸಮಾಧಾನವಿಲ್ಲದೆ ಬದುಕುತ್ತಿರುವುದರಿಂದ ನಿರಾಳತೆಯ ಕೊರತೆಯಿಂದಾಗಿ ಅನಾರೋಗ್ಯಪೀಡಿತರಾಗಬೇಕಾಗಿದೆ. ಇವು ಬೆಳೆಯುವ ಗಿಡ-ಮರಗಳಿಗೆ ಆರಂಭದಲ್ಲಿ ಅಂಟಿಕೊಳ್ಳುವ ರೋಗಗಳಂತಾಗಿವೆ. ಇವುಗಳು ಅಂತ್ಯವಾಗಬೇಕಾದರೆ ಮನದಲ್ಲಿರುವ ಭವಿಷ್ಯದ ಆಸೆ ಮತ್ತು ಗತಕಾಲದ ಚಿಂತೆಗಳನ್ನು ತೊಡೆದು ಹಾಕಬೇಕು. ಇದ್ದುದರಲ್ಲಿಯೆ ಸಂತೃಪ್ತಿ ಹೊಂದಿ ಮಾನವೀಯತೆ, ಮಮಕಾರ ಮತ್ತು ವೈರಾಗ್ಯಭಾವನೆ ನಿರ್ಮಿಸಿಕೊಳ್ಳಬೇಕು. ಕ್ಷಣಿಕ ಸುಖದ ಮೂಲಗಳಾದ ಅಧಿಕಾರ ಮತ್ತು ದುಡ್ಡಿನ ಸೆಳೆತಕ್ಕೆ ಮಾರುಹೋಗಿ ಮನಸ್ಸನ್ನು ಗಲಿಬಿಲಿ ಮಾಡಬಾರದು. ಮನಸ್ಸೆಂಬುದು ಮಂಜುಗಡ್ಡೆ ಇದ್ದಂತೆ ಆಸೆಯೆಂಬ ಬೆಂಕಿಗೆ ಬಲುಬೇಗ ಕರಗುತ್ತದೆ ಎಂದು ಪ್ರತಿ ಹೆಜ್ಜೆಯಲ್ಲಿ ನೆನಪಿಟ್ಟುಕೊಳ್ಳಬೇಕು.

ಪೂರ್ವಜರ ಕಾಲಘಟ್ಟದಲ್ಲಿ ಮಾನಸಿಕ ಶ್ರಮ ಕಿಂಚಿತ್ತು ಇರಲಿಲ್ಲ. ಬಡತನದ ಪ್ರಯುಕ್ತ ದಿನನಿತ್ಯ ದೈಹಿಕ ಶ್ರಮ ಕೈಗೊಂಡು ಉತ್ತಮ ಆರೋಗ್ಯ ಕಾಪಾಡಿಕೊಂಡಿದ್ದರು. ನಾಳೆಯ ಕುರಿತು ಚಿಂತಿಸದೆ ವಾಸ್ತವದಲ್ಲಿ ದೊರೆತಂತಹ ಆಹಾರ ಸೇವಿಸಿ, ಮೈ ತುಂಬ ದುಡಿದು, ಕಣ್ತುಂಬ ನಿದ್ರಿಸುತ್ತಿದ್ದರು. ಇದುವೆ ಅಂದಿನ ಜನರ ಆರೋಗ್ಯದ ಗುಟ್ಟಾಗಿತ್ತು. ಆದರೆ, ಇಂದು ಪ್ರತಿಯೊಬ್ಬರು ದೈಹಿಕ ಶ್ರಮವಿಲ್ಲದೆ ನಾಳೆಗಾಗಿ ಚಿಂತಿಸಿ ಮನಸ್ಸನ್ನು ಚಂಚಲ ಮತ್ತು ಗೊಂದಲದಲ್ಲಿ ಸಿಲುಕಿಸುತ್ತಿದ್ದಾರೆ. ಮನಸ್ಸೆಂಬುದು ಲಗಾಮಿಲ್ಲದ ಕುದುರೆಯಾಗಿದೆ. ಆದರೆ, ಸುಖಕರ ಆರೋಗ್ಯಕ್ಕೆ ಮನಸ್ಸಿನ ನಿಯಂತ್ರಣ ಅತೀ ಅವಶ್ಯ. ಮನಸ್ಸಿನ ನಿಯಂತ್ರಣದಿಂದ ಮಾತ್ರ ನಿರಾಳತೆಯು ಪ್ರಾಪ್ತ.

ಮಾನಸಿಕ ನಿರಾಳತೆಯ ಕೊರತೆಗೆ ಪ್ರಮುಖ ಕಾರಣಗಳೆಂದರೆ ಆಸೆ, ಅತಿಯಾಸೆ, ದುರಾಸೆಗಳೊಂದಿಗೆ ಬದುಕುವುದಾಗಿದೆ. ಆಕಸ್ಮಿಕವಾಗಿ ಬರುವ ದುಃಖಗಳಿಂದ ಖಿನ್ನತೆಗೆ ಒಳಗಾಗುವುದು. ನಮಗಿಂತ ಮೇಲುತ್ತರದಲ್ಲಿ ಬದುಕುವ ಜನರನ್ನು ಕಂಡು ಜಿಗುಪ್ಸೆ ತಾಳುವುದು. ಅವರಂತೆ ಬದುಕಲು ಹಪಹಪಿಸುವುದು, ಇದಕ್ಕಾಗಿ ಆರೋಗ್ಯವನ್ನು ಲೆಕ್ಕಿಸದೆ ಅನಾರೋಗ್ಯಕರ ಮಾರ್ಗದಲ್ಲಿ ನಡೆಯುವುದು. ಜ್ಞಾನ ಮತ್ತು ಸಾಮರ್ಥ್ಯವನ್ನು ಗಮನಿಸದೆ ಅಸಾಧ್ಯವಾದ ಕೆಲಸಕ್ಕೆ ಕೈ ಹಾಕುವುದರಿಂದ ಸೋಲುಂಟಾಗಿ ಮಾನಸಿಕ ನೆಮ್ಮದಿಯು ಹಾಳಾಗುತ್ತದೆ. ಆದ್ದರಿಂದ ಉತ್ತಮ ಆರೋಗ್ಯಕ್ಕಾಗಿ ಮನಸ್ಸಿಗೆ ಮುಗುದಾರವಿರಬೇಕು.

ಮಾನಸಿಕ ನಿರಾಳತೆ ಗಳಿಸಿಕೊಳ್ಳಲು ಪ್ರಮುಖವಾದ ಸಾಧನವೇ ತೃಪ್ತಿ. ಸಮಾಧಾನ ಮತ್ತು ಶಾಂತ ರೀತಿಯಿಂದ ಕೆಲಸ ನಿರ್ವಹಿಸುವುದು. ಸೂಕ್ತ ಕೆಲಸದ ನಿರ್ವಹಣೆಗೆ ಸಮರ್ಪಕ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುವುದು. ಮತ್ತೊಬ್ಬರ ಸಾಧನೆಗಳನ್ನು ಪ್ರಶಂಸಿಸುತ್ತಿರಬೇಕು ವಿನಃ ಹೊಟ್ಟೆಕಿಚ್ಚು ಪಡಬಾರದು. ಸೂಕ್ತ ಸಾಮರ್ಥ್ಯವಿಲ್ಲದೆ ನಿರ್ವಹಿಸುವ ಕೆಲಸಗಳು ಪೂರ್ವನಿಯೋಜಿತ ಸೋಲುಗಳೆಂದು ಅರಿಯಬೇಕು ಅಂದಾಗ ಮಾತ್ರ ಸುಖಕರ ಬದುಕನ್ನು ಅನುಭವಿಸಲು ಅವಶ್ಯವಿರುವ ಮಾನಸಿಕ ನಿರಾಳತೆಯು ಪ್ರಾಪ್ತಿಯಾಗುತ್ತದೆ. ನಿರಾಳಭಾವವಿಲ್ಲದೆ ಎಷ್ಟೇ ಸಿರಿ, ಸಂಪತ್ತು, ಪದವಿ, ಅಂತಸ್ತು, ಅಧಿಕಾರವಿದ್ದರೂ ಸುಂದರ ಬದುಕನ್ನು ಕಟ್ಟಿಕೊಳ್ಳುವುದು ಅಸಾಧ್ಯ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಮನೆಯ ನಡುವೆ ಇರುವ ಹಜಾರ (4)
3. ತರಗತಿಗೆ ಹೋದಾಗ ಆದ ಕೈವಶ (4)
5. ರೆಡಿಯಾಗಿ ಹೋದ ವ್ಯಾಯಾಮಶಾಲೆ (3)
7. ಹೇಳದೇ-ಕೇಳದೇ ಓಡಿ ಹೋಗುವಿಕೆ (3)
9. ಪರೀಕ್ಷೆಯಲ್ಲಿ ಉತ್ತೀರ್ಣನಾಗದಿರುವಿಕೆ (3)
11. ವ್ಯಾಪಾರಿಗೆ ಇನ್ನೊಂದು ಹೆಸರಾದೀತು (3)
13. ನೂಲು ತೆಗೆಯುವ ಒಂದು ಸಾಧನ (3)
16. ಕಶ್ಯಪ ಮತ್ತು ಕದ್ರುವಿನ ಮಗ (4)
17. ಗಟ್ಟಿಮುಟ್ಟಾದ ದೇಹವನ್ನು ಹೀಗೆನ್ನಬಹುದು (4)
18. ತೆಂಗಿನ ಚಿಪ್ಪು (3)

ಮೇಲಿಂದ ಕೆಳಕ್ಕೆ

1. ತಪ್ಪು ಮಾಡಿದ ನಂತರ ಮರುಗುವಿಕೆ (4)
2. ಲೆಕ್ಕ ಬರೆಯುವವನು (3)
3. ಉದ್ದ ಕೂದಲಿನ ಭಲ್ಲೂಕ (3)
4. ಸಿದ್ಧಪಡಿಸು ಎಂದರ್ಥ (4)
6. ಚೆಲುವೆಯಾದ ಹೆಂಡತಿಯವಳು (3)
8. ಹಿಂದಿನ ಪ್ರಧಾನಿಯೊಬ್ಬರ ಹೆಸರಿನ ತಾವರೆ (3)
10. ಕಾಲು ರುಪಾಯಿಯ ನಾಣ್ಯ (3)
12. ಚತುರ್ದಶ ರಾಶಿಗಳಲ್ಲಿ ನಾಲ್ಕನೇಯದು (4)
13. ಮೋಸ, ವಂಚನೆಗೆ ಮತ್ತೊಂದು ಹೆಸರಿದು (4)
14. ಹೆಚ್ಚು ಗಮನ ಕೊಡಬಾರದಾಗಿರುವ ಗಾಳಿಸುದ್ದಿ (3)
15. ಗರ್ಭಿಣಿಗೆ ಉಂಟಾಗುವ ಆಸೆ (3)

ಸರಿಯುತ್ತರಗಳು

[illegible]

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಆರೆಂಜ್ ಕ್ಯಾಪ್
ಕ್ಲಾಸೆನ್
ಹೈದ್ರಾಬಾದ್

ಪರ್ಪಲ್ ಕ್ಯಾಪ್
ಭುವನೇಶ್ವರ್ ಕುಮಾರ್
ಆರ್‌ಸಿಬಿ

IPL T20 2026

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಬೆಂಗಳೂರು	13	9	4	18
ಗುಜರಾತ್	13	8	5	16
ಹೈದರಾಬಾದ್	13	8	5	16
ಪಂಜಾಬ್	13	6	6	13
ರಾಜಸ್ಥಾನ್	12	6	6	12
ಚೆನ್ನೈ	13	6	7	12
ಡೆಲ್ಲಿ	13	6	7	12
ಕೋಲ್ಕತಾ	12	5	6	11
ಮುಂಬೈ	12	4	8	8
ಲಖನೌ	12	4	8	8

ಮಹತ್ವದ ಪಂದ್ಯದಲ್ಲಿ ಚೆನ್ನೈ ಕಿಂಗ್ಸ್ ವಿರುದ್ಧ ಹೈದ್ರಾಬಾದ್‌ಗೆ 5 ವಿಕೆಟ್ ಜಯ

ತಲಾ 8 ಜಯ: 1 ಪಂದ್ಯ ಬಾಕಿಯಿರುವಂತೆ ಹೈದ್ರಾಬಾದ್, ಗುಜರಾತ್ ಜೆಗಿತ

ಹೈದ್ರಾಬಾದ್, ಗುಜರಾತ್ ಪ್ಲೇಆಫ್‌ಗೆ

ಚೆನ್ನೈ: ಪ್ಲೇಆಫ್ ದೃಷ್ಟಿಯಿಂದ ಅತ್ಯಂತ ಮಹತ್ವ ಪಡೆದಿದ್ದ ಐಪಿಎಲ್ ಪಂದ್ಯದಲ್ಲಿ ಸೋಮವಾರ ಚೆನ್ನೈ ಸೂಪರ್ ಕಿಂಗ್ಸ್ ಎದುರು ಸನ್‌ರೈಸರ್ಸ್ ಹೈದರಾಬಾದ್ 5 ವಿಕೆಟ್‌ಗಳಿಂದ ಗೆಲುವು ಸಾಧಿಸಿದೆ. ಅಲ್ಲಿಗೆ ಹೈದರಾಬಾದ್ ಪ್ಲೇಆಫ್ ಪ್ರವೇಶಿಸಿದೆ. ಅದರೊಂದಿಗೆ ಗುಜರಾತ್ ಟೈಟಾನ್ಸ್ ಕೂಡ ಪ್ಲೇಆಫ್‌ಗೆ ಜಿಗಿದಿದೆ. ಇನ್ನೊಂದು ಸ್ಥಾನಕ್ಕಾಗಿ ರಾಜಸ್ಥಾನ, ಚೆನ್ನೈ, ಪಂಜಾಬ್ ತಂಡಗಳು ಪೈಪೋಟಿ ನಡೆಸಿವೆ.

ಟಾಸ್ ಗೆದ್ದ ಚೆನ್ನೈ ಸೂಪರ್ ಕಿಂಗ್ಸ್ ಮೊದಲು ಬ್ಯಾಟ್ ಮಾಡಿತು. ಸನ್‌ರೈಸರ್ಸ್ ಹೈದರಾಬಾದ್ ಬಿಗು ಬೌಲಿಂಗ್ ನಡೆಸಿದ್ದರಿಂದ ಚೆನ್ನೈ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 180 ರನ್ ಗಳಿಸಿತು. ಇದನ್ನು ಬೆನ್ನತ್ತಿದ ಹೈದರಾಬಾದ್ 19 ಓವರ್‌ಗಳಲ್ಲಿ 5 ವಿಕೆಟ್‌ಗೆ 181 ರನ್ ಗಳಿಸಿತು. ಇಶಾನ್ ಕಿಶನ್ 47 ಎಸೆತಗಳಲ್ಲಿ 70 ರನ್ ಸಿಡಿಸಿದರು. ಹೆನ್ರಿಕ್ ಕ್ಲಾಸೆನ್ 47 ರನ್ ಚಚ್ಚಿದರು.

ಇಶಾನ್ ಕಿಶನ್

ಚೆನ್ನೈ ಪರ ಯಾರಿಂದಲೂ ದೊಡ್ಡ ಇನಿಂಗ್ಸ್ ದಾಖಲಾಗಲಿಲ್ಲ. ಸಂಜು ಸ್ಯಾಮ್ಸನ್ 13 ಎಸೆತಗಳಲ್ಲಿ 27 ರನ್ ಸಿಡಿಸಿ ಔಟಾದರು. ನಾಯಕ ಋತುರಾಜ್ ಗಾಯಕ್ವಾಡ್ ಅವರ ಕಳಪೆಯಾಟ ಮುಂದುವರಿಯಿತು. ಅವರು ನಿಧಾನವಾಗಿ ಆಡಿ 21 ಎಸೆತಗಳಲ್ಲಿ 15 ರನ್ ಸಿಡಿಸಿದರು. ಈ ಇನಿಂಗ್ಸ್ ನಿರಾಶೆ ಮೂಡಿಸಿತು. ಕಾರ್ತಿಕ್ ಶರ್ಮಾ 19 ಎಸೆತಗಳಲ್ಲಿ 32 ರನ್ ಗಳಿಸಿದರು. ದ.ಆಫ್ರಿಕಾ ಯುವ ಆಟಗಾರ ಡೆವಾಲ್ಡ್ ಬ್ರೆವಿಸ್ 27 ಎಸೆತಗಳಲ್ಲಿ 44 ರನ್ ಗಳಿಸಿದರು. ಆದರೆ ಶಿವಂ ದುಬೆ ನಿಧಾನವಾಗಿ ಆಡಿ 23 ಎಸೆತಗಳಲ್ಲಿ 26 ರನ್ ಗಳಿಸಿದರು.

ಹೈದರಾಬಾದ್ ಬೌಲಿಂಗ್ ಪ್ರಭಾವಿಯಾಗಿತ್ತು. ನಾಯಕ ಪ್ಯಾಟ್ ಕಮಿನ್ಸ್ 28 ರನ್ ನೀಡಿ 3 ವಿಕೆಟ್ ಪಡೆದರು. ರನ್ ನಿಯಂತ್ರಣದಲ್ಲಿ ಅವರ ಪಾತ್ರ ಮುಖ್ಯವಾಗಿತ್ತು. ಸಕಿಬ್ ಹಸನ್ 2 ವಿಕೆಟ್ ಪಡೆದರೂ 34 ರನ್ ನೀಡಿದರು. ಚೆನ್ನೈ ಬೃಹತ್ ಮೊತ್ತ ಗಳಿಸಲು ಭಾರೀ ಯತ್ನ ನಡೆಸಿದರೂ, ಹೈದರಾಬಾದ್ ಅದಕ್ಕೆ ಅವಕಾಶ ನೀಡಲಿಲ್ಲ. ಹಾಗಾಗಿ ಸ್ಪರ್ಧಾತ್ಮಕ ಮೊತ್ತ ಗಳಿಸಲಷ್ಟೇ ಅದಕ್ಕೆ ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರ್: ಚೆನ್ನೈ ಕಿಂಗ್ಸ್ 20 ಓವರ್, 180/7 (ಡೆವಾಲ್ಡ್ ಬ್ರೆವಿಸ್ ಬಿ ಮಾಲಿಂಗ 44, ಕಾರ್ತಿಕ್ ಶರ್ಮಾ 32, ಪ್ಯಾಟ್ ಕಮಿನ್ಸ್ 28ಕ್ಕೆ 3, ಸಕಿಬ್ ಹಸನ್ 34ಕ್ಕೆ 2). ಹೈದರಾಬಾದ್ 19 ಓವರ್, 181/5 (ಇಶಾನ್ ಕಿಶನ್ 70, ಕ್ಲಾಸೆನ್ 47, ಮುಕೇಶ್ ಚೌಧರಿ 36ಕ್ಕೆ 2).

ರಾಜಸ್ಥಾನ vs ಲಖನೌ

ಒಟ್ಟು ಪಂದ್ಯ	7
ರಾಜಸ್ಥಾನ್ ಜಯ	5
ಲಖನೌ	2
ಫಲಿತಾಂಶವಿಲ್ಲ	0

ಅಂಕಣ ಹೇಗಿದೆ?

ಜೈಪುರದಲ್ಲಿ ಸಂತುಲಿತ ಅಂಕಣ ವನ್ನು ತಯಾರಿಸಲಾಗಿದೆ. ಆದರೂ ಬ್ಯಾಟಿಂಗ್‌ಗೆ ತುಸು ಹೆಚ್ಚೇ ನೆರವು ನೀಡುತ್ತದೆ. ಚೆಂಡು ಉತ್ತಮವಾಗಿ ಬೌನ್ಸ್ ಆಗುತ್ತದೆ ಹಾಗಾಗಿ ಬೌಲರ್‌ಗಳಿಗೂ ಅವಕಾಶವಿದೆ. ಇನ್ನೊಂದು ಬೌಂಡರಿಗಳು ಕಿರಿದಾಗಿರುವುದರಿ ಂದ ಬ್ಯಾಟರ್‌ಗಳಿಗೆ ಅವಕಾಶ ವಿದೆ. 2ನೇ ಇನಿಂಗ್ಸ್‌ನಲ್ಲಿ ಇಬ್ಬನಿ ಕಾಡು ವುದರಿಂದ ಬೌಲರ್‌ಗಳಿಗೆ ಕಷ್ಟ ವಾಗುತ್ತದೆ.

ಇನ್ನೊಂದು ಪ್ಲೇಆಫ್ ಸ್ಥಾನಕ್ಕಾಗಿ ಸೆಣಸಾಟ

ಇನ್ನೊಂದು ಪ್ಲೇಆಫ್ ಸ್ಥಾನಕ್ಕಾಗಿ ತೀವ್ರ ಪೈಪೋಟಿ ಎದುರಾಗಿದೆ. ಸದ್ಯ ರನ್‌ರೇಟ್ ಚೆನ್ನಾಗಿರುವ ಪಂಜಾಬ್, ರಾಜಸ್ಥಾನ, ಡೆಲ್ಲಿ ನಡುವೆ ಪೈಪೋಟಿ ಇದೆ. ರಾಜಸ್ಥಾನದ ರನ್‌ರೇಟ್ ಕಡಿಮೆಯಿದ್ದರೂ ಅದಕ್ಕೆ ಇನ್ನೂ ಎರಡು ಪಂದ್ಯಗಳು ಬಾಕಿಯಿವೆ. ಮಂಗಳವಾರ ಅದು ಲಖನೌ ವಿರುದ್ಧ ಗೆದ್ದು ರನ್‌ರೇಟ್ ವೃದ್ಧಿಸಿಕೊಂಡರೆ ಅದು ಪ್ರಬಲ ಸ್ಥಿತಿಗೆ ತಲುಪಲಿದೆ. ಆಗದಕ್ಕೆ ಈಗಾಗಲೇ ಹೊರಬಿದ್ದಿರುವ ಮುಂಬೈ ವಿರುದ್ಧ ಇನ್ನೊಂದು ಪಂದ್ಯ ಉಳಿಯಲಿದೆ. ಅಲ್ಲೂ ಗೆದ್ದರೆ ಮುಲಾಜಿಲ್ಲದೇ ಮೇಲೇರುತ್ತದೆ. ಎರಡೂ ಪಂದ್ಯ ಸೋತರೆ ಅದು ಹೊರಬೀಳಲಿದೆ. ಪಂಜಾಬ್ ಲಖನೌ ವಿರುದ್ಧ ಗೆದ್ದರೆ ಸ್ಥಿತಿ ಉತ್ತಮಗೊಳ್ಳುತ್ತದೆ. ಅದರ ರನ್‌ರೇಟ್ ಚೆನ್ನಾಗಿದೆ. ಆದರೆ ರಾಜಸ್ಥಾನ ಸೋಲುವುದನ್ನೇ ಹಾರೈಸಬೇಕು ಅಷ್ಟೇ. ಡೆಲ್ಲಿಯ ಕುರಿತು ವಾಸ್ತವಿಕ ಲೆಕ್ಕಾಚಾರದಲ್ಲಿ ಯಾರಿಗೂ ನಿರೀಕ್ಷೆಯಿಲ್ಲ. ಆದರೆ ಲೆಕ್ಕಾಚಾರದ ದೃಷ್ಟಿಯಿಂದ ನೋಡಿದರೆ ಅದು ಕೋಲ್ಕತಾ ವಿರುದ್ಧ ಗೆದ್ದು, ಗೆಲುವಿನ ಸಂಖ್ಯೆ 7ಕ್ಕೇರಿಸಿಕೊಂಡರೆ, ಉಳಿದ ತಂಡಗಳು ತಲಾ 7ಕ್ಕೇರಿದರೆ, ಆಗ ರನ್‌ರೇಟ್ ಅನ್ನು ಗಣಿಸಲಾಗುತ್ತದೆ. ಸದ್ಯ ದೆಹಲಿ ರನ್‌ರೇಟ್ ಕಳಪೆಯಾಗಿದೆ.

ಸಮಾಚಾರ ಸಣ್ಣದಲ್ಲ

ಪೇಸ್ ತಾಯಿ, ಜೆನ್ನಿಫರ್ ನಿಧನ

ಕೋಲ್ಕತಾ: ಭಾರತ ಬಾಸ್ಕೆಟ್‌ಬಾಲ್ ತಂಡದ ಮಾಜಿ ನಾಯಕಿ, ಒಲಿಂಪಿಕ್ಸ್ ಸ್ಪರ್ಧಿ, ವಿಶ್ವವಿಖ್ಯಾತ ಮಾಜಿ ಟೆನಿಸಿಗ ಲಿಯಾಂಡರ್ ಪೇಸ್ ಅವರ ತಾಯಿ ಜೆನ್ನಿಫರ್ ಪೇಸ್ (72) ಭಾನುವಾರ ತೀರಿ ಕೊಂಡಿದ್ದಾರೆ. ದೀರ್ಘಕಾಲ ಕ್ಯಾನ್ಸರ್ ರೋಗ ದಿಂದ ನರಳುತ್ತಿದ್ದ ಅವರ ಅಂತ್ಯಕ್ರಿಯೆ ಸೋಮ ವಾರ ಕೋಲ್ಕತಾದ ಸೇಂಟ್ ಥಾಮಸ್ ಚರ್ಚ್‌ನಲ್ಲಿ ನಡೆದಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಪ.ಬಂಗಾಳದ ಖ್ಯಾತ ನಾಟಕಕಾರ ಮೈಕೇಲ್ ಮಧುಸೂದನ ದತ್ತ ಅವರ ಮರಿ ಮೊಮ್ಮಗಳು ಜೆನ್ನಿಫರ್ ಎನ್ನುವುದು ಗಮನಾರ್ಹ. ಲಿಯಾಂಡರ್ ಅವರ ತಂದೆಯೂ ಭಾರತದ ಖ್ಯಾತ ಕ್ರೀಡಾಪಟುಗಳಲ್ಲೊಬ್ಬರು. 1972ರಲ್ಲಿ ಮ್ಯೂನಿಚ್‌ನಲ್ಲಿ ಕಂಚಿನ ಪದಕ ಭಾರತ ಹಾಕಿ ತಂಡದ ಸದಸ್ಯರಾಗಿದ್ದರು.

ಪಂಜಾಬ್ ಡಗೌಟಲ್ಲಿ ಪಾಂಟಿಂಗ್ ಏಕಾಂಗಿ

ಚೆನ್ನೈ: ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ವಿರುದ್ಧದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಸೋಲು, ತಂಡದ ಮುಖ್ಯ ಕೋಚ್ ರಿಕಿ ಪಾಂಟಿಂಗ್ ಅವರನ್ನು ಇನ್ನಿಲ್ಲದಂತೆ ಕಾಡುತ್ತಿದೆ. ಪಂದ್ಯದ ಬಳಿಕ ಪಂಜಾಬ್ ತಂಡದ ಬೆಂಚ್‌ನಲ್ಲಿ ಅವರನ್ನು ಏಕಾಂಗಿಯಾಗಿ ಕಂಡ ಭಾರತದ ಮಾಜಿ ಸ್ಪಿನ್ ಮಾಂತ್ರಿಕ ಆರ್.ಅಶ್ವಿನ್, ಈ ದೃಶ್ಯವನ್ನು ಶಕ್ತಿಯುತ ಎಂದು ಬಣ್ಣಿಸಿದ್ದಾರೆ. ಆರ್‌ಸಿಬಿ ವಿರುದ್ಧ ಸೋತಿದ್ದರಿಂದ ಪಂಜಾಬ್ ಬಹುತೇಕ ಪ್ಲೇಆಫ್‌ನಿಂದ ಹೊರಬಿದ್ದಿದೆ. 2018ರಲ್ಲಿ (ಆಗ ಅಶ್ವಿನ್ ಪಂಜಾಬ್ ಪರ ಆಡುತ್ತಿದ್ದರು) ನಾನೂ ಕೂಡ ಇದೇ ರೀತಿ ಡಗೌಟ್‌ನಲ್ಲಿ ಏಕಾಂಗಿಯಾಗಿ ಕುಳಿತಿದ್ದೆ. ಆಗ ನನ್ನ ಮನಸ್ಸಿನಲ್ಲಿ ಮೂಡಿದ್ದ ನೂರಾರು ಪ್ರಶ್ನೆಗಳು ಈಗ ರಿಕಿ ಪಾಂಟಿಂಗ್ ಅವರಲ್ಲಿ ಮೂಡುತ್ತಿದೆ. ನಾನು ಅವರು ಅನುಭವಿಸುತ್ತಿರುವ ಸಂಕಟವನ್ನು ಅರ್ಥಮಾಡಿಕೊಳ್ಳಬಲ್ಲೆ ಎಂದು ಅಶ್ವಿನ್ ಮಾರ್ಮಿಕವಾಗಿ ಹೇಳಿದ್ದಾರೆ.

ಮಮತಾ ಕಾಲದ ವಿವಾದಿತ ಫುಟ್‌ಬಾಲ್ ಪ್ರತಿಮೆ ತೆರವು

ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬೆನ್ನಲ್ಲೇ ತೆರವಿಗೆ ನಿರ್ಧಾರ

ಬಿಸ್ವಾ ಬಾಂಗ್ಲಾ ಪ್ರತಿಮೆಗೆ ಅರ್ಥವೇ ಇಲ್ಲ ಎಂದ ಕ್ರೀಡಾಸಚಿವ

ಕೋಲ್ಕತಾ: ಫುಟ್‌ಬಾಲ್ ಅನ್ನು ಅತಿಯಾಗಿ ಪ್ರೀತಿಸುವ ಜನರಿರುವ ಪಶ್ಚಿಮ ಬಂಗಾಳದಲ್ಲಿ ನಡೆದಿರುವ ಘಟನೆ ಇದೀಗ ಇಡೀ ದೇಶದ ಗಮನ ಸೆಳೆದಿದೆ. ನಗರದ ಸಾಲ್ಟ್ ಲೇಕ್ ಕ್ರೀಡಾಂಗಣದ ಮುಂಭಾಗದಲ್ಲಿ ಸ್ಥಾಪಿಸಲಾಗಿರುವ ವಿವಾದಿತ ಫುಟ್‌ಬಾಲ್ ಪ್ರತಿಮೆ 'ಬಿಸ್ವಾ ಬಾಂಗ್ಲಾ'ವನ್ನು ತೆರವುಗೊಳಿಸಲು ಬಿಜೆಪಿ ಸರಕಾರ ನಿರ್ಧರಿಸಿದೆ. ಅದರ ಬದಲು ಅಲ್ಲಿ ಅಶೋಕ ಸ್ತಂಭವನ್ನು ಸ್ಥಾಪಿಸಲು ಬಂಗಾಳದ ನೂತನ ಕ್ರೀಡಾ ಸಚಿವ ನಿಶೀಥ್ ಪ್ರಾಮಾಣಿಕ್ ನಿರ್ಧರಿಸಿದ್ದಾರೆ.

'ಬಿಸ್ವಾ ಬಾಂಗ್ಲಾ' ಅನಾವರಣಗೊಂಡ ಕ್ಷಣದಿಂದಲೇ ಫುಟ್‌ಬಾಲ್ ಅಭಿಮಾನಿಗಳಲ್ಲಿ ತೀವ್ರ ಭಿನ್ನಾಭಿಪ್ರಾಯ ಮೂಡಿಸಿತ್ತು. ಅದರ ಸಂಕೇತ ಮತ್ತು ದೃಶ್ಯ ವಿನ್ಯಾಸದ ಬಗ್ಗೆ ಅನೇಕರು ಪ್ರಶ್ನೆಗಳನ್ನು ಎತ್ತಿದ್ದರು. ಆದರೆ ನಿಕಟಪೂರ್ವ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರೇ ಈ ಪ್ರತಿಮೆಯನ್ನು ವಿನ್ಯಾಸಗೊಳಿಸಿದ್ದರಿಂದ ಹಾಗೆಯೇ ಇತ್ತು. ಇದೀಗ ಈ ವಿವಾದಾತ್ಮಕ ರಚನೆಯನ್ನು ತೆರವುಗೊಳಿಸಲು ಪಶ್ಚಿಮ ಬಂಗಾಳದಲ್ಲಿ ನೂತನವಾಗಿ ಅಧಿಕಾರಕ್ಕೆ ಬಂದಿರುವ ಸರ್ಕಾರ ನಿರ್ಧರಿಸಿದೆ.

ರಾಜಕೀಯ ಬೆಳವಣಿಗೆ: ಭಾನುವಾರ ಸಾಲ್ಟ್ ಲೇಕ್ ಕ್ರೀಡಾಂಗಣದಲ್ಲಿ ಇಂಡಿಯನ್ ಸೂಪರ್ ಲೀಗ್ ಕೂಟದಲ್ಲಿನ ಮೋಹನ್ ಬಗಾನ್ ಮತ್ತು ಈಸ್ಟ್ ಬೆಂಗಾಲ್ ನಡುವೆ ನಡೆದ ಕೋಲ್ಕತಾ ನಡುವಿನ ಪಂದ್ಯವು ಅತ್ಯಂತ ರೋಮಾಂಚನಕಾರಿಯಾಗಿತ್ತು. ಪಂದ್ಯ ಮುಗಿದ ನಂತರ ನಡೆದ ರಾಜಕೀಯ ಬೆಳವಣಿಗೆಗಳು ಭಾರಿ ಸುದ್ದಿಗೆ ಗ್ರಾಸವಾಗಿವೆ. ಸಚಿವ ನಿಶೀಥ್ ಪ್ರಾಮಾಣಿಕ್ ಅವರು ಸಾಲ್ಟ್ ಲೇಕ್ ಕ್ರೀಡಾಂಗಣದ ಹೊರಗಿರುವ ಈ ವಿವಾದಿತ ಪ್ರತಿಮೆಯನ್ನು ಅಧಿಕೃತವಾಗಿ ತೆರವುಗೊಳಿಸಲಾಗುವುದು ಎಂದು ಪ್ರಕಟಿಸಿದ್ದಾರೆ. 2017ರಲ್ಲಿ ಸ್ಥಾಪನೆಗೊಂಡಿದ್ದ ಬಿಸ್ವಾ ಬಾಂಗ್ಲಾ ಪ್ರತಿಮೆಯಲ್ಲಿ ಎರಡು ಬಲಿಷ್ಠ ಕಾಲುಗಳಿವೆ. ಸೊಂಟದವರೆಗೆ ಮಾತ್ರ ದೇಹವಿದ್ದು, ಅಲ್ಲಿ ಒಂದು ಫುಟ್‌ಬಾಲ್ ಅನ್ನು ಇಟ್ಟಂತೆ ರಚಿಸಲಾಗಿದೆ. ಇದಕ್ಕೆ ಏನು ಅರ್ಥ ಎನ್ನುವುದೇ ಇದುವರೆಗೆ ಸ್ಪಷ್ಟವಾಗಿಲ್ಲ. ಹಾಗಾಗಿ ಹಲವರು ತೀವ್ರ ಚರ್ಚೆಗೊಳಪಡಿಸಿದ್ದಾರೆ.

ಸತತ ಮಳೆಗೆ ಎಸ್.ಎಂ.ಕೃಷ್ಣ ಬೆಂಗಳೂರು ಟೆನಿಸ್ ಪಂದ್ಯಗಳು ಸ್ಥಗಿತ

ನಿಂತುಹೋಗಿರುವ ಪಂದ್ಯಗಳ ಮುಂದುವರಿಕೆಗೆ ಇಂದೂ ಮಳೆಯಡ್ಡಿ?

ಕಿರಿಯ ಆರಾಧ್ಯ, ಕ್ಷಿತಿಜ್ ಮುಖ್ಯಸುತ್ತಿಗೆ ಲಗ್ಗೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಇಲ್ಲಿನ ಎಸ್.ಎಂ.ಕೃಷ್ಣ ಅಂಕಣದಲ್ಲಿ ಸೋಮವಾರ ಆರಂಭವಾಗಿರುವ ಎಸ್.ಎಂ.ಕೃಷ್ಣ ಸ್ಮಾರಕ ಮುಕ್ತ ಎಟಿಪಿ ಚಾಲೆಂಜರ್ ಟೆನಿಸ್‌ನಲ್ಲಿ ಆರಾಧ್ಯ ಕ್ಷಿತಿಜ್ ಗೆದ್ದು ಮುಖ್ಯಸುತ್ತಿಗೇರಿದ್ದಾರೆ. ಬೆಂಗಳೂರಿನ 17 ವರ್ಷದ ಆಟಗಾರ ಆರಾಧ್ಯ ಅತ್ಯುತ್ತಮ ಪ್ರದರ್ಶನ ನೀಡಿ, ನಿತಿನ್ ಕುಮಾರ್ ಸಿನ್ಹಾರನ್ನು 7-6, 6-4ರಿಂದ ನೇರ ಸೆಟ್‌ಗಳಿಂದ ಮಣಿಸಿದರು. ರಾಜ್ಯದ ಪ್ರತಿಭಾವಂತ ಕಿರಿಯ ಆಟಗಾರರಲ್ಲೊಬ್ಬರೆಂದು ಕರೆಸಿಕೊಂಡಿರುವ ಕ್ಷಿತಿಜ್, ಅಂತಿಮ ಅರ್ಹತಾಸುತ್ತಿನಲ್ಲಿ ಪ್ರಭಾವಿ ಪ್ರದರ್ಶನ ತೋರಿದರು. ಉಳಿದಂತೆ ಸೋಮವಾರ ಹಲವು ಪಂದ್ಯಗಳು ಒಂದೋ ರದ್ದಾದವು, ಇಲ್ಲವೇ ಸ್ವಲ್ಪ ಮಾತ್ರ ನಡೆಯಿತು. ಹೀಗಾಗಿ ಮಂಗಳವಾರದ ಆಟದ ಮೇಲೆ ಎಲ್ಲರ ಗಮನ ಬಿದ್ದಿದೆ. ಜಪಾನಿನ ರ್‍ಯುಕಿ ಮತ್ಸುದಾ-ಯೂಸುಕೆ ಟಕಹಶಿ (3-4) ನಡುವಿನ ಪಂದ್ಯ ಮಳೆಯಿಂದ ನಿಂತು ಹೋಯಿತು. ಡೊಮಿನಿಕ್ ಪಲನ್-ಕೊಕೊರು ಇಸೊಮುರಾ (6-4, 2-1), ಕರಣ್ ಸಿಂಗ್-ಮಿತ್ಸುಕಿ ವೀ ಕಾಂಗ್ (5-5) ಪಂದ್ಯಗಳೂ ಅರ್ಧಕ್ಕೆ ಸ್ಥಗಿತವಾದವು. ದಿಗ್ವಿಜಯ್ ಪ್ರತಾಪ್ ಸಿಂಗ್-ಲಿಯೋ ವಿಥೂಂತೀನ್, ಮ್ಯಾಕ್ಸಿಮಸ್ ಜೋನ್ಸ್-ಮುಕುಂದ್ ಶಶಿಕುಮಾರ್ ಪಂದ್ಯ ಆರಂಭವಾಗಲೇ ಇಲ್ಲ. ಸೋಮವಾರ ಸಂಜೆ 6.30ರ ಹೊತ್ತಿಗೆ ಅಂಕಣವನ್ನು ಒಣಗಿಸಿ ಮತ್ತೆ ಪಂದ್ಯಗಳಿಗೆ ಸಜ್ಜು ಮಾಡಲಾಗಿತ್ತು. ಆದರೆ ಮತೆ ಮಳೆ ಸುರಿಯುವುದರಿಂದ ಪಂದ್ಯಗಳನ್ನು ನಿಲ್ಲಿಸುವುದು ಅನಿವಾರ್ಯವಾಯಿತು.



ಕಣಕ್ಕಿಳಿಯಲಿಲ್ಲ ಧೋನಿ, ನಿವೃತ್ತಿ ವದಂತಿಗೆ ನಿರುತ್ತರ

ಚೆನ್ನೈ: ಮಂಡಿನೋವಿನಿಂದ ಈ ಋತುವಿನ ಯಾವುದೇ ಪಂದ್ಯಗಳಲ್ಲಿ ಎಂ.ಎಸ್.ಧೋನಿ ಚೆನ್ನೈ ಪರ ಆಡಿಲ್ಲ. ಸೋಮವಾರ ಚೆನ್ನೈ ನೆಲದಲ್ಲಿ ಈ ಬಾರಿಯ ಕೊನೆಯ ಐಪಿಎಲ್ ಪಂದ್ಯ ನಡೆದಿದ್ದರಿಂದ ಇಲ್ಲಾದರೂ ಧೋನಿ ಆಡಬಹುದು ಎಂಬ ನಿರೀಕ್ಷೆಯಿತ್ತು. ಆದರೆ ಇಲ್ಲೂ ಅವರು ಫಿಟ್‌ನೆಸ್ ಕೊರತೆಯಿಂದ ಕಣಕ್ಕಿಳಿಯದೇ ಅಭಿಮಾನಿಗಳಿಗೆ ನಿರಾಶೆ ಮೂಡಿಸಿದರು. ಧೋನಿ ಈ ಪಂದ್ಯದಲ್ಲಿ ಆಡಿ ನಿವೃತ್ತರಾಗುತ್ತಾರೆ ಎಂಬ ವದಂತಿಗಳಿದ್ದವು. ಅವರ ನಿವೃತ್ತಿ ಸುದ್ದಿಗಳಿಗೂ ಯಾವುದೇ ಉತ್ತರ ಸಿಕ್ಕಿಲ್ಲ.

ಸನ್, ಆರ್‌ಸಿಬಿ ಟಿಕೆಟ್ ಬೆಲೆ ದುಪ್ಪಟ್ಟು ಹೆಚ್ಚಳ

ಹೈದರಾಬಾದ್: ಸಾಮಾನ್ಯವಾಗಿ ಬೆಂಗಳೂರಿನಲ್ಲಿ ಆರ್‌ಸಿಬಿ ಪಂದ್ಯ ನಡೆದರೆ ಟಿಕೆಟ್ ಬೆಲೆ ಗಗನಕ್ಕೇರುತ್ತದೆ. ಆದರೆ ಮೇ 22ರಂದು ಹೈದರಾಬಾದ್‌ನಲ್ಲಿ ನಡೆಯಲಿರುವ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯಕ್ಕೂ ವಿಪರೀತ ಟಿಕೆಟ್ ಬೇಡಿಕೆಯಿದೆ. ಈ ಕಾರಣಕ್ಕೆ ಹೈದರಾ ಬಾದ್ ವ್ಯವಸ್ಥಾಪಕರು ಟಿಕೆಟ್ ಬೆಲೆಯನ್ನು ಶೇ.50ರಿಂದ ಶೇ.110ರಷ್ಟು ಹೆಚ್ಚಳ ಮಾಡಿದ್ದಾರೆ. ಶುಕ್ರವಾರ ಸಂಜೆ 5 ಗಂಟೆಗೆ ಜೊಮ್ಯಾಟೊ ಆ್ಯಪ್‌ನಲ್ಲಿ ಈ ಪಂದ್ಯಕ್ಕೆ ಟಿಕೆಟ್ ಬುಕಿಂಗ್ ಪ್ರಾರಂಭವಾಯಿತು. ಕೆಲವೇ ನಿಮಿಷಗಳಲ್ಲಿ ಟಿಕೆಟ್ ಸೋಲ್ಡ್ ಔಟ್ ಆಗಿವೆ. ಸುಮಾರು 39 ಸಾವಿರ ಆಸನ ಸಾಮರ್ಥ್ಯವಿರುವ ಮೈದಾನದ ಟಿಕೆಟ್ ಖರೀದಿಗೆ 2.50 ಲಕ್ಷ ಮಂದಿ ಯತ್ನಿಸಿದ್ದಾರೆ. ಈ ಹಿಂದೆ 950 ರು. ನಿಂದ 30,000 ರು. ತನಕ ಟಿಕೆಟ್‌ಗಳ ಬೆಲೆ ಇರಿಸಲಾಗಿತ್ತು. ಆದರೆ ಆರ್‌ಸಿಬಿ ಪಂದ್ಯಕ್ಕೆ 2,000 ರು. ನಿಂದ 45,000 ರು.ವರೆಗೆ ಏರಿಸಲಾಗಿತ್ತು.

ವಿಟಾಕೀಸ್

ಪೈಲ್ವಾನ್ ಅವತಾರದಲ್ಲಿ ರಾಮ್ ಚರಣ್ ಅಬ್ಬರ

ಸ್ಟಾರ್ ರಾಮ್ ಚರಣ್ ನಟನೆ ಬಹು ನಿರೀಕ್ಷಿತ ಪೆದ್ದಿ ಸಿನಿಮಾ ಟ್ರೇಲರ್ ಬಿಡುಗಡೆಯಾಗಿದೆ. ಪೆದ್ದಿ ಟ್ರೇಲರ್‌ನಲ್ಲಿ ಬೆವರು, ಹೋರಾಟ ಮತ್ತು ಕ್ರೀಡೆಯ ಮೇಲಿನ ಅವಿನಾಭಾವ ಪ್ರೀತಿಯನ್ನು ನಿರ್ದೇಶಕರು ಕೊಟ್ಟಿದ್ದಾರೆ. ನಾಯಕ ಪೆದ್ದಿ ಬಹುಮುಖ ಪ್ರತಿಭೆಯ ಕ್ರೀಡಾಪಟು, ಅದು ಕ್ರಿಕೆಟ್ ಆಗಿರಲಿ, ಕುಸ್ತಿಯಾಗಿರಲಿ ಅಥವಾ ಓಟವಾಗಿರಲಿ. ಆತನ ಈ ನಡೆ ಹಳ್ಳಿ ಚಿಕ್ಕಮಕ್ಕಳಿಂದ ಹಿಡಿದು ದೊಡ್ಡವರಿಗೆ ಇಷ್ಟವಾಗುತ್ತದೆ. ಇದು ಆ ಊರಿನ ಜಮೀನ್ದಾರನ ಕಣ್ಣು ಕೆಂಪು ಮಾಡುವಂತೆ ಮಾಡುತ್ತದೆ. ರಾಮ್ ಚರಣ್ ಅಥ್ಲೆಟಿಕ್ ಅವತಾರದಲ್ಲಿ ಅಬ್ಬರಿಸಿದ್ದಾರೆ. ಸಿಕ್ಸ್‌ಪ್ಯಾಕ್‌ನಲ್ಲಿ ಅವರು ಖದರ್ ತೋರಿಸಿದ್ದಾರೆ. ಕುಸ್ತಿ ಅಖಾಡದಲ್ಲಿ ತೊಡೆ ತಟ್ಟುವ ರೀತಿ ಅಭಿಮಾನಿಗಳಿಗೆ ಇಷ್ಟವಾಗಲಿದ್ದಾರೆ. ಜಾನ್ವಿ ಕಪೂರ್ ಗ್ಲಾಮರಸ್ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಶಿವರಾಜ್ ಕುಮಾರ್ ಗೌರು ನಾಯ್ಡುವಾಗಿ ಖದರ್ ತೋರಿಸಿದ್ದಾರೆ. ಜಗಪತಿ ಬಾಬು, ದಿವ್ಯೆಂದು ಮತ್ತು ಬೋಮನ್ ಇರಾನಿ ಪಾತ್ರಗಳ ಪರಿಚಯ ಮಾಡಿಕೊಡಲಾಗಿದೆ. ಆರ್. ರತ್ನವೇಲು ಕ್ಯಾಮೆರಾ ಕಣ್ಣಲ್ಲಿ ಅದ್ಭುತ ದೃಶ್ಯಗಳು ಸೆರೆಯಾಗಿವೆ. ಎ.ಆರ್. ರೆಹಮಾನ್ ಅವರ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ವೃದ್ಧಿ ಸಿನಿಮಾಸ್ ಬ್ಯಾನರ್‌ನಲ್ಲಿ ವೆಂಕಟ ಸತೀಶ್ ಕಿಲಾರು ನಿರ್ಮಾಣ ಮಾಡಿದ್ದು, ಮೈತ್ರಿ ಮೂವೀ ಮೇಕರ್ಸ್ ಹಾಗೂ ಸುಕುಮಾರ್ ರೈಟಿಂಗ್ಸ್ ಚಿತ್ರವನ್ನು ಪ್ರಸ್ತುತ ಪಡಿಸಲಿವೆ. ಪೆದ್ದಿ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಜೂನ್ 4ರಂದು ವಿಶ್ವಾದ್ಯಂತ ತೆರೆಗೆ ಬರಲಿದೆ.

ನಿರ್ದೇಶನಕ್ಕೆ ರಾಮ್ ಪೋತಿನೇನಿ

ತೆಲುಗಿನ ಖ್ಯಾತ ನಟ ರಾಮ್ ಪೋತಿನೇನಿ ಅಭಿನಯದ ಹೊಸ ಚಿತ್ರ ಘೋಷಣೆಯಾಗಿದೆ. ಈ ಬಾರಿ ರಾಮ್ ಪೋತಿನೇನಿ ನಟನೆ ಜತೆಗೆ ನಿರ್ದೇಶನಕ್ಕೂ ಇಳಿದಿದ್ದಾರೆ. ರಾಮ್ ಪೋತಿನೇನಿ ಈ ಹಿಂದೆ ಆಂಧ್ರ ಕಿಂಗ್ ತಾಲೂಕಾ ಸಿನಿಮಾಗೆ ಸಾಹಿತ್ಯ ಬರೆದು ಸೈ ಎನಿಸಿಕೊಂಡಿದ್ದರು. ಇದೀಗ ಅವರು ಮತ್ತೊಂದು ಹೆಜ್ಜೆ ಮುಂದೆ ಇಟ್ಟು ಸಿನಿಮಾ ನಿರ್ದೇಶನದ ಸಾರಥ್ಯ ವಹಿಸಿಕೊಂಡಿದ್ದಾರೆ. ರಾಮ್ ಪೋತಿನೇನಿ ಹೊಸ ಚಿತ್ರದ ಪೋಸ್ಟರ್ ರಿಲೀಸ್ ಆಗಿದ್ದು, ವೀರ ಪಾತ್ರದಲ್ಲಿ ಪೋತಿನೇನಿ ನಟಿಸುತ್ತಿದ್ದಾರೆ. ಜಾಕೆಟ್ ಧರಿಸಿ ವಿ ಕಟ್ ಹೇರ್ ಸ್ಟೈಲ್‌ನಲ್ಲಿ ಅವರು ಕಾಣಿಸಿಕೊಂಡಿದ್ದಾರೆ. ಇದೊಂದು ಸೈಕಲಾಜಿಕಲ್ ಥ್ರಿಲ್ಲರ್ ಸಿನಿಮಾವಾಗಿದ್ದು, ತಮ್ಮದೇ ರಾಪೋ ಸಿನಿಮ್ಯಾಟಿಕ್ಸ್‌ನಲ್ಲಿ ನಿರ್ಮಾಣ ಮಾಡುತ್ತಿದ್ದಾರೆ. ಹೊಸ ಚಿತ್ರದ ಚಿತ್ರೀಕರಣ ಜೂನ್‌ನಲ್ಲಿ ಆರಂಭವಾಗಲಿದ್ದು, ಡಿಸೆಂಬರ್‌ನಲ್ಲಿ ಚಿತ್ರ ಬಿಡುಗಡೆ ಮಾಡಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

ನಿರ್ಮಾಪಕಿಯಾದ ಮೈತ್ರಿಯಾಗೌಡ

ಬಣ್ಣದ ಲೋಕಕ್ಕೆ ಒಮ್ಮೆ ಬಂದ ಮೇಲೆ ಅಲ್ಲಿಯೇ ಮಿಂಚಬೇಕು ಎಂಬ ಆಸೆ ಎಲ್ಲರಲ್ಲಿಯೂ ಇದೆ. ಇದೇ ಕ್ಷೇತ್ರದಲ್ಲಿ ಏನಾದರೂ ಒಂದು ಕಾರ್ಯದಲ್ಲಿ ತೊಡಗಿಕೊಳ್ಳುತ್ತಾರೆ. ಆ ಸಾಲಿಗೆ ನಟಿ ಮೈತ್ರಿಯಾಗೌಡ ಸೇರ್ಪಡೆಯಾಗಿದ್ದಾರೆ. ಮೌರ್ಯ ಚಿತ್ರದಲ್ಲಿ ಪುನೀತ್ ರಾಜ್‌ಕುಮಾರ್ ತಂಗಿಯ ಪಾತ್ರದಲ್ಲಿ ಬಣ್ಣಹಚ್ಚಿದ ಮೈತ್ರಿಯಾ, ಬಳಿಕ ಹಲವು ಸಿನಿಮಾಗಳಲ್ಲಿ ನಾಯಕಿಯಾಗಿಯೂ ಬಣ್ಣಹಚ್ಚಿದರು. ಈ ನಡುವೆ ಒಂದಷ್ಟು ದಿನ ನಟನೆಯಿಂದ ಬ್ರೇಕ್ ಪಡೆದಿದ್ದರು.

ಈಗ ಮೈತ್ರಿಯಾ ಚಿತ್ರರಂಗಕ್ಕೆ ಮರಳಿ ಬಂದಿದ್ದಾರೆ.ಬೀ ಬಾರಿ ನಿರ್ಮಾಪಕಿಯಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಗ್ಲೋಬಲ್ ಟ್ರಸ್ಟ್ ಮೂಲಕ ಚಿತ್ರ ನಿರ್ಮಾಣ ಮಾಡಲು ಮುಂದಾಗಿದ್ದಾರೆ. ಇದರ ಮೊದಲ ಹಂತವಾಗಿ ನಟ ಅನಿರುದ್ಧ್, ಹಿರಿಯ ನಿರ್ಮಾಪಕ ಉದಯ್ ಮೆಹ್ತಾ, ನಿರ್ಮಾಣ ಸಂಸ್ಥೆಗೆ ಚಾಲನೆ ನೀಡಿ ಶುಭಕೋರಿದ್ದಾರೆ.

ನನಗೆ ಬಾಲ್ಯದಿಂದಲೂ ನಟಿಯಾಗಬೇಕು ಎಂಬ ಆಸೆ ಇತ್ತು. ಅಂದುಕೊಂಡಂತೆ ಹಲವು ಸಿನಿಮಾಗಳಲ್ಲಿ ನಟಿಸಿದೆ. ಜತೆಗೆ ಸಮಾಜ ಸೇವಕಿಯಾಗಿ, ಈಗ ನಿರ್ಮಾಪಕಿಯಾಗಿ ಗುರುತಿಸಿಕೊಳ್ಳುತ್ತಿದ್ದೇನೆ. ಅನಿರುದ್ಧ್ ಅವರು ಮಾಡುತ್ತಿದ್ದ ಸಾಮಾಜಿಕ ಸೇವೆಗಳು, ಉದಯ್ ಮೆಹ್ತಾ ಕಾರ್ಯವೈಖರಿ. ಇವರಿಬ್ಬರ ಪ್ರೇರಣೆಯಿಂದ ಟ್ರಸ್ಟ್ ಶುರು ಮಾಡಿದ್ದೇನೆ. ಇದರ ಮೂಲಕ ಹೊಸ ಪ್ರತಿಭೆಗಳಿಗೆ ಅವಕಾಶ ಮಾಡಿಕೊಡಲಾಗುವುದು. ಈಗಾಗಲೇ ಎರಡು ಕಥೆಗಳನ್ನು ಕೇಳಿದ್ದೇನೆ. ಹೊಸ ಕಲಾವಿದರ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ ಎಂದು ಮೈತ್ರಿಯಾ ಗೌಡ ಹೇಳಿದ್ದಾರೆ.

ಹಾಡಿನಲ್ಲಿ ಮನಗೆದ್ದ ರಕ್ಕಿ

ವೆಂಕಟ್ ಭಾರದ್ವಾಜ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ರಕ್ಕಿ ಶೀರ್ಷಿಕೆಯಲ್ಲಿ ಮನಗೆದ್ದಿತ್ತು. ಈಗ ಹಾಡಿನ ಮೂಲಕವೂ ಮನಸೆಳೆಯುತ್ತಿದೆ. ಈ ಚಿತ್ರದ ರಗಡೋ ರಕ್ಕಿ.. ಎಂಬ ಹಾಡು ಬಿಡುಗಡೆಯಾಗಿದ್ದು, ಸಂಗೀತ ಪ್ರಿಯರ ಮನಸ್ಸನ್ನು ಸೆಳೆದಿದೆ.

ರಕ್ಕಿಸುರೇಶ್ ಈ ಚಿತ್ರದ ಮೂಲಕ ನಾಯಕನಾಗಿ ಚಿತ್ರರಂಗ ಪ್ರವೇಶಿಸುತ್ತಿದ್ದಾರೆ. ಸುರೇಶ್, ಈ ಹಾಡಿನಲ್ಲಿ ಭರ್ಜರಿಯಾಗಿ ಹೆಜ್ಜೆ ಹಾಕಿದ್ದಾರೆ. ಕಲರ್‌ಫುಲ್ ದೃಶ್ಯಗಳೊಂದಿಗೆ ಈ ಹಾಡು ರಕ್ಕಿ ಸುರೇಶ್ ಅವರನ್ನು ಹೊಸ ತಲೆಮಾರಿನ ಮಾಸ್ ಹೀರೋ ಆಗಿ ಪರಿಚಯಿಸುತ್ತದೆ. ಇಂದಿನ ಜೆನ್ ಜಿ ಸಂಸ್ಕೃತಿಯನ್ನು ಪ್ರತಿ ಬಿಂಬಿಸುವ ಈ ಹಾಡು ಟ್ರೆಂಡಿ ಬೀಟ್ಸ್, ಸ್ಟೈಲಿಶ್ ಮೇಕಿಂಗ್‌ನಿಂದ ಆಕರ್ಷಕವಾಗಿ ಮೂಡಿಬಂದಿದೆ.

ಹಚ್ಚಿಟ್ಟರೋ ಪಟಾಕಿ.. ಎಂಬ ಸಾಹಿತ್ಯದ ಮೂಲಕ ನಾಯಕನ ಭರ್ಜರಿ ಎಂಟ್ರಿಯನ್ನು ಹಾಡಿನಲ್ಲಿ ಬಿಂಬಿಸಲಾಗಿದ್ದು, ಸಿಡಿಯಲು ಸಿದ್ಧವಾಗಿರುವ ಪಟಾಕಿಯಂತೆ ರಕ್ಕಿ ಅವರ ಎನರ್ಜಿ ಈ ಹಾಡಿನಲ್ಲಿ ಕಾಣುತ್ತದೆ. ವೇಗದ ನೃತ್ಯ, ಸ್ಟೈಲಿಶ್ ದೃಶ್ಯ ವಿನ್ಯಾಸ ಮತ್ತು ಮಾಸ್ ಫೀಲಿಂಗ್‌ನಿಂದ ಈ ಹಾಡು ಥಿಯೇಟರ್ ಪ್ರೇಕ್ಷಕರಿಗೆ ಹೊಸತನ ತುಂಬಲಿದೆ. ಲೋಕಿ ತವಸ್ಯ ಈ ಹಾಡಿಗೆ ಸಾಹಿತ್ಯ ಬರೆದಿದ್ದು, ಸಂಗೀತ ಸಂಯೋಜಿಸಿದ್ದಾರೆ.



ಯುವಜನತೆಯನ್ನು ಸೆಳೆಯುವ ರೀತಿಯ ಸಂಗೀತ ಮತ್ತು ಸಾಹಿತ್ಯ ಹಾಡಿನ ಪ್ರಮುಖ ಆಕರ್ಷಣೆಯಾಗಿದೆ. ಕಂಬಿರಾಜು ಅವರ ನೃತ್ಯ ಸಂಯೋಜನೆ ಹಾಡಿಗೆ ಮತ್ತಷ್ಟು ಹೊಸತನ ತುಂಬಿದೆ. ಐ ಸಾಕ್ ಪ್ರಭಾಕರ್ ಛಾಯಾಗ್ರಹಣ ಹಾಡಿನ ದೃಶ್ಯ ವೈಭವ ಹೆಚ್ಚಿಸಿದೆ. ರಕ್ಕಿ ಭಾವನಾತ್ಮಕ ಕಥೆಯ ಜತೆಗೆ ಮಾಸ್ ಅಂಶಗಳನ್ನು ಒಳಗೊಂಡಿದೆ.ರಕ್ಕಿ ಸುರೇಶ್, ಪಲ್ಲವಿ ಮಂಜುನಾಥ್, ಆಶಿಕಾ ಸೋಮ ಶೇಖರ್, ಬಿ. ಸರೇಶ್, ಸಂಪತ್ ಮೈತ್ರೇಯ, ರಮೇಶ್ ಪಂಡಿತ್, ಬಲ ರಾಜವಾಡಿ, ಜಿ ಜಿ, ಹರಿಣಿ ಶ್ರೀಕಾಂತ್ ಮುಂತಾದವರ ಭರ್ಜರಿ ತಾರಾಬಳಗ ಈ ಚಿತ್ರದಲ್ಲಿದೆ. ಈಗಾಗಲೇ ಚಿತ್ರೀಕರಣ ಮುಗಿಸಿರುವ ರಕ್ಕಿ ಸೆನ್ಸಾರ್ ಹಂತದಲ್ಲಿದ್ದು ಶೀಘ್ರದಲ್ಲೇ ಅದ್ದೂರಿಯಾಗಿ ಬಿಡುಗಡೆಯಾಗಲಿದೆ. ಎಸ್ ಎನ್ ಆರ್ ಪ್ರೊಡಕ್ಷನ್ ಬ್ಯಾನರ್‌ನಲ್ಲಿ ಸುರೇಶ್ ಸಾಲಿಗ್ರಾಮ ಈ ಚಿತ್ರವನ್ನು ನಿರ್ಮಿಸಿದ್ದಾರೆ.